ಪ್ರಮೇಯಸಾರ

'ಪರಮಾರ್ಥ ಚಂದ್ರೋದಯ'ದಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ



ಮೂಲ ಲೇಖಕರು

ಶ್ರೀ ತಂದೆಮುದ್ದುಮೋಹನವಿಠಲಾಂಕಿತ

ಶ್ರೀ ಪರಮಪ್ರಿಯ ಸುಬ್ಬರಾಯದಾಸರು

ಸಂಗ್ರಾಹಕ, ಸಂಪಾದಕ : ಎ. ಎನ್. ಅನಂತಸ್ವಾಮಿರಾವ್ (ಅನಂತವಿಠಲದಾಸ)

ಪ್ರಕಾಶಕರು

ದಾಸಕೂಟಸಭಾ, ದೇವರಾಯನದುರ್ಗ

ಪ್ರಮೇಯಸಾರ

'ಪರಮಾರ್ಥ ಚಂದ್ರೋದಯ'ದಲ್ಲಿ ಪ್ರಕಟವಾದ ಲೇಖನಗಳ ಸಂಗ್ರಹ

ಮೂಲ ಲೇಖಕರು :

ಶ್ರೀ ತಂದೆಮುದ್ದುಮೋಹನವಿಠಲಾಂಕಿತ

ಶ್ರೀ ಪರಮಪ್ರಿಯ ಸುಬ್ಬರಾಯದಾಸರು

ಸಂಗ್ರಾಹಕ ಸಂಪಾದಕ :

ಎ. ಎನ್. ಅನಂತಸ್ವಾಮಿರಾವ್

(ಅನಂತವಿಠಲದಾಸ)

ಪ್ರಕಾಶಕರು :

ದಾಸಕೂಟಸಭಾ, ದೇವರಾಯನದುರ್ಗ

ಪುಟಗಳು: 14+200
ಮೊದಲ ಮುದ್ರಣ : ಮಾರ್ಚ್ 2010 – 500 ಪ್ರತಿಗಳು

ಬೆಲೆ:

ಪ್ರಕಾಶಕರು
ದಾಸಕೂಟಸಭಾ
ದೇವರಾಯನದುರ್ಗ

ಸಂಗ್ರಹ, ಸಂಪಾದನೆ
ಎ.ಎನ್. ಅನಂತಸ್ವಾಮಿರಾವ್
(ಅನಂತವಿಠಲದಾಸ)

ಅಕ್ಷರ ಜೋಡಣೆ
ಸಮೀರ ಗ್ರಾಫಿಕ್ಸ್
ಬೆಂಗಳೂರು
9916132611

ಮುದ್ರಣ
ನಿಧಿ ಎಂಟರ್‌ಪ್ರೈಸಸ್
#18, 6ನೇ 'ಎ' ಮುಖ್ಯರಸ್ತೆ,
ಹನುಮಂತನಗರ, ಬೆಂಗಳೂರು-560 019

ಪ್ರತಿಗಳು ದೊರೆಯುವ ಸ್ಥಳ ಹಾಗೂ
ಈ ಪ್ರಕಟಣೆಯ ಬಗ್ಗೆ ವ್ಯವಹರಿಸಬಹುದಾದ ವಿಳಾಸಗಳು

ಎನ್.ವಿ. ಸುಂದರರಾವ್
ನಂ. 1328, **ದ್ವಾರಕ** 1ನೇ ಹೆಚ್ ರಸ್ತೆ, ಗಿರಿನಗರ, ಬೆಂ-560 085
ಫೋನ್: 080-26721068

ಶ್ರೀಮತಿ ಸುಭದ್ರಾ ವೆಂಕಟೇಶ್
ನಂ. 17, 8ನೇ ಮೈನ್, ಬಿ.ಎಸ್.ಕೆ. 3ನೇ ಸ್ಟೇಜ್, 2ನೇ ಫೇಸ್,
4ನೇ ಬ್ಲಾಕ್, ಬೆಂ-560 085
ಫೋನ್: 9845156214

ವಿಷಯಾನುಕ್ರಮಣಿಕೆ

ಪ್ರಕಾಶಕರ ನುಡಿ

ಸಂಪಾದಕರ ನುಡಿ

ಶ್ರೀ ದಾಸರಾಯರ ಭಾವಚಿತ್ರ

ಶ್ರೀ ತಂದೆಮುದ್ದುಮೋಹನದಾಸರ ಜೀವನ ಚರಿತ್ರೆ

ಪ್ರಕರಣಗಳು

೧.	ಪೀಠಿಕಾ ಪ್ರಕರಣ	1
೨.	ರಮಾದೇವಿಯವರ ಮಹಾತ್ಮೆ	7
೩.	ಮೋಕ್ಷಜೀವರ ಸಾಧನಕ್ರಮ	14
೪.	ಪಂಚಭೇಧ ಪ್ರಕರಣ	23
೫.	ಹರಿಸರ್ವೋತ್ತಮ ಪ್ರಕರಣ	28
೬.	ಗುಣತಾರತಮ್ಯ ಪ್ರಕರಣ	39
೭.	ಆವೇಶಾವತಾರ ತಾರತಮ್ಯ ಪ್ರಕರಣ	50
೮.	ಆರೋಹಣ ಅವರೋಹಣ ತಾರತಮ್ಯ ಪ್ರಕರಣ	72
೯.	ದೈತ್ಯ ತಾರತಮ್ಯ ಪ್ರಕರಣ	75
೧೦.	ವ್ಯಾಪ್ತತ್ವ ಪ್ರಕರಣ	83
೧೧.	ಭೂಗೋಳ ಪ್ರಕರಣ	86
೧೨.	ಭೂವಲಯ ವರ್ಣನೆ (ಭರತಖಂಡ ವರ್ಣನೆ)	88
೧೩.	ಖಗೋಳ ಪ್ರಕರಣ	99
೧೪.	ದ್ವೀಪ ಪ್ರಕರಣ (ಭೂವಲಯ ವರ್ಣನೆ)	105
೧೫.	ಅಧೋಲೋಕ ವರ್ಣನೆ	112
೧೬.	ಭಗವನ್ನಾಮಸ್ಮರಣೆ ಪ್ರಕರಣ	115
೧೭.	ನರಕಲೋಕ ಪ್ರಕರಣ	123
೧೮.	ಗರ್ಭೋತ್ಪತ್ತಿ ಪ್ರಕರಣ	133
೧೯.	ಯೌವನಾವಸ್ಥ ಪ್ರಕರಣ	140
೨೦.	ನವವಿಧಭಕ್ತಿ ಪ್ರಕರಣ	147
೨೧.	ಗರುಡಶೇಷಮಾರ್ಗ ಪ್ರಕರಣ	154
೨೨.	ತ್ರಿವಿಧಜೀವರ ಪ್ರಕರಣ	166
೨೩.	ಬ್ರಹ್ಮವಿದ್ಯಾ ಪ್ರಕರಣ	170
೨೪.	ಧ್ಯಾನ ಪ್ರಕರಣ	174
೨೫.	ಪ್ರಮೇಯ ಪ್ರಕರಣ	184
೨೬.	ವೈದಿಕಮತ ಸಾರ	196

ಪ್ರಕಾಶಕರ ನುಡಿ

ಪರಮಪ್ರಿಯರೆಂದು ಖ್ಯಾತರಾದ ಶ್ರೀ ತಂದೆಮುದ್ದುಮೋಹನವಿಠಲಾಂಕಿತ ನರಶೀಪುರ ಸುಬ್ಬರಾಯದಾಸರು 20ನೇ ಶತಮಾನದ ಪೂರ್ವಾರ್ಧದಲ್ಲಿ ಹರಿದಾಸ ನಭೋಮಂಡಲದಲ್ಲಿ ಬೆಳಗಿದ ಉಜ್ವಲತಾರೆ. ಶ್ರೀ ವಿಜಯಪ್ರಭೃತಿಗಳ ಪರಂಪರೆಯಲ್ಲಿ ಬಂದ ಶ್ರೀ ಮುದ್ದುಮೋಹನವಿಠಲದಾಸರ ಪ್ರಧಾನಶಿಷ್ಯರಾಗಿ 1165 ಯೋಗ್ಯ ಜೀವಿಗಳಿಗೆ ಅಂಕಿತ ಪ್ರದಾನ ಮಾಡಿದ ಮಹಾಮಹಿಮರು. ಕ್ರಿ.ಶ. 1900ರಲ್ಲಿ ದೇವರಾಯನದುರ್ಗದಲ್ಲಿ ದಾಸಕೂಟಸಭಾ ನಿರ್ಮಾಣ ಮಾಡಿ ತಮ್ಮ ಅಂತಿಮಕಾಲದಲ್ಲಿ ಕದರುಮಂಡಲಗಿಯಿಂದ ತಂದ ಶ್ರೀ ಸುಂದರೇಶ ಪ್ರಾಣದೇವರ ಪ್ರತೀಕವನ್ನು ಸ್ಥಾಪನೆ ಮಾಡಿಸಿ ತದಂತರ್ಯಾಮಿ ಶ್ರೀಕರಿಗಿರಿನರಸಿಂಹನನ್ನು ಉಪಾಸನೆ ಮಾಡಿ ಕ್ರಿ.ಶ.1940ರ ರಾಮನವಮಿಯಂದು ಹರಿಪದವನ್ನು ಸೇರಿದರು.

ಪ್ರಕೃತ ಪರಮಪ್ರಿಯರು ಹೊರಡಿಸುತ್ತಿದ್ದ ಮಾಸಿಕ ಪತ್ರಿಕೆ **ಪರಮಾರ್ಥ ಚಂದ್ರೋದಯ**ದಲ್ಲಿ ಪ್ರಕಟಿತವಾದ **ಪ್ರಮೇಯ ಪ್ರಕರಣ**ಗಳ ಮಾಲೆಯನ್ನು ನನ್ನ ಪ್ರಿಯ ಸ್ನೇಹಿತರಾದ ಶ್ರೀ ಎ.ಎನ್. ಅನಂತಸ್ವಾಮಿರಾಯರು ಸಿಕ್ಕಷ್ಟು ಸಂಗ್ರಹಿಸಿದ್ದಾರೆ. ಎಲ್ಲ ಪ್ರಕರಣಗಳು ದೊರಕದಿದ್ದರೂ ಪ್ರತಿ ಪ್ರಕರಣವೂ (ಸಿಕ್ಕಿದ್ದು) ಪೂರ್ಣವಾಗಿದೆ ಎನ್ನುತ್ತಾರೆ ಶ್ರೀ ರಾಯರು. ಮೂಲ ಪ್ರಕೃತಿ ಅಭಿಮಾನಿನಿಯಾದ **ಶ್ರೀ ರಮಾದೇವಿಯರ ಮಹಾತ್ಮೆ**ಯಿಂದ ಆರಂಭಿಸಿ **ವೈದಿಕಮತಸಾರ**ದವರೆಗೂ ಮಾಸ ಪತ್ರಿಕೆಯಲ್ಲಿರುವ ಕ್ರಮಾನುಸಾರವಾಗಿ 26 ಪ್ರಮೇಯ ಪ್ರಕರಣಗಳನ್ನು ಕಲೆ ಹಾಕಿದ್ದಾರೆ.

ಈಗಾಗಲೇ ದಾಸವರ್ಯರ ಶಿಷ್ಯರಾದ ಹಾಗೂ ಅವರಿಂದ ಆಜ್ಞಪ್ತರಾದ ಶ್ರೀ ಪದ್ಮನಾಭದಾಸರ ಶ್ರೀಹರಿಕಥಾಮೃತಸಾರ ವ್ಯಾಖ್ಯಾನವನ್ನು ಶ್ರೀಮಜ್ಜಗನ್ನಾಥದಾಸರ ದ್ವಿಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟಿಸಲಾಗಿದೆ. ಪ್ರಸಕ್ತ **'ಪ್ರಮೇಯಸಾರ'** ಗದ್ಯ ರೂಪ ಕೃತಿಯಾದರೆ ದಾಸವರ್ಯರ ಮತ್ತೊಂದು ಕಾವ್ಯರೂಪ ಕೃತಿ **'ಅಂಕಿತಪದ ಮುಕ್ತಾವಳಿ'** ಗುರುಕೃಪಾ ಗ್ರಂಥಮಾಲಾ ಮೈಸೂರು ಇವರ ಸಹಯೋಗದೊಂದಿಗೆ ಪ್ರಕಟವಾಗಿದೆ.

ದಾಸಕೂಟಸಭಾದ ಚೊಚ್ಚಲ ಕೃತಿ ಸಕಲ ವಿಘ್ನ ಪರಿಹಾರಕನಾದ ನರಸಿಂಹನ **'ಶ್ರೀಕರಿಗಿರಿ ನರಸಿಂಹನ ಸ್ತೋತ್ರಗಳು'**.

ಶ್ರೀಕರಿಗಿರಿನರಸಿಂಹನ ಸ್ತೋತ್ರಪದಗಳು, ಶ್ರೀಹರಿಕಥಾಮೃತಸಾರದ ಪದ್ಮನಾಭದಾಸರ ವ್ಯಾಖ್ಯಾನ, ಅಂಕಿತಪದ ಮುಕ್ತಾವಳಿ ಮತ್ತು ಪ್ರಸಕ್ತ ಪ್ರಮೇಯಸಾರ – ಈ ನಾಲ್ಕು ಕೃತಿಗಳಿಗೂ ಕೀರ್ತಿಶೇಷರಾದ ಅಸಗೋಡು ಪ್ರಹ್ಲಾದರಾಯರ ಕುಟುಂಬದವರು ಉದಾರವಾಗಿ ಮುದ್ರಣ ಖರ್ಚನ್ನು ವಹಿಸಿಕೊಂಡಿರುತ್ತಾರೆ. ಅವರೆಲ್ಲರಿಗೂ ಹರಿಗುರುಗಳ ಅನುಗ್ರಹವನ್ನು ಪ್ರಾರ್ಥಿಸುತ್ತೇನೆ.

ಅತ್ಯಂತ ಶ್ರದ್ಧೆಯಿಂದ ಮತ್ತು ಪರಿಶ್ರಮದಿಂದ ಈ ಎಲ್ಲಾ ಕೃತಿಗಳನ್ನು ಆರಂಭದಿಂದ ಅಂತ್ಯದವರೆಗೂ ನಿಗಾಹರಿಸಿ ಹೊರತಂದಿರುವ ಶ್ರೀ ಅನಂತಸ್ವಾಮಿರಾಯರಿಗೆ ಧನ್ಯವಾದಗಳು. ಅವರಿಂದ ಇತೋಪ್ಯತಿಶಯವಾಗಿ ದಾಸಸಾಹಿತ್ಯ ಸೇವೆ ನಡೆಯಲೆಂದು ಹಾರೈಸುತ್ತೇನೆ.

ಅಕ್ಷರ ಜೋಡಣೆಯನ್ನು ಸಮೀರ ಗ್ರಾಫಿಕ್ಸ್‌ನ ಶ್ರೀ ಎ.ಎಂ. ಮೋಹನ್ ಮತ್ತು ಅವರ ಪತ್ನಿ ಶ್ರೀಮತಿ ಮಾನಸ ಮೋಹನ್ ಅವರುಗಳು ಬಹಳ ಶ್ರದ್ಧಾಭಕ್ತಿಗಳಿಂದ ಅಂದವಾಗಿ ಮಾಡಿಕೊಟ್ಟಿದ್ದಾರೆ. ನಿಧಿ ಎಂಟರ್‌ಪ್ರೈಸಸ್‌ನವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ಕೃತಜ್ಞತಾ ಪೂರ್ವವಂದನೆಗಳು.

ಎನ್.ವಿ. ಸುಂದರರಾವ್
ಪ್ರಕಾಶಕರ ಪರವಾಗಿ

ಸಂಪಾದಕನ ನುಡಿ

ತಂದೆಮುದ್ದುಮೋಹನವಿಠ್ಠಲಾಂಕಿತ ಶ್ರೀ ಪರಮಪ್ರಿಯ ಸುಬ್ಬರಾಯದಾಸರು ಕ್ರಿ.ಶ. ೧೯೨೭ರಲ್ಲಿ 'ಪರಮಾರ್ಥ ಚಂದ್ರೋದಯ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಕ್ರಿ.ಶ.೧೯೪೦ರಲ್ಲಿ ತಮ್ಮ ನಿರ್ಯಾಣದವರೆವಿಗೂ ಸಹ ಪ್ರಕಟಿಸಿಕೊಂಡು ಬಂದಿದ್ದರು. ಆಧ್ಯಾತ್ಮಕ್ಕೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ ಲೇಖನಗಳು, ಅನೇಕ ಸಂತರ ಜೀವನ ಚರಿತ್ರೆಗಳು, ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ 'ಕಲಾ' ಎಂಬ ಲೇಖನಗಳು, ದೇವರನಾಮಗಳು ಮೊದಲಾದವು ಪ್ರಕಟವಾಗುತ್ತಿದ್ದು ಮಾಸಪತ್ರಿಕೆಯು ಬಹುಜನಪ್ರಿಯವಾಗಿದ್ದಂತೆ ತೋರುತ್ತದೆ.

ಕರ್ನಾಟಕ ಹರಿದಾಸ ಸಾಹಿತ್ಯಕ್ಕೆ ಪ್ರಸಿದ್ಧ ಹರಿದಾಸರುಗಳೆಲ್ಲರೂ ತಮ್ಮ ಕೊಡುಗೆಯನ್ನು ವಿಶೇಷವಾಗಿ ಕಾವ್ಯ ಪ್ರಕಾರದಲ್ಲೇ ಕೊಟ್ಟಿರುತ್ತಾರೆ. ಗದ್ಯ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ವಿರಳವಾಗಿದ್ದು ಅವರಲ್ಲಿ ಮುಖ್ಯವಾಗಿ **"ಅಧ್ಯಾತ್ಮಮಾಲಾ"** ಕರ್ತೃಗಳಾದ **ರಘುಪತಿವಿಠಲಾಂಕಿತ** ಶ್ರೀ ವೈರಾಗ್ಯಶಾಲಿ ತಮ್ಮಣ್ಣದಾಸರನ್ನು, **'ಪಂಚಭೇದ ಮತ್ತು ಪ್ರಮೇಯ ಮುಕ್ತಾಮಾಲಾ'** ಮೊದಲಾದ ಗ್ರಂಥಗಳ ಕರ್ತೃಗಳಾದ **ಗುರುವಿಜಯವಿಠ್ಠಲಾಂಕಿತ** ಶ್ರೀ ಮೊದಲುಕಲ್ಲು ಶೇಷದಾಸರನ್ನು ಹೆಸರಿಸಬಹುದು. ಅವರುಗಳ ನಂತರ ವ್ಯಾಪಕವಾಗಿ ಗದ್ಯ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಶ್ರೀ ಸುಬ್ಬರಾಯದಾಸರೇ ಎಂದು ತೋರುತ್ತದೆ.

ಶ್ರೀ ದಾಸರು ಜಾತಿ ಮತ ಭೇದಗಳನ್ನೆಣಿಸದೆ ೧೧೬೫ ಜನರಿಗೆ ಅಂಕಿತೋಪದೇಶ ಮಾಡಿರುವುದಾಗಿ ಪ್ರತೀತಿ ಇದ್ದು, ಕರ್ನಾಟಕ ಹರಿದಾಸ ಪಂಥದಲ್ಲೇ ಒಬ್ಬ ಕ್ರಾಂತಿಕಾರರಾಗಿ ಮೆರೆದಿದ್ದಾರೆ. ಅವರು ಬಹಳಷ್ಟು ಶಿಷ್ಯರಿಗೆ ಅಂಕಿತ ಪದಗಳನ್ನು ರಚಿಸಿಕೊಟ್ಟಿರುವ ಸಾಧ್ಯತೆ ಇದ್ದು ಅದಷ್ಟೂ ನಮಗೆ ದೊರೆತಿದ್ದಲ್ಲಿ ಒಂದು ಅಗಾಧ ಸಾಹಿತ್ಯ ನಿಧಿಯೇ ನಮ್ಮ ಪಾಲಿಗೆ ಇರುತ್ತಿತ್ತು. ಆದರೆ ಇತ್ತೀಚೆಗೆ ದೇವರಾಯನದುರ್ಗದ ದಾಸಕೂಟಸಭಾದವರು ಮತ್ತು ಮೈಸೂರಿನ ಗುರುಕೃಪಾ ಗ್ರಂಥಮಾಲೆಯವರು ಅವುಗಳನ್ನು ಸಂಗ್ರಹಿಸಿ **"ಅಂಕಿತಪದ ಮುಕ್ತಾವಳಿ"** ಯನ್ನು ಪ್ರಕಟಿಸುವಾಗ ಕೇವಲ ೧೦೫ ಅಂಕಿತ ಪದಗಳು ಮಾತ್ರ ದೊರೆತಿರುವುದೆಂಬುದು ಅತ್ಯಂತ ನೋವಿನ ವಿಷಯವಾಗಿದೆ. ಶ್ರೀ ದಾಸರ ಕಾವ್ಯ ಪ್ರಕಾರದ ಇತರ ರಚನೆಗಳು ಕೆಲವೇ ಇದ್ದು **ಅಂಕಿತಪದ ಮುಕ್ತಾವಳಿ**ಯಲ್ಲಿ ಅವುಗಳನ್ನೂ ಸಹ ಸೇರಿಸಲಾಗಿದ್ದು ಶ್ರೀ ದಾಸರ ಎಲ್ಲ ಉಪಲಬ್ಧ ಕಾವ್ಯ ಪ್ರಕಾರದ ಕೃತಿಗಳೂ ಒಂದೇ ಸಂಗ್ರಹದಲ್ಲಿರುವಂತಾಗಿದೆ.

ದಾಸಕೂಟಸಭಾದ ಚೊಚ್ಚಲ ಕೃತಿ ಸಕಲ ವಿಘ್ನ ಪರಿಹಾರಕನಾದ ನರಸಿಂಹನ **'ಶ್ರೀಕರಿಗಿರಿ ನರಸಿಂಹನ ಸ್ತೋತ್ರಗಳು'.**

ಶ್ರೀಕರಿಗಿರಿನರಸಿಂಹನ ಸ್ತೋತ್ರಪದಗಳು, ಶ್ರೀಹರಿಕಥಾಮೃತಸಾರದ ಪದ್ಮನಾಭದಾಸರ ವ್ಯಾಖ್ಯಾನ, ಅಂಕಿತಪದ ಮುಕ್ತಾವಳಿ ಮತ್ತು ಪ್ರಸಕ್ತ ಪ್ರಮೇಯಸಾರ – ಈ ನಾಲ್ಕು ಕೃತಿಗಳಿಗೂ ಕೀರ್ತಿಶೇಷರಾದ ಅಸಗೋಡು ಪ್ರಹ್ಲಾದರಾಯರ ಕುಟುಂಬದವರು ಉದಾರವಾಗಿ ಮುದ್ರಣ ಖರ್ಚನ್ನು ವಹಿಸಿಕೊಂಡಿರುತ್ತಾರೆ. ಅವರೆಲ್ಲರಿಗೂ ಹರಿಗುರುಗಳ ಅನುಗ್ರಹವನ್ನು ಪ್ರಾರ್ಥಿಸುತ್ತೇನೆ.

ಅತ್ಯಂತ ಶ್ರದ್ಧೆಯಿಂದ ಮತ್ತು ಪರಿಶ್ರಮದಿಂದ ಈ ಎಲ್ಲಾ ಕೃತಿಗಳನ್ನು ಆರಂಭದಿಂದ ಅಂತ್ಯದವರೆಗೂ ನಿಗಾಹರಿಸಿ ಹೊರತಂದಿರುವ ಶ್ರೀ ಅನಂತಸ್ವಾಮಿರಾಯರಿಗೆ ಧನ್ಯವಾದಗಳು. ಅವರಿಂದ ಇತೋಪ್ಯತಿಶಯವಾಗಿ ದಾಸಸಾಹಿತ್ಯ ಸೇವೆ ನಡೆಯಲೆಂದು ಹಾರೈಸುತ್ತೇನೆ.

ಅಕ್ಷರ ಜೋಡಣೆಯನ್ನು ಸಮೀರ ಗ್ರಾಫಿಕ್ಸ್‌ನ ಶ್ರೀ ಎ.ಎಂ. ಮೋಹನ್ ಮತ್ತು ಅವರ ಪತ್ನಿ ಶ್ರೀಮತಿ ಮಾನಸ ಮೋಹನ್ ಅವರುಗಳು ಬಹಳ ಶ್ರದ್ಧಾಭಕ್ತಿಗಳಿಂದ ಅಂದವಾಗಿ ಮಾಡಿಕೊಟ್ಟಿದ್ದಾರೆ. ನಿಧಿ ಎಂಟರ್‌ಪ್ರೈಸಸ್‌ನವರು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಮ್ಮ ಕೃತಜ್ಞತಾ ಪೂರ್ವವಂದನೆಗಳು.

ಎನ್.ವಿ. ಸುಂದರರಾವ್
ಪ್ರಕಾಶಕರ ಪರವಾಗಿ

ಸಂಪಾದಕನ ನುಡಿ

ತಂದೆಮುದ್ದುಮೋಹನವಿಠ್ಠಲಾಂಕಿತ ಶ್ರೀ ಪರಮಪ್ರಿಯ ಸುಬ್ಬರಾಯದಾಸರು ಕ್ರಿ.ಶ. ೧೯೨೭ರಲ್ಲಿ 'ಪರಮಾರ್ಥ ಚಂದ್ರೋದಯ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿ ಕ್ರಿ.ಶ.೧೯೪೦ರಲ್ಲಿ ತಮ್ಮ ನಿರ್ಯಾಣದವರೆವಿಗೂ ಸಹ ಪ್ರಕಟಿಸಿಕೊಂಡು ಬಂದಿದ್ದರು. ಆಧ್ಯಾತ್ಮಕ್ಕೆ ಸಂಬಂಧಪಟ್ಟ ವಿಷಯಗಳನ್ನೊಳಗೊಂಡ ಲೇಖನಗಳು, ಅನೇಕ ಸಂತರ ಜೀವನ ಚರಿತ್ರೆಗಳು, ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ 'ಕಲಾ' ಎಂಬ ಲೇಖನಗಳು, ದೇವರನಾಮಗಳು ಮೊದಲಾದವು ಪ್ರಕಟವಾಗುತ್ತಿದ್ದು ಮಾಸಪತ್ರಿಕೆಯು ಬಹುಜನಪ್ರಿಯವಾಗಿದ್ದಂತೆ ತೋರುತ್ತದೆ.

ಕರ್ನಾಟಕ ಹರಿದಾಸ ಸಾಹಿತ್ಯಕ್ಕೆ ಪ್ರಸಿದ್ಧ ಹರಿದಾಸರುಗಳೆಲ್ಲರೂ ತಮ್ಮ ಕೊಡುಗೆಯನ್ನು ವಿಶೇಷವಾಗಿ ಕಾವ್ಯ ಪ್ರಕಾರದಲ್ಲೇ ಕೊಟ್ಟಿರುತ್ತಾರೆ. ಗದ್ಯ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ವಿರಳವಾಗಿದ್ದು ಅವರಲ್ಲಿ ಮುಖ್ಯವಾಗಿ **"ಅಧ್ಯಾತ್ಮಮಾಲಾ"** ಕರ್ತೃಗಳಾದ **ರಘುಪತಿವಿಠಲಾಂಕಿತ** ಶ್ರೀ ವೈರಾಗ್ಯಶಾಲಿ ತಮ್ಮಣ್ಣದಾಸರನ್ನು, **'ಪಂಚಭೇದ ಮತ್ತು ಪ್ರಮೇಯ ಮುಕ್ತಾಮಾಲಾ'** ಮೊದಲಾದ ಗ್ರಂಥಗಳ ಕರ್ತೃಗಳಾದ **ಗುರುವಿಜಯವಿಠ್ಠಲಾಂಕಿತ** ಶ್ರೀ ಮೊದಲುಕಲ್ಲು ಶೇಷದಾಸರನ್ನು ಹೆಸರಿಸಬಹುದು. ಅವರುಗಳ ನಂತರ ವ್ಯಾಪಕವಾಗಿ ಗದ್ಯ ಪ್ರಕಾರದಲ್ಲಿ ತಮ್ಮನ್ನು ತೊಡಗಿಸಿಕೊಂಡವರು ಶ್ರೀ ಸುಬ್ಬರಾಯದಾಸರೇ ಎಂದು ತೋರುತ್ತದೆ.

ಶ್ರೀ ದಾಸರು ಜಾತಿ ಮತ ಭೇದಗಳನ್ನೆಣಿಸದೆ ೧೧೬೫ ಜನರಿಗೆ ಅಂಕಿತೋಪದೇಶ ಮಾಡಿರುವುದಾಗಿ ಪ್ರತೀತಿ ಇದ್ದು, ಕರ್ನಾಟಕ ಹರಿದಾಸ ಪಂಥದಲ್ಲೇ ಒಬ್ಬ ಕ್ರಾಂತಿಕಾರರಾಗಿ ಮೆರೆದಿದ್ದಾರೆ. ಅವರು ಬಹಳಷ್ಟು ಶಿಷ್ಯರಿಗೆ ಅಂಕಿತ ಪದಗಳನ್ನು ರಚಿಸಿಕೊಟ್ಟಿರುವ ಸಾಧ್ಯತೆ ಇದ್ದು ಅದಷ್ಟೂ ನಮಗೆ ದೊರೆತಿದ್ದಲ್ಲಿ ಒಂದು ಅಗಾಧ ಸಾಹಿತ್ಯ ನಿಧಿಯೇ ನಮ್ಮ ಪಾಲಿಗೆ ಇರುತ್ತಿತ್ತು. ಆದರೆ ಇತ್ತೀಚೆಗೆ ದೇವರಾಯನದುರ್ಗದ ದಾಸಕೂಟಸಭಾದವರು ಮತ್ತು ಮೈಸೂರಿನ ಗುರುಕೃಪಾ ಗ್ರಂಥಮಾಲೆಯವರು ಅವುಗಳನ್ನು ಸಂಗ್ರಹಿಸಿ **"ಅಂಕಿತಪದ ಮುಕ್ತಾವಳಿ"** ಯನ್ನು ಪ್ರಕಟಿಸುವಾಗ ಕೇವಲ ೧೦೫ ಅಂಕಿತ ಪದಗಳು ಮಾತ್ರ ದೊರೆತಿರುವುದೆಂಬುದು ಅತ್ಯಂತ ನೋವಿನ ವಿಷಯವಾಗಿದೆ. ಶ್ರೀ ದಾಸರ ಕಾವ್ಯ ಪ್ರಕಾರದ ಇತರ ರಚನೆಗಳು ಕೆಲವೇ ಇದ್ದು **ಅಂಕಿತಪದ ಮುಕ್ತಾವಳಿಯಲ್ಲಿ** ಅವುಗಳನ್ನೂ ಸಹ ಸೇರಿಸಲಾಗಿದ್ದು ಶ್ರೀ ದಾಸರ ಎಲ್ಲ ಉಪಲಬ್ಧ ಕಾವ್ಯ ಪ್ರಕಾರದ ಕೃತಿಗಳೂ ಒಂದೇ ಸಂಗ್ರಹದಲ್ಲಿರುವಂತಾಗಿದೆ.

ಕರ್ನಾಟಕ ಶ್ರೀ ಹರಿದಾಸಸಾಹಿತ್ಯಕ್ಕೆ ಶ್ರೀ ಸುಬ್ಬರಾಯದಾಸರ ಗದ್ಯಪ್ರಕಾರದ ಕೊಡುಗೆಯ ಪರಿಚಯವು ಬಹಳ ಜನರಿಗೆ ಇಲ್ಲದಂತೆಯೇ ಆಗಿದ್ದು ಆ ಕೊರತೆಯನ್ನು ತುಂಬುವ ಪ್ರಯತ್ನ ಇಲ್ಲಿ ನಡೆದಿದೆ.


"ಪರಮಾರ್ಥ ಚಂದ್ರೋದಯದ" ಹಳೆಯ ಸಂಚಿಕೆಗಳನ್ನು ಅವಲೋಕಿಸಿದಾಗ ಶ್ರೀ ತಂದೆಮುದ್ದುಮೋಹನವಿಠ್ಠಲದಾಸರು "ಪ್ರಮೇಯಸಾರ" (ಅಥವಾ ತತ್ವಸಾರ) ಎಂಬ ಒಂದು ಲೇಖನ ಮಾಲೆಯನ್ನು ಆಯೋಜಿಸಿಕೊಂಡಿದ್ದಂತೆ ತೋರುತ್ತದೆ. ಅದರಲ್ಲಿ ಬರುವ ಪ್ರಕರಣಗಳನ್ನು ಕ್ರಿ.ಶ. ೧೯೩೨ರ ಏಪ್ರಿಲ್ ಸಂಚಿಕೆಯಿಂದ ಆರಂಭಿಸಿ, ಕ್ರಿ.ಶ. ೧೯೪೦ರಲ್ಲಿ ತಮ್ಮ ಕೊನೆ ದಿನಗಳವರೆಗೂ ಅನೇಕ ಸಂಚಿಕೆಗಳಲ್ಲಿ ಪ್ರಕಟಿಸುತ್ತಾ ಬಂದಂತಿದೆ. ಆ ಒಂಭತ್ತು ವರ್ಷಗಳ ಅವಧಿಯಲ್ಲಿ ಪ್ರಕಟವಾದ ಎಲ್ಲಾ ಸಂಚಿಕೆಗಳು ನಮಗೆ ದೊರೆತಿಲ್ಲವಾಗಿ ಈ ಸಂಗ್ರಹವು ಸಮಗ್ರವಾಗಿ ಇರದೆ ಸುಮಾರು ಅರ್ಧ ಭಾಗದಷ್ಟು ಅನುಪಲಬ್ಧ ವಾಗಿರಬಹುದೆನಿಸುತ್ತದೆ. ದಾಸಸಾಹಿತ್ಯ ಪ್ರೇಮಿಗಳಿಗೆ ಇದೊಂದು ಅಪಾರ ನಷ್ಟವಾಗಿದ್ದು ಈ ಹೊತ್ತಿಗಾದರೂ ದೊರೆತಷ್ಟನ್ನು ಸಂಗ್ರಹಿಸಿಡಲು ಪ್ರೇರಣೆಯಾಗಿದ್ದು ನಮ್ಮ ಸುಕೃತವೆನ್ನಬೇಕು. ದೊರತಿರುವ ಪ್ರಕರಣಗಳೆಲ್ಲಾ ಪೂರ್ಣವಾಗಿಯೇ ದೊರೆತಿರುವುದು ಒಂದು ಸಮಾಧಾನದ ಸಂಗತಿಯಾಗಿದೆ. ಇಲ್ಲಿ ಪ್ರಕಟವಾಗದಿರುವ ಪ್ರಕರಣಗಳನ್ನುಳ್ಳ ಸಂಚಿಕೆಗಳು ಯಾರಲ್ಲಾದರೂ ಇದ್ದು ಅವನ್ನು ಪ್ರಕಾಶಕರಿಗೆ ಒದಗಿಸಿದಲ್ಲಿ ಕೃತಜ್ಞರಾಗಿರುತ್ತೇವೆ.

ಈ ಸಂಗ್ರಹದಲ್ಲಿ ಪ್ರಕಟಣೆಗಳನ್ನು ಬಹಳ ಮಟ್ಟಿಗೆ ಅವು ದೊರೆತ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಕ್ರಮದಲ್ಲೇ ಸಂಚಿಕೆಯ ಸಂಖ್ಯೆಯ ಸಹಿತ ಕೊಡಲಾಗಿದೆ. ಒಂದಕ್ಕಿಂತ ಹೆಚ್ಚು ಸಂಚಿಕೆಗಳಲ್ಲಿದ್ದ ಪ್ರಕರಣಗಳನ್ನು ಒಟ್ಟುಗೂಡಿಸಲಾಗಿದೆ.

ಈ ಸಂಗ್ರಹವನ್ನು ಸಿದ್ಧಪಡಿಸಲು ಪ್ರಾರಂಭಿಸಿದಾಗ ಮಾಸಪತ್ರಿಕೆಯ ಹಳೆಯ ಸಂಚಿಕೆಗಳನ್ನು ಸಂಗ್ರಹಿಸುವುದೇ ಪ್ರಯಾಸಕರವಾಯಿತು. ಸಂಚಿಕೆಗಳನ್ನು ಯಾರೂ ಕ್ರಮವಾಗಿ ಸಂಗ್ರಹಿಸಿಟ್ಟಿಲ್ಲವಾಗಿ ಕೇವಲ ಕೆಲವೇ ವ್ಯಕ್ತಿಗಳ ಸಂಗ್ರಹದಿಂದ ದೊರೆತಷ್ಟನ್ನೇ ಬಳಸಬೇಕಾಯಿತು. ಈ ಹೊತ್ತಿಗೆಯನ್ನು ಸಿದ್ದಪಡಿಸುವುದರಲ್ಲಿ ನನ್ನ ಸಂಗ್ರಹದಲ್ಲಿರುವ ಸಂಚಿಕೆಗಳ ಜೊತೆಗೆ ಶ್ರೀ ಎನ್.ವಿ. ಸುಂದರರಾವ್, ಡಾ. ಅನಂತಪದ್ಮನಾಭರಾವ್ ಮತ್ತು ಹರಪ್ಪನಹಳ್ಳಿಯ ಶ್ರೀ ಕರೂರು ಸೇತುರಾವ್ ಅವರು ದಯಮಾಡಿ ಒದಗಿಸಿದ ಸಂಚಿಕೆಗಳನ್ನು ಉಪಯೋಗಿಸಿ ಕೊಂಡಿದ್ದೇನೆ. ಶ್ರೀ ಸೇತುರಾವ್ ಅವರು ಈ ಕಾರ್ಯದಲ್ಲಿ ನನ್ನನ್ನು ವಿಶೇಷವಾಗಿ ಬೆಂಬಲಿಸಿದ್ದಾರೆ. ಶ್ರೀ ಸುಂದರರಾಯರು ಪ್ರಕರಣಗಳಲ್ಲಿ ಉಲ್ಲೇಖಿಸಿರುವ ಪ್ರಮಾಣಗಳ ಪಾಠ ಶುದ್ಧಿಯನ್ನು ಪರಿಶೀಲಿಸಿದ್ದಾರೆ. ಈ ಮಹನೀಯರೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
ತಾ|| ೧೨-೦೩-೨೦೧೦

ಎ.ಎನ್. ಅನಂತಸ್ವಾಮಿರಾವ್
(ಅನಂತವಿಠಲದಾಸ)
ಸಂಪಾದಕ



ದೇವರಾಯನದುರ್ಗದ
ಪರಮಪ್ರಿಯ ಸುಬ್ಬರಾಯದಾಸರು

ಪರಮಪ್ರಿಯ ಶ್ರೀಸುಬ್ಬರಾಯದಾಸರ (ಶ್ರೀ ತಂದೆಮುದ್ದುಮೋಹನವಿಠಲದಾಸರ) ಕಿರುಪರಿಚಯ

ಶ್ರೀಸುಬ್ಬರಾಯದಾಸರು ಬೆಂಗಳೂರು ಜಿಲ್ಲೆ ಡಾಬಸಪೇಟೆ ಬಳಿ ನರಸೀಪುರ ಎಂಬ ಗ್ರಾಮದಲ್ಲಿ ಕ್ರಿ.ಶ.1865 ಕ್ರೋಧನ ಸಂವತ್ಸರ ಶ್ರಾವಣ ಶುದ್ಧ ಚೌತಿ (ಇದು ಚತುರ್ದಶಿ, ಕ್ರಿ.ಶ. 6–8–1865 ಇರಬೇಕೆನ್ನಿಸುತ್ತದೆ) ರವಿವಾರ ಶ್ರವಣ ನಕ್ಷತ್ರದಲ್ಲಿ ಭಾರದ್ವಾಜಗೋತ್ರದವರಾದ ಶೇಷಪ್ಪ ಹಾಗೂ ಲಕ್ಷ್ಮೀದೇವಮ್ಮ ಎಂಬ ದಂಪತಿಗಳಲ್ಲಿ ಜನ್ಮತಾಳಿದರು. ಘಾಟಿ ಸುಬ್ರಹ್ಮಣ್ಯಾಂತರ್ಗತ ಶ್ರೀಜಯಾಸಂಕರ್ಷಣನ ವರಪ್ರಸಾದದಿಂದ ಹುಟ್ಟಿದ್ದರಿಂದ ಸುಬ್ಬರಾಯ ಎಂಬ ಹೆಸರಿಡಲಾಯಿತು. ಅಕ್ಷರಾಭ್ಯಾಸ ಹಾಗೂ 8ನೇ ವಯಸ್ಸಿನಲ್ಲಿ ಬ್ರಹ್ಮೋಪದೇಶ ಕುಂದಾಪುರ ಶ್ರೀ ವ್ಯಾಸರಾಯಮಠದ ಶ್ರೀಲಕ್ಷ್ಮೀಪ್ರಿಯತೀರ್ಥರಿಂದ ನಡೆಯಿತು. ನರಸೀಪುರ ಹಾಗೂ ಕಾನಕಾನಹಳ್ಳಿಯಲ್ಲಿ ತಕ್ಕ ಮಟ್ಟಿನ ಲೌಕಿಕ ವಿದ್ಯಾಭ್ಯಾಸ ಪಡೆದರು. ಎರಡು ವರ್ಷಗಳು ಉಪಾಧ್ಯಾಯ ವೃತ್ತಿಯನ್ನು ನಡೆಸಿದರು. ಹದಿನಾಲ್ಕನೇ ವಯಸ್ಸಿನಲ್ಲಿ ಶ್ರೀ ವೆಂಕಟನಾರಾಯಣಚಾರ್ಯ ಹಾಗೂ ಶ್ರೀಮತಿ ಲಕ್ಷ್ಮೀನರಸಮ್ಮ ದಂಪತಿಗಳ ಸುಪುತ್ರಿ 6–7 ವರ್ಷದ ಅಚ್ಚಮ್ಮನೊಂದಿಗೆ ವಿವಾಹವಾಯಿತು.

ಶ್ರೀ ಸುಬ್ಬರಾಯರು ಬಾಲ್ಯದಿಂದಲೇ ವಿಷಯವೈರಾಗ್ಯ ಮತ್ತು ಅಧ್ಯಾತ್ಮಚಿಂತನೆಯನ್ನು ಮೈಗೂಡಿಸಿಕೊಂಡಿದ್ದರು. ಬೆಂಗಳೂರಿನಲ್ಲಿ ಆದಿನಗಳಲ್ಲಿ ಪ್ರಖ್ಯಾತರಾದ ಬ್ರಾ॥ಶ್ರೀ॥ವೇ॥ ಚಿಂಚೋಳಿ ವೆಂಕಣ್ಣಾಚಾರ್ಯರಲ್ಲಿ ಶ್ರೀಮದಾಚಾರ್ಯರ ಮೂಲ 37 ಗ್ರಂಥಗಳ ವ್ಯಾಸಂಗವನ್ನು ಶಾಂತಿಪೂರ್ವಕ ಸುಮಧ್ವವಿಜಯ ಪ್ರಾಥಮಿಕ ಪಾಠದ ಮೂಲಕ ನಡೆಸಿದರು. ನರಸೀಪುರದಲ್ಲಿ ಅದ್ದೂರಿಯಿಂದ ಮಂಗಳ ಮಹೋತ್ಸವವನ್ನು ನಡೆಸಿದರು. ಶ್ರೀ ವಿಜಯದಾಸ ಪ್ರಭೃತಿಗಳ ಚರಿತ್ರಾವಲೋಕನದಿಂದ ತಾವೂ ದಾಸರಾಗಬೇಕೆಂಬ ಹಂಬಲವುಂಟಾಯಿತು. ತಂಬೂರಿ ದೊರಕಿಸಿಕೊಂಡರು. ಶ್ರೀ ಕರಿಗಿರಿನರಸಿಂಹನ ಸನ್ನಿಧಿಯಲ್ಲಿ ಭಜನೆ ಮಾಡಿದರು. ಶ್ರೀ ನರಸಿಂಹಾಚಾರ್ಯರೆಂಬುವರು ಇವರಿಗೆ ಗುರುವಿನ ಇರವನ್ನು ಸೂಚಿಸಿದರು. ಶ್ರೀ ವಿಜಯದಾಸರ ಶಿಷ್ಯರಾದ ಶ್ರೀ ವೇಣುಗೋಪಾಲದಾಸರ ಪೀಳಿಗೆಯಲ್ಲಿ ಬಂದ ಶ್ರೀ ಶ್ರೀವರವಿಠಲದಾಸರ ಕರಜರಾದ ದೊಡ್ಡಬಳ್ಳಾಪುರದ ಶ್ರೀ ಮುದ್ದುಮೋಹನವಿಠಲದಾಸರು ಶಿಷ್ಯಾನ್ವೇಷಣೆ ಮಾಡುತ್ತ ನರಸೀಪುರಕ್ಕೆ ಬಂದಿದ್ದರು. ಶ್ರೀ ಸುಬ್ಬರಾಯರನ್ನು ಪರೀಕ್ಷಿಸಿ ತುಮಕೂರಿಗೆ ಬರಲಿಕ್ಕೆ ಹೇಳಿ, ಅಲ್ಲಿ ಶ್ರೀ ವ್ಯಾಸರಾಯಮಠದಲ್ಲಿ ಒಂದು ಸುಮುಹೂರ್ತದಲ್ಲಿ **'ತಂದೆಮುದ್ದುಮೋಹನವಿಠಲ'** ಎಂಬ ಅಂಕಿತವನ್ನು ಕೊಟ್ಟು ಶಿರದಲ್ಲಿ ಹಸ್ತವನ್ನಿಟ್ಟು ಉಪದೇಶ ನೀಡಿದರು.

ಹೀಗೆ ಶ್ರೀ ತಂದೆಮುದ್ದುಮೋಹವಿಠಲದಾಸರು ವ್ಯಾಸ-ದಾಸ ಉಭಯ ಪಂಥಗಳಲ್ಲಿ ದೀಕ್ಷಿತರಾಗಿ ನಾನಾ ಕಡೆ ಸಂಚರಿಸಿ ಜಾತಿಮತಭೇದವಿಲ್ಲದೆ ಯೋಗ್ಯ ಸುಜೀವಿಗಳಿಗೆ ಅಂಕಿತ ಪ್ರದಾನ ಮಾಡಿದ್ದಾರೆ. ಅಂಕಿತಸ್ಥರಲ್ಲಿ ಮೊದಲಿಗರು ಶ್ರೀ ಪ್ರಾಣನಾಥವಿಠಲಾಂಕಿತರಾದ ಶ್ರೀ ಬಾಗೇಪಲ್ಲಿ ಶೇಷದಾಸರು. ಕೊನೆಯವರು ಶ್ರೀ ಗುರುಗೋವಿಂದವಿಠಲಾಂಕಿತ ಮೈಸೂರಿನ ಶ್ರೀ ಎಂ.ಗೋವಿಂದರಾಯರು. ಇವರಿಬ್ಬರ ಮಧ್ಯೆ ಪ್ರಧಾನ ಅಂಕಿತಸ್ಥರು ಶ್ರೀ ಪದ್ಮನಾಭವಿಠಲದಾಸರು, ಶ್ರೀ ಉರಗಾದ್ರಿವಾಸವಿಠಲದಾಸರು, ಶ್ರೀ ರಮಾಕಾಂತವಿಠಲದಾಸರು, ಶ್ರೀ ಗೋಪಾಲಕೃಷ್ಣವಿಠಲದಾಸರು (ಶ್ರೀಮತಿ ಅಂಬಾಬಾಯಿ), ಶ್ರೀ ನಿತ್ಯಾನಂದವಿಠಲದಾಸರು ಮುಂತಾದವರು. ಶ್ರೀ ದಾಸರಾಯರು 1165 ಜನಗಳಿಗೆ ಅಂಕಿತವನ್ನು ನೀಡಿದ್ದಾರೆ. ದಾಸಪಂಥದಲ್ಲಿ ಇಷ್ಟು ಬೃಹತ್ ಪ್ರಮಾಣದಲ್ಲಿ ಅಂಕಿತ ನೀಡಿದವರಲ್ಲಿ ಇವರದೆ ದಾಖಲೆ ಎನ್ನಬಹುದು. ಆತುರದಲ್ಲಿ ಸನ್ಯಾಸ ಸ್ವೀಕರಿಸಿ ಪುನರ್ನಿವೃತ್ತಿ ಹೊಂದಿದ ದೋಷ ಪರಿಹಾರಕ್ಕಾಗಿ ಶ್ರೀದಾಸರನ್ನು ಮೊರೆ ಹೊಕ್ಕು ಅನುಗ್ರಹೀತರಾಗಿ ಪಶ್ಚಾತ್ತಾಪ ರೂಪದಿಂದ ಶ್ರೀ ಹರಿಕಥಾಮೃತಸಾರಕ್ಕೆ ಭಾವಪ್ರಕಾಶಿಕಾ ಎಂಬ ವ್ಯಾಖ್ಯಾನವನ್ನು ಬರೆದ ಶ್ರೀ ಪದ್ಮನಾಭವಿಠಲಾಂಕಿತ ಪಲ್ಲಡಂ ಶ್ರೀ ಮಾಧವಾಚಾರ್ಯರು ಒಬ್ಬ ಪ್ರಧಾನ ಅಂಕಿತಸ್ಥರು. ದಾಸರಾಯರ ಅಚ್ಚುಮೆಚ್ಚಿನ ಪ್ರಶಿಷ್ಯರು ಶ್ರೀ ಉರಗಾದ್ರಿವಾಸವಿಠಲದಾಸರ ಶಿಷ್ಯರಾದ ಶ್ರೀ ತಂದೆವೆಂಕಟೇಶವಿಠಲಾಂಕಿತರಾದ ಚಿತ್ರದುರ್ಗದ ಶ್ರೀ ಆರ್. ರಾಮಚಂದ್ರರಾವ್ ಅವರು.

ಶ್ರೀ ದಾಸರು ನರಸಿಂಹನ ಪ್ರಸಾದದಿಂದ ಕರಿಗಿರಿಯಲ್ಲಿ ದೊರೆತ ಖಾಲಿ ನಿವೇಶನದಲ್ಲಿ ದಾಸಕೂಟಸಭಾವನ್ನು ಕ್ರಿ.ಶ.1900ರಲ್ಲಿ ಸ್ಥಾಪನೆ ಮಾಡಿದರು. ರಥೋತ್ಸವ ಸಮಯಕ್ಕೆ ಪ್ರತಿವರ್ಷವೂ ಬಂದು ಸಭಾಜ್ಞಾನಕಾರ್ಯ ಹಾಗೂ ಅನ್ನಸಂತರ್ಪಣೆಗಳನ್ನು ನಡೆಸಿದರು. ಶಿಷ್ಯರ ಆಧಿ-ವ್ಯಾಧಿಗಳನ್ನು 'ಎನ್ನಬಿನ್ನಪ ಕೇಳೋ ಧನ್ವಂತ್ರಿ ದಯಮಾಡೋ...' ಎಂಬ ದೇವರ ನಾಮದ ಆವರ್ತನೆ ಮೂಲಕ ಹಾಗೂ ವಾಯುಸ್ತುತಿ ಪುನಶ್ಚರಣೆ ಮೂಲಕ ಪರಿಹಾರ ಮಾಡಿದರು. ದೂರಸ್ಥರಿಗಾಗಿ ತಮ್ಮ ಪ್ರವಚನ ಲಾಭವಾಗಲೆಂದು **ಪರಮಾರ್ಥ ಚಂದ್ರೋದಯ** ಎಂಬ ಮಾಸ ಪತ್ರಿಕೆಯನ್ನು ಹೊರಡಿಸಿದರು. ಮುಳುಬಾಗಿಲು ಶ್ರೀ ಶ್ರೀಪಾದರಾಜರ ಸನ್ನಿಧಿಯಲ್ಲಿ, ಚಾಮರಾಜಪೇಟೆ ಪ್ರಾಣದೇವರ ಗುಡಿಯಲ್ಲಿ ಮತ್ತು 10 ತಿಂಗಳ ಕಾಲ ಪಾಠಕ್ರಮದಲ್ಲಿ ಮಲ್ಲೇಶ್ವರದ ಎಂ.ಮೂರ್ತಿರಾಯರ **ಶ್ರೀಹರಿಕೃಪಾ** ನಿವಾಸದಲ್ಲಿ, ಹರಿಕಥಾಮೃತಸಾರ ಪ್ರವಚನವನ್ನು ಮಾಡಿದರು. ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಧರ್ಮಬೋಧಕರಾಗಿ ಸರ್ಕಾರದಿಂದ ನೇಮಿಸಲ್ಪಟ್ಟು ಖೈದಿಗಳಿಗೆ ವಾರಕ್ಕೊಮ್ಮೆ ತತ್ತ್ವೋಪದೇಶ ಮಾಡುತ್ತಿದ್ದರು. ಅನೇಕ ಖೈದಿಗಳನ್ನು ಸನ್ಮಾರ್ಗಾವಲಂಬಿಗಳನ್ನಾಗಿಸಿದ್ದಾರೆ.

ತಿರುಪತಿಯಲ್ಲಿ ಶ್ರೀ ಶ್ರೀ ಸತ್ಯಧ್ಯಾನತೀರ್ಥರು ದಾಸರ ಪ್ರವಚನ ಕೇಳಿ ಆನಂದಪಟ್ಟು ಮಧ್ವಸಿದ್ಧಾಂತೋನ್ನಾಹಿನಿ ಸಭೆಗೆ ಧರ್ಮದರ್ಶಿಗಳನ್ನಾಗಿಯೂ ದಾಸಸಾಹಿತ್ಯ ಪರೀಕ್ಷೆಗೆ ಅಧ್ಯಕ್ಷರನ್ನಾಗಿಯೂ ಮಾಡಿದರು. ಶ್ರೀ ದಾಸರು ಪುತ್ತಿಗೆ ಮಠದ ಶ್ರೀಗಳವರಿಂದ **ಪರಮಪ್ರಿಯ** ಎಂಬ ಬಿರುದು ಪಡೆದರು. ದಾಸರಾಯರ ಆಜಾನುಬಾಹು ವ್ಯಕ್ತಿತ್ವ, ವೈದುಷ್ಯ, ನಿಷ್ಕಾಪಟ್ಯ ಮತ್ತು ಸರಳ ಸಂಭಾಷಣೆಗಳಿಂದ ಪ್ರಭಾವಿತರಾಗಿ ಅನೇಕ ಗಣ್ಯವ್ಯಕ್ತಿಗಳು– ಶ್ರೀ ವಾಯಿಕರ್ ಕೃಷ್ಣಾಚಾರ್ಯರು, ರಾಜಸಭಾಭೂಷಣ ಶ್ರೀ ಕರ್ಪೂರ ಶ್ರೀನಿವಾಸರಾಯರು, ಶ್ರೀ ಸುಬೋಧ ರಾಮರಾಯರು, ಶ್ರೀ ಬೇಲೂರು ಕೇಶವದಾಸರು, ಶ್ರೀ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳು, ಶ್ರೀ ಹೊಸಕೆರೆ ಚಿದಂಬರಯ್ಯನವರು, ಶ್ರೀ ಡಿ.ಕೆ ಭಾರದ್ವಾಜರು, ಶ್ರೀ ದೇಶಮುಖಿ ರಾಮರಾಯರು, ಶ್ರೀ ಬಿ.ಡಿ. ರಾಘವೇಂದ್ರರಾಯರೇ ಮೊದಲಾದವರು ಇವರನ್ನು ಗೌರವಿಸಿದ್ದಾರೆ.

ಕರಿಗಿರಿಗೆ ಬರುವವರಿಗೆ ನರಸಿಂಹನನ್ನು ಪ್ರಾಣಪ್ರತೀಕದಲ್ಲಿ ಉಪಾಸನೆಯನ್ನು ಮಾಡಿಸಬೇಕೆಂಬ ಉದ್ದೇಶದಿಂದ ಕದರುಮಂಡಲಗಿಯಿಂದ ತಂದ ಪ್ರಾಣದೇವರನ್ನು ಅಲ್ಲೇ ಇದ್ದ ಶ್ರೀಕೃಷ್ಣದಾಸ ಯತಿಗಳ ಮೂಲಕ ಪ್ರಮಾಥಿನಾಮ ಸಂವತ್ಸರ ಫಾಲ್ಗುಣ ಬಹುಳ ಪಂಚಮಿಯಂದು (28–03–1940) ವೈಭವದಿಂದ ಪ್ರತಿಷ್ಠಾಪನೆ ಮಾಡಿ, ಪೂಜಾ ವ್ಯವಸ್ಥೆಯನ್ನು ಮಾಡಿದರು. ಕೆಲವೇ ದಿನಗಳ ನಂತರ ದಾಸರಾಯರು ತಾವು ಬಂದ ಕಾರ್ಯ ಮುಗಿಯಿತೆನ್ನುವಂತೆ ವಿಕ್ರಮ ಸಂವತ್ಸರ ಚೈತ್ರ ಶುದ್ಧ ಶ್ರೀರಾಮನವಮಿ (16–04–1940) ಮಂಗಳವಾರದಂದು ಲಯಚಿಂತನೆ ಮಾಡಿ ಮಧ್ಯಾಹ್ನ 12 ಗಂಟೆಗೆ ಇಹಲೋಕ ತ್ಯಜಿಸಿ ಶ್ರೀಲಕ್ಷ್ಮೀನರಸಿಂಹ ಪಾದವನ್ನು ಸೇರಿದರು.

ಇಂದಿಗೂ ಅವರ ಅನುಗ್ರಹದಿಂದ ದಾಸಕೂಟಸಭಾ ಕಾರ್ಯ ನಡೆಯುತ್ತಿದೆ. ಪ್ರಾಣದೇವರ ಪೂಜಾ, ಬಂದ ಅತಿಥಿಗಳಿಗೆ ಅನ್ನದಾನ, ರಥೋತ್ಸವ, ರಾಮನವಮಿ, ನರಸಿಂಹಜಯಂತಿ ಮುಂತಾದ ವಿಶೇಷ ದಿನಗಳಲ್ಲಿ ವಿದ್ವಾಂಸರಿಂದ ಉಪನ್ಯಾಸ, ಹರಿದಾಸ ರಾಸಿಯರಿಂದ ಭಜನಾ ಕಾರ್ಯಕ್ರಮಗಳೂ ನಡೆಯುತ್ತಿವೆ.

ಶ್ರೀ ದಾಸರ ಬಗ್ಗೆ ವಿಶೇಷ ವಿವರಗಳಿಗಾಗಿ – ಶ್ರೀ ಗುರುಗೋವಿಂದವಿಠಲದಾಸರ **'ಪರಮಪ್ರಿಯ ಸುಬ್ಬರಾಯದಾಸರು'** ಮತ್ತು ಶ್ರೀ ಜಯಸಿಂಹರವರ **'ತಂದೆಮುದ್ದುಮೋಹನ ದರ್ಶನ'** ಈ ಪುಸ್ತಕಗಳನ್ನು ನೋಡಬಹುದು.

ಶ್ರೀಕರಿಗಿರಿ ನರಸಿಂಹನ ಸ್ತೋತ್ರಪದ

ರಾಗ: ಪೀಲು ತಾಳ:ಆದಿ

ಚರಣಕೆರ । ಗುವೆ ಕರಿ । ಗಿರಿ ಸದನ
ಕರುಣಿಸೋ । ದುರಿತಹರ । ನಿನ್ನ ದರುಶನ ಪ

ಧರಿಸಿರುವೆ । ಭೋಗ ಯೋಗ । ರೂಪವೆರಡನ್ನ
ಪರಮಪ್ರಿಯ । ದಾಸಾರಾಧ್ಯ । ದೇವವರೇಣ್ಯಾ ಅ.ಪ.

ದುರುಳ ದೈತ್ಯ । ಹಿರಣ್ಯಕ । ಜರಿದು ಬಾಲನ್ನ
ಕರೆದು ತೋರೋ । ಎನ್ನೆ ಕಂಬ । ದಲ್ಲಿ ಹರಿಯನ್ನ
ತ್ವರದಿ ಪ್ರಾದು । ರ್ಭವಿಸುತ । ತರಿದು ಖೂಳನ್ನ
ಕರುಳ ಮಾಲೆ । ಧರಿಸಿದ ಪರಮ ಪಾವನ್ನ 1

ಸುರರು ಬೆದರಿ । ಮೊರೆಯಿಡೆ । ಇಂದಿರೆಯನ್ನ
ತರಳನ ಕೂಡಿ । ಬೇಡಿಕೊಳ್ಳೆ । ಸಿರಿಯು ನಿನ್ನನ್ನ
ಪರಮ ಶಾಂತ । ನೀನಾಗುತ್ತ । ಬೀರಿ ಕರುಣ
ಪೊರೆದೆ ಜಯ । ವೆಂದಸುರ । ಪರಿವಾರವನ್ನ 2

ಚರವಾರಿ । ಚರಸೂಕರ । ನಾರಸಿಂಹನ
ಕರವಚಾಚಿ । ಶಿರವ ತರಿದ । ಸೌರಿ ಶೌರಿಯನ
ಬರಿಯ ಮೈಯ್ಯ । ತುರಗವಾಹ । ರೂಪಾನಂತನ
ಮರುತಾಂತ । ರ್ಗತಾನಂತ । ವಿಠಲಾಭಿನ್ನನ 3

ಶ್ರೀಕೃಷ್ಣಾರ್ಪಣಮಸ್ತು

॥ ಶ್ರೀ ಗುರುಭ್ಯೋನಮಃ ॥

॥ಹರಿಃ ಓಂ ॥

ಪ್ರಮೇಯಸಾರ

ಸಂಪುಟ ೫, ಸಂಚಿಕೆ ೧ ಆಂಗೀರಸ ಚೈತ್ರ ಏಪ್ರಿಲ್ ೧೯೩೨

(ಮತ್ತು ರಮಾದೇವರ ಮಹಾತ್ಮೆ ಎಂಬ ಪುಸ್ತಕದಿಂದ)

ಏತದ್ಬಿಂಬಾಂಶೀ ಭೂತಸ್ವೋತ್ತಮ ಬಿಂಬಾದಿಸಕಲಸದಧಿಷ್ಠಾನಿನೇ ನಮಃ ॥
ಶ್ರೀಮದ್ವೇಂಕಟೇಶಾಯ ನಮಃ ॥

೧. ಪೀಠಿಕಾ ಪ್ರಕರಣ

ಯಥಾ ಶಕ್ತ್ಯಾನುಸಾರ ಗುರುಗಳ ಪೂರ್ಣಾನುಗ್ರಹ ಮಾಡುವದ್ದರಿಂದ ಶ್ರೀಪರಮಾತ್ಮ ಪ್ರೀತನಾಗಿ ತನಗೆ ಪರಿವಾರರಾದಂಥ ರಮಾಬ್ರಹ್ಮ ಸಮಸ್ತ ತತ್ವಾಭಿಮಾನಿಗಳಿಂದ ಯುಕ್ತನಾಗಿ ಯಾವ ಆಧ್ಯಾತ್ಮ ಪ್ರಕರಣವನ್ನು ಬರೆಸುತ್ತಾನೋ ಅದು ಬರೆಯದೆ ಇರುವುದಕ್ಕೆ ಜೀವ ಅಸ್ವತಂತ್ರ ಚೇತನ, ತಥಾಪರಾಧೀನಕರ್ತಾ ಆದ ಪ್ರಯುಕ್ತ, ಯೋಗ್ಯತಾನುಸಾರ, ಕಾಲಾನುಸಾರ, ಯಾವ ಪ್ರಮೇಯ ಬರಸಿದ್ದು ಬರೆಯಲ್ಪಡುತ್ತದೆ. ಅದು ಯುಕ್ತವೋ ಅಯುಕ್ತವೋ ವಿಚಾರ ಮಾಡಲು ನಮಗೆ ಬುದ್ಧಿಯಿಲ್ಲ. ಪರಮಾತ್ಮ ತತ್ವಾಭಿಮಾನಿ ದೇವತೆಗಳು ಕ್ರಮದಿಂದ ಮಹಾಪ್ರಾಜ್ಞರಾದ ಕಾಲಕ್ಕೂ ಯೋಗ್ಯತಾ ನೋಡಿ ಜೀವನ ಗುಣಕರ್ಮಾನುಸಾರ ಸಕಲ ಕ್ರಿಯಾಮಾಡಿಸುತ್ತಾರೆ. ಆದರೂ ಪರಮಾತ್ಮ ದೋಷದೂರನಾದ ಕಾರಣ, ವೈಷಮ್ಯ ನೈರ್ಘಣ್ಯಗಳು ಒಡಂಬಡದ ಪ್ರಯುಕ್ತ ಯೋಗ್ಯತೆ ಅನುಸರಿಸುತ್ತಿದ್ದ ಕಾರಣ, ದೈತ್ಯರಿಗೂ ಮುಖ್ಯವಾಗಿ ಪರಮಾತ್ಮನೇ ನಿಯಾಮಕನಾದನು. ಆದರೂ ಜ್ಞಾನಿಗಳು ಯೋಗ್ಯತೆಯಲ್ಲಿ ಪರ್ಯವಸಾನ ಮಾಡುತ್ತಾರೆ. ಯೋಗ್ಯರ ಮಹಾತ್ಮೆಯು ಎಂಥಾದ್ದಂದರೆ, ಪರಮಾತ್ಮ ನಡಿಸದೇ ಹೋದರೆ ಯೋಗ್ಯತೆಯು ಜೀವ–ಜಡಕ್ಕಿಂತಲೂ ಹೀನರಾಗುತ್ತಾರೆ. ಆದ ಪ್ರಯುಕ್ತ ದೈತ್ಯರಿಗೂ ಪರಮಾತ್ಮನೇ ಮುಖ್ಯನಿಯಾಮಕನೆಂದು ಒಡಂಬಡಬೇಕು. ಆದರೂ ಇದು ಪರಮಾತ್ಮನಿಗೆ ಮಹಾಗುಣವಾಗಿ ಕರೆಸುತ್ತದೆ. ಜೀವನನ್ನು ಮಹಾದೋಷಿಯೆಂದು ಸರ್ವಜನರೂ ಒಡಂಬಡುತ್ತಾರೆ. ಹಾಗೆ ಜೀವಕೋಟಿ ಒಳಗೆ ನಾನೂ ಒಬ್ಬ ತೃಣಪ್ರಾಯನು. ಪರಮಾತ್ಮನ ಅಧೀನವಾಗಿ ಅವನು ಹ್ಯಾಗೆ ಪ್ರೇರಿಸುವನೋ ಹಾಗೆ ಬರೆಯುತ್ತೇನೆ. ಇದು ಸಜ್ಜನರಿಗೆ ಸಮ್ಮತವಾಗಿದ್ದರೆ ಪರಮಾತ್ಮನ ದಯವೇ ಸೈರಿಸತಕ್ಕದ್ದು. ಸಮ್ಮತವಾಗದ ಪಕ್ಷದಲ್ಲಿ ನನ್ನನ್ನೇ ಅತಿ ಮಂದಮತಿಯೆಂದು ನಿಂದಿಸತಕ್ಕದ್ದು. ಪ್ರೇರಕರು ನಿಂದಿಸಬೇಕಾದರೆ, ಅವರು ಮಹಾ ಪ್ರಾಜ್ಞರೆಂಬುದು ಸರ್ವರಿಗೂ ಸಮ್ಮತವು. ನನ್ನ ಯೋಗ್ಯತೆ, ಕಾಲ ಅವಲಂಬಿಸಿ

ಅವರು ಪ್ರೇರಿಸಿದ ಪ್ರಯುಕ್ತ ನನ್ನನ್ನೇ ನಿಂದಿಸತಕ್ಕದ್ದು. ಬರಸಿದ ಹಾಗೆ ಬರೆಯುವ ಪ್ರಕಾರ, ಪೂರ್ವದಲ್ಲಿ ರಮಾದೇವಿಯರಿಂದ ಅಭಿಮಾನ ಮಾಡಿಸಿಕೊಳ್ಳುವಂಥಾ ವಸ್ತುಗಳನ್ನು ವಿಸ್ತಾರಮಾಡುತ್ತೇನೆ. ನಿತ್ಯಾಭಿಮಾನಿಗಳು-ಅನಿತ್ಯಾಭಿಮಾನಿಗಳು ಎಂದು ಎರಡು ವಿಧ. ಇದರೊಳಗೆ ನಿತ್ಯಾಭಿಮಾನವು ಮುಖ್ಯವಾದ ಪ್ರಯುಕ್ತ, ಸಕಲ ಸಂಬಂಧವೂ ಈಕೆಯಿಂದ ಆಗುವ ಪ್ರಯುಕ್ತ ಇದನ್ನು ಸರ್ವರೂ ತಿಳಿಯಬೇಕಾಗಿದೆ. ಅದಕ್ಕೆ ಏನು ಕಾರಾಣವೆಂದರೆ, ಫಲವನ್ನು ಪಡೆಯಬೇಕಾದವನು ವೃಕ್ಷಕ್ಕೆ ಹೋಗದೇ ಹೋದರೆ ಫಲವು ಹ್ಯಾಗೆ ದೊರೆಯುವುದಿಲ್ಲವೋ ಹಾಗೆಯೇ ಪರಮಾತ್ಮನಿಗೆ ಪ್ರತಿಬಿಂಬರಾದಂಥ, ಜೀವರಾಶಿಗಳು, ಮೂಲಪ್ರಕೃತಿ, ಕಾಲ, ಕರ್ಮ, ಇವು ನಾಲ್ಕು ಪರಮಾತ್ಮನಿಗೇ ವಿಹಾರವಾದಂಥವು.

ಸೃಷ್ಟಿಯು ರಮಾದೇವಿಯವರ ಸಂಪತ್ತಿಗೆ ಕಾರಣವಾದಂಥಾದ್ದು. ಇವುಗಳನ್ನು ವಿಚಾರಮಾಡಿದರೆ, ತನ್ನಿಯಾಮಕ ನಾರಾಯಣನು ಅನಂತ ಗುಣಪರಿಪೂರ್ಣನೆಂದು ಭಕ್ತಿಮಾಡುವುದಕ್ಕೆ ಭಕ್ತಿಯನ್ನು ಕೊಟ್ಟು, ಪರಮಾತ್ಮನಿಗೆ ಪ್ರತಿಮಾರೂಪರಾದಂಥ, ಜೀವ, ಪ್ರಕೃತಿ, ಕಾಲ, ಕರ್ಮ, ಇವಕ್ಕೆ ಆಧಾರವಾದಂಥ ಅವ್ಯಾಕೃತಾಕಾಶ- ಇವುಗಳ ಸ್ವರೂಪವನ್ನು ತಿಳಿಸಿಕೊಡುವಂಥ ಅನಂತ ವೇದಗಳು – ಇವುಗಳ ವಿವೇಕವನ್ನು ತಿಳಿಯಬೇಕೆಂದು ಮನಸ್ಸು ಅಪೇಕ್ಷಿಸುತ್ತದೆ. ಮುಂದೆ ತಿಳಿಸಬೇಕೆಂಬುದು ಹರಿಗುರುಗಳಾಧೀನಜೀವರಾದರು. ತಮ್ಮಗಳ ಸುಖಾರ್ಥವಾಗಿ ಮುಖ್ಯವಾಗಿ ಮಾಡತಕ್ಕ ಯೋಚನೆ ಯಾವುದೆಂದರೆ ಪರಮಾತ್ಮನ ವಿಷಯಕ ಜ್ಞಾನ ಸಂಪಾದಿಸೋಣ. ಅದು ಯಾಕೆಂದರೆ – ಪ್ರಭುವಿನ ಪ್ರಸಾದ ಲೋಕದ ಸುಖಕ್ಕೆ ಕಾರಣ. ಅಪ್ರಸಾದ ಕ್ಲೇಶಕ್ಕೆ ಕಾರಣ.

ಅಗತ್ಯವಾಗಿ ಸುಖವನ್ನು ಅಪೇಕ್ಷಿಸತಕ್ಕದ್ದು ಜೀವನ ಸ್ವಭಾವ. ಇದರಲ್ಲಿ ಶಾಶ್ವತ ಸುಖ, ನಶ್ವರ ಸುಖ ಎಂದು ಎರಡು ವಿಧ. ಮುಖ್ಯವಾಗಿ ಸುಖ ಯಾವುದೋ ಅದನ್ನು ಅಪೇಕ್ಷಿಸಬೇಕು. ಅನಂತಗುಣಪರಿಪೂರ್ಣ- ಸಮಾಧಿಕರಹಿತ ಪರಮ, ಸ್ವಂತ್ರತ್ರ, ಮುಕ್ತ, ಕಾಮಧೇನು, ಸ್ಮೃತಿ ಮಾತ್ರದಿಂದ ಭಕ್ತರ ಮಹಾವಿಪತ್ತುಗಳನ್ನು ಪರಿಹರಿಸುವಂಥ, ಅತಿ ದಯಾಸಮುದ್ರನಾದ ಶ್ರೀಮನ್ನಾರಾಯಣನಲ್ಲಿ ಸದೃಶವಾದ ಅತ್ಯಂತವಾದ ಧೃಡತರ ಭಕ್ತಿಮಾಡಿ, ಅನ್ಯತ್ರ ಕಿಂಚಿತ್ಕೌತುಕನಾಗದಲೆ ಇರೋಣವೇ ಮುಖ್ಯ ಪ್ರಯೋಜನವೆಂದು ಮಹಾಜ್ಞಾನಿಗಳು ತಮಗೆ ಇದು ಅತಿ ಸಮ್ಮತವೆಂದು ತಲೆದೂಗಿ ಅತಿಹರ್ಷದಿಂದ, ಅತಿ ಪ್ರೇಮಾಸ್ಪದರಾದವರಲ್ಲಿ, ಪೂರ್ಣಾನುಗ್ರಹ ಉಳ್ಳವರಾದವರಲ್ಲಿ, ಪೂರ್ಣಾನುಗ್ರಹವುಳ್ಳವರಾದ ಪ್ರಯುಕ್ತ ಈ ಮಾತನ್ನು ಉಪದೇಶಮಾಡಿ ತಮ್ಮನ್ನು ಮೊರೆಹೊಕ್ಕಂಥಾ ದೀನಜನರನ್ನು ಸಂಸಾರ ಪಾಶದಿಂದ ಮುಕ್ತರನ್ನಾಗಿ ಮಾಡಿ ಶ್ರೀಪರಮಾತ್ಮನಿಂದ, ಸ್ವರೂಪಾನಂದಾದ್ಯಾವಿರ್ಭಾವ ಮಾಡಿಸಿ ಕೊಳ್ಳುತ್ತಾರೆಂದು ಜ್ಞಾನಿಗಳು ಆದರ ಪೂರ್ವಕವಾಗಿ ಹೇಳುವುದನ್ನು, ಪ್ರತಿಯೊಬ್ಬರೂ

ತಿಳಿದುಕೊಳ್ಳಬೇಕು. ಪರಮಾತ್ಮನು ಸಮಾಧಿಕರಹಿತನು ಇದಕ್ಕೆ ಪ್ರಮಾಣ ॥ ನಾಸ್ತಿನಾರಾಯಣ ಸಮಂನಭೂತಂ ನಭವಿಷ್ಯತಿ ॥ ಈ ಪ್ರಮಾಣದಿಂದ ಪರಮಾತ್ಮನು ಸಮರಹಿತನು ಮತ್ತು ಕೋಶರೀತ್ಯಾ – ಅಣಿಮಾಮಹಿಮಾಚೈವ ಗರಿಮಾಲಘಿಮಾತಥಾ ॥ ಪ್ರಾಪ್ತಿಃಪ್ರಾಕಾಮ್ಯಮೀಶತ್ವಂ ವಶಿತ್ವಂ ಚಾಷ್ಟಭೂತಯಃ ॥ ಅಣಿಮಾದಿ ಭೇದದಿಂದ ಎಂಟು ವಿಧವು. ಅಣಿಮಾ ಅಣುತ್ವ; ಸೂಕ್ಷ್ಮತಯಾ ಯಾಲಭ್ಯತೇ ಸಾ ಅಣಿಮಾಃ; ಮಹತ್ವೇನ ಮಹಿಮಾ; ಗುರುತ್ವೇನ ಗರಿಮಾ; ಲಘುತ್ವೇನ ಲಘಿಮಾ; ಯಾಯಾ ಇಷ್ಟಪ್ರಾಪ್ತಿಃ ಸಾಪ್ರಾಪ್ತಿಃ ಇಚ್ಛಯಾ ನಿರ್ವಿಘ್ನಸಂಚಾರ ಶಕ್ತಿರ್ಯಯಾ ತತ್ಪ್ರಾಕಾಮ್ಯಂ – ಸರ್ವಾತಿಶಾಯಿತ್ವಮೀಶ್ವರತ್ವಂ ಸ್ವಾಧೀನೇಂದ್ರಿಯಿತ್ವಂ ವಶಿತ್ವಂ – ಈ ಅಷ್ಟೈಶ್ವರ್ಯಗಳು ಪರಮಾತ್ಮನಲ್ಲಿಯೇ ಇರುತ್ತವೆ. ಮತು ಪ್ರ ॥ ನತ್ವತ್ಸಮೋಸ್ತ್ಯಭ್ಯಧಿಕಃ ಕುತೋನ್ಯೋ ಲೋಕತ್ರಯೇಪ್ಯ ಪ್ರತಿಮ ಪ್ರಭಾವ ॥ ಹೀಗೆಂದು ಗೀತಾ ೧೧ನೇ ಅಧ್ಯಾಯ ೪೩ನೇ ಶ್ಲೋಕದಲ್ಲಿ ಅಸದೃಶವಾದ ಪ್ರಭಾವವುಳ್ಳ ಎಲೈ ! ಸ್ವಾಮಿಯೇ ! ನಿನಗೆ ಸಮಾನನು ಮುರು ಲೋಕಗಳಲ್ಲಿ ಎಲ್ಲಿಯೂ ಇಲ್ಲ; ಇನ್ನು ನಿನಗಿಂತಲೂ ಅಧಿಕನಾದವನು ಎಲ್ಲಿಂದ ಬಂದಾನು? ಮತ್ತು ಮಹಾಭಾರತತಾತ್ಪರ್ಯ ನಿರ್ಣಯದಲ್ಲಿ ಶ್ಲೋ ॥ ನಾರಾಯಣಸ್ಯ ನ ಸಮಃ ಪುರುಷೋತ್ತಮೋऽಹಂ ಜೀವಾऽಕ್ಷರೇ ಹ್ಯಧಿಗತೋऽಸ್ಮಿ ತತೋऽಸ್ಯದಾರ್ತಂ ॥ ಮುಕ್ತೋಪಸೃಪ್ಯ ಇಹನಾಸ್ತಿ ಕುತಶ್ಚ ಕಶ್ಚಿನ್ನಾನೇವ ಧರ್ಮ ಪೃಥಗಾತ್ಮ ದೃಗೇತ್ಯಧೋಹಿ ॥

ತಾ॥ ನಾರಾಯಣ ದೇವರಿಗೆ ಸಮಾನವಿಲ್ಲ. ನಾನು ಪುರುಷೋತ್ತಮನು. ಜೀವರುಗಳನ್ನು ಲಕ್ಷ್ಮಿಯನ್ನು ಅವರುಗಳಿಗಿಂತ ಅಧಿಕನಾಗಿ ಹೊಂದಿರುವನು. ಆ ಭಗವಂತನಿಗಿಂತ ಇತರವಾದ ಸರ್ವಪ್ರಪಂಚವೂ ದುಃಖದಿಂದ ಕೂಡಿದ್ದು, ಮುಕ್ತರುಗಳಿಂದ ಹೊಂದುವುದಕ್ಕೆ ಅರ್ಹನು ಈ ಭಗವಂತನಲ್ಲಿ ಯಾವ ವಿಧವಾಗಿಯೂ ಸ್ವಗತಭೇದವಿಲ್ಲ. ಭಗವಂತನ ಗುಣಗಳಿಗೂ ಭಗವಂತನಿಗೂ ಭೇದವನ್ನು ತಿಳಿಯತಕ್ಕವನು ಅಂಧಂತಮಸ್ಸನ್ನು ಹೊಂದುತ್ತಾನೆ.

ಮೇಲೆ ಉದಹರಿಸಿರುವ ಪ್ರಮಾಣರೀತ್ಯಾ ಪರಮಾತ್ಮನಿಗದಿಕರಾದವರು ಮತ್ಯಾರು? ಆದಕಾರಣ "ಏಕಮೇವಾ ದ್ವಿತೀಯ" ಎಂಬ ಶೃತ್ಯನುಸಾರ ಪರಮಾತ್ಮನು ಅದ್ವಿತೀಯನು. ಅಸದೃಶನು, ಸಮಾಧಿಕ ಶೂನ್ಯನೆಂತ ಭಾವ.

ಆದ್ದರಿಂದ ಪರಮಾತ್ಮನ ಸರಿ ಅಣು, ಲಘು, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ ಮುಂತಾದುವುಗಳನ್ನು ಪಡೆದವರು ಮತ್ತೊಬ್ಬರಿಲ್ಲ. ಪ್ರಾಪ್ತಿ ಅಂದರೆ ಸಮಸ್ತ ಪುರುಷಾರ್ಥ ಪೂರ್ಣವಾಗಿರುವುದು. ಮತ್ತೇನನ್ನೂ ಬಯಸದೇ ಇರತಕ್ಕಂಥಾದ್ದು. ತತೋಪ್ಯಧಿಕ

ಪರಮಾತ್ಮನಾದ ಕಾರಣ ಸಮಸ್ತ ಭಕ್ತಿಯನ್ನೂ ಪರಮಾತ್ಮನಲ್ಲಿ ಮಾಡತಕ್ಕದ್ದು. ಏತದೈಶ್ವರ್ಯ ಉಳ್ಳಂಥ ಪರಮಾತ್ಮನ ಮಹಾತ್ಮೆಯು ಅತಿ ಘನವೆಂದು ಪುರಂದರದಾಸರಿಂದ ಉಕ್ತವಾಗಿದೆ.

ಉ ॥ ನಾಘನ ನೀಘನ ತಾಘನವೆನಬೇಡಿ ಒಬ್ಬನೇ ಘನವಯ್ಯ ಪುರಂದರವಿಠಲ॥

ಅಣುವಾದ ಪದಾರ್ಥ ವಿಸ್ತಾರ ಮಾಡಲು ಅಣುಜೀವ–ಜೀವ ಪರಿಮಿತಿ ಎಷ್ಟೆಂದರೆ,

ಜಗನ್ನಾಥರಾಯರೋಕ್ತಿ ॥ ಹರಿಕಥಾಮೃತಸಾರ ೯ನೇ ಸಂಧಿ ೭ನೇ ಶ್ಲೋಕ.

ಕುದುರೆ ಬಾಲದ ಕೊನೆಯ ಕೂದಲು । ತುದಿಭಾಗವ ಮಾಡಿ ಶತವಿಧ। ವದರಳೊಂದನು । ನೂರುಭಾಗವ ಮಾಡಲೆಂತಿಹದೋ ॥ ವಿಧಿಭವಾದಿ ಸಮಸ್ತಜೀವರ । ಮೊದಲು ಮಾಡಿ ತೃಣಾಂತ ಜೀವರೊ ।ಅಧಿಕ ನ್ಯೂನತೆ ಇಲ್ಲವೆಂದಿಗು ಜೀವ ಪರಿಮಾಣ॥

ಜೀವನ ಪರಿಮಾಣ(ಪರಿಮಿತಿ)ಯನ್ನು ಹೇಳುತ್ತಾರೆ:– ಕುದುರೆಯ ಬಾಲದ ಒಂದು ಕೂದಲನ್ನು ಕಿತ್ತು, ಅದರ ಕೊನೆಯ ಭಾಗವನ್ನು ಮಾತ್ರ ತೆಗೆದುಕೊಂಡು, ಅದನ್ನು ನೂರು ಭಾಗವನ್ನಾಗಿ ಸೀಳಿ, ಸೀಳಿದ ಒಂದು ತುಣುಕನ್ನು ನೂರು ಭಾಗವಾಗಿ ಮಾಡಿದರೆ ಎಷ್ಟು ಇರುವುದೋ ಅಷ್ಟು ಮಾತ್ರವೇ ಬ್ರಹ್ಮ ಮೊದಲು ತೃಣಜೀವರವರೆಗೂ ಎಲ್ಲಾ ಜೀವರ ಸ್ವರೂಪ ಪರಿಮಾಣವು ಇರುವುದು. ಬ್ರಹ್ಮಾದಿ ಜೀವರ ಪರಿಮಾಣವು ದೊಡ್ಡದೆಂದಾಗಲಿ, ತೃಣಾದಿಜೀವರ ಪರಿಮಾಣವು ಸಣ್ಣದೆಂದಾಗಲಿ, ಹೆಚ್ಚು, ಕಮ್ಮಿಯು ಎಂದಿಗೂ ಇಲ್ಲ. ಇದಕ್ಕೆ ತತ್ವಸಾರದ ಪ್ರಮಾಣ.

ಅಶ್ವವಾಲಾಗ್ರಮಾದಾಯ ವಿಭಜ್ಯ ಶತಧಾಹಿ ತತ್ ॥ ಪುನಶ್ಚ ಶತಧಾ ಭಿನ್ನಂ ಕಿಯನ್ಮಾನಂ ಭವಿಷ್ಯತಿ ॥ ತಾವದ್ಬ್ರಹ್ಮಾದಿ ಜೀವಾನಾಂ ಪರಿಮಾಣಂ ಪ್ರಕೀರ್ತಿತಂ ॥

ಮೇಲೆ ಹೇಳಿದ ಅರ್ಥವೇ ಈ ಶ್ಲೋಕಾರ್ಥವು.

ಮತ್ತು ಗೀತಾ ೨ನೇ ಅಧ್ಯಾಯ ೨೩ನೇ ಶ್ಲೋಕದಲ್ಲಿ ॥ ನೈನಂಛಿಂದಂತಿ ಶಸ್ತ್ರಾಣಿ ನೈನಂದಹತಿ ಪಾವಕಃ ॥ ನಚೈನಂ ಕ್ಲೇದಯಂ ತ್ಯಾಪೋನ ಶೋಷಯತಿ ಮಾರುತಃ ॥

ಜೀವನವನ್ನು ಆಯುಧಗಳು ಛೇದಿಸಲಾರವು. ಅಗ್ನಿಯು ಸುಡಲಾರವು. ಉದಕವು ಮೆದುವನ್ನು ಮಾಡಲಾರದು. ಗಾಳಿಯು ಒಣಗಿಸಲಾರದು. ಆದ್ದರಿಂದ ಅಶ್ವವಾಲಾಗ್ರದೊಳಗೆ, ಹತ್ತು ಸಹಸ್ರದಲ್ಲಿ, ಒಂದನೇ ಭಾಗದ ಪರಿಮಿತಿ ಉಳ್ಳ ಜೀವಗೆ ಜೀವನವೇ ಶರೀರವಾಗಿ, ಅವಯುವಗಳಿಂದ ಯುಕ್ತವಾಗಿ ಇದ್ದಂಥಾವನು. ಮತ್ತು ಅವಯುವದಿಂದ ಸಹಿತನಾಗಿ, ಅನಂತಭಾಗ ಪರಮಾತ್ಮನ ಸಾಮರ್ಥ್ಯದಿಂದ ಆಗುವಂಥ ಜೀವರ ಸಮೂಹದಲ್ಲಿ ಕೆಲವರು ನಿರಂಶರಾಗಿದ್ದಾರೆ. ಈ ಜೀವರಾಶಿಗಳು ಒಂದೊಂದು ಸಮಗ್ರರಾಶಿ, ಅನಂತಾನಂತ

ಬ್ರಹ್ಮದೇವರಿಂದಲೂ ಕೂಡ ಜೀವರಾಶಿಗಳುನ್ನು, ಎಣಿಸಲಿಕ್ಕೆ ಶಕ್ಯರಲ್ಲ. ಬ್ರಹ್ಮದೇವರು ಸರ್ವಜ್ಞರಾಗಿದ್ದಾರೆಂಬ ವಿಷಯದಲ್ಲಿ ಸಂಶಯವಿದ್ದರೆ:- ಈ ಜೀವರು ದೇವರ ಸೃಷ್ಟಿಗೆ ಕಾರಣರಾದ ಪ್ರಯುಕ್ತ, ದೇವರ ಸೃಷ್ಟಿಗೆ ಅನಂತಗಳು ಇಲ್ಲದ ಕಾರಣ ಎಂದೆಂದಿಗೂ ಜೀವರಾಶಿಗಳ ರಾಶಿ ಮುಗಿಯುವುದೇ ಇಲ್ಲವಾದ ಕಾರಣ ಹೀಗೆ ವಡಂಬಡಬೇಕು. ಹಾಗಾದರೆ ಬ್ರಹ್ಮದೇವರಿಗೆ ಆ ಸರ್ವಜ್ಞತೆ ಗೊತ್ತಿಲ್ಲಾ ಎಂದರೆ ಅವರು ದೇವರ ಸಂಕಲ್ಪಾನುಸಾರ ನಡೆಯುವವರು. ಅವರಿಗೆ ಅತಿ ಮಹಾತ್ಮ್ಯ ವಡಂಬಡೋಣವೇ? ಅವರಿಗೆ ಮಹಾ ಸರ್ವಜ್ಞತೆ ಆದ ಕಾರಣ ಅವರು ಸರ್ವಜ್ಞರೇ ಸರಿ. ಮತ್ತ್ಯಾವ ದೃಷ್ಟಾಂತವೆಂದರೆ- ಅಜ್ಞಾನಿಗಳಿಗೆ ಜ್ಞಾನಾದಿ ಸತ್ಕರ್ಮವೆಂಬುದು ಮಹಾ ಪುರುಷಾರ್ಥವು. ಇಂಥಾ ಪುರುಷಾರ್ಥವನ್ನು, ಅಪರೋಕ್ಷ ಸಮಸ್ತರೂ, ಅವಧೂತ ವೇಷ ಧರಿಸಿ, ಇದನ್ನು ತುಚ್ಛೀಕರಿಸಿದ್ದು ಕಂಡರೆ ಅವರಿಗೆ ಇದರ ಪಾಪವಿಲ್ಲ. ಇನ್ನು, ಬ್ರಹ್ಮದೇವರಿಗೆ ಏನು ಹೇಳಬೇಕು? ಸಕಲ ಪದಾರ್ಥ ಜ್ಞಾನವುಳ್ಳವನಾಗಿ, ಸರ್ವಜ್ಞನಾದ ಪರಮಾತ್ಮನನ್ನು ಮರೆತರೆ ಅವನೇ ಅಜ್ಞಾನನೆಂದು ಶಾಸ್ತ್ರ ಸಿದ್ಧ. ಸರ್ವ ಪದಾರ್ಥವನ್ನು ಬ್ರಹ್ಮನು ತಿಳಿಯುವುದರಿಂದ ಬ್ರಹ್ಮನನ್ನು ತಿಳಿದ ಅಜ್ಞಾನರಿಲ್ಲವಲ್ಲಾ ಎಂದರೆ; ತನ್ನ ಯೋಗ್ಯತೆ ಮೀರಿ, ಪರಮಾತ್ಮನ ಸಂಕಲ್ಪ ಮೀರಿ ತಿಳಿಯಲು, ಹೋದರೆ, ಅದೇ ಪರಮಾತ್ಮನ ವಿಸ್ಮೃತಿ ಆಗುತ್ತದೆ ಎಂಬುವುದು, ಸರ್ವಜ್ಞನಾದ ಬ್ರಹ್ಮ ಬಲ್ಲ. ಆದಕಾರಣ ಬ್ರಹ್ಮ ಸರ್ವಜ್ಞನು, ಹರಿಗೆ ಪ್ರೀತ್ಯಾಸ್ಪದನು. ಈ ಜೀವರಿಗೆ ರಮಾದೇವಿಯರು ಅಭಿಮಾನಿಗಳು, ಸಾತ್ವಿಕ ಜೀವರಿಗೆ ಶ್ರೀರೂಪದಿಂದಲೂ, ರಾಜಸಜೀವರಿಗೆ ಭೂರೂಪದಿಂದಲೂ, ತಾಮಸಜೀವರಿಗೆ ದುರ್ಗಾರೂಪದಿಂದಲೂ, ಈ ಜೀವರಾಶಿಗಳು ಆಗುತ್ತೆ. ಆದ್ಯಂತಗಳನ್ನು ಬ್ರಹ್ಮದೇವರು ಅರಿಯರು. ಇದಕ್ಕೆ ಪ್ರಮಾಣ. ಅಜ್ಞಾನಂಚ ಚತುರ್ದ್ವಾರಂ ದ್ವಿವಾರಂ ಭಯಮೇವಚ॥ ಈ ಜೀವರಾಶಿಗಳು ಆದ್ಯಂತಗಳು. ಸಕಲವನ್ನೂ ರಮಾದೇವಿಯರು ಬಲ್ಲರು. ತಾವೇ ತಾವು ಅಭಿಮಾನಿಗಳಾದ ಕಾರಣ, ತಮ್ಮಿಂದಲೇ ಗತಿಯನ್ನು ಹೊಂದುತ್ತಿದ್ದ ಕಾರಣ ತಾವು ಸರ್ವದಾ ನಿತ್ಯಮುಕ್ತರಾದ ಕಾರಣ ಬ್ರಹ್ಮಾದ್ಯನಂತ ಜಗತ್ತು ರಮಾದೇವಿಯರಿಗೆ, ಏಕದೇಶವಾದ ಕಾರಣ ಬ್ರಹ್ಮದೇವರಿಗಿಂತಲೂ ಕೋಟಿಗುಣ, ಅನಂತಗುಣದಿಂದ ಸರ್ವಜ್ಞಳೆಂದು, ವೇದಶೃತಿ ವಾದಿಸುತ್ತಿರುವ ಕಾರಣ ರಮಾದೇವಿಯರು ಜೀವರ ಅದ್ಯಂತಗಳನ್ನು ಸಮಗ್ರವಾಗಿ ಬಲ್ಲವಳೆಂದು ಹೇಳಬೇಕು.

ಜೀವರುಗಳು:- ತೃಣಜೀವರು, ಕೀಟಗಳು, ಪಕ್ಷಿಗಳು, ಮನುಷ್ಯೋತ್ತಮರು, ಚಕ್ರವರ್ತಿಗಳು, ಕಾರ್ತವೀರ್ಯಾದಿ ಶತಸಂಖ್ಯಾಕರವಿನಾ ಮನುಷ್ಯ ಗಂಧರ್ವರು. ಇವರಿಷ್ಟು ಮಂದಿಗಳೂ ನಿರಂಶಜೀವರು, ಕರ್ಮಯೋಗಿಗಳು ಪ್ರತೀಕಾಲಂಬನ ಜೀವರು ನಿರಂಶಜೀವರು ಅಸಂಖ್ಯಾತರು; ಇವರಿಗೆ ಸಂಖ್ಯೆ ಇಲ್ಲ. ದೇವತೆಗಳು ಸಂಖ್ಯಾನಿಯಮ

ಉಳ್ಳಂಥಾವರು ಪ್ರಮಾಣ.

ಶ್ಲೋಕ॥ ತೃಣಾದಿಮರ್ತ್ಯ ಗಂಧರ್ವ ಪರ್ಯಂತಾಸ್ತೇಹ್ಯನಂತಶಃ ॥ ನಿರಂಶಾಸ್ತೇ ಪ್ರತಿಕಾವಾಲಂಬಾಸ್ತೇ ಕರ್ಮಯೋಗಿನಃ ॥ ಪ್ರತೀಕಾಸ್ಥಂ ಶರೀರಸ್ಥಂ ಪಶ್ಯಂತೀತಿ ತದಾಜ್ಞಯಾ॥ ನಿರಂಶೇಷು ನಸಂ ಖ್ಯಾಸ್ತಿ ಬಹುತ್ವಾದ್ಬಹುಧೈವಸಾ ॥ ಇತಿ ಪ್ರಕಾಶ ಸಂಹಿತಾಯಾಂ ॥ ಕರ್ಮಯೋಗಿಗಳೆಂದರೆ:– ಶಾಸ್ತ್ರಗಳಲ್ಲಿದ್ದ ಕರ್ಮಗಳನ್ನು ತಿಳಿದು ಆ ಕರ್ಮಗಳನ್ನೇ ಮುಖ್ಯವಾಗಿ ಅನುಸರಿಸುವುದರಿಂದ ಅವುಗಳಲ್ಲಿ ಯಾವ ಭಗವದ್ಗುಣಗಳು ತಿಳಿಯಲ್ಪಡುತ್ತದೋ ಅವರು ಕರ್ಮಯೋಗಿಗಳು. ಇದಕ್ಕೆ ಪ್ರಮಾಣ. ಏಕಾದಶಸ್ಕಂಧ ತಾತ್ಪರ್ಯ ೨೦ನೇ ಅಧ್ಯಾಯದಲ್ಲಿ ಶ್ಲೋ॥ ಸನ್‌ಕಾದ್ಯಾಃ ಜ್ಞಾನಯೋಗಾಃ ಭಕ್ತಿಯೋಗಾಸ್ತು ದೇವತಾಃ ॥ ಮಾನುಷಾಃ ಕರ್ಮಯೋಗಾಶ್ಚ ತ್ರಿಧೈತೇ ಯೋಗಿನಸ್ಸ್ಮೃತಾಃ ॥ ಕರ್ಮಾಣಿ ಶಾಸ್ತ್ರತೋಽಜ್ಞಾತ್ವಾ ತತ್ಪ್ರಾಧಾನ್ಯಾನು ಸಾರತಃ ॥ ವಿಜ್ಞಾತಾಯ್ಯೈರ್ಗುಣಾರ್ವಿಷ್ಣೋಃ ಜ್ಞೇಯಾಸ್ತೇ ಕರ್ಮಯೋಗಿನಃ ॥ ಇತಿ ಪ್ರಕಾಶ ಸಂಹಿತಾಯಾಂ ॥

ಕರ್ಮಯೋಗಿಗಳ ಸಾಧನವೇನೆಂದರೆ:– ತಮ್ಮ ತಮ್ಮ ಕರ್ಮಾನುಸಾರದಿಂದ ನಾನಾಯೋನಿಗಳಲ್ಲಿ ತಿರುಗುತ್ತಾ, ಯಾವ ಮನುಷ್ಯ ಜನ್ಮಗಳಲ್ಲಿ ಬರುತ್ತಾರೋ ಆ ಜನ್ಮದಲ್ಲಿ ವೇದೋಕ್ತವಾದಂಥ ಕರ್ಮಾನುಷ್ಠಾನ ಮಾಡಬೇಕು. ಆಮೇಲೆ ಹತ್ತು ಜನ್ಮಗಳಲ್ಲಿ ಶ್ರೀಹರಿ ಸರ್ವಜ್ಞನು, ಸರ್ವೋತ್ತಮನು, ಸ್ವತಂತ್ರನು, ನಿರ್ದೋಷನು, ತೃಣಕೀಟಾದಿ ಸಕಲ ಜೀವರು ಮನುಷ್ಯ ದೇಹಕ್ಕೆ ಬಂದು ಭರತಖಂಡದಲ್ಲಿ ಸಾಧನೆ ಮಾಡಬೇಕು. ತೃಣಕೀಟಾದಿಗಳಲ್ಲಿ ಸಾಧನವಿಲ್ಲ.

ಜೀವಧರ್ಮಗಳು:– ಅಸ್ವತಂತ್ರನು, ಅಜ್ಞಾನಿ, ಅನೇಕ ತಮ್ಮ ಕರ್ಮ ಸುಖ ದುಃಖ ಭೋಗಿ, ಸ್ವಪರಜ್ಞಾನಶೂನ್ಯ, ಸರ್ವದಾ ಅಯೋಗ್ಯ ವಿಷಯಾಸಕ್ತನು, ಆತ್ಮಸ್ವಾರ್ಥಪರನು, ಜನನಮರಣ ಆಧಿವ್ಯಾಧಿಸಹಿತನು, ಪರಮಾತ್ಮನ ವಿಷಯಕ್ಕೆ ಜ್ಞಾನ ಭಕ್ತಿ ವೈರಾಗ್ಯ ವಿವರ್ಜಿತನು, ಪ್ರತಿಕ್ಷಣಶ ಅನಂತಾಪರಾಧವುಳ್ಳವನು ಎಂದು ನೋಡಿಕೊಂಡು ಜೀವನು ಸರ್ವದಾ ದೇವರಿಂದ ಶಿಕ್ಷಾರ್ಹನು, ತನ್ನಿಂದ ಸರ್ವಸ್ವೋತ್ತಮರ ಅಧೀನ. ಸರ್ವಕಾಲದಲ್ಲಿ ಪ್ರಾಕೃತ, ಅಪ್ರಾಕೃತ ಅವರ್ಣಗ್ಯಂದ ವಿಶಿಷ್ಟನು. ಇಂಥಾ ಅಜ್ಞಾನಿ ಜೀವಗೂ, ಪರಮಾತ್ಮಗೂ ಅಭೇದ ಮಾಡಲಾಗದು. ಭೇದವೇ ಸಿದ್ಧಾಂತ.

೨. ರಮಾದೇವಿಯವರ ಮಹಾತ್ಮೆ

(ರಮಾದೇವರ ಮಹಾತ್ಮೆ ಎಂಬ ಪುಸ್ತಕದಿಂದ)

ಲಕ್ಷ್ಮೀದೇವಿಯರ ಸ್ತೋತ್ರ

ಶ್ಲೋಕ:-

ಸವಾರ್ಥ ದಾಸರ್ವ ಜಗತ್ಪ್ರಸೂತೀ ।
ಸರ್ವೇಶ್ವರೀ ಸರ್ವಭಯಾಪಹಂತ್ರೀ ॥
ಸರ್ವೋನ್ನತಾಂತ್ವಂ ಸುಮುಖೀಭವ ।
ಶ್ರೀ ಹಿರಣ್ಮಯೀಮೇನಯನ ಪ್ರಸನ್ನಾ ॥೧॥
ಲಕ್ಷ್ಮೈನಮೋಸ್ತು ಶುಭಲಕ್ಷಣ ಲಕ್ಷತಾಯ್ಯೆ ।
ಸಿದ್ಧ್ಯೈನಮೋಸ್ತು ಶಿವಸಿದ್ಧ ಸುಪೂಜಿತಾಯ್ಯೆ ।
ದೇವ್ಯೈನಮೋಸ್ತು ದಿವಿದೇವಗಣಾರ್ಚಿತಾಯ್ಯೆ ॥
ಭೂತ್ಯೈನಮೋಸ್ತು ಭುವನಾರ್ತಿವಿನಾಶನಾಯ್ಯೆ ॥೨॥
ವೇದಾಭಿಮಾನಿನೀಂ ಮಾರಜನನೀಂ ಭವವೈರಿಣೀಂ ।
ವ್ಯಾಧಿಪ್ರಶಮನೀಂ ಕೃಷ್ಣರಮಣೀಂ ನೌಮಿರುಗ್ಮಿಣೀಂ ॥೩॥
ಅಂಬಪ್ರಸೀದ ಕರುಣಸುಧಯಾದ್ರ್ರ ದೃಷ್ಟ್ಯಾ ।
ಮಾಂತ್ವಂ ಕೃಪಾದ್ರವಿಣ ಗೇಹಮಿಮಂ ಕುರುಷ್ವ ॥
ಅಲೋಕಯಪ್ರಣತ ಹೃದ್ಗತ ಶೋಕಹಂತ್ರೀ ।
ತ್ವತ್ಪಾದ ಪದ್ಮಯುಗಲಂ ಪ್ರಣಮಾಮ್ಯಹಂ ಶ್ರೀಃ ॥೪॥

ಈ ಪ್ರಕಾರವಾಗಿ ರಮಾದೇವಿಯರನ್ನು ಯಥಾಮತಿ ಸ್ತೋತ್ರ ಮಾಡಿ ಅವರ ಸ್ವರೂಪವನ್ನು ನಿರೂಪಿಸುವೆನು. ರಮಾದೇವಿಯರ ಪರ್ಯಾಯನಾಮಗಳ ವಿವರಣೆ:-

೧. **ಲಕ್ಷ್ಮೀಃ:-** ಲಕ್ಷ್ಯತೇ ಸರ್ವೋಯಯೇತಿ ಲಕ್ಷ್ಮೀಃ – ಈಕೆಯಿಂದ ಸರ್ವವೂ ನೋಡಲ್ಪಡುತ್ತದೆಯಾದ್ದರಿಂದ ಲಕ್ಷ್ಮೀಯೆಂತಲೂ,

೨. **ಪದ್ಮಾಲಯಾ:-** ಪದ್ಮಾಲಯಾಯಸ್ಯಾಸಾ – ಕಮಲವೇ ಗೃಹವಾಗಿ ಉಳ್ಳವಳಾದ್ದರಿಂದ ಪದ್ಮಾಲಯೆ ಎಂತಲೂ,

೩. **ಪದ್ಮಾ**:– ಪದ್ಯತೆಸೇವ್ಯತ ಇತಿಪದ್ಮಾ – ಸೇವಿಸಲ್ಪಡುವಳಾದ್ದರಿಂದ ಪದ್ಮೆಯೆಂತಲೂ. ಪದ್ಮಮಸ್ಯಾಃ ಕರೇಸ್ತೀತಿವಾ – ಪದ್ಮವನ್ನು ಹಸ್ತದಲ್ಲಿ ಉಳ್ಳವಳಾದ್ದರಿಂದ ಪದ್ಮೆಯೆಂತಲೂ,

೪. **ಕಮಲಾ**:– ಕಮ್ಯತ ಇತಿ ಕಮಲಾ – ಕಮುಕಾಂತೌ – ಕಮಲಾಮಸ್ಯಾ ಅಸ್ತೀತಿವಾ – ಪ್ರಕಾಶಿಸುವಳಾದ್ದರಿಂದಲೂ, ಮತ್ತು ಕಮಲವುಳ್ಳವರಾದ್ದರಿಂದಲೂ ಕಮಲೆ ಎಂತಲೂ,

೫. **ಶ್ರೀಃ** :– ಶ್ರಿಯತೇ ಸರ್ವೈರಿತಿ ಶ್ರೀಃ–ಸರ್ವರಿಂದಲೂ ಆಶ್ರಯಿಸಲ್ಪಡುವಳಾದ್ದರಿಂದ ಶ್ರೀ ಎಂತಲೂ,

೬. **ಹರಿಪ್ರಿಯಾ** :– ಹರೇಃ ಪ್ರಿಯಾ – ಹರಿಗೆ ಪ್ರಿಯಳಾದ್ದರಿಂದ ಹರಿಪ್ರಿಯಳೆಂತಲೂ,

೭. **ಇಂದಿರಾ** :– ಇಂದಿತೀತೀಂದಿರಾ – ಪರಮೈಶ್ವರ್ಯವುಳ್ಳವಳಾದ್ದರಿಂದ ಇಂದಿರೆ ಎಂತಲೂ,

೮. **ಲೋಕಮಾತಾ**:– ಲೋಕಾನಾಂ ಮಾತಾ ಲೋಕಮಾತಾ – ಯಲ್ಲಾ ಲೋಕಗಳಿಗೂ ತಾಯಿಯಾದ್ದರಿಂದಲೋಕಮಾತೆಯೆಂತಲೂ ಹೆಸರುಗಳು.

ಪರಮಾತ್ಮನ ಅನಂತಕಲ್ಯಾಣ ಗುಣಗಳಲ್ಲಿ ಮುಖ್ಯವಾದ ಸೌಂದರ್ಯ, ಸೌಶೀಲ್ಯ, ಲಾವಣ್ಯ, ವಾತ್ಸಲ್ಯ, ಕಾರುಣ್ಯ, ತೇಜಸ್ಸು, ಶಕ್ತಿಗಳೆಲ್ಲಾ ಲಕ್ಷ್ಮೀದೇವಿಯಲ್ಲೂ ಸಹ ಇರುವುದರಿಂದ "ಭಗವತೀ" ಎಂತಲೂ ಕರೆಯುವರು. ಲಕ್ಷ್ಮಿಯು ಪರಮಾತ್ಮನ ಹೃತ್ಕಮಲದಲ್ಲಿ (ವಕ್ಷಸ್ಥಳದಲ್ಲಿ) ಕೃಪಾರೂಪಳಾಗಿ ಸದಾ ವಾಸಿಸುವಳೆಂದು ವೇದಶಾಸ್ತ್ರಗಳು ಹೇಳುತ್ತವೆ. (ದಯಾರೂಪಾಚ ಕಥಿತಾ ವೇದೋಕ್ತಾಸರ್ವಸಮ್ಮತಾ) ಮತ್ತು ಅಖಿಲಾಂಡಕೋಟಿ ಬ್ರಹ್ಮಾಂಡಗಳನ್ನು ಆವರಿಸಿಕೊಂಡಿರುವ ಆಕಾಶದಲ್ಲಿ ಮಿಂಚಿನ ಕಾಂತಿಯು ಹೇಗೆ ಅಡಗಿರುವುದೋ, ಭೂಕಮಲದಲ್ಲಿ ಸುವರ್ಣವು ಹೇಗೆ ತೇಜೋಮಯವಾಗಿ ನೆಲೆಸಿರುವುದೋ, ಹಾಗೆ ಭಗವಂತನ ಹೃದಯದಲ್ಲಿ ಲಕ್ಷ್ಮಿಯು ಕರುಣಾಮಯಳಾಗಿ ಇರುವಳೆಂದು ಭಾವ.

ಶ್ರೀಮನ್ನಾರಾಯಣನ ಹೃದಯದಲ್ಲಿರುವ ಕರುಣಾರೂಪಳಾದ ಲಕ್ಷ್ಮಿಯು ಆ ಪರಮಾತ್ಮನ ಅತ್ಯಂತ ಪ್ರೀತಿಪಾತ್ರಳಾದ ಪತ್ನಿಯೆಂತಲೂ, ನಿತ್ಯಳೆಂತಲೂ, ಭಗವಂತನ ಇಚ್ಛಾನುಸಾರವಾಗಿಯೇ ವರ್ತಿಸುವಳೆಂತಲೂ, ಭಗವಂತನ ಸಂಕಲ್ಪಾನುಸಾರವಾಗಿ ಪ್ರಭಾಶಕ್ತಿಗಳಿಂದ ಅವತಾರಮಾಡುತ್ತಿರುವಳೆಂತಲೂ ಶಾಸ್ತ್ರ ಪ್ರಸಿದ್ಧವಾಗಿರುತ್ತದೆ. ಆದ್ದರಿಂದ ಆ ಜಗನ್ಮಾತೆಯು ಶ್ರೀಮನ್ನಾರಾಯಣನ ಅಭಿಮತಾನುಸ್ವರೂಪಳೆಂತಲೂ, "ಭಗವತೀ, ಜಗನ್ಮೋಹಿನೀ, ಕಲ್ಯಾಣೀ, ಪದ್ಮಾವತೀ" ಎಂತಲೂ ಕರೆಯಲ್ಪಡುವಳು. ಇಂಥಾ ಜಗನ್ಮಾತೆಯನ್ನು ಆಶ್ರಯಿಸಿ, ಭಕ್ತಿವಿಶ್ವಾಸಗಳಿಂದ ಪೂಜಿಸುವಂಥವರೆಲ್ಲರೂ ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ,

ತನ್ಮೂಲಕ ಮುಕ್ತರಾಗಿ ಶಾಶ್ವತಸುಖವನ್ನು ಹೊಂದುವರಾದ್ದರಿಂದ ಲಕ್ಷ್ಮಿಗೆ ಪುರುಷಾಕಾರತ್ವವು ಸಿದ್ಧಿಸುವುದು. ಲಕ್ಷ್ಮಿಯು ಪರತಂತ್ರಳೂ, ಅನಾದಿನಿತ್ಯಳೂ, ಪರಮಾತ್ಮನಿಗಿಂತ ಅಲ್ಪಶಕ್ತಳೂ, ಅಲ್ಪಗುಣಳೂ, ಅಲ್ಪಜ್ಞಳೂ, ಜೀವರಿಗಿಂತ ಉಚ್ಚಶಕ್ತಳೂ, ಉಚ್ಚಗುಣಕಳೂ, ಅಧಿಕಜ್ಞಳೂ, ನಾನಾರೂಪಗುಣವುಳ್ಳವಳೂ, ನಿತ್ಯಮುಕ್ತಳೂ ಆಗಿರುವಳು. ಶ್ರೀ ಲಕ್ಷ್ಮೀದೇವಿಯು ಸತ್ವಗುಣ, ರಜೋಗುಣ, ತಮೋಗುಣಗಳೆಂಬ ಮೂರುಗುಣಗಳಿಗೂ ಅಭಿಮಾನಿಯಾಗಿ ಕ್ರಮವಾಗಿ ಶ್ರೀ, ಭೂ, ದುರ್ಗಾದೇವಿಯರೆಂಬ ಮೂರುರೂಪಗಳಿಂದ ಶ್ರೀಪರಮಾತ್ಮನನ್ನು, ಸೃಷ್ಟಿಕಾಲದಲ್ಲೂ ಮತ್ತು ಸಂರಕ್ಷಣ ಕಾಲದಲ್ಲೂ ಜಗತ್ತನ್ನು ತನ್ನ ಉದರದಲ್ಲಿಟ್ಟುಕೊಂಡು ಮಲಗಿರುವ ಪ್ರಳಯಕಾಲದಲ್ಲೂ ಸಹ ಅರ್ಧ ಕ್ಷಣವೂ ಸಹ ಬಿಡದೆ ಸೇವಿಸುವಳು. ಮತ್ತು ಪರಮಾತ್ಮನು ಅವತಾರರೂಪಗಳಿಂದಲೂ, ಮೂಲರೂಪದಿಂದಲೂ ಯಾವ ಕಾರ್ಯವನ್ನು ಮಾಡುತ್ತಿರುವನೋ, ಮಾಡುವನೋ, ಆಯಾ ಕರ್ಮವಿಶೇಷಗಳನ್ನೂ, ಗುಣರೂಪಗಳನ್ನೂ ಆಲೋಚನೆಯಿಂದ ತಿಳಿಯುತ್ತಾ, ಭಾರತಾದಿ ಪುರಾಣಗಳಲ್ಲೂ ಮತ್ತು ವೇದರಾಶಿಗಳಲ್ಲೂ ಹೇಳದಿರುವ ನೂತನವಾದ, ಭಗವನ್ಮಹಿಮೆಗಳನ್ನೂ, ಗುಣರೂಪಗಳನ್ನೂ, ಅಪಾರವಾಗಿ ಕ್ಷಣಕ್ಷಣದಲ್ಲೂ ನೋಡುತ್ತಾ ಪರಮಾತ್ಮನನ್ನು ಕೊಂಡಾಡುತ್ತಾ ಹಿಗ್ಗುವಳು. ಪರಮಾತ್ಮನ ಮಹಿಮಾದಿಗಳನ್ನು ಎಷ್ಟು ಕಾಣುತ್ತಿದ್ದರೂ ಅವನಲ್ಲಿರುವ ಮಹಿಮೆಗಳ ಲೇಶಾಂಶವನ್ನಾದರೂ ಕಾಣಲು ತನಗೆ ಸಾಧ್ಯವಿಲ್ಲವೆಂದು ಆಶ್ಚರ್ಯಪಡುವಳು.

ಲಕ್ಷ್ಮೀದೇವಿಯ ರೂಪಗಳು:– ೧. ಮಾಯೆ, ೨. ಜಯೆ, ೩. ಕೃತಿ, ೪. ಶಾಂತಿ, ೫.ಶ್ರೀ, ೬. ಭೂ, ೭. ದುರ್ಗೆ, ೮. ಅಂಭ್ರಣಿ, ೯. ಹ್ರೀ, ೧೦. ಮಹಾಲಕ್ಷ್ಮೀ, ೧೧. ದಕ್ಷಿಣೆ, ೧೨. ಜಯಂತಿ, ೧೩. ಸೀತೆ, ೧೪. ರುಕ್ಮೀಣಿ, ೧೫. ಸತ್ಯಭಾಮೆ, ಇವೇ ಮುಂತಾದ ರೂಪಗಳು ಅಸಂಖ್ಯಾತವಾಗಿರುತ್ತವೆ.

ಲಕ್ಷ್ಮೀದೇವಿಯು ಜೀವಜಡಗಳೆಂಬ ಸಮಸ್ತ ವಸ್ತುಗಳಲ್ಲಿಯೂ ಆಕಾಶದಂತೆ ಒಳಗೂ, ಹೊರಗೂ ತುಂಬಾ ವ್ಯಾಪ್ತಳಾಗಿರುತ್ತಾಳೆ. ಮತ್ತು ಬೇರೆ ಬೇರೆ ಸಣ್ಣ ದೊಡ್ಡ ಪರಿಮಾಣವುಳ್ಳ ನಾನಾರೂಪಗಳಿಂದಲೂ, ಮನೆಯೊಳಗಿನ ಘಟಪಟಾದಿಗಳಂತೆ ಒಳಗೂ ಹೊರಗೂ ಪರಮಾತ್ಮನ ರೂಪಗಳ ಸಂಗಡ ಇರುತ್ತಾಳೆ. ಮತ್ತು ಪರಮಾತ್ಮನ ಪ್ರತ್ಯೇಕ ರೂಪವಾದ ವಕ್ಷಸ್ಥಳದಲ್ಲಿಯೂ, ಕರ, ಚರಣ, ಹೃದಯ, ಗರ್ಭ, ಮುಖ, ನೇತ್ರಾದಿ ಸರ್ವಾಂಗದ ಒಳಗೂ ಹೊರಗೂ ಸಹ ಇರುತ್ತಾಳೆ. ಮತ್ತು ಪರಮಾತ್ಮನ ಅರ್ಧ ನಾರಾಯಣನೆಂಬ ರೂಪದ ವಾಮಾರ್ಧರೂಪಳಾಗಿರುತ್ತಾಳೆ. ಇದಲ್ಲದೆ, ಪರಮಾತ್ಮನಂತೆ ಸ್ಥಳ(ಭೂಮಿ) ಜಲಚರ ಪ್ರಾಣಿಗಳ ಆಕಾರದಂತೆ ಆಕಾರವುಳ್ಳ ಸ್ತ್ರೀತುರಗಾದಿ ನಾನಾವಿಧ ಸ್ತ್ರೀರೂಪಗಳನ್ನೂ ಸಹ ಪ್ರತ್ಯೇಕವಾಗಿ ಧರಿಸುತ್ತಾಳೆ. ಮತ್ತು ವೈಕುಂಠದ ಮೇಲೆ ಬ್ರಹ್ಮಾಂಡದ ಅಂತ್ಯವಾದ

ಸತ್ವಗುಣಾವರಣದ ಹೊರಗಿರುವುದೂ, ಪ್ರಾರಬ್ಧಕರ್ಮವಿಲ್ಲದ ಸಾತ್ವಿಕ ಜೀವನ್ಮುಕ್ತರ ಲಿಂಗದೇಹವನ್ನು ಮಹಾಪ್ರಳಯದ ಆರಂಭಕಾಲದಲ್ಲಿಯೇ ಸ್ನಾನ ಮಾತ್ರದಿಂದಲೇ ಬಿಟ್ಟುಹೋಗುವುದೂ ಆದ ಪರಮಾತ್ಮನ ನಿರ್ದೋಷ ಮಂಗಲಸ್ವೇದ (ಬೆವರು) ರೂಪವಾದ ವಿರಜಾನದಿಯೂ ಆಗಿರುತ್ತಾಳೆ. ಹೀಗೆಯೇ, ಇನ್ನೂ ಬಹುವಿಧವಾಗಿಯೂ ಲಕ್ಷ್ಮೀದೇವಿಯು ಬಹುರೂಪಳಾಗಿರುತ್ತಾಳೆ. ಪರಮಾತ್ಮನಂತೆಯೇ ಲಕ್ಷ್ಮೀದೇವಿಯು ಈ ಎಲ್ಲಾ ರೂಪಗಳಿಗೂ ಅವಯವಾದಿಗಳಿಗೂ ಶಕ್ತಿಗುಣಾದಿಗಳಿಗೂ ಮೂಲಸ್ವರೂಪದಿಂದ ಅತ್ಯಂತ ಅಭೇದವೇ ಆಗಿರುತ್ತದೆ.

ಪ್ರಳಯಕಾಲದಲ್ಲಿ ಲಕ್ಷ್ಮೀದೇವಿಯು ಮಾತ್ರ ಪರಮಾತ್ಮನ ಸೇವೆಮಾಡುತ್ತಾ ಇರುವರೇ ಹೊರ್ತಾಗಿ ಬ್ರಹ್ಮಾದಿಗಳು ಯಾರೂ ಇರುವುದಿಲ್ಲ.

ಸೇವೆಯನ್ನು ಯಾವ ರೀತಿ ಮಾಡುತ್ತಾಳೆಂದರೆ:- ಭೂರೂಪದಿಂದ ವಟಪತ್ರಳಾಗಿಯೂ, ಶ್ರೀರೂಪದಿಂದ ಪ್ರಳಯೋದಕ ರೂಪಳಾಗಿಯೂ, ದುರ್ಗಾರೂಪದಿಂದ ಅಂಧಕಾರರೂಪಳಾಗಿಯೂ ಲಕ್ಷ್ಮಿಯು ಪ್ರಳಯಕಾಲದಲ್ಲಿ ಪರಮಾತ್ಮನ ಸೇವೆಯನ್ನು ಮಾಡುತ್ತಾಳೆ.

ಲಕ್ಷ್ಮೀದೇವಿಯರು ಸಕಲ ವಾಙ್ಮನೋಭಿಮಾನಿಗಳು, ಅಂದರೆ ವಾಗಾದಿ ಸಕಲೇಂದ್ರಿಯಾಭಿಮಾನಿಗಳು, ಇವರ ದ್ವಾರವೇ ಸಕಲ ವಾಗಾದಿ ವ್ಯಾಪಾರಗಳು ನಡೆಯುತ್ತವೆ. ಲಕ್ಷ್ಮೀದೇವಿಯು ಸಕಲ ಜೀವರುಗಳಿಗೂ ಉತ್ತಮವಾದಂಥ ಬ್ರಹ್ಮವಾಯುಗಳಿಗಿಂತಲೂ ಪರಮೋತ್ತಮವೆಂಬುದರಲ್ಲಿ ಪ್ರಮಾಣಗಳು.

"ಏತೇಭ್ಯೋಽಶ್ರೀಸ್ತು ಮುಕ್ತೇಭ್ಯೋ ಗುಣ್ಯೈಕೋಟಿ ಗುಣೋತ್ತರಾ" ಎಂದು ಬೃಹದ್ಭಾಷ್ಯಾನುಸಾರವಾಗಿಯೂ; "ಯಂಕಾಮಯೇತಂ ತಮುಗ್ರಂ ಕೃಣೋಮಿತಂ ಬ್ರಹ್ಮಾಣಂ ತಮೃಷಿಂ ತಂಸುಮೇಧಾಂ" ಎಂಬ ಲಕ್ಷ್ಮೀಸೂಕ್ತಾನುಸಾರವಾಗಿ ಲಕ್ಷ್ಮೀದೇವಿಯು ಯಾವ ಜೀವನನ್ನು ಬ್ರಹ್ಮನನ್ನಾಗಿಯೂ, ರುದ್ರನನ್ನಾಗಿಯೂ ಮತ್ತು ಋಷಿಯನ್ನಾಗಿಯೂ ಮಾಡಬೇಕೆಂದು ಇಚ್ಛಿಸುವಳೊ ಅದರಂತೆ ನಡೆಸುವ ಸಾಮರ್ಥ್ಯವುಳ್ಳವಳಾದ್ದರಿಂದಲೂ;

"ವಿರಿಂಚಾದೀನ್ ತೃಣೀಕರ್ತೃಂ ತೃಣಮಪ್ಯುತ್ತಮಂ ತಥಾ ।
ಕರ್ತೃಂ ಸಮರ್ಥಾಸಮ್ಮೋದದಾತ್ರೀ ಭಕ್ತಜನಾಯಸಾ ॥

ಈಕೆಯು ತೃಣವನ್ನು ಮಹತ್ತಾಗಿಯೂ, ಮಹತ್ತನ್ನು ತೃಣವಾಗಿಯೂ, ಭಕ್ತರಿಗೆ ಸರ್ವದಾ ಸಂತೋಷವನ್ನು ಕೊಡತಕ್ಕವಳಾದ್ದರಿಂದಲೂ;

"ಸೈವಸ್ಯಾತ್ಯರ್ವ ಕರ್ತ್ರೀಚಸದಾಸರ್ವತ್ರಸಂಸ್ಥಿತಾ ।
ಯಾಜಕ್ಷತಿ ಪ್ರಾಣಾತಿವಾಶ್ರೃಣೋತಿಚವಿಪಶ್ಯತಿ ।
ವಕ್ತಿಸ್ಪ್ರಶತಿಯತ್ಕಿಂಚಿದ್ದದಾತಿಚಗಚ್ಛತಿ ।
ಇತ್ಯಾದಿಸರ್ವಂ ರಮಯಾತಾಂ ವಿನಾನಹಿಕಿಂಚನ ॥

ಲಕ್ಷ್ಮೀದೇವಿಯು ಸಕಲ ಜೀವಜಡಾತ್ಮಕ ಪ್ರಪಂಚದಲ್ಲಿನ ನೋಡುವುದೇ ಮೊದಲಾದ ಸಕಲ ವ್ಯಾಪಾರಗಳೂ ಈಕೆಯಿಂದಲೇ ನಡೆಯುವುದರಿಂದಲೂ;

"ಪಾರಮೇಷ್ಟ್ಯಾದಿ ಕೈಶ್ವರ್ಯ ಭೋಗಾನ್ ಸರ್ವಜಗದ್ಗತಾನ್ ।
ಜ್ಞಾನಭಕ್ತ್ಯಾದಿ ಕಾರ್ನ್ಧಮಾನ್‌ನ್ಮುಕ್ತಿಂಚಾನಂದಸಂತತಿಂ ॥
ಅನಾದ್ಯನಂತಕಾಲೇಪಿ ಯಥಾಯೋಗ್ಯಂ ಪೃಥಕ್‌ಪೃಥಕ್ ।
ಪ್ರಾಪ್ನುವಂತಿ ಮಹಾಲಕ್ಷ್ಮ್ಯಾ ಅಪಾಂಗಲವಮಾತ್ರತಃ ॥

ಮೇಲ್ಕಂಡ ಪ್ರಮಾಣಗಳಿಂದ ಬ್ರಹ್ಮಾದಿ ತೃಣಾಂತಜೀವರ ಯೋಗ್ಯತಾನುಸಾರ ಜ್ಞಾನೈಶ್ವರ್ಯ, ಪ್ರದಾತೃಶಕ್ತಿ ಶ್ರೀಲಕ್ಷ್ಮೀದೇವಿಗೆ ಸಿದ್ಧವಾದ ಪ್ರಯುಕ್ತ ಬ್ರಹ್ಮಾದಿಗಳಿಗಿಂತಲೂ ಶ್ರೀದೇವಿಗೆ ಉತ್ತಮತ್ವವು ಸಂಘಟನವಾಯಿತು. ಇಂಥಾ ಲಕ್ಷ್ಮೀದೇವಿಯರ ಕರಕಮಲಗಳಿಂದ ಪರಮಾತ್ಮನು ಅರ್ಚಿತನಾದ ಪ್ರಯುಕ್ತ, ಪರಮಾತ್ಮನಿಗೆ ಮಹಾ ಮಹಾತ್ಮ್ಯವು ಸರ್ವೋತ್ತಮತ್ವವೂ ತಾನಾಗಿಯೇ ಘಟಿಸುವುದು.

ಈ ನಿತ್ಯವಾದ ಅನಂತಾನಂತ ಮುಕ್ತಾಮುಕ್ತ ತ್ರಿವಿಧಜೀವರಾಶಿಗಳ, ಮಹತ್ತತ್ವಾದಿ ಜಗತ್ತು, ಅವ್ಯಾಕೃತಾಕಾಶ, ತನ್ಮಧ್ಯದಲ್ಲಿ ಭೂಮಂಡಲ ಮಧ್ಯದಲ್ಲಿ ಕಮಂಡಲೋಪಾದಿಯಲ್ಲಿ ಕಾಣುತ್ತದೆ. ಇಂಥಾ ಅವ್ಯಾಕೃತಾಕಾಶಕ್ಕೆ ತಾನೇ ಆಧಾರಳು. ಇಂಥಾ ರಮಾದೇವಿಯರು ಒಬ್ಬೊಬ್ಬ ಜೀವರಾಶಿಗಣ ಮಧ್ಯಜೀವನದಲ್ಲಿ ಪರಮಾತ್ಮನ ಅನಂತ ರೂಪಗಳನ್ನು ಕಾಣುತ್ತಾಳೆ. ಆ ಭಗವದ್ರೂಪಗಳು ತನ್ನ ಒಂದೊಂದು ರೋಮಕೂಪದಲ್ಲಿ, ಅವ್ಯಾಕೃತಾಕಾಶದಿಂದ ಸಹಿತವಾದಂಥ ಅನಂತ ಬ್ರಹ್ಮಾಂಡಗಳ ಧರಿಸಿವೆ. ಪರಮಾತ್ಮನ ರೂಪಾನಂತ ಸರ್ವದಾ ಎಣಿಸಲಿಕ್ಕೆ ರಮಾದೇವಿಯರು ಅಸಮರ್ಥರು. ತತ್ಕಾರಣ ಜೀವರಾಶಿಗಳ ಗಣನೆಯನ್ನು ತಾನು ಕಾಣದವಳೋಪಾದಿಯಲ್ಲಿ ಇರುತ್ತಾಳೆ. ಪರಮಾತ್ಮ ತನ್ನ ರೋಮಕೂಪದಲ್ಲಿ ಜಗತ್ತನ್ನು ಇಟ್ಟುಕೊಂಡಿರುವಂಥಾದ್ದು ತನಗೆ ಸ್ವರೂಪವು. ಹಾಗಾದರೆ ಆ ಜಗತ್ತು ಸತ್ಯವೋ ಅಥವಾ ಮಿಥ್ಯವೋ ಎಂದರೆ:- ಜಗತ್ತಿಗೆ ಪರಮಾತ್ಮ ಒಬ್ಬನೋ ಅನಂತನೋ? ಅಂದರೆ ಒಬ್ಬನೆಂತಲೂ, ಅನಂತ ರೂಪಾತ್ಮಕನೆಂತಲೂ ಶಾಸ್ತ್ರಸಿದ್ಧವಾಗಿರುತ್ತದೆ. ಅನಂತರೂಪಗಳು ನಿತ್ಯವಾದಂಥಾದ್ದು. ಒಬ್ಬ ಪರಮಾತ್ಮನಿಂದ ಐಕ್ಯವಾಗಿರುವಂಥಾದ್ದು. ಹ್ಯಾಗೆ ಒಬ್ಬ ಪರಮಾತ್ಮನಲ್ಲಿ ಇದ್ದಂಥಾ ಜಗತ್ತು, ಪರಮಾತ್ಮ ಅನಂತ ರೂಪಾತ್ಮಕನಾದ ಜಗತ್ತೂ ಅನಂತಾನಂತವೆನಿಸಿಕೊಂಡಿತು. ಜಗತ್ತು ಸತ್ಯವಾದದ್ದಾದರೂ ಪರಮಾತ್ಮನ ಸಂಬಂಧದಿಂದ ರಮಾದೇವಿಯರಿಗೆ

ಆಶ್ಚರ್ಯಗೊಳಿಸುತ್ತದೆ. ಉದಾಹರಣೆ:- ಒಂದು ದೀಪವನ್ನು ಕನ್ನಡಿಮನೆಯಲ್ಲಿಟ್ಟರೆ ಆ ಮನೆಯಲ್ಲಿರುವ ನೂರಾರು ಕನ್ನಡಿಗಳಲ್ಲೂ ಒಂದು ದೀಪ ನೂರಾರಾಗಿ ಹೇಗೆ ಕಾಣಿಸುತ್ತದೋ ಹಾಗೆಯೇ ಪರಮಾತ್ಮನ ಸಂಬಂಧದಿಂದ ಜಗತ್ತು ಅಪರಿಮಿತ ಅನಂತಾನಂತವಾಗಿ ಕಾಣುತ್ತದೆ. ಇಲ್ಲಿ ಉಪಾದಿನಿಮಿತ್ಯ ಭ್ರಾಂತಿ ಜ್ಞಾನವಾಗಿ ಕಾಣುತ್ತದೆ. ಕನ್ನಡಿ ಎಂಬೋ ಉಪಾದಿಯು ಕೇವಲ ಅನಿತ್ಯವಾದ ಕಾರಣ ಆ ಕನ್ನಡಿ ಎಂಬ ಉಪಾಧಿಯನ್ನು ತೆಗೆದುಬಿಟ್ಟರೆ ನೂರಾರು ದೀಪಗಳು ಕಾಣುವುದಿಲ್ಲವಾದ ಕಾರಣ ಭ್ರಾಂತಿಯೆನಬೇಕೇ ಹೊರ್ತಾಗಿ ಉಪಾಧಿ ನಿತ್ಯವಾಗಿದ್ದರೆ ಏಕಪ್ರಕಾರ ಕಾಣುತ್ತಿದ್ದರೆ ಭ್ರಾಂತಿ ಎನ್ನಲು ಆಗುವುದಿಲ್ಲ. ಕಾಣುವುದು ಸುಳ್ಳಲ್ಲ. ತತ್ಕಾರಣ ಪರಮಾತ್ಮನೆಂಬೋ ಉಪಾಧಿ ನಿತ್ಯರಿಗೆ ನಿತ್ಯವಾದ ಕಾರಣ ರಮಾದೇವಿಯರಿಗೆ ಅತ್ಯಾಶ್ಚರ್ಯವಾಗಿ ಕಾಣುತ್ತದೆ. ಆದ್ದರಿಂದ ಪರಮಾತ್ಮನ ಮಹಾತ್ಮೆಯನ್ನು ಪರಮಾತ್ಮನೇ ಬಲ್ಲ. ತಾನೇ ಸರ್ವಜ್ಞ, ತನಗೆ ತಾನೇ ಸಂಪೂರ್ಣ.

ತ್ರಿವಿಧ ಜೀವರು
ಜೀವರು ಮೂರುಪ್ರಕಾರ

೧. ಮುಕ್ತಿಯೋಗ್ಯರು, ೨. ನಿತ್ಯಸಂಸಾರಿಗಳು, ೩. ತಮೋಯೋಗ್ಯರು.

೧. ಮುಕ್ತಿಯೋಗ್ಯರ ಸ್ವರೂಪ:- ಇವರ ಸ್ವರೂಪ ಎಂಥಾದ್ದೆಂದರೆ- ತಮ್ಮ ಯೋಗ್ಯತಾನುಸಾರ ಜ್ಞಾನಾನಂದವೇ ಶರೀರವಾಗಿ ಉಳ್ಳಂಥಾವರು. ಅಚ್ಛೇದ್ಯಾಭೇದ್ಯ ರಾದಂಥವರು, ಪರಮಾತ್ಮನ ಸದೃಶ ಪ್ರತಿಬಿಂಬರು. ಪರಮಾತ್ಮನೇ ಸ್ವಾಮಿ ಎಂದು ಉಪಾಸನೆ ಮಾಡತಕ್ಕಂಥಾವರು. ಇವರು ಶುಕ್ಲವರ್ಣದವರು.

ಇವರ ಲಕ್ಷಣಗಳು:- ಗೀತಾ ೧೬ನೇ ಅಧ್ಯಾಯ

ಅಭಯಂ ಸತ್ವ ಸಂಶುದ್ಧಿರ್ಜ್ಞಾನಯೋಗ ವ್ಯವಸ್ಥಿತಿಃ ।
ದಾನಂದಮಶ್ಚಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಂ ॥೧॥
ಅಹಿಂಸಾ ಸತ್ಯಮಕ್ರೋಧಸ್ತ್ಯಾ ಗಶ್ಯಾನ್ತಿರಪೈಶುನಂ ।
ದಯಾಭೂತೇಷುಲೋಲತ್ವಂ ಮಾರ್ದವಂ ಹ್ರೀರಚಾಪಲಂ ॥೨॥
ತೇಜಃ ಕ್ಷಮಾಧೃತಿಶ್ಶೌಚ ಮದ್ರೋಹೋನಾತಿ ಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥೩॥

ತಾ॥ ತನ್ನಿಂದ ಮತ್ತೊಬ್ಬನಿಗೂ ಮತ್ತೊಬ್ಬನಿಂದ ತನಿಗೂ ಭಯವಿಲ್ಲದಿರೋಣ, ಮನಸ್ಸು ನಿರ್ಮಲವಾಗಿರೋಣ, ಜ್ಞಾನಾರ್ಜನೆಯಲ್ಲೇ ಆಸಕ್ತನಾಗಿರೋಣ, ಸತ್ಪಾತ್ರದಲ್ಲಿ ದಾನಮಾಡೋಣ, ಇಂದ್ರಿಯಗಳನ್ನು ನಿಗ್ರಹಿಸೋಣ, ದೇವಯಜ್ಞ ಪಿತೃಯಜ್ಞಾದಿಗಳು ವೇದಾಧ್ಯಯನ, ಬ್ರಹ್ಮಚರ್ಯ ಮೊದಲಾದದ್ದನ್ನು ತ್ರಿಕರಣ ಶುದ್ಧಿಯಿಂದ ಒಂದೇ ಸಮನಾಗಿರೋಣ, ಸತ್ಯವನ್ನು ನುಡಿಯೋಣ, ಕೋಪವಿಲ್ಲದಿರೋಣ, ಔದಾರ್ಯ

ಭಗವನ್ನಿಷ್ಠೆಯಲ್ಲಿರೋಣ, ಚಾಡಿಹೇಳದಿರೋಣ, ಪ್ರಾಣಿಗಳಲ್ಲಿ ದಯಾ ಇಡಬೇಕೆಂಬ ಅಪೇಕ್ಷಾ, ಪರಕೀಯರ ಸಂಕಟವನ್ನು ನೋಡಿ ಸಹಿಸದಿರೋಣ, ವಿಷಯಗಳಲ್ಲಿ ಆಶೆಯಿಲ್ಲದಿರೋಣ, ತನ್ನ ಶತೃಗಳಲ್ಲಿಯೂ ವಿರೋಧವಿಲ್ಲದಿರೋಣ, ಕ್ರೂರನಾಗದೇ ಇರೋಣ, ಅಕಾರ್ಯದಲ್ಲಿ ನಾಚಿಕೆಪಡೋಣ, ತನಗಪಕಾರಮಾಡಿದವನಿಗೆ ಪ್ರತ್ಯಪಕಾರ ಮಾಡದಿರೋಣ, ಹೆದರಿಕೆ ಇಲ್ಲದಿರೋಣ, ಮೃತ್ತಿಕಾದಿಗಳಿಂದ ಬಾಹ್ಯಶೌಚ ಭಗವತ್ಸ್ಮರಣೆ ಮುಂತಾದ್ದರಿಂದ ಅನ್ತಶ್ಶೌಚನಾಗಿರೋಣ, ಇತರರ ಜೀವನವನ್ನು ಕೆಡಿಸದಿರೋಣ, ಅಹಂಕಾರವಿಲ್ಲದಿರೋಣ, ಮುಂತಾದ ದೇವಸಂಬಂಧವಾದ ಐಶ್ವರ್ಯದೋಪಾದಿಯಲ್ಲಿರುವ ಈ ಗುಣಗಳನ್ನು ಮೋಕ್ಷಾಪೇಕ್ಷಿಯಾದವರು ಅವಶ್ಯಕವಾಗಿ ಸಂಪಾದಿಸಬೇಕೆಂದು ಶ್ರೀಕೃಷ್ಣನು ಅರ್ಜುನಗೆ ಮುಕ್ತಿಯೋಗ್ಯರ ಲಕ್ಷಣವನ್ನು ಈ ಪ್ರಕಾರ ಹೇಳಿರುತ್ತಾನೆ.

೩. ಮೋಕ್ಷಜೀವರ ಸಾಧನಕ್ರಮ

ಸಂಪುಟ ೫ ಸಂಚಿಕೆ ೩ ಅಂಗೀರಸ ಜ್ಯೇಷ್ಠ ಜೂನ್ ೧೯೩೨

ಶ್ಲೋ ॥ ಮಾತರ್ನಮಾಮಿಕಮಲೇ ಕಮಲಾಸನಾದ್ಯೈರ್ದೇವೈಃ ಪದಾಂಬುಜಯುಗಂ ತವಸೇಂದ್ರರುದ್ರೈಃ ॥ ಆರಾಧಿತಂ ವಿವಿಧಭೂರುಹ ದಿವ್ಯಪುಷ್ಪೈರ್ಮಾಂ ರಕ್ಷರಕ್ಷವಿತರಸ್ವಮಮೇಪ್ಸಿತಾನಿ ॥

ಮುಕ್ತಿಯೋಗ್ಯದಲ್ಲಿ ಎರಡು ವಿಧ:- ೧. ನಿರಂಶರು, ೨. ಸಾಂಶರು, ನಿರಂಶರೆಂದರೆ, ೧. ತೃಣ, ೨. ಕ್ರಿಮಿ, ೩. ಪಶು, ೪. ಮನುಷ್ಯೋತ್ತಮರು, ೫. ಚಕ್ರವರ್ತಿಗಳು ೬.ಮನುಷ್ಯ ೭. ನರಗಂಧರ್ವ, ಸಾಂಶರೆಂದರೆ :- ದೇವಗಂಧರ್ವರನ್ನು ಮೊದಲು ಮಾಡಿಕೊಂಡು ಪರ್ಜನ್ಯ ದೇವರವರವಿಗೂ ಜ್ಞಾನಯೋಗಿಗಳೆಂದು ಹೆಸರು. (ಸಾಂಶರು) ಈ ಜ್ಞಾನ ಯೋಗಿಗಳಲ್ಲಿಯೂ ಎರಡು ಪ್ರಕಾರ. ೧. ಜ್ಞಾನಯೋಗಿಗಳು, ೨. ವಿಜ್ಞಾನಯೋಗಿಗಳು, ಜ್ಞಾನಯೋಗಿಗಳು ಯಾರೆಂದರೆ :- ೧. ದೇವಗಂಧರ್ವರು, ೨. ಚಿರಪಿತೃಗಳು ೩. ಆಜಾನದೇವತೆಗಳು. ವಿಜ್ಞಾನ ಯೋಗಿಗಳು ಯಾರೆಂದರೆ :- ೧. ಪುಷ್ಕರ, ೨. ಶನೈಶ್ಚರ, ೩. ಅಶ್ವಿನೀದೇವತೆಗಳು, ೪. ಸ್ತ್ರೀಉಷಾ, ೫. ಬುಧ, ಅಗ್ನಿದೇವ, ಸ್ತ್ರೀ, ಸ್ವಾಹಾದೇವಿ, ೬.ಸನಕಾದಿಗಳು ಮೊದಲಾದ ಕೆಲವು ದೇವತೆಗಳು, ೭. ಪರ್ಜನ್ಯದೇವರು. ಈ ಸಾಂಶರಲ್ಲಿ ಎರಡು ವಿಧ:- ೧. ಪ್ರತೀಕಾಲಂಬನರು, ೨. ಅಪ್ರತೀಕಾಲಂಬನರು, ಇದಕ್ಕೆ ಪ್ರಮಾಣ.

ಶ್ಲೋ॥ ದೇವಗಂಧರ್ವ ಪೂರ್ವಾಸ್ತ್ವಾಜಾನಜಾನಃ ಸಮಸ್ತಶಃ॥ ಪ್ರತೀಕಾಲಂಬನಾಃ ಸಾಂಶಾಕ್ರಮೋಚ್ಚಾ ಜ್ಞಾನಯೋಗಿನಃ ॥ ಅಪ್ರತೀ ಕಾಲಂಬನಾಶ್ವ ಪ್ರಾಯೋವಿಜ್ಞಾನಯೋಗಿನಃ॥ ಕರ್ಮದೇವಾಜಾನ ಜಾದ್ಯಾಃ ದೇವದಾಸಾಕ್ರಮಾವರಾಃ॥ ದೇವಗಂದರ್ವ ಪರ್ಯಂತಾಃ ಸಾಂಶಾಃ ಸರ್ವೇ ಪ್ರಕೀರ್ತಿತಾಃ॥ ಇತಿ ಪ್ರಕಾಶ ಸಂಹಿತಾಯಾಂ॥

ಉಭಯವಿಧ ಜ್ಞಾನಯೋಗಿಗಳೊಳಗೆ ವಿಜ್ಞಾನಯೋಗಿಗಳು ಕೆಲವುಕಾಲದಲ್ಲಿ ಅಪ್ರತೀಕಾಲಂಬನರು ಎಂದು ಕರೆಸಿಕೊಳ್ಳುತ್ತಾರೆ. ಈ ಉಭಯವಿಧ ಜ್ಞಾನಯೋಗಿಗಳ ಸಾಧನವೇನೆಂದರೆ :- ಇವರಿಷ್ಟು ಮಂದಿಯೂ ಭರತಖಂಡದಲ್ಲಿ ಮನುಷ್ಯ ಜನ್ಮಕ್ಕೆ ಬಂದು ನಿಷ್ಕಾಮದಿಂದ ಸತ್ಕರ್ಮಾನುಷ್ಠಾನವನ್ನು ನೂರು ಜನ್ಮದಲ್ಲಿ ಮಾಡಿ, ಆಮೇಲೆ ಹತ್ತು ಸಾವಿರ ವರ್ಷ ಜನ್ಮಗಳಲ್ಲಿ, ಶ್ರೀಪರಮಾತ್ಮನ ವಿಷಯಕವಾದ ಜ್ಞಾನ ಸಂಪಾದಿಸಿ, ಆಮೇಲೆ ಮುನ್ನೂರು

ಜನ್ಮಗಳಲ್ಲಿ ಭಕ್ತಿಯನ್ನು ಮಾಡಬೇಕು. ಈ ಪ್ರಕಾರ ಸಾಧನವು ಮುಗಿದ ಮೇಲೆ ಸ್ವರೂಪಾಪರೋಕ್ಷವಾಗುತ್ತದೆ. ಇವರಿಷ್ಟು ಮಂದಿಯೂ ಅತಾತ್ವಿಕರು (ತತ್ವಾಭಿಮಾನಿಗಳಲ್ಲದವರು) ಇವರುಗಳಿಗೆ ಸಾಧನಾನಂತರ ಮೋಕ್ಷವಾಗುತ್ತದೆ. ಇವರಿಷ್ಟು ಮಂದಿಗಳಿಗೂ ಅನಾದಿ ಕಾಲದಿಂದ ಅಪರೋಕ್ಷವಿಲ್ಲ. ಇವರಿಗೆ ನರಕಾದಿ ದುಃಖಾನುಭವವೂ ಇಲ್ಲ. ಇದಕ್ಕೆ ಪ್ರಮಾಣ.

ಶ್ಲೋ॥ ಸತ್ಕರ್ಮಕೃತ್ವಾ ನಿಷ್ಕಾಮ್ಯಂ ಲಭಂತಿ ಗುರುಸಂತತಿಂ॥ ಅತಾತ್ವಿಕಾದೇವದಾಸಾಃ ಸತ್ಕರ್ಮಶತ ಜನ್ಮಭಿಃ ॥ ಕೃತ್ವಾದಶಸಹಸ್ರೋರು ಜನ್ಮಭಿರ್ಜ್ಞಾನಮಾಪ್ಯಚ ॥ ಭಕ್ತಿಂಚ ತ್ರಿಶತೈರಾಪ್ಯ ಮುಚ್ಯಂತೇ ಜ್ಞಾನಯೋಗಿನಃ ॥ ಇತಿ ಪ್ರಕಾಶ ಸಂಹಿತಾಯಾಂ॥

ಇವರುಗಳಿಗೆ ಅಪರೋಕ್ಷ ತಾರತಮ್ಯವನ್ನು ಹೇಳಲ್ಪಡುತ್ತದೆ:- ೧. ಕರ್ಮಜ ದೇವತೆಗಳು, ೨. ಶತಸ್ಥರು ೩. ಮಿತ್ರನಾಮಸೂರ್ಯ, ೪. ವಿಶ್ವಾಮಿತ್ರಾದಿಗಳು, ೫. ಭೃಗಾದಿಗಳು, ೬.ನಾರದ, ೭.ವರುಣ, ೮.ವಿವಸ್ವಾನೆಂಬೊ ಸೂರ್ಯಾದಿಗಳು, ೯. ಪ್ರವಾಹವಾಯು, ೧೦.ಬೃಹಸ್ಪತ್ಯಾದಿಗಳು, ೧೧. ಅಹಂಕಾರಿಕಪ್ರಾಣ, ೧೨. ಇಂದ್ರಕಾಮರು, ೧೩.ಸೌಪರ್ಣಿ ೧೪. ಷಣ್ಮಹಿಷಿಯರು, ೧೫. ಶೇಷಗರುದರುದ್ರರು, ೧೬. ಸರಸ್ವತೀ ಭಾರತೀದೇವಿಯರು, ೧೭. ಬ್ರಹ್ಮವಾಯುಗಳು, ಇವರಿಷ್ಟು ಮಂದಿಯೂ ಭಕ್ತಿಯೋಗಿಗಳು, ಅಪ್ರತೀಕಾಲಂಬನರು ಸಾಂಶರು ಮತ್ತು ವ್ಯಾಪ್ತದರ್ಶಿಗಳು. ಇವರೊಳಗೆ ಬ್ರಹ್ಮವಾಯುಗಳು ಮುಖ್ಯ ಭಕ್ತಿಯೋಗಿಗಳು ಇದಕ್ಕೆ ಪ್ರಮಾಣ.

ಶ್ಲೋ॥ ಅಪ್ರತಿಕಾ ದೇವತಾಸ್ತು ಋಷೀಣಾಂ ಶತಮೇವಚ॥ ರಾಜ್ಞಾಂತು ಶತಮದ್ದಿಷ್ಟಂ ಗಂಧರ್ವಾಣಾಂ ಶತಂ ತಥಾ॥ ಏತೇಽಧಿ ಕಾರಿಣೋ ವ್ಯಾಪ್ತಿರ್ದರ್ಶನೇನ್ಯೇನತು ಕ್ವಚಿತ್॥

ಬ್ರಹ್ಮವಾಯು ಮೊದಲು ಮಾಡಿಕೊಂಡು ಸಕಲ ತಾತ್ವಿಕರು ಅನಾದಿ ಕಾಲದಿಂದ ಅಪರೋಕ್ಷಜ್ಞಾನವುಳ್ಳಂಥಾವರು. ಇವರಿಗೆ ವ್ಯತಿರಿಕ್ತವಾದ ಅತಾತ್ವಿಕ ದೇವತೆಗಳಿಗೆ ಸಾಧನಾಂತರದಲ್ಲಿ ಅಪರೋಕ್ಷ ಇದಕ್ಕೆ ಪ್ರಮಾಣ.

ಶ್ಲೋ॥ ಋಜ್ವಾದಿತಾತ್ವಿಕಾಃ ಸರ್ವೆನಾದಿತೋಹ್ಯಪರೋಕ್ಷಿಣಃ॥ ಸಾಮಾನ್ಯತೋ ವಿಶೇಷೇಣ ಸ್ವಸ್ವಯೋಗ್ಯಾಪರೋಕ್ಷಿಣ॥ ಇತಿ ಪ್ರಕಾಶ ಸಂಹಿತಾಯಾಂ॥

ಬ್ರಹ್ಮವಾಯುಗಳ ಸಾಧನದ ವಿಚಾರ:- ಬ್ರಹ್ಮಪದವಿಗೆ ಬರತಕ್ಕ ಜೀವರುಗಳಿಗೆ ಋಜು ಜೀವರುಗಳೆಂದು ಹೆಸರು. ಒಬ್ಬ ಋಜು ೧೦೦ ಕಲ್ಪಸಾಧನ ಮಾಡಿ ಅನಂತರ ೧೦೧ನೇ ಕಲ್ಪದಲ್ಲಿ ಕಲ್ಕಿಯೆಂದು ಕರಿಸುತ್ತಾನೆ. ಇದೇ ಪ್ರಕಾರ ಇಲ್ಲಿಂದ ಮುಂದೆ ಬ್ರಹ್ಮಕಲ್ಪವಾದ

ನೂರು ಕಲ್ಪದವರಿವಿಗೂ ನೂರು ನಾಮಗಳಿಂದ ಒಬ್ಬ ಋಜು ಕರೆಸುತ್ತಾನೆ. ಮತ್ತು ಆ ನೂರು ಕಲ್ಪಸಾಧನೆಯಾದ ಋಜುಗಳು ೧೦೦ ಮಂದಿ ಇದ್ದಾರೆ. ಆ ನೂರು ಮಂದಿಗೂ ಇದೇ ಹೆಸರು. ವರ್ತಮಾನ ಲಾತವ್ಯ ಸಾಂಕೇತ ಋಜು ಸಹಿತ ನೂರು ಮಂದಿ ಎಂದು ಭಾವ.

೧.ಕಲ್ಕಿ, ೨.ಸುತೇಜ, ೩.ದಾಸ, ೪.ಧರ್ಮಾ, ೫.ಅಧರ್ಮ ಖಂಡನ, ೬.ವರ್ಚಸ್ವಿ, ೭.ಖಷಣ, ೮. ಸಾಧು, ೯. ಮಹೀಪತಿ, ೧೦. ಸದ್ಧರ್ಮಜ್ಞ, ೧೧.ಧರ್ಮಜ, ೧೨.ಸಂಪೂರ್ಣ, ೧೩. ಶುಚಿ, ೧೪.ವೈಕೃತ, ೧೫. ಅಂಜನ, ೧೬. ಸರ್ಷಪ, ೧೭. ಖರ್ಪಟ, ೧೮. ಶ್ರದ್ಧಾಳು,. ೧೯.ಸಂಧ್ಯಾತ, ೨೦.ವಿಜ್ಞಾನ, ೨೧. ಜ್ಞಾನ, ೨೨.ಕೀರ್ತನ, ೨೩.ಸಂಕೀರ್ಣ, ೨೪.ಕಥನ,. ೨೫. ಮಹಾಬುದ್ಧಿ, ೨೬.ಜಯ, ೨೭.ಮಹತ್ತರ, ೨೮. ಸುವೀರ, ೨೯.ಮೇಧಾವಿ, ೩೦.ವಿಜಯ, ೩೧.ರಂತಿಮ್ನ, ೩೨.ಮನು, ೩೩.ಮೋದ, ೩೪.ಪ್ರಮೋದ, ೩೫.ಸಂತಸ, ೩೬.ಆನಂದ, ೩೭.ಸಂತುಷ್ಟ, ೩೮.ಚಾರ್ವಾಂಗ ೩೯.ಚಾರು. ೪೦.ಸುಬಾಹು, ೪೧.ಚಾರುಪದ, ೪೨.ಸುಲೋಚನ, ೪೩.ಸಾರಸ್ವತ, ೪೪.ಸುವೀರ, ೪೫.ಪ್ರಾಜ್ಞ, ೪೬.ಕಪಿ, ೪೭.ಅಲಂಪಟ, ೪೮ ಸರ್ವಜ್ಞ, ೪೯.ಸರ್ವಜಿತ್, ೫೦.ಮಿತ್ರ, ೫೧.ಪಾಪವಿನಾಶಕ, ೫೨.ಧರ್ಮವಿನೀತ, ೫೩.ಶಾರದ, ೫೪.ಓಜ, ೫೫.ಸುತಪಸ್ವಿ, ೫೬.ತೇಜಸ್ವಿ, ೫೭.ದಾನಶೀಲ, ೫೮.ಸುಶೀಲ, ೫೯.ಯಜ್ಞ, ೬೦.ಯಜ್ವೀ, ೬೧.ಯಾಗವರ್ತಕ, ೬೨.ಪ್ರಾಣ, ೬೩.ತ್ರಾಣ, ೬೪.ಅಮರ್ಷ, ೬೫.ಉಪದೇಷ್ಟ, ೬೬.ತಾರಕ, ೬೭.ಕಾಲಕ್ರೀಡನ, ೬೮.ಸುಕರ್ತ, ೬೯.ಸುಕಾಲಜ್ಞ, ೭೦.ಕಾಲಸೂಚಕ, ೭೧.ಕಲಿಸಂಹರ್ತ, ೭೨.ಕಲಿ, ೭೩.ಕಾಲಕ, ೭೪.ರೇತ, ೭೫.ಸದಾರತ, ೭೬.ಸುಬಲ, ೭೭.ಸಹ, ೭೮.ಸದಾಕಪಿ, ೭೯.ಗಮ್ಯ, ೮೦.ಜ್ಞಾನ, ೮೧.ದಶಕರ, ೮೨.ಶ್ರೋತವ್ಯ, ೮೩.ಸಂಕೀರ್ತನ, ೮೪.ಮಂತವ್ಯ, ೮೫.ಕವ್ಯ, ೮೬.ದ್ರಷ್ಟವ್ಯ, ೮೭.ಸಖ್ಯ, ೮೮.ಗಂತವ್ಯ, ೮೯.ಶ್ರವ್ಯ, ೯೦.ಸ್ಮರ್ತವ್ಯ. ೯೧.ಶೇವ್ಯ, ೯೨.ಸುಭಾವ್ಯ, ೯೩.ಸ್ವರ್ಗವ್ಯ, ೯೪.ಭಾವ್ಯ, ೯೫.ಜ್ಞಾತವ್ಯ, ೯೬.ವಕ್ತವ್ಯ, ೯೭.ಗವ್ಯ, ೯೮.ಲಾತವ್ಯ, ೯೯.ವಾಯು, ೧೦೦.ಬ್ರಹ್ಮ ಇದಕ್ಕೆ ಪ್ರಮಾಣ.

ವಾಯು ಪುರಾಣೆ

ಶ್ಲೋಕ:-

ಕಲ್ಕಾಸುತೇಜ ದಾಸಶ್ಚ ಧರ್ಮಶ್ಚಾ ಧರ್ಮಖಂಡನಃ॥
ವರ್ಚಸ್ವೀ ಖಷಣಶ್ಚೈವ ಸಾಧುಶ್ಚೈವ ಮಹೀಪತಿಃ ॥೧॥
ಧರ್ಮಶ್ಚ ಧರ್ಮಜಶ್ಚೈವ ಸಂಪೂರ್ಣ ಶುಚಿವೈಕೃತಾ॥
ಅಂಜನಃ ಸರ್ಷಪಶ್ಚೈವ ಖರ್ಪಟಶ್ಚ ತಥೈವಚ ॥೨॥
ಶ್ರದ್ಧಾಳುಶ್ಚೈವ ಸದ್ಧ್ಯಾನೋ ಜ್ಞಾನೋ ವಿಜ್ಞಾನ ಏವಚ॥
ಕೀರ್ತನಶ್ಚೈವ ಸಂಕೀರ್ಣಃ ಕತ್ಥನಶ್ಚ ತಥೈವಚ ॥೩॥

ಮಹಾಬುದ್ಧಿರ್ಜಯಶ್ಚೈವ ತಥೈವಚ ಮಹತ್ತರಃ॥
ಸುವೀರಶ್ಚೈವ ಮೇಧಾವೀ ವಿಜಯೋಜಯ ಏವಚ ॥೪॥
ಮನುರ್ಮೋದ ಪ್ರಮೋದಶ್ಚ ಸಂತ ಅನಂತ ಏವಚ॥
ಸಂತುಷ್ಟಶ್ಚೈವ ಚಾರ್ವಾಂಗೋ ತಥಾಚಾರು ಸುಬಾಹುಕಃ ॥೫॥
ತಥಾಚಾರು ಪದಶ್ಚಾಪಿ ತಥೈವಚ ಸುಲೋಚನಃ॥
ಸಾರಸ್ವತ ಸುವೀರಶ್ಚ ಪ್ರಾಜ್ಞಃ ಕಪಿ ಸಏವಚ ॥೬॥
ಲಂಪಟಶ್ಚೈವ ಸರ್ವಜ್ಞಃ ಸರ್ವಜಿನ್ಮಿತ್ರ ಏವಚ ॥
ತಥಾಪಾಪ ವಿನಾಶಶ್ಚ ಏತೇ ಪಂಚಾಶ ದೀರಿತಾಃ ॥೭॥
ತಥಾಧರ್ಮ ವಿನೀತಶ್ಚ ಶಾರದೋಜೋ ತಥೈವಚ॥
ಸುತಪಸ್ಕಶ್ಚ ತೇಜಸ್ವೀ ದಾನಶೀಲ ಸ್ತಥೈವಚ ॥೮॥
ಸುಶೀಲಶ್ಚೈವ ಯಜ್ಞಶ್ಚ ಸುಕರ್ತಾಚ ತಥೈವಚ॥
ಯಾಗವರ್ತಕಯಜ್ವೀಚ ಪ್ರಾಣಶ್ಚಾಪಿ ತಥೈವಚ ॥೯॥
ತಥಾತ್ರಾಣಶ್ಚಾಮ ಋಷಿಃ ಉಪದೇಷ್ಟಾ ತಥೈವಚ॥
ತಾರಕಶ್ಚ ತಥಾಕಾಲ ಕ್ರೀಡನಶ್ಚ ತಥೈವಚ ॥೧೦॥
ಸುಕರ್ತಾಚ ಸುಕಾಲಜ್ಞಃ ಕಾಲಸೂಚಕ ಏವಚ॥
ತಥಾಚ ಕಲಿಸಂಹರ್ತಾ ಕಲಿಃಕಾಲ ಸ್ತಥೈವಚ ॥೧೧॥
ಸ್ವಾಮರೇತಃ ಸದಾರತಃ ತತಶ್ಚಸು ಬಲಸ್ತಥಾ॥
ಸಹಃಸದಾ ಕಪಿಶ್ಚೈವ ಗಮ್ಯಜ್ಞಾನ ಸ್ತಥೈವಚ ॥೧೨॥
ಸಂಕೀರ್ತವ್ಯೋಥ ಮಂತ್ರವ್ಯೋಕವ್ಯೋ ದ್ರಷ್ಟವ್ಯ ಏವಚ॥
ತಥಾಸಖ್ಯಶ್ಚ ಗಂತವ್ಯಃ ಕ್ರವ್ಯಃ ಸ್ಮರ್ತವ್ಯ ಏವಚ ॥೧೩॥
ಸೇವ್ಯಃ ಸುಭಾವ್ಯಃ ಸ್ವರ್ಗವ್ಯಃ ಭಾವ್ಯೋ ಜ್ಞಾತವ್ಯ ಏವಚ॥
ವಕ್ತವ್ಯಶ್ಚೈವ ಗವ್ಯಶ್ಚಲಾತವ್ಯಶ್ಚ ತಥೈವಚ ॥೧೪॥
ವಾಯುಶ್ಚೈವ ತಥಾಬ್ರಹ್ಮೇತ್ಯೇವಂ ಪಂಚಾಶದೀರಿತಾಃ॥
ಇತ್ಯೇತಚ್ಛ ತಕಂ ನಾಮ್ನಾಂ ಋಜೂನಾಂಯಃ ಪಠೇತ್ಸದಾ ॥೧೫॥
ತೈರ್ದತ್ತಾಂ ಪದವೀಂಯಾತಿ ವಾಸುದೇವಾಭವೀಕ್ಷ್ಯತಾಂ ॥

ಋಜುಗಣಶತಕವನ್ನು ಯಾರು ಸ್ತೋತ್ರಮಾಡುತ್ತಾರೋ ಅವರು ಪರಮಾತ್ಮನ ಮತ್ತು ಸ್ತೋತ್ರಮಾಡಿಸಿಕೊಳ್ಳಲ್ಪಟ್ಟವರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

ವಿಶೇಷಾರ್ಥ:– ೧. ಕಲಿಯನ್ನು ನಿರಾಕರಿಸುವುದರಿಂದ ಕಲ್ಕಿಯೆಂತಲೂ; ೨. ವಿಶೇಷ ಪರಾಕ್ರಮಿಯಾಗಿಯೂ, ಭಕ್ತಾಗ್ರೇಸರನಾಗಿಯೂ ಬ್ರಹ್ಮವರ್ಚಸ್ಸು ಉಳ್ಳವನಾದ್ದರಿಂದ "ಸುತೇಜ"

ನೆಂತಲೂ; ೩. ಶ್ರೀಪರಮಾತ್ಮನಿಗೆ ಕೇವಲ ದಾಸನಾದ್ದರಿಂದ "ದಾಸ" ನೆಂತಲೂ; ೪.ಧರ್ಮಸ್ವರೂಪನಾದುದರಿಂದ "ಧರ್ಮ" ನೆಂತಲೂ; ೫. ಅಧರ್ಮ ಮಾಡುವ ಜನರನ್ನು ಶಿಕ್ಷೆಮಾಡುವನಾದ್ದರಿಂದ "ಅಧರ್ಮಖಂಡ" ನೆಂತಲೂ; ೬. ಮಹಾಕಾಂತಿ ಉಳ್ಳವನಾದ್ದರಿಂದ "ವರ್ಚಸ್ವಿ" ಯೆಂತಲೂ; ೭. ಶತೃಗಳಿಗೆ ಭಯಂಕರನಾಗಿರುವುದರಿಂದ "ಖಷಣ" ನೆಂತಲೂ; ೮. ಸತ್ವದಿಂದ ಬೆಳೆದಿರುವನಾದ್ದರಿಂದ "ಸಾಧು" ವೆಂತಲೂ; ೯. ಸರ್ವರಿಂದಲೂ ಪೂಜಿಸಿಕೊಳ್ಳಲ್ಪಡುವನಾದ್ದರಿಂದ "ಮಹೀಪತಿ" ಯೆಂತಲೂ; ೧೦.ಸದ್ಧರ್ಮವನ್ನು ತಿಳಿದವನಾದ್ದರಿಂದ "ಸದ್ಧರ್ಮಜ್ಞ" ನೆಂತಲೂ; ೧೧.ಧರ್ಮವನ್ನು ಉತ್ಪತ್ತಿಮಾಡುವನಾದ್ದರಿಂದ "ಧರ್ಮಜ" ನೆಂತಲೂ; ೧೨. ಪೂರ್ಣಪ್ರಜ್ಞನಾದ ಶ್ರೀವಿಷ್ಣುವಿನನ್ನು ಚೆನ್ನಾಗಿ ತಿಳಿದಿರೋಣದರಿಂದ "ಸಂಪೂರ್ಣ" ನೆಂತಲೂ; ೧೩. ಪರಿಶುದ್ಧವಾದ ಜ್ಞಾನವುಳ್ಳವನಾದ್ದರಿಂದ "ಶುಚಿ" ಎಂತಲೂ; ೧೪. ಅನೇಕ ರೂಪವಂತನಾದ್ದರಿಂದ "ವೈಕೃತ" ನೆಂತಲೂ; ೧೫.ಭಕ್ತರಿಗೆ ಪುಣ್ಯವನ್ನು ಸುರಿಯುತ್ತಾನಾದ್ದರಿಂದ "ಅಂಜನ" ನೆಂತಲೂ; ೧೬. ಜ್ಞಾನಿಗಳನ್ನು ಸಂರಕ್ಷಣೆ ಮಾಡುತ್ತಾನಾದ್ದರಿಂದ "ಸರ್ಷಪ" ನೆಂತಲೂ; ೧೭. ಪರಮಾತ್ಮನಿಗೆ ಸಕಲ ಕರ್ಮಗಳನ್ನೂ ಅರ್ಪಿಸುತ್ತಾನೆಯಾದ್ದರಿಂದ "ಖರ್ಪಟಿ" ನೆಂತಲೂ; ೧೮. "ಶ್ರನ್ನಾಮಾಸ್ತಿಕ್ಯ ಬುದ್ಧಿಸ್ಯಾತ್" ಎಂಬ ವಚನಾನುಸಾರ ಸಂಪೂರ್ಣಾಸ್ತಿಕ್ಯ ಬುದ್ಧಿಯನ್ನು ದೇವರಲ್ಲಿ ಇಟ್ಟುಕೊಂಡಿರುವುದರಿಂದ "ಶ್ರದ್ಧಾಂಹ್ವ" ಎಂತಲೂ; ೧೯. ಸರ್ವಕಾಲದಲ್ಲಿಯೂ ಪರಮಾತ್ಮನಲ್ಲಿಯೇ ಧ್ಯಾನಶೀಲನಾದ್ದರಿಂದ "ಸಂಧ್ಯಾತ"ನೆಂತಲೂ; ೨೦. ನಿತ್ಯಾಪರೋಕ್ಷ ದೇವತೆಗಳಿಗಿಂತಲೂ ಅಧಿಕನಾದ್ದರಿಂದ "ವಿಜ್ಞಾನ"ನೆಂತಲೂ; ೨೧. ನಿತ್ಯಾಪರೋಕ್ಷಿಯಾದ್ದರಿಂದ "ಜ್ಞಾನ"ನೆಂತಲೂ; ೨೨. ನಿತ್ಯವೂ ಪರಮಾತ್ಮನ ಸ್ಮರಣವುಳ್ಳವನಾದ್ದರಿಂದ "ಕೀರ್ತನ"ನೆಂತಲೂ; ೨೩. ಸರ್ವತ್ರ ಕೂಡಿರುವುದರಿಂದ "ಸಂಕೀರ್ಣ"ನೆಂತಲೂ; ೨೪. ತನ್ನ ಬಲವನ್ನು ಹೇಳುವುದರಿಂದ "ಕತ್ಥನ"ನೆಂತಲೂ; ೨೫. ಸಂಶಯರಹಿತನಾದ್ದರಿಂದ "ಮಹಾಬುದ್ಧಿ"ಯೆಂತಲೂ; ೨೬. ಉತ್ತಮತ್ವವನ್ನು ತೋರಿಸುವನಾದ್ದರಿಂದ "ಜಯ"ಯೆಂತಲೂ; ೨೭. ಸಮಸ್ತಜೀವರಲ್ಲಿಯೂ ಉತ್ತಮನಾದ್ದರಿಂದ "ಮಹತ್ತರ"ನೆಂತಲೂ; ೨೮. ಅತ್ಯಂತ ಬಲವುಳ್ಳವನಾದ್ದರಿಂದ "ಸುವೀರ್ಯ"ನೆಂತಲೂ; ೨೯. ಉತ್ಕೃಷ್ಟವಾದ ಧಾರಣಾ ಶಕ್ತವುಳ್ಳವನಾದ್ದರಿಂದ "ಮೇಧಾವೀ" ಎಂತಲೂ; ೩೦. ವಿಶೇಷಕಾನಾಗಿ ಜಯಶೀಲನಾದ್ದರಿಂದ "ವಿಜಯ" ಎಂತಲೂ; ೩೧. "ತಿಷ್ಠತ್ಯಸ್ಮಿನ್ನಿತಿರಂತಿ ವೃಕಾಗ್ನಿಃ ಸಆಸ್ಯಾಸ್ತೀತಿರಂತಿಮಾನ್" ರಂ ಎಂಬ ಅಗ್ನಿಬೀಜ ಮುಖ್ಯವಾಚ್ಯತ್ವ ಇರುವದ್ದರಿಂದ ವೃಕನಾಮಕ ಅಂಗುಷ್ಠ ಪರಿಮಿತ ಅಗ್ನಿನಾಮಕ ದೇವರೂಪಕ್ಕೆ "ರಂತಿ" ಎಂಬ ಹೆಸರು. ಇದು ಈತನಲ್ಲಿರುವುದುರಿಂದ "ರಂತಿಮಾನ್" ಎಂತಲೂ; ೩೨. ಜ್ಞಾನರೂಪನಾದ್ದರಿಂದ "ಮನು" ಎಂತಲೂ; ೩೩. ಇಹಲೋಕ ಸುಖವನ್ನು ಕೊಡುವನಾದ್ದರಿಂದ "ಮೋದ" ಎಂತಲೂ; ೩೪. ಪರಲೋಕ ಸುಖವನ್ನು ಕೊಡುವನಾದ್ದರಿಂದ "ಪ್ರಮೋದ" ಎಂತಲೂ; ೩೫. ಸ್ವಚ್ಛಚಿತ್ತವುಳ್ಳವನಾದ್ದರಿಂದ "ಸಂತಸ" ನೆಂತಲೂ; ೩೬. ಎಲ್ಲಾ ಜೀವರುಗಳಿಗಿಂತಲೂ ಹೆಚ್ಚಿನ ಆನಂದವುಳ್ಳವನಾದ್ದರಿಂದ "ಆನಂದ" ನೆಂತಲೂ; ೩೭. ಇತರೇ ಅಪೇಕ್ಷೆ

ಇಲ್ಲದಿರೋಣದರಿಂದ ಸಂತುಷ್ಟನೆಂತಲೂ; ೩೮. ಅತಿ ಮನೋಹರವಾದ ಅವಯುಗಳುಳ್ಳವನಾದ್ದರಿಂದ "ಚಾರ್ವಾಂಗೆ"ನೆಂತಲೂ; ೩೯. ಮನೋಹರವಾದ ಲಕ್ಷಣವುಳ್ಳವನಾದ್ದರಿಂದ "ಚಾರು" ಎಂತಲೂ; ೪೦. ಅಧಿಕ ಬಾಹುಬಲವುಳ್ಳವನಾದ್ದರಿಂದ "ಸುಬಾಹು" ಎಂತಲೂ; ೪೧. ಮನೋಹರವಾದ ಸಲ್ಲಕ್ಷಣ ಪಾದವುಳ್ಳವನಾದ್ದರಿಂದ "ಚಾರುಪದ" ಎಂತಲೂ. ೪೨. ಸುಲಕ್ಷಣವಾದ ಕಣ್ಣುಗಳುಳ್ಳವನಾದ್ದರಿಂದ "ಸುಲೋಚನ" ನೆಂತಲೂ; ೪೩. ಸಮಸ್ತ ವೇದಗಳ ಜ್ಞಾನವನ್ನೂ ಉಳ್ಳವನಾದ್ದರಿಂದ "ಸಾರ್ವಸ್ವತ" ನೆಂತಲೂ; ೪೪. ಆರಬ್ಧಾಂತಗಾಮಿ (ಪ್ರಾರಂಭಿಸಿದ ಕಾರ್ಯವನ್ನು ಪೂರ್ತಿ ಮಾಡತಕ್ಕವನು) ಯಾದ್ದರಿಂದ "ಸುವೀರ" ನೆಂತಲೂ; ೪೫. ತತ್ವಜ್ಞಾನ ಸುಖಪಾನವುಳ್ಳವನಾದ್ದರಿಂದ "ಕಪಿ" ಎಂತಲೂ; ೪೬. ಪರಮಾತ್ಮನ ತತ್ವಜ್ಞಾನವುಳ್ಳವನಾದ್ದರಿಂದ "ಪ್ರಾಜ್ಞ" ನೆಂತಲೂ; ೪೭. ವಿಷಯಚಾಪಲ್ಯ ರಹಿತನಾದ್ದರಿಂದ "ಅಲಂಪಟ" ನೆಂತಲೂ; ೪೮. ಸರ್ವ ಜಗದ್ವ್ಯಾಪಾರವನ್ನೂ ತಿಳಿದವನಾದ್ದರಿಂದ "ಸರ್ವಜ್ಞ" ನೆಂತಲೂ; ೪೯. ಈ ಬ್ರಹ್ಮಾಂಡಗತ ಸರ್ವ ಜೀವರನ್ನು ಗೆದ್ದದ್ದರಿಂದ "ಸರ್ವಜಿತ್ತು" ಎಂತಲೂ; ೫೦. ಆಪದ್ರಕ್ಷಕನಾದ್ದರಿಂದ "ಮಿತ್ರ" ನೆಂತಲೂ; ೫೧. ಜ್ಞಾನಿಗಳ ಪಾಪವನ್ನು ನಾಶಮಾಡುವನಾದ್ದರಿಂದ "ಪಾಪನಾಶನ" ನೆಂತಲೂ; ೫೨. ವಿಶೇಷಾಕಾರವಾಗಿ ಧರ್ಮೋಪದೇಶವನ್ನು ಮಾಡುವನಾದ್ದರಿಂದ "ಧರ್ಮವಿನೇತ" ನೆಂತಲೂ; ೫೩. ಕುಶಲಬುದ್ಧಿಯಿಂದ ಶಂ ಅರಂ ಎಂಬ ಬಾಹ್ಯ ಸುಖ ದುಃಖ ಬಂಧನವನ್ನು ಖಂಡಿಸಿ ಮಂಗಳವನ್ನುಂಟು ಮಾಡುವನಾದ್ದರಿಂದ "ಶಾರದ" ಎಂತಲೂ; ೫೪. ಸಕಲವನ್ನು ಹಿಡಿಯುವ ಶಕ್ತಿವುಳ್ಳವನಾದ್ದರಿಂದ "ಓಜ್ಞ" ನೆಂತಲೂ; ೫೫.ತಪಸ್ವಿಯಾದ್ದರಿಂದ "ಸುತಪಸ್ವಿ" ಎಂತಲೂ; ೫೬. ಶೌರ್ಯತಪಸ್ವಿಯಾಗಿ ಬ್ರಹ್ಮತೇಜಸ್ಸುಳ್ಳ ವನಾದ್ದರಿಂದ "ತೇಜಸ್ವೀ" ಎಂತಲೂ; ೫೭. ಸರ್ವರಿಗೂ ಅವರವರ ಯೋಗ್ಯತಾನುಸಾರ ಯೋಗ್ಯತೆ ಕೊಡುವುದರಿಂದ "ದಾನಶೀಲ" ಎಂತಲೂ; ೫೮. ಸುಸ್ವಭಾವವುಳ್ಳವನಾದ್ದರಿಂದ "ಸುಶೀಲ" ನೆಂತಲೂ; ೫೯. ಭಜನೀಯನಾಗಿ ಕಾರ್ಯನಿರ್ವಾಹಕನಾದ್ದರಿಂದ "ಯಜ್ಞ" ನೆಂತಲೂ; ೬೦. ದೇವರನ್ನು ಕುರಿತು ಸರ್ವ ಕರ್ಮಯಾಗವನ್ನು ಅರ್ಪಿಸಿರುವುದರಿಂದ "ಯಜ್ವೀ" ಎಂತಲೂ; ೬೧. ಸರ್ವರಿಂದಲೂ ದೇವತಾರಾಧನೆ ಮಾಡಿಸುವುದರಿಂದ "ಯಾಗವರ್ತಕ" ನೆಂತಲೂ; ೬೨. ವಿಶಿಷ್ಟ ಚೇಷ್ಟಾಪ್ರದನಾದ್ದರಿಂದ "ಪ್ರಾಣ" ನೆಂತಲೂ; ೬೩. ಸ್ವಾಧೀನ ಜೀವರನ್ನು ರಕ್ಷಿಸುವನಾದ್ದರಿಂದ "ತ್ರಾಣ" ನೆಂತಲೂ; ೬೪. ಪರಮಾತ್ಮನ ದ್ವೇಷಿಗಳಲ್ಲಿ ಯಾವಾಗಲೂ ಕೋಪವುಳ್ಳವನಾದ್ದರಿಂದ "ಅಮರ್ಷ" ಎಂತಲೂ; ೬೫. ಸನ್ಮುಕ್ತಿಯೋಗ್ಯರಿಗೆಲ್ಲ ಜ್ಞಾನೋಪದೇಶಕನಾದ್ದರಿಂದ "ಉಪದೇಷ್ಟ" ನೆಂತಲೂ; ೬೬. ಸರ್ವದೇಹಿಗಳ ಆಯಸ್ಸಿನ ಪೂರ್ತಿಕಾಲವನ್ನು, ತಿಳಿದು ಹಂಸ ಮಂತ್ರ ನಿಲ್ಲಿಸುವುದರಿಂದ "ತಾರಕ" ನೆಂತಲೂ; ೬೭. ಕಾಲಾಭಿಮಾನಿಯಾಗಿ ಜಗತ್ತನ್ನು ಆಟವಾಡಿಸುವುದರಿಂದ "ಕಾಲಕ್ರೀಡನ" ನೆಂತಲೂ; ೬೮.ಸಜ್ಜನರಿಂದ ಸತ್ಕಾರ್ಯವನ್ನು ಮಾಡಿಸುವುದರಿಂದ "ಸುಕರ್ತ" ನೆಂತಲೂ; ೬೯. ಸುಕಾಲವನ್ನು ಸಜ್ಜನರಿಗೆ ತಿಳಿಸುವುದರಿಂದ "ಸುಕಾಲಜ್ಞ" ನೆಂತಲೂ; ೭೦. ಕಿವಿಯನ್ನು ಮುಚ್ಚಿಕೊಂಡರೆ ಕೇಳುವ ಪ್ರಾಣವಾಯುವಿನ

ಶಬ್ಧವನ್ನು ಮರಣಕಾಲದಲ್ಲಿ ಕೇಳಿದ ಹಾಗೆ ಮಾಡಿ ಮೃತ್ಯುವನ್ನು ಸೂಚಿಸುವನಾದ್ದರಿಂದ "ಕಾಲಸೂಚಕ" ನೆಂತಲೂ; ೭೧. ಅಜ್ಞಾನವನ್ನು ಮತ್ತು ಕಲಿಯನ್ನು ಸಂಹರಿಸುವನಾದ್ದರಿಂದ "ಕಲಿಸಂಹರ್ತ" ನೆಂತಲೂ; ೭೨. ಕಲಿಬಂಧನೇ ಎಂಬ ಧಾತುವಿನಿಂದ ದುಷ್ಟರನ್ನು ಬಂಧಿಸುವನಾದ್ದರಿಂದ....

(ಮುಂದುವರೆದುದು.....)

(ರಮಾದೇವರ ಮಹಾತ್ಮೆ ಎಂಬ ಪುಸ್ತಕದಿಂದ)

...."ಕಲಿ ಎಂತಲೂ; ೭೩. ದುರ್ಜನರಿಂದ ಪರಾಜಯನಾದ್ದರಿಂದ ಕಾಲಕನೆಂತಲೂ; ೭೪. "ದೇವಾನಾಂರೇತೋವೈವೃಷ್ಟಿಃ" ಎಂಬ ಶೃತಿಯಂತೆ ರೇತಸ್ಸೆಂಬ ವೃಷ್ಟಿಯನ್ನು ಉಂಟುಮಾಡುತ್ತಾನೆಯಾದ್ದರಿಂದ "ರೇತ" ನೆಂತಲೂ; ೭೫. ಸರ್ವಕಾಲದಲ್ಲಿಯೂ ಶ್ರೀಪರಮಾತ್ಮನಲ್ಲಿಯೇ ಆಸಕ್ತವುಳ್ಳವನಾದ್ದರಿಂದ "ಸದಾರತ" ನೆಂತಲೂ; ೭೬. ಸಜ್ಜನರಿಗೆ ಬಲಪ್ರದನಾದ್ದರಿಂದ "ಸುಬಲ" ನೆಂತಲೂ ; ೭೭. ಭಕ್ತಾಪರಾಧ ಸಹಿಷ್ಣುವಾದ್ದರಿಂದ 'ಸಹೋ' ಎಂತಲೂ; ೭೮.ಅಕವೆಂಬ ದುಃಖವನ್ನು ಪುಡಿಮಾಡುವುದರಿಂದ 'ಸದಾಕಪಿ' ಎಂತಲೂ; ೭೯. ಸಜ್ಜನ ಪ್ರಾಪ್ಯನಾದ್ದರಿಂದ 'ಗಮ್ಯ' ನೆಂತಲೂ; ೮೦. ಅಂತಃಜ್ಞಾನಪ್ರೇರಕನಾದ್ದರಿಂದ 'ಜ್ಞಾನ' ನೆಂತಲೂ; ೮೧. ದಶೇಂದ್ರಿಯವು ಮನೆಯಂತೆ ಅಧಿಷ್ಠಾನವಾಗಿರುವುದರಿಂದ 'ದಶಕರ' ನೆಂತಲೂ ; ೮೨. ಒಳ್ಳೆಯ ಶಬ್ದವನ್ನು ಕೇಳುವನಾದ್ದರಿಂದ "ಶ್ರೋತವ್ಯ" ನೆಂತಲೂ; ೮೩. ವಿಶೇಷವಾಗಿ ಕೀರ್ತನೆ ಮಾಡಿಸಿ ಕೊಳ್ಳುವನಾದ್ದರಿಂದ "ಸಂಕೀರ್ತವ್ಯ" ನೆಂತಲೂ; ೮೪. ಮನಸ್ಸಿನಿಂದ ತಿಳಿಸಿಕೊಳ್ಳುವನಾದ್ದರಿಂದ 'ಮಂತವ್ಯ' ನೆಂತಲೂ; ೮೫. ಸ್ತೋತ್ರ ಮಾಡುವುದಕ್ಕೆ ಯೋಗ್ಯನಾದ್ದರಿಂದ 'ಕವ್ಯ' ನೆಂತಲೂ; ೮೬. ದರ್ಶನಮಾಡಿಸಿಕೊಳ್ಳುವುದಕ್ಕೆ ಅರ್ಹನಾದ್ದರಿಂದ 'ದ್ರಷ್ಟವ್ಯ' ನೆಂತಲೂ; ೮೭. ಅನುಸರಣೆಮಾಡಿ ಹೊಂದುವುದಕ್ಕೆ ಯೋಗ್ಯನಾದ್ದರಿಂದ 'ಸಖ್ಯ' ನೆಂತಲೂ; ೮೮. ಚಲಾಚಲರೂಪ ಪ್ರತಿಮಾಧಿಷ್ಠಾನ ವಿಶೇಷ ಇದ್ದಲ್ಲಿಗೆ ಹೋಗಲು ಅರ್ಹನಾದ್ದರಿಂದ 'ಗಂತವ್ಯ' ನೆಂತಲೂ; ೮೯. ಮಂತ್ರಜಪಾದಿ ಕ್ರಿಯೆಗಳಿಂದ ಭಜನೀಯನಾದ್ದರಿಂದ 'ಕ್ರವ್ಯ' ನೆಂತಲೂ; ೯೦. ಸ್ಮರಣೆಗೆ ಸದಾವಿಷಯನಾದ್ದರಿಂದ 'ಸ್ಮರ್ತವ್ಯ' ನೆಂತಲೂ; ೯೧. ಯಥಾಯೋಗ್ಯವಾಗಿ ಆರಾಧನೆ ಮಾಡಿಸಿಕೊಳ್ಳುವನಾದ್ದರಿಂದ 'ಸೇವ್ಯ' ನೆಂತಲೂ; ೯೨. ಪರಮ ಚತುರನಾದ್ದರಿಂದ 'ಸುಭವ್ಯ' ನೆಂತಲೂ; ೯೩. 'ಪ್ರಾಣಸ್ಯೇದಂ ವಶೇಸರ್ವಂ ತ್ರಿದೀವೇಯತ್ಪ್ರತಿಷ್ಠಿತಂ' ಎಂಬ ಶೃತ್ಯನುಸಾರ ಸ್ವರ್ಗದಲ್ಲಿ ರಕ್ಷಕನಾದ್ದರಿಂದ 'ಸ್ವರ್ಗವ್ಯ' ನೆಂತಲೂ; ೯೪. ಧ್ಯಾನವಿಷಯನಾದ್ದರಿಂದ 'ಭಾವ್ಯ' ನೆಂತಲೂ; ೯೫. ಸಚ್ಛಾಸ್ತ್ರ ಮೂಲಕವಾಗಿ ತಿಳಿಸಿಕೊಳ್ಳುವನಾದ್ದರಿಂದ 'ಜ್ಞಾತವ್ಯ' ನೆಂತಲೂ; ೯೬. ವಕ್ತೃವಾದ ಗುರುವಿನಿಂದ ಇತರರ ವಿಷಯಕವಾಗಿ ಹೇಳಿಸಿಕೊಳ್ಳುವನಾದ್ದರಿಂದ 'ವಕ್ತವ್ಯ' ನೆಂತಲೂ; ೯೭. ವೇದಾದಿಗಳಿಂದ ಗೋಚರನಾದ್ದರಿಂದ 'ಗವ್ಯ' ನೆಂತಲೂ; ೯೮. ಮುಂದಿನ ಪದವಾಯು ಪದವುಳ್ಳವನಾದ್ದರಿಂದ 'ಲಾತವ್ಯ' ನೆಂತಲೂ; ೯೯. ಸರ್ವಜೀವರ ಹೃತ್ಕಮಲದಲ್ಲಿ ಶ್ವಾಸರೂಪ ಜಪಮಾಡಿ ಸರ್ವ ಚೇಷ್ಟಾಪ್ರದನಾಗಿಯೂ ಶ್ರೀಪರಮಾತ್ಮನಿಗೆ ಪ್ರಥಮಾಂಗ ಭೂತನಾಗಿಯೂ

ಇರುವನಾದ್ದರಿಂದ 'ವಾಯು' ಎಂತಲೂ; ೧೦೦. ಸರ್ವ ಜೀವರಿಂದಲೂ ಭಕ್ತಿ ಜ್ಞಾನಾಧಿಕ ಪೂರ್ಣ ಗುಣನಾದ್ದರಿಂದಲೂ, ಬ್ರಾಹ್ಮರಲ್ಲಿ ಪ್ರೀತಿವುಳ್ಳವನಾದ್ದರಿಂದಲೂ, ಸರಸ್ವತೀದೇವಿಗೆ ಪತಿಯಾದ್ದರಿಂದಲೂ, ಋಜುಗಳಲ್ಲಿ ಪೂರ್ತಿಯಾದ ಸಾಧನವುಳ್ಳವನಾದ್ದರಿಂದಲೂ, ಜಗತ್ತಿಗೆ ಮುಖ್ಯ ಗುರುವಾದ್ದರಿಂದಲೂ; 'ಬ್ರಹ್ಮ' ಎನ್ನುತ್ತಾರೆ.

ಈ ಮೇಲ್ಕಂಡ ಋಜುಗಳ ಸ್ಮರಣೆಯಿಂದ ಆಗತಕ್ಕ ಫಲವನ್ನು ಹೇಳಲ್ಪಡುತ್ತದೆ. ವಾಮನಪುರಾಣದಲಿ ಪೇಳಿದ । ಈ ಮಹಾತ್ಮರ ಪರಮಮಂಗಳ । ನಾಮಗಳ ಸಂಪ್ರೀತಿಪೂರ್ವಕ ನಿತ್ಯ ಸ್ಮರಿಸುವರಾ ॥ ಶ್ರೀಮನೋರಮರವರು ಬೇಡಿದ। ಕಾಮಿತಾರ್ಥಗಳಿತ್ತು ತನ್ನತ್ರಿ । ಧಾಮದೊಳಗನುದಿನದಲಿಟ್ಟಾನಂದ ಬಡಿಸುವನೂ ॥

ಈ ಪ್ರಕಾರವಾಗಿ ವಾಮನಪುರಾಣದಲ್ಲಿ ಹೇಳಿರತಕ್ಕಂಥ ಈ ಮೇಲ್ಕಂಡ ೧೦೦ ಮಂದಿ ಮಹಾತ್ಮರ ಅತ್ಯಂತ ಮಂಗಳಪ್ರದವಾದ ಹೆಸರುಗಳನ್ನು ಚೆನ್ನಾಗಿ ಆದರದಿಂದ ಯುಕ್ತರಾಗಿ ಯಾವಾಗಲೂ ಸ್ಮರಣೆ ಮಾಡುವಂಥಾವರಿಗೆ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಸ್ಮರಣೆ ಮಾಡುವರು ಅಪೇಕ್ಷಿಸುವ ಜ್ಞಾನಭಕ್ತಾದ್ಯಪರೋಕ್ಷವನ್ನು ಕೊಟ್ಟು ಸ್ವಕೀಯವಾದ ವೈಕುಂಠಾದಿ ಮೂರು ಸ್ಥಾನದೊಳಗೆ ಲಿಂಗಭಂಗಾನಂತರ ಇಟ್ಟುಕೊಂಡವನಾಗಿ ಸ್ವರೂಪಾನಂದವನ್ನು ಕೊಡುತ್ತಾನೆ.

ಮುಕ್ತಿ ಯೋಗ್ಯರು

ಮುಕ್ತಿ ಯೋಗ್ಯಾಃ ಪಂಚವಿಧಾಃ ॥
ಮುಕ್ತಿಯೋಗ್ಯರಲ್ಲಿ ಐದು ಪ್ರಕಾರ
ದೇವರ್ಷಿಪಿತೃ, ಚಕ್ರವರ್ತಿ, ಮನುಷ್ಯೋತ್ತಮ ಭೇದಾತ್ ॥

೧. ದೇವತೆಗಳು, ೨. ಋಷಿಗಳು, ೩. ಪಿತೃಗಳು, ೪. ಚಕ್ರವರ್ತಿಗಳು, ೫. ಮನುಷ್ಯೋತ್ತಮರು. ಇವರು ಪರಸ್ಪರಭೇದ ಉಳ್ಳವರು ದೇವತೆಗಳು ಯಾರೆಂದರೆ–

ಪ್ರ ॥ ೧. ಬ್ರಹ್ಮವಾಯ್ವಾದಯೋದೇವಾಃ ॥
ಬ್ರಹ್ಮ, ವಾಯುದೇವರೇ ಮೊದಲಾದವರು ದೇವತೆಗಳು
ಪ್ರ ॥ ೨. ಋಷಯೋ ನಾರದಾದ್ಯಾಃ । ನಾರದರೇ ಮೊದಲಾದವರು ಋಷಿಗಳು.
ಪ್ರ ॥ ೩. ಪಿತರಶ್ಚಿರಾಃ ॥ ಚಿರಪಿತೃಗಳೇ ಮೊದಲಾದವರು ಪಿತೃಗಳು.
ಪ್ರ ॥ ೪. ರಘ್ವಂಬರೀಷಾದಯಶ್ಚಕ್ರವರ್ತಿನಃ ॥ ರಘು, ಅಂಬರೀಷ ಮೊದಲಾದವರೇ ಚಕ್ರವರ್ತಿಗಳು.
ಪ್ರ ॥ ೫. ಮನುಷ್ಯೋತ್ತಮಾಸ್ತುದ್ವಿವಿಧಾಃ ॥ ಮನುಷ್ಯೋತ್ತಮರಲ್ಲಿ ಎರಡು ವಿಧ.
ಪ್ರ ॥ ಚತುರ್ಗುಣೋಪಾಸಕಾ ಏಕಗುಣೋಪಾಸಕಾಶ್ಚೇತಿ ॥

ಚತುರ್ಗುಣೋ ಪಾಸಕರೆಂತಲೂ, ಏಕಗುಣೋಪಾಸಕರೆಂತಲೂ ೨ ವಿಧ.

ಪ್ರ ॥ ತೃಣಜೀವಾ ಏಕಗುಣೋಪಾಸಕಾಃ ॥ ತದ್ವ್ಯತಿರಿಕ್ತಾಶ್ಚತುರ್ಗುಣೋಪಾಸಕಾಃ॥

ತೃಣಜೀವರು ಏಕಗುಣೋಪಾಸಕರೆಂತಲೂ ಅದಕ್ಕೆ ವ್ಯತಿರಿಕ್ತರಾದವರು ಚತುರ್ಗುಣೋಪಾಸಕರೆಂತಲೂ ತಿಳಿಯಬೇಕು.

ನಿತ್ಯ ಸಂಸಾರಿಗಳು

ಪ್ರ ॥ ನಿತ್ಯಂ ಸುಖದುಃಖಮಿಶ್ರಾ ನಿತ್ಯಸಂಸಾರಿಣಃ । ನಿತ್ಯ ಸಂಸಾರಿಗಳು ಮಧ್ಯಮ ಮನುಷ್ಯರು. ಇವರು ಅಸಂಖ್ಯಾತರು.

ಪ್ರ ॥ ತೇಚಮಧ್ಯಮ ಮನುಷ್ಯಾ ಏವಾಸಂಖ್ಯಾತಾಃ ॥ ಸರ್ವದಾ ಸ್ವರ್ಗಭೂ ನಿರಯಚಾರಿಣಃ ॥ ಇವರು ಯಾವಾಗಲೂ ಸ್ವರ್ಗದಲ್ಲಿಯೂ, ಭೂಮಿಯಲ್ಲಿಯೂ ಮತ್ತು ನರಕದಲ್ಲಿಯೂ ಸಂಚರಿಸುವರಾದ್ದರಿಂದ ನಿತ್ಯ ಸಂಸಾರಿಗಳೆಂದೆನಿಸಿಕೊಂಡರು.

ತಮೋ ಯೋಗ್ಯರು.

ಪ್ರ ॥ ತಮೋಯೋಗ್ಯಾಸ್ತು ಚತುರ್ವಿಧಾಃ ॥ ತಮೋಯೋಗ್ಯರಲ್ಲಿ ನಾಲ್ಕು ಪ್ರಕಾರ.

ಪ್ರ ॥ ದೈತ್ಯ ರಾಕ್ಷಸಾಃ ಪಿಶಾಚಾ ಮನುಷ್ಯಾಧಮಾಶ್ಚೇತಿ ॥ ದೈತ್ಯರು ರಾಕ್ಷಸರು, ಪಿಶಾಚರು ಮತ್ತು ಮನುಷ್ಯಾಧಮರು.

ತಮೋ ಯೋಗ್ಯರ ಲಕ್ಷಣಗಳು :–

ಶ್ಲೋ ॥ ದಂಭೋದರ್ಪೋಭಿಮಾನಶ್ಚ ಕ್ರೋಧಃಪಾರುಷ್ಯಮೇವಚ ॥ ಅಜ್ಞಾನಂಚಾಭಿಜಾತಸ್ಯ ಪಾರ್ಥಸಂಪದಮಾಸುರೀಂ ॥

ತಾ ॥ ತಾನು ಅಲ್ಪನಾಗಿದ್ದರೂ ಬಹಳ ದೊಡ್ಡವನೆಂದು ತೋರ್ಪಡಿಸಿಕೊಳ್ಳೋಣ, ತನಗೆ ಭಯವುಂಟಾಗಲು ಕಾರಣವಿದ್ದರೂ, ಇಲ್ಲದವನಂತೆ ನಟಿಸೋಣ, ಪ್ರಮಾಣಗಳನ್ನು ತಪ್ಪಿ ನಡೆಯೋಣ, ಕೋಪ, ಕ್ರೂರತನ, ಅಜ್ಞಾನ ಇವೇ ಮುಂತಾದುವು ತಮೋಯೋಗ್ಯರ ಗುಣಗಳು.

ಪ್ರ ॥ ಸರ್ವೇಪಿಜೀವಾಃ ಪರಸ್ಪರಂ ಪರಮಾತ್ಮನಾಚಭಿನ್ನಾಃ ।

ತಾ ॥ ಸಮಸ್ತ ಜೀವರೂ ಪರಸ್ಪರ ಭಿನ್ನರಾಗಿಯೂ, ಪರಮಾತ್ಮನಿಂದಲೂ ಕೂಡ ಭಿನ್ನರಾಗಿರುತ್ತಾರೆ. ಜೀವರು ಸಂಸಾರದಲ್ಲೂ ಮುಕ್ತಿಯಲ್ಲಿಯೂ ಕೂಡ ತಾರತಮ್ಯವುಳ್ಳವರಾಗಿಯೂ ಮತ್ತು ಪರಸ್ಪರ ಭೇದವುಳ್ಳವರಾಗಿಯೂ ಇರುತ್ತಾರೆ.

ಮೋಕ್ಷಜೀವರ ಸಾಧನಕ್ರಮ ಪ್ರಕರಣ ಸಂಪೂರ್ಣ

೪. ಪಂಚಭೇದ ಪ್ರಕರಣ

(ರಮಾದೇವರ ಮಹಾತ್ಮೆ ಎಂಬ ಪುಸ್ತಕದಿಂದ)

ಜೀವೇಶ್ವರಭೀದಾಚ್ಯೈವ ಜೀವಭೇದಃ ಪರಸ್ಪರಂ । ಜಡೇಶಯೋರ್ಜಡಾನಾಂಚ ಜಡಜೀವಭಿದಾತಥಾ ॥ ಪಂಚಭೇದಾ ಇಮೇನಿತ್ಯಾಸ್ಸರ್ವಾವಸ್ಥಾಸುಸರ್ವಶಃ । ಕಲ್ಪಿತಶ್ಚೇನ್ನಿವರ್ತೇತನವಾಸೌ ವಿನಿವರ್ತತೇ ॥

೧. ಜೀವ ಜೀವಕ್ಕೂ ಭೇದ.

೨. ಜೀವ ಜಡಕ್ಕೂ ಭೇದ

೩. ಜಡ ಜಡಕ್ಕೂ ಭೇದ.

೪. ಜಡ ಪರಮಾತ್ಮನಿಗೂ ಭೇದ

೫. ಜೀವ ಪರಮಾತ್ಮನಿಗೂ ಭೇದ

ಪ್ರಥಮತಃ ಜೀವನಿಗೂ ಈಶ್ವರನಿಗೂ ಇರತಕ್ಕ ಭೇದವನ್ನು ತಿಳಿಸುತ್ತೇವೆ. ಈಶ್ವರನ ಸ್ವರೂಪ ಸ್ವಭಾವವು ಎಂಥಾದ್ದೆಂದರೆ, ಅನಾದಿ (ಆದಿಯಿಲ್ಲದ್ದು), ನಿತ್ಯ(ಅಂತ್ಯವಿಲ್ಲದ್ದು), ಅಪರಿಚ್ಛಿನ್ನ(ಸರ್ವವನ್ನೂ ವ್ಯಾಪಿಸಿಕೊಂಡಿರುವುದು), ಸರ್ವತಂತ್ರ ಸ್ವತಂತ್ರ, ಸರ್ವಜ್ಞ, ಸರ್ವಜಗದಾತೀತ, ಸ್ವಪ್ರಕಾಶ, ನಿರ್ದೋಷ, ಶ್ರೀರಮಾದಿ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ, ನಿಯಮ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ಈ ಎಂಟಕ್ಕೂ ಮುಖ್ಯ ಕಾರಣನಾಗಿಯೂ, ಜ್ಞಾನ, ಆನಂದ, ಬಲ, ಆರೋಗ್ಯ, ನಿತ್ಯಯೌವನ, ವಿವೇಕ, ಶಮದಮ, ಕ್ಷಮೆ, ದಯೆ, ಸ್ನೇಹ, ಸ್ಮಿತ(ಮುಗುಳುನಗೆ), ಪ್ರಸಾದ, ಸತ್ಯ, ಸಾಮ್ಯ, ತೃಪ್ತಿ, ಆರ್ಜವ(ನೆಟ್ಟರುವುದು), ಗೌರವ, ಮಾರ್ದವ, ಆಸ್ತಿಕ್ಯ, ಸೌಶೀಲ್ಯ, ಪಾಂಡಿತ್ಯ, ಪ್ರಾಗಲ್ಭ್ಯ, ಪಾವಿತ್ರ್ಯ, ಮಾಂಗಲ್ಯ, ಸೌಗಂಧ್ಯ, ಸೌಭಾಗ್ಯ, ವೈರಾಗ್ಯ, ತೇಜ, ಕಾಂತಿ, ಪ್ರತಾಪ, ಕೌಶಲ, ವಿಜಯ, ಸ್ವಾತಂತ್ರ್ಯ, ವೀರ್ಯ, ಧೈರ್ಯ, ಸ್ಥೈರ್ಯ, ಶೌರ್ಯ, ಗಾಂಭೀರ್ಯ, ಸೌಂದರ್ಯ, ಮಾಧುರ್ಯ, ಐಶ್ವರ್ಯ, ಔದಾರ್ಯ ಇವೇ ಮುಂತಾದ ಅನಂತ ಗುಣಗಳಿಂದ ಪೂರ್ಣನಾಗಿಯೂ, ರಮಾದಿ ಸರ್ವ ಅಸ್ವತಂತ್ರ ಜಗತ್ಕರ್ತ, ಅನಂತಾನಂತ ಗುಣರೂಪ ಕ್ರಿಯಾತ್ಮಕಸ್ವರೂಪ, ಇವೇ ಮೊದಲಾದುವುಗಳು ಈಶನ ಸ್ವರೂಪವು ಮತ್ತು ಈಶಗತ ಧರ್ಮಗಳು.

ಸಮಸ್ತ ಜೀವರಾಶಿಗಳ ಒಳಗೂ ಬ್ರಹ್ಮ, ವಾಯು, ವಾಣಿ, ಭಾರತಿ ಈ ನಾಲ್ವರು ಮಾತ್ರ ಭಗವಂತನ ವಿಷಯಕವಾದ ಜ್ಞಾನಭಕ್ತಿಯಲ್ಲಿ ಮೋಹರಹಿತರು. ಅಚ್ಛಿನ್ನಭಕ್ತರು ಎಂತ ತಿಳಿಯಬೇಕು. ಇವರೇ ಸಾತ್ವಿಕ ಜೀವರು. ಇದಕ್ಕೆ ಭಿನ್ನರಾದವರು ರಾಜಸಜೀವರು.

ಇವರ ಲಕ್ಷಣ– ಸ್ವರ್ಗಪ್ರಚುರರು, ಭೂಪ್ರಚುರರು, ನಿರಯಪ್ರಚುರರು ಅಂದರೆ, ಇವರು ಯಾವಾಗಲೂ ಸ್ವರ್ಗದಲ್ಲಿಯೂ, ಭೂಮಿಯಲ್ಲಿಯೂ ಮತ್ತು ನರಕದಲ್ಲಿಯೂ ಸಹ ಸಂಚರಿಸತಕ್ಕಂಥಾವರು. ಈ ತ್ರಿವಿಧಗತಿವುಳ್ಳವರಂಥಾವರೇ ನಿತ್ಯಸಂಸಾರಿಗಳು. ಇವರಿಗೆ ಪಂಚಭೇದಜ್ಞಾನವೂ, ತಾರತಮ್ಯಜ್ಞಾನವೂ, ಲಿಂಗಭಂಗವೂ, ಧಾಮತ್ರಯ (ಶ್ವೇತದ್ವೀಪ, ಅನಂತಾಸನ, ವೈಕುಂಠ) ಪ್ರವೇಶವೂ ಸಹ ಇರುವುದಿಲ್ಲ.

ಮೇಲ್ಕಂಡ ಉಭಯ ಜೀವರಿಂದಲೂ ಭಿನ್ನರಾದವರು ತಮೋಯೋಗ್ಯ ಜೀವರು. ಇವರು ನಾಲ್ಕು ಪ್ರಕಾರ. ಕಲಿ, ವಿಪ್ರಚಿತ್ತಿ, ಕಾಲನೇಮಿ ಮೊದಲಾದ ದೈತ್ಯೋತ್ತಮರು (ದೈತ್ಯರು).

೧. ಜೀವೇಶ್ವರ ಅಭೇದಜ್ಞಾನ ಪ್ರತ್ಯಕ್ಷವಾದ ಜಗನ್ಮಿಥ್ಯಾ ಜ್ಞಾನಸಹಿತ ನವವಿಧ ದ್ವೇಷವುಳ್ಳಂಥಾ ದೈತ್ಯೋತ್ತಮರು.

ನವವಿಧದ್ವೇಷವೆಂದರೆ:–

ಪ್ರ ॥ ಜೀವಾಭೇದೋ ನಿರ್ಗುಣತ್ವಮಪೂರ್ಣ ಗುಣತಾತಥಾ ॥ ಸಾಮ್ಯಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವಚ ॥ ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವಚ ॥ ತತ್ಪ್ರಮಾಣಸ್ಯನಿಂದಾಚ ದ್ವೇಷಾ ಏತಾಖಿಲಾಮತಾಃ ॥

೧. ಜೀವಪರಮಾತ್ಮರು ಒಂದೇ ಎಂದು ಹೇಳೋಣ; ೨. ದೇವರು ನಿರ್ಗುಣ ನಿರಾಕಾರನೆಂಬೋಣ; ೩. ದೇವರಗುಣ ಇಷ್ಟೆಂದು ಗಣನೆಮಾಡೋಣ; ೪. ಅನ್ಯದೇವತೆಗಳನ್ನು ದೇವರಿಗೆ ಸಾಮ್ಯ ಹೇಳೋಣ; ೫. ದೇವರಿಗಿಂತ ಅನ್ಯರಿಗೆ ಅಧಿಕ್ಯವನ್ನು ಹೇಳೋಣ; ೬. ಮತ್ಸ್ಯಾದಿ ರಾಮ ಕೃಷ್ಣ ಅವತಾರ ರೂಪಗಳಿಗೆ ಭೇದವನ್ನು ಹೇಳೋಣ; ೭. ದೇವರ ಅವತಾರ ವಿಷಯುವನ್ನು ಮನುಷ್ಯನೋಪಾದಿಯಲ್ಲಿ ಹುಟ್ಟುತ್ತಾನೆ; ಈತನಿಗೂ ಜನನಮರಣವುಂಟೆಂದು ಹೇಳೋಣ; ೮. ಭಗವದ್ಭಕ್ತರಲ್ಲಿ ದ್ವೇಷ ಮಾಡೋಣ; ೯ ಭಗವದ್ಗುಣ ಪ್ರತಿಪಾದಕ ಶಾಸ್ತ್ರವನ್ನು ನಿಂದ್ಯ ಮಾಡೋಣ. ಹೀಗೆ ಒಂಭತ್ತು ವಿಧದ್ವೇಷವನ್ನು ಪರಮಾತ್ಮನಲ್ಲಿ ಯಾವನು ಮಾಡುತ್ತಾನೋ ಅಂಥವನು ತಮಸ್ಸನ್ನು ಹೊಂದುತ್ತಾನೆ. ೨. ಕೆಲವು ವಿಷ್ಣು ವೈಷ್ಣವದ್ವೇಷಿಗಳಾದಂಥ ದೈತ್ಯಮಧ್ಯಮರು (ರಾಕ್ಷಸರು); ೩. ದೈತ್ಯಾಧಮರಾದ ಪಿಶಾಚರು; ೪. ಈ ತ್ರಿವಿಧರಿಗೂ ಭೃತ್ಯರಾದಂಥ ಮನುಷ್ಯಾಧಮರು. ಈ ಪ್ರಕಾರ ಚತುರ್ವಿಧರು ತಮೋಯೋಗ್ಯರು. ಹೀಗೆ ಸಾತ್ವಿಕ, ರಾಜಸ, ತಾಮಸರಿಂದ ಪರಸ್ಪರ ಜೀವ ಜೀವರಿಗೆ ಭೇದವುಂಟು.

ಜಡಜೀವ ಭೇದಪ್ರಕಾರ:– ಜೀವರಿಗೆ ತಮ್ಮ ಯೋಗ್ಯಕರ್ಮಾನುಸಾರವಾಗಿ ಶ್ರೀಪರಮಾತ್ಮನಿಂದ ಪ್ರಾಪ್ತವಾದಂಥ ಸಂಸಾರದಲ್ಲಿ ಸುಖದುಃಖಾನುಭವ, ಪಾಪಪುಣ್ಯಲೇಪ, ಇದರಿಂದ ಸ್ವರ್ಗಸೌಖ್ಯ, ನರಕಯಾತನೆ, ಈ ಪ್ರಕಾರ ಸುಗತಿ ದುರ್ಗತಿಗಳು ಉಂಟಾಗುತ್ತವೆ. ಈ ತ್ರಿವಿಧರಿಗೂ ತ್ರಿವಿಧವಾದಂಥ ಜ್ಞಾನಗಳುಂಟು. ಹೇಗೆಂದರೆ, ಸಾತ್ವಿಕರಿಗೆ ಜ್ಞಾನವೂ, ರಾಜಸರಿಗೆ ಮಿಶ್ರಜ್ಞಾನವೂ(ಜ್ಞಾನ ಮತ್ತು ಅಜ್ಞಾನ ಮಿಶ್ರವಾಗಿರುವುದು) ತಾಮಸರಿಗೆ ಅಜ್ಞಾನವೂ ಎಂದು ತಿಳಿಯಬೇಕು. ಇದು ಜೀವರ ಧರ್ಮಗಳು. ಈ ಪ್ರಕಾರ ಜೀವರಿಗೆ ಭಿನ್ನವಾದಂಥ ಜಡಗಳಿಗೆ ಸುಖ ದುಃಖಾನುಭವವು ಪುಣ್ಯ ಪಾಪವೂ ಮತ್ತು ಅಜ್ಞಾನವೂ ಸಹ ಇಲ್ಲದಿರೋಣದರಿಂದ ಜಡವು ಜೀವನಿಂದ ಭಿನ್ನವಾಗುತ್ತದೆ. ಆದ್ದರಿಂದ ಜೀವನಿಗೂ, ಜಡಕ್ಕೂ ಭೇದವೂ ಸಿದ್ಧಾಂತವಾಯಿತು.

ಜಡ ಜಡಗಳಿಗೆ ಭೇದಪ್ರಕಾರ:– ೧. ನಿತ್ಯ (ಅನಾದಿತ್ಯ) ೨. ಅನಿತ್ಯ, ೩.ನಿತ್ಯಾನಿತ್ಯ ಈ ಪ್ರಕಾರ ಜಡಗಳಲ್ಲಿ ಮೂರು ವಿಧ. ನಿತ್ಯ ಜಡಗಳಲ್ಲಿ ಮೂರು ಪ್ರಕಾರ. ೧. ಅನಾದಿ ನಿತ್ಯ ಅಪರಿಚ್ಛಿನ್ನವಾದ ಅವ್ಯಾಕೃತಾಕಾಶ; ೨. ಅನಾದಿನಿತ್ಯ, ಅಪರಿಚ್ಛಿನ್ನವಾದ ವೇದಗಳು, ೩.ಅನಾದಿ ನಿತ್ಯ ಅಪರಿಚ್ಛಿನ್ನವಾದಂಥಾ ಪಂಚಾಶದ್ವರ್ಣಗಳು (ಅಂದರೆ ಅಕಾರಾದಿ ಳಕಾರದವರಗಿನ ೫೦ ಅಕ್ಷರಗಳು) ೨. ಅನಿತ್ಯಜಡಗಳು ಮೂರು ಪ್ರಕಾರ – ೧.ಪ್ರಾಕೃತ, ೨.ವಿಕೃತ, ೩. ವೈಕೃತ, ೧. ಬ್ರಹ್ಮಾಂಡದ ಹೊರಗಿನ ಅಸಂಸೃಷ್ಟ ದಶಾವರ್ಣಗಳೇ ಪ್ರಾಕೃತಾ ನಿತ್ಯಜಡಗಳು, ೨. ಚತುರ್ವಿಂಶತಿ ತತ್ವಾತ್ಮಕವಾಗಿಯೂ, ತೇಜೋಮಯವಾಗಿಯೂ, ಸುವರ್ಣಾತ್ಮಕವಾಗಿಯೂ ಇರುವ ಪಂಚಾಶತ್ಕೋಟಿ ಯೋಜನವಿಸ್ತಾರ ಔನ್ನತ್ಯವುಳ್ಳ ಬ್ರಹ್ಮಾಂಡ ಭೂಮಂಡಲ ಉಭಯಕ್ಷೀರಾಬ್ಧಿ ಘನೋದಕ ಕೂಡಿ ೯ ವಿಧದ ಸಮುದ್ರ ಸಪ್ತದ್ವೀಪ, ಮೇರುಮಂದರ, ಲೋಕಾಲೋಕ ಪರ್ವತ ಸುವರ್ಣ ಭೂಮಿ ಮೊದಲಾದುವುಗಳೇ ವಿಕೃತಾನಿತ್ಯ ಜಡಗಳು.

೩. ಈ ಬ್ರಹ್ಮಾಂಡದಲ್ಲಿನ ತಮಸ್ಸೇ ಮೊದಲಾದ ಲೋಕಗಳು ವೈಕೃತಾ ನಿತ್ಯ ಜಡಗಳು.

೩. ನಿತ್ಯಾನಿತ್ಯ ಜಡಗಳು ಮೂರು ಪ್ರಕಾರ:–

೧. ಪುರಾಣಾದಿಗಳು ಅರ್ಥತಾನಿತ್ಯವೂ ಶಬ್ದತಃ ಅನಿತ್ಯವು ಆಗಿರುತ್ತವೆ. ೨. ಮೂಲ ಪ್ರಕೃತಿಗತಾನಂತ ಪರಮಾಣುಗಳು ಕಾರಣತಃ ನಿತ್ಯವೂ ಕಾರ್ಯತಃ ಅನಿತ್ಯವೂ ಆಗಿರುತ್ತವೆ. ೩. ಕಾಲ, ಲವ, ತೃಟಿ ಮೊದಲಾದಂಥ ಅನಂತ ಸೂಕ್ಷ್ಮ ಕಾಲ ವಿಶೇಷಗಳು ಕಾರ್ಯರೂಪವಾದಂಥವುಗಳು ಅನಿತ್ಯವೂ ಇದಕ್ಕೆ ಉಪಾದಾನ ಕಾರಣವಾದಂಥ ಮಹಾಕಾಲ ಪ್ರವಾಹರೂಪವು ನಿತ್ಯವು ಆಗಿರುತ್ತವೆ. ಈ ಪ್ರಕಾರದಿಂದ ಜಡಗಳು, ನಿತ್ಯ, ಅನಿತ್ಯ, ನಿತ್ಯಾನಿತ್ಯವೆಂತ ತಿಳಿಯಬೇಕು. ಈ ಜಡಗಳು ಬೇರೆ ಬೇರೆ ಪ್ರಕಾರವಾಗಿ ಇರುವುದರಿಂದ ಜಡ ಜಡಕ್ಕೂ

ಸಹ ಭೇದವನ್ನು ನಿರ್ಧರಿಸಲೇಬೇಕು. ಉದಾಹರಣೆ :- ಅಗ್ನಿಯೂ ಮತ್ತು ಉದಕವೂ ಸಹ ಸ್ವಭಾವತಃ ಜಡಗಳೇ ಆದರೂ ಅಗ್ನಿಯ ಧರ್ಮವು ದಹಿಸತಕ್ಕದು – ಉದಕದ ಧರ್ಮವು ಶೈತ್ಯವಾದದ್ದು. ಆದ್ದರಿಂದ ಈ ಗುಣಗಳಿಂದ ಅಗ್ನಿಗೂ ಮತ್ತು ಉದಕಕ್ಕೂ ಸಹ ಪರಸ್ಪರ ಭಿನ್ನಗುಣಗಳಿಂದ ಭೇದವು ಸಿದ್ಧವಾಯಿತು. ಶ್ರೀಪರಮಾತ್ಮನಲ್ಲಿ ಇರತಕ್ಕಂಥ ಗುಣಗಳು ಈ ಜಡಗಳಲ್ಲಿ ಇಲ್ಲದ ಪ್ರಯುಕ್ತ ಜಡಕ್ಕೂ ಪರಮಾತ್ಮನಿಗೂ ಭೇದವು ಸಿದ್ಧವಾಯಿತು. ಈ ಪ್ರಕಾರ ಪಂಚಭೇದಜ್ಞಾನ ತಿಳಿದು ಗುಣಸಮೂಹಗಳು ಪರಮಾತ್ಮನಲ್ಲಿಯೇ ಇರುವ ಪ್ರಯುಕ್ತ ಅತಿಶಯ ದೃಢಭಕ್ತಿಯನ್ನು ಮಾಡಬೇಕು.

ಮೇಲ್ಕಂಡ ರೀತಿಯಿಂದ ಜೀವರು ಅಲ್ಪಜ್ಞರೆಂತಲೂ ಜಡಗಳು ಅಜ್ಞವೆಂತಲೂ, ಪರಮಾತ್ಮನು ಸರ್ವಜ್ಞನೆಂತಲೂ ತಿಳಿಯಬೇಕಾದ ಮುಖ್ಯ ವಿಷಯ.

(ಮುಂದುವರೆದುದು)

ಸಂಚಿಕೆ ೫ ಸಂಪುಟ ೫ ಅಂಗೀರಸ ಶ್ರಾವಣ ಆಗಸ್ಟ್ ೧೯೩೨

ಶ್ಲೋ॥ ನತಾದೃಶೀ ಪ್ರೀತಿರೀಡ್ಯಸ್ಯವಿಷ್ಣೋ ರ್ಗುಣೋತ್ಕರ್ಷ
ಜ್ಞಾತರಿ ಯಾದೃಶೀಸ್ಯಾತ್॥ ತತ್ಪ್ರೀಣನಾನ್ಮೋಕ್ಷ
ಮಾಪ್ನೋತಿ ಸರ್ವಸ್ತತೋ ವೇದಾಸ್ತತ್ಪರಾಃ ಸರ್ವಏವ॥

ಸರ್ವರೂ ಸ್ತುತಿಸುವದಕ್ಕೆ ಯೋಗ್ಯನಾದ ವಿಷ್ಣು ಪರಮಾತ್ಮನಿಗೆ, ತನ್ನ ಗುಣೋತ್ಕರ್ಷ ವನ್ನರಿತವನ ಮೇಲೆ, ಎಂಥಾ ಅಧಿಕವಾದ ಪ್ರೀತಿಯುಂಟಾಗುತ್ತದೆಯೋ, ಅಂಥಾ ಅಧಿಕವಾದ ಪ್ರೀತಿ ಬೇರೆ ಯಾವುದರಿಂದಲೂ ಉಂಟಾಗುವುದಿಲ್ಲ. ಆ ಪರಮಾತ್ಮನಿಗೆ, ತಮ್ಮ ತಮ್ಮ ಮೇಲೆ ಅಧಿಕವಾದ ಪ್ರೀತಿಯನ್ನುಂಟು ಮಾಡೋಣದರಿಂದ ಆಯಾಯ ಸರ್ವರೂ ಮೋಕ್ಷವನ್ನು ಪಡೆಯುವರು. ಸರ್ವರಿಗೂ, ಪರಮಾತ್ಮನ ಅಧಿಕವಾದ ಪ್ರೀತಿಯ ದ್ವಾರಾ ಮೋಕ್ಷವನ್ನು ಪಡೆಯಿಸುವ ಬಗೆಗೆ, ಪರಮಾತ್ಮನ ಗುಣೋತ್ಕರ್ಷವನ್ನು ವರ್ಣಿಸುತ್ತಿರುವ ಸಮಸ್ತ ವೇದಗಳು ಪರಮಾತ್ಮನನ್ನೇ ಪ್ರತಿಪಾದಿಸುವುದರಿಂದ ಪರಮಾತ್ಮನ ಪರವಾಗಿಯೇ ಇರುತ್ತಿವೆ. ಕಿಮಲಭ್ಯಂ ಭಗವತಿ। ಪ್ರಸನ್ನೇ ಶ್ರೀನಿಕೇತನೇ॥ ಎಂಬ ಸೌಪರ್ಣಶ್ರುತಿಯಾನುಸಾರವಾಗಿ, ಲಕ್ಷ್ಮೀನಿವಾಸನೂ, ಸಮಗ್ರೈಶ್ವರ್ಯಾದಿ ಷಡ್ಗುಣ ಸಂಪನ್ನನು ಆದ ಪರಮಾತ್ಮನೊಬ್ಬನು ಪ್ರಸನ್ನನಾದನೆಂದರೆ ಲಭ್ಯವಾಗದಿರುವುದು ಏನುಂಟು? ಬೇಕಾದ ಯೋಗ್ಯವಾದ ಸರ್ವವೂ ಲಭ್ಯವೇ ಸರಿ.

ಪ್ರಸಾದಾತ್ತ್ವಧಮಾದ್ವಿಷ್ಣೋಃ। ಸ್ವರ್ಗಲೋಕಃ ಪ್ರಕೀರ್ತಿತಃ॥
ಮಧ್ಯಮಾಜ್ಜನಲೋಕಾದಿ । ರುತ್ತಮಸ್ತೇವಮುಕ್ತಿದಃ॥

ಎಂಬ ಭಾಗವತಾನುಸಾರವಾಗಿ ವಿಷ್ಣು ಪರಮಾತ್ಮನ ಸ್ವಲ್ಪವಾದ ಪ್ರಸಾದದಿಂದ ಸ್ವರ್ಗಲೋಕವೂ, ಸ್ವಲ್ಪ ಹೆಚ್ಚಾದ ಪ್ರಸಾದದಿಂದ ಜನಲೋಕಾದಿ ಲೋಕಗಳೂ, ಅಧಿಕವಾದ ಪ್ರಸಾದದಿಂದ ಮೋಕ್ಷವೂ ದೊರೆಯುತ್ತದೆ. ಅಂಥಾ ಪರಮಾತ್ಮನ ಮಹಾತ್ಮೆಯು ಅನಂತವಾಗಿ ರೋಣದರಿಂದ ಅದನ್ನು ನಾವು ಸಂಪೂರ್ಣವಾಗಿ ತಿಳಿದುಕೊಳ್ಳಲು ಅಶಕ್ಯವಾಗಿದ್ದರೂ ನಮಗೆ ಇಷ್ಟ ಸಿದ್ಧಿಯಾಗಲಾರದೆಂದು ತಿಳಿಯಬಾರದು. ಹೇಗೆಂದರೆ ಸಾವಿರಾರು ಖಂಡುಗ ಅಕ್ಕಿ ಅನ್ನವನ್ನು ಸಂಪೂರ್ಣವಾಗಿ ಒಂದೇ ಸಲಕ್ಕೆ ಹೇಗೆ ಊಟಮಾಡಲು ಆಗದೆ ಪ್ರತಿದಿನವೂ ಒಂದು ಪಾವು ಅಕ್ಕಿ ಅನ್ನದಂತೆ ಊಟಮಾಡುತ್ತಾ ಬಂದರೆ ನಮ್ಮ ಜೀವಾವಧಿಯು ಪೂರ್ಣವಾಗುವುದರೊಳಗಾಗಿ ಖಂಡುಗ ಅಕ್ಕಿ ಅನ್ನವನ್ನು ಹೇಗೆ ಊಟಮಾಡಿರುತ್ತೇವೆಯೋ ಹಾಗೆಯೇ ಆ ಪರಮಾತ್ಮನ ಅನಂತಮಹಾತ್ಮೆಯನ್ನೂ ಸಹ ಪ್ರತಿದಿನವೂ ಸ್ವಲ್ಪ ಸ್ವಲ್ಪ ಶ್ರವಣ ಮನನಾದಿಗಳು ಮಾಡುತ್ತಾ ಬಂದರೆ ತೃಪ್ತಿಯುಂಟಾಗಿ ನಮ್ಮ ಇಷ್ಟ ಸಿದ್ಧಿಯು ನೆರವೇರುವುದು.

ಮೇಲ್ಕಂಡ ಕಾರಣಗಳಿಂದ "ಪಂಚಭೇದ" ಜ್ಞಾನವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಈ ಭೇದವನ್ನು ಸಮರ್ಥಿಸದಿದ್ದರೆ ಪೂಜ್ಯ–ಪೂಜಕಭಾವವೂ, ಸೇವ್ಯ–ಸೇವಕಭಾವೂ, ನಿಯಮ್ಯ–ನಿಯಾಮಕಭಾವೂ, ಪ್ರೇರ್ಯ–ಪ್ರೇರಕಭಾವವೂ, ಸ್ವಾಮಿತ್ವ– ಭೃತ್ಯತ್ವವೂ ಸಿದ್ಧಿಸಲಾರವು. ಆದ ಕಾರಣದಿಂದ ಶೃತ್ಯಾದಿ ಸಿದ್ಧವಾದ ಪಂಚಭೇದವು ಸಮರ್ಥಿಸಲ್ಪಟ್ಟಿರುತ್ತದೆ.

ಶೃ॥ ಪ್ರಪಂಚೋಯದಿ ವಿದ್ಯೇತ ನಿವರ್ತೇತ ನಸಂಶಯಃ॥

ಈ ಪಂಚಭೇದಗಳಿಗೆ ಯಾವಾಗ್ಯೂ ನಾಶವಿಲ್ಲದಿರೋಣದರಿಂದ ಇದಕ್ಕೆ ಉತ್ಪತ್ತಿಯೇ ಇಲ್ಲವೆಂದು ತಿಳಿಯಬೇಕು. ಅನೇಕ ಶ್ರುತಿಗಳಲ್ಲಿ ಪಂಚಭೇದವನ್ನು ಸಮರ್ಥಿಸಿ ಸತ್ಯತ್ವವನ್ನು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿರುತ್ತದೆ.

ಪಂಚಬೇಧ ಪ್ರಕರಣ ಸಂಪೂರ್ಣಂ

೫. ಹರಿಸರ್ವೋತ್ತಮ ಪ್ರಕರಣ

ಸಂಪಟ ೬ ಸಂಚಿಕೆ ೫ ಆಂಗೀರಸ ಶ್ರಾವಣ ಆಗಸ್ಟ್ ೧೯೩೨

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತತ್ತ್ವೋ
ಭೇದೋ ಜೀವಗಣಾಹರೇರನುಚರಾ ನೀಚೋಚ್ಚಭಾವಂಗತಾಃ॥
ಮುಕ್ತಿರ್ನೈಜ ಸುಖಾನುಭೂತಿ ರಮಲಾಭಕ್ತಿಶ್ಚ
ತತ್ಸಾಧನಂ। ಹ್ಯಕ್ಷಾದಿತ್ರಿತಯಂ ಪ್ರಮಾಣ ಮಖಿಳಾಮ್ನಾಯೈಕವೇದ್ಯೋ ಹರಿಃ॥

ಹೀಗೆ ಮೇಲ್ಕಂಡ ಶ್ಲೋಕದಿಂದ "ಹರಿಸರ್ವೋತ್ತಮತ್ವ"ವನ್ನು ನಿರೂಪಿಸಲ್ಪಡುತ್ತದೆ.

ಭಗವಂತನು ಸೃಜಿಸಿರುವ ಈ ಪ್ರಪಂಚದಲ್ಲಿ ಚೇತನವರ್ಗವು ಶ್ರೇಷ್ಠವೆಂಬುದು ಸರ್ವರಿಗೂ ಸಮ್ಮತವಾದ ವಿಷಯವು. ಭಗವಂತನ ಸೃಷ್ಟಿಯಲ್ಲಿ ಬಂದಿರುವ ಅಚೇತನ ವರ್ಗವು ಅಂದರೆ:- ಭೂಮಿಯು, ಅದರಲ್ಲಿರುವ ವೃಕ್ಷಾದಿಗಳು ಅವುಗಳ ಪುಷ್ಪ ಫಲಗಳು ಮೊದಲಾದುವುಗಳೆಲ್ಲವು ಒದಗಿಸಿಕೊಡುವ ಸುಖಗಳನ್ನನುಭವಿಸುವುದಕ್ಕೆ ಮುಖ್ಯಪಾತ್ರ ವಾಗಿರುವಂತೆ ಶ್ರೀಭಗವಂತನ ಸಂಕಲ್ಪಕ್ಕೆ ವಿಷಯವಂತರಾಗಿರುವದರಿಂದಲೇ ಇಂತಹ ಶ್ರೇಷ್ಠತೆಯು ಚೇತನವರ್ಗಕ್ಕೆ ಬಂದಿರುವುದು. ಈ ರೀತಿಯಿಂದ ಅತ್ಯಂತ ಶ್ರೇಷ್ಠತೆಯನ್ನು ದಯಪಾಲಿಸಿರುವ ಭಗವಂತನ ಕೃಪಾಳುತ್ವವನ್ನು ತಿಳಿದು ಆತನ ಮಹಾತ್ಮ್ಯವನ್ನು ಚೆನ್ನಾಗಿ ಅರಿತು, ಆತನನ್ನು ಭಜಿಸುತ್ತಾಬರುವ ಜನರುಗೆ ದುಃಖ ಲೇಶವೂ ಇಲ್ಲದೆ ಶಾಶ್ವತ ಸುಖವನ್ನೇ ಅನುಭವಿಸುವುದಕ್ಕೆ ಸಾಧನಗಳನ್ನು ಮಾಡುವ ಬುದ್ಧಿಯನ್ನು, ಇಚ್ಛೆಯನ್ನು ಪ್ರಯತ್ನವನ್ನು ಕೂಡ ಕೊಟ್ಟು ಭಗವಂತನು ರಕ್ಷಣೆಯನ್ನು ಮಾಡುವನೆಂದು ಸರ್ವರೂ ತಿಳಿಯಬೇಕು.

"ಹರಿಸರ್ವೋತ್ತಮತ್ವ"ವನ್ನು ಪ್ರತಿಪಾದಿಸಲು ಸಕಲ ಶಾಸ್ತ್ರವೂ ಪ್ರವರ್ತಿಸಿರುತ್ತದೆ. ಅವುಗಳಲ್ಲಿ ಮುಖ್ಯವಾದ ಕೆಲವು ಲಕ್ಷಣಗಳನ್ನು (ಅಸಾಧಾರಣ ಧರ್ಮವನ್ನು) ಉದಹರಿಸಲ್ಪಡುತ್ತವೆ. ಅವು ಯಾವವೆಂದರೆ :- ಪೂರ್ಣಾನಂದತ್ವ, ಸ್ವಾತಂತ್ರ್ಯ, ಸರ್ವಜ್ಞತ್ವ, ಜನ್ಮ (ಸೃಷ್ಟಿ), ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ, ಇವುಗಳ ಕರ್ತೃತ್ವ, ಅಂತರ್ಬಹಿರ್ವ್ಯಾಪ್ತತ್ವ, ಪುರುಷಸೂಕ್ತ ಪ್ರತಿಪಾದ್ಯತ್ವ, ನಿಖಿಲವೇದವೇದಾಂತ ಪ್ರತಿಪಾದ್ಯತ್ವ, ಪ್ರಣವಪ್ರತಿಪಾದ್ಯತ್ವ, ಸತ್ವಾದಿಗುಣರಾಹಿತ್ಯ, ಕರ್ಮಬಂಧರಾಹಿತ್ಯ, ಸತ್ಕರ್ಮಫಲಭೋಕ್ತೃತ್ವ, ಸರ್ವತ್ರಸಮತ್ವ, ಪ್ರತ್ಯೇಕಂಸರ್ವೇಂದ್ರಿಯ ಕಾರ್ಯಕಾರಿ

ವಿಲಕ್ಷಣೇಂದ್ರಿಯತ್ವ, ಮುಕ್ತಿಹೇತುಭೂತಜ್ಞಾನ ವಿಷಯತ್ವ, ಪರಮಾಕ್ಷರತ್ವ, ಅವ್ಯಕ್ತತ್ವ, ಅಚಿಂತ್ಯಶಕ್ತಿಮತ್ವ, ಇವೇ ಮುಂತಾದ ಅನೇಕ ಲಕ್ಷಣಗಳಿಂದ ಹರಿಸರ್ವೋತ್ತಮತ್ವವನ್ನು ನಿರ್ಣಯಮಾಡಿರುವರು. ನಾವು ಯಾವ ವಸ್ತುವಿಗೆ ಲಕ್ಷಣವನ್ನು ಹೇಳಬೇಕೋ ಅದು ಲಕ್ಷ್ಯವೆನಿಸುವುದು. ಅಂದರೆ :- ಪರಮಾತ್ಮನಿಗೆ ಸರ್ವೋತ್ತಮತ್ವ ಲಕ್ಷಣ ಹೇಳಬೇಕಾಗಿರುವುದರಿಂದ ಆ ಪರಮಾತ್ಮನೇ ಲಕ್ಷ್ಯನು. ಲಕ್ಷ್ಯಭಿನ್ನವಾದ ಯಾವ ವಸ್ತುವಿನಲ್ಲಿಯೂ ಇಲ್ಲದೆ ಲಕ್ಷ್ಯ ವಸ್ತುವಿನಲ್ಲಿ ಮಾತ್ರ ಇರುವ ಧರ್ಮವು ಲಕ್ಷಣವೆನಿಸುವುದು. ಹೇಗೆಂದರೆ :- ಗೋವಿಗೆ ಗಂಗದೊಗಲೇ (ಕುತ್ತಿಗೆಯ ಕೆಳಭಾಗದಲ್ಲಿ ಜೋಲಾಡುವ ತೊಗಲು) ಲಕ್ಷಣವು. ಈ ಗಂಗದೊಗೆಲೆಂಬ ಲಕ್ಷಣವು ಗೋಭಿನ್ನವಾದ ಮತ್ಯಾವ ಪ್ರಾಣಿಗಳಲ್ಲಿಯೂ ಇರುವುದಿಲ್ಲ. ಅಂದರೆ ಗೋವಿಗೆ ಮಾತ್ರ ಇದ್ದಹಾಗಾಯ್ತು. ಆದ್ದರಿಂದ ಈ ಲಕ್ಷಣವು ಗೋವಿಗೆ ಹೇಗೆ ಅಸಾಧಾರಣ ಧರ್ಮವೋ ಹಾಗೆಯೇ ಮೇಲ್ಕಂಡ ಪೂರ್ಣಾನಂದತ್ವಾದಿ ಲಕ್ಷಣಗಳು ಪರಮಾತ್ಮನಿಗಿಂತಲೂ ವ್ಯತಿರಿಕ್ತವಾದ ಬ್ರಹ್ಮಾದಿಗಳಲ್ಲಿ ಇಲ್ಲದಿರುವ ಪ್ರಯುಕ್ತ ಶ್ರೀಹರಿಯೊಬ್ಬನಲ್ಲಯೇ ಈ ಲಕ್ಷಣಗಳು ಇರುವ ಪ್ರಯುಕ್ತ ಆತನೇ ಸರ್ವೋತ್ತಮನೆಂದು ನಿರ್ಧರಿಸಲ್ಪಟ್ಟಿತು. ಇನ್ನು ಮೇಲ್ಕಂಡ ಲಕ್ಷಣಗಳ ಅರ್ಥವನ್ನು ನಿರೂಪಿಸಲ್ಪಡುತ್ತದೆ.

೧. **ಪೂರ್ಣಾನಂದತ್ವ**:- ಅಂದರೆ, ಸುಖಾರ್ಥವಾದ ಧನ, ಕನಕ, ವಸ್ತ್ರವಾಹನಾದಿ ಸರ್ವ ಭೋಗ್ಯದ್ರವ್ಯಗಳಿಂದ ಪೂರ್ಣನಾಗಿ ನಿರಪೇಕ್ಷನಾದುದರಿಂದ "ಪೂರ್ಣಾನಂದತ್ವ" ಲಕ್ಷಣದಿಂದ ಹರಿಯು "ಸರ್ವೋತ್ತಮನೆನಿಸಿದನು.

೨. **"ಸ್ವಾತಂತ್ರ್ಯತ್ವ"**:- ಮಾಂವಿದ್ಧ್ಯಕರ್ತಾರಮವ್ಯಯಂ ॥ ಎಂಬ ವಾಕ್ಯದಿಂದ ಬ್ರಾಹ್ಮಣಾದಿ ಚತುರ್ವರ್ಣಕ್ಕೂ ತಾನೇ ಕರ್ತನೆಂದೂ ತನಗೆ ಬೇರೊಬ್ಬ ಕರ್ತನಿಲ್ಲವೆಂದೂ; ತನ್ನಿಂದಲೇ ಸಕಲ ಪ್ರಾಣಿಗಳೂ ತಮ್ಮ ತಮ್ಮ ವ್ಯಾಪಾರದಲ್ಲಿ ಪ್ರವೃತ್ತವಾಗುತ್ತದೆಯೆಂತಲೂ "ನಿಯತೇ ತ್ವತ್ಕ್ರಿಯತೇ ಕಿಂಚನಾರೇ" ಎಂಬ ಶೃತಿಯಿಂದ ತಾನೇ ಸ್ವತಂತ್ರನಾದ್ದರಿಂದ ಶ್ರೀಹರಿಗೆ ಸ್ವಾತಂತ್ರ್ಯ ಲಕ್ಷಣದಿಂದ ಸರ್ವೋತ್ತಮತ್ವವು ಬಂತು.

೩. **"ಸರ್ವಜ್ಞತ್ವ"**:- ಸರ್ವಾರ್ಥವಿಷಯಕ ಜ್ಞಾನಕ್ಕೆ ಸರ್ವಜ್ಞತ್ವ ಎಂತ ಅರ್ಥ. ಅಂದರೆ ತನ್ನ ವಿಷಯಕ ಜ್ಞಾನವೂ ಮತ್ತು ತನಗಿಂತ ಭಿನ್ನವಾದ ನಿಖಿಲಜಗತ್ತಿನಲ್ಲಿರುವ ಸರ್ವ ಪದಾರ್ಥವಿಷಯಕ ಜ್ಞಾನವೂ ಅಂತರ್ಭಾವವಾಗಿರೋಣದರಿಂದಲೂ, ತಾನು ಪೂರ್ವದಲ್ಲಿದ್ದ, ಈಗ ಇರುವ, ಮುಂದೆ ಬರುವ ಸಕಲ ಪದಾರ್ಥಗಳನ್ನೂ ತಿಳಿದಿರುವನಾದ್ದರಿಂದಲೂ, ವೇದಾಂತ ಸೂತ್ರಗಳನ್ನು ರಚಿಸಿದವನೂ ಮತ್ತು ನಿಖಿಲ ವೇದಗಳನ್ನೂ ಸಾಕಲ್ಯೇನ ತಿಳಿಯುವವನಾದ್ದರಿಂದಲೂ ಶ್ರೀಹರಿಗೆ "ಸರ್ವಜ್ಞತ್ವ"ಲಕ್ಷಣದಿಂದ "ಸರ್ವೋತ್ತಮತ್ವವು" ಬಂತು.

೪. "ಸೃಷ್ಟಿಕರ್ತೃತ್ವ":- ತಾನೇ ಸರ್ವಜಗತ್ತಿಗೂ ಸೃಷ್ಟಿಕರ್ತನಾಗಿಯೂ, ಉತ್ಪಾದಕನಾಗಿಯೂ, ಸಾತ್ವಿಕ, ರಾಜಸ, ತಾಮಸಗಳೆಂಬ ತ್ರಿವಿಧ ಪದಾರ್ಥಗಳನ್ನು ಸೃಷ್ಟಿ ಮಾಡಿರುವುದರಿಂದಲೂ, ನಿಖಿಲ ಜಗತ್ತಿಗೂ ತಾನೇ ತಂದೆಯಾಗಿರುವುದರಿಂದಲೂ, ಚತುರ್ವರ್ಣ ಸಮೂಹವನ್ನು ತಾನೇ ಸೃಷ್ಟಿ ಮಾಡಿರುವುದರಿಂದಲೂ, ತಾನೇ ಸಮಸ್ತ ದೇವತೆಗಳಿಗೂ ಮಹರ್ಷಿಗಳಿಗೂ ಕಾರಣನಾಗಿರುವುದರಿಂದಲೂ, ಪ್ರಳಯದಲ್ಲಿ ನಷ್ಟವಾದ ಜಗತ್ತನ್ನು ಪುನಃ ಕಲ್ಪದ ಆದಿಯಲ್ಲಿ ಸೃಷ್ಟಿ ಮಾಡುವುದರಿಂದಲೂ, ಅಂದರೆ ಅಧಿಪತಿಯಾದ ತನ್ನಿಂದ ಪ್ರೇರಿತನಾಗಿ ಚೇತನ ಪ್ರಕೃತಿಯು ಚೇತನಾಚೇತನಾತ್ಮಕವಾದ ಜಗತ್ತನ್ನು ಸೃಷ್ಟಿಸುತ್ತಾನೆ. ಮತ್ತು ತನ್ನ ಅಧೀನವಾದ ಪ್ರಕೃತಿಯನ್ನು ಕಾರಣತ್ವೇನ ಸ್ವೀಕರಿಸಿ ಪುನಃ ಪುನಃ ಸಕಲ ಚೇತನಾಚೇತನರೂಪ ಪ್ರಪಂಚವನ್ನು ಸೃಷ್ಟಿಸುತ್ತಾನಾದ್ದರಿಂದ ತಾನೇ ಸ್ವತಂತ್ರ ಸೃಷ್ಟಿಕರ್ತನು. ಮತ್ತು ತಾನು ದೇಹೋತ್ಪತ್ತಿರಹಿತನಾದರೂ, ನಾಶರಹಿತವಾದ ಸ್ವರೂಪ ಮತ್ತು ದೇಹವುಳ್ಳವನಾದರೂ, ಸರ್ವ ಪ್ರಾಣಿಗಳಿಗೂ ನಿಯಾಮಕನಾಗಿದ್ದರೂ ಕೂಡ ತನ್ನ ಇಚ್ಛೆಯಿಂದ ತನ್ನ ಅಧೀನವಾದ ವಸುದೇವಾದಿಗಳನ್ನು ನರಸಿಂಹಾವತಾರದಲ್ಲಿ ಸ್ತಂಭಾದಿಗಳಂತೆ ನಿಮಿತ್ತ ಮಾಡಿಕೊಂಡು ಆವಿರ್ಭವಿಸುತ್ತಾನೆ. ಹೀಗೆ ಲೋಕವಿಲಕ್ಷಣವಾದ ಆ ಪರಮಾತ್ಮನ ಅವತಾರ ಮತ್ತು ಕರ್ಮಗಳನ್ನು ತಿಳಿದವರು ಮುಕ್ತರಾಗುತ್ತಾರೆ. ಈ ರೀತಿಯಲ್ಲಿ ಪರಮಾತ್ಮನು ತಾನೇ ನಿಖಿಲ ಜಗತ್ತಿಗೂ ಸ್ಥೂಲಸೂಕ್ಷ್ಮಾದಿ ಸರ್ವ ಸೃಷ್ಟಿಗಳನ್ನೂ ಮಾಡುವನೆಂದೂ ತನಗೆ ಸೃಷ್ಟಿಯು ಯಾರಿಂದಲೂ ಯಾವ ಕಾರಣದಿಂದಲೂ ಇಲ್ಲವೆಂದು ಹೇಳಿರುವುದರಿಂದಲೂ ಸ್ವಾತಂತ್ರ್ಯೇಣ ಸರ್ವ ಸೃಷ್ಟಿ ಕರ್ತೃತ್ವ ರೂಪ ಲಕ್ಷಣವು ಆ ಪರಮಾತ್ಮನಿಗೆ ಪ್ರಾಪ್ತವಾದ್ದರಿಂದ ಸರ್ವೋತ್ತಮತ್ವವನ್ನು ಆತನಲ್ಲೇ ನಿರ್ಧರಿಸಬೇಕಾಯಿತು.

೫. "ಸ್ಥಿತಿಕರ್ತೃತ್ವ":- ನಿಖಿಲ ಜಗತ್ತನ್ನೂ ರಕ್ಷಿಸುವ ಸಾಮರ್ಥ್ಯವು ಸ್ವತಂತ್ರವಾಗಿ ಬ್ರಹ್ಮಾದಿಗಳಿಗೆ ಯಾರಿಗೂ ಇಲ್ಲದಿರುವುದರಿಂದಲೂ ಈ ಸಾಮರ್ಥ್ಯವು ಶ್ರೀಮಹಾ ವಿಷ್ಣುವಿಗೆ ಒಬ್ಬನಿಗೆ ಮಾತ್ರ ಇರುವುದರಿಂದ ಈತನೇ ಸರ್ವೋತ್ತಮನು. ಈ ನಿಖಿಲ ಜಗದ್ರಕ್ಷಣೆಯು ಮೂರು ವಿಧವಾಗಿರುತ್ತದೆ. ೧. ಅಂತರ್ಬಹಿಃ ಚರಾಚರ ಜಗತ್ತನ್ನು ಅನುಪ್ರವೇಶಿಸಿ ಅದರ ಸ್ವರೂಪವು ನಾಶ ಹೊಂದದಂತೆ ಆಧಾರನಾಗಿರುವುದು. ೨. ಚೇತನಾಚೇತನಾತ್ಮಕವಾದ ನಾನಾವ್ಯಕ್ತಿಗಳಲ್ಲಿ ಅಂತರ್ಗತನಾಗಿ ಜೀವರುಗಳಿಗೆ ಆಹಾರಾದಿಪ್ರದನಾಗಿ ಪಾಲಿಸುವುದು. ೩. ಸಾಕ್ಷಾತ್ತಾಗಿ ಅವತಾರಗಳನ್ನು ಮಾಡಿ ತಂದೆಯು ಮಗುವನ್ನು ರಕ್ಷಿಸುವಂತೆ ಭಕ್ತರುಗಳನ್ನು ರಕ್ಷಿಸುವುದು. ಈ ಪ್ರಕಾರವಾಗಿ ಜಗತ್ತನ್ನು ತಾನು ಪಾಲನ ಮಾಡುವುದರಿಂದಲೂ ಈ ಚರಾಚರಾತ್ಮಕವಾದ ಸರ್ವ ಪ್ರಪಂಚವು ಮಣಿಗಳನ್ನು ಪೋಣಿಸಿರುವ ದಾರದ ಆಧಾರದಿಂದ ಅವು ಹೇಗೆ ನಿಂತಿರುತ್ತವೋ ಹಾಗೆಯೇ ಪ್ರಪಂಚವು ಪರಮಾತ್ಮನ ಆಧಾರದಿಂದ ನಿಂತಿರುತ್ತದೆ. ಆಶ್ರಯ ತಪ್ಪಿದಲ್ಲಿ, ಮಣಿಗಳು ಹೇಗೆ ದಾರ ಕಿತ್ತು ಹೋದರೆ ಪುಡಿಪುಡಿಯಾಗುವುದೋ

ಹಾಗೆಯೇ ಪ್ರಪಂಚವೂ ನಾಶವಾಗಿ ಹೋಗುವುದು. ಹೀಗೆಯೇ ಪರಮಾತ್ಮನು ನಿಖಿಲ ಜಗತ್ತಿಗೂ ಧಾರಣ ಪೋಷಣ ಕರ್ತನಾದುದರಿಂದ ಜಗತ್ತಿಗಿಂತ ತಾನೇ ಉತ್ತಮನೆನಿಸಿಕೊಂಡು, ತನ್ನಿಂದ ಭಿನ್ನರಾದವರಿಗೆ ಇರುವ ಲೋಕಧಾರಕತ್ವ ಶಕ್ತಿಯು ತನ್ನ ಅಧೀನವಾದ್ದರಿಂದಲೂ ತನಗೆ ಮತ್ತೊಬ್ಬರ ಆಧಾರವಿಲ್ಲದಿರುವುದರಿಂದಲೂ "ಸ್ಥಿತಿಕರ್ತೃತ್ವ" ಲಕ್ಷಣದಿಂದ ಶ್ರೀಹರಿಯೇ ಸರ್ವೋತ್ತಮನೆನಿಸಿಕೊಂಡನು.

೬. **"ಸಂಹಾರ ಕರ್ತೃತ್ವ":-** ಸಕಲ ಪ್ರಪಂಚಕ್ಕೂ ತಾನೇ ಹೇಗೆ ಸೃಷ್ಟಿ ಮತ್ತು ಸ್ಥಿತಿಕರ್ತನೋ ಹಾಗೆಯೇ ಶ್ರೀಹರಿಯು ಸಂಹಾರಕರ್ತನು. ಅಂದರೆ ಬ್ರಹ್ಮರುದ್ರೇಂದ್ರಾದಿ ಸಮಸ್ತ ಚೇತನ ವರ್ಗಕ್ಕೂ ಮತ್ತು ಪೃಥಿವ್ಯಾಧಿ ಅವ್ಯಕ್ತಾಂತವಾದ ಅಚೇತನ ತತ್ವಗಳಿಗೂ ಪ್ರಳಯಕಾಲದಲ್ಲಿ ಸ್ವಾತಂತ್ರೇಣ ಸಂಹಾರ ಮಾಡಿ ತನ್ನ ಉದರದಲ್ಲಿ ತಾರತಮ್ಯವಾಗಿ ಇಟ್ಟುಕೊಂಡು ವಟಪತ್ರಶಾಯಿಯಾಗಿ ತಾನೇ ಮಲಗುವವನಾದ್ದರಿಂದ ಶ್ರೀಹರಿಯು ಜಗತ್ತಿಗಿಂತಲೂ ಉತ್ತಮನಾದನು. ಮತ್ತು ಮಹಾ ಪ್ರಳಯಕಾಲವು ಒದಗಿದಾಗ ಸಕಲ ಕಾರ್ಯ ಪ್ರಪಂಚವೂ ಅವ್ಯಕ್ತನಾಮಕ ಪರಮಾತ್ಮನಲ್ಲಿಯೇ ಲೀನವಾಗುವುದರಿಂದಲೂ ಚರಾಚರ ಜಗತ್ತೂ ತನ್ನ ಅಧೀನವಾದ ಪ್ರಕೃತಿಯಲ್ಲಿ ಕಲ್ಪಾಂತದಲ್ಲಿ ಲಯ ಹೊಂದುವುದರಿಂದಲೂ, ತಾನೇ ಸಂಹಾರ ಮಾಡಿ ಸೂಕ್ಷ್ಮರೂಪೇಣ ಮೂಲ ಪ್ರಕೃತಿಯಲ್ಲಿ ಸೇರಿಸುವನಾದ್ದರಿಂದ "ಸಂಹಾರಕರ್ತೃತ್ವ" ಲಕ್ಷಣದಿಂದ "ಶ್ರೀಹರಿಯೇ ಸರ್ವೋತ್ತಮ" ನೆಂಬುವುದು ನಿರೂಪಿಸಲ್ಪಟ್ಟಿತು.

೭. **"ನಿಯಮನ ಕರ್ತೃತ್ವ":-** ಚೇತನಾಚೇತನಾತ್ಮಕವಾದ ಸಕಲ ಜಗತ್ತನ್ನೂ ಸ್ವತಂತ್ರವಾಗಿ ಅವುಗಳ ವ್ಯಾಪಾರಗಳಲ್ಲಿ ಪ್ರೇರಿಸುವ ಕಾರ್ಯವು ಶ್ರೀಹರಿ ಒಬ್ಬನಿಗೇ ಇರುವುದು. ಅಂದರೆ ಸರ್ವ ನಿಯಾಮಕನಾದ ತಾನು ಶರೀರಯುಕ್ತರಾದ ಸಕಲ ಪ್ರಾಣಿಗಳನ್ನೂ ತನ್ನ ಸ್ವೇಚ್ಛೆಯಿಂದ ನಾನಾಪ್ರಕಾರವಾದ ಕರ್ಮಗಳಲ್ಲಿ ಪ್ರೇರಿಸುವವನಾಗಿ ಸರ್ವ ಪ್ರಾಣಿಗಳ ಹೃದಯದಲ್ಲಿ ಇರುವುದರಿಂದ "ನಿಯಮನ ಕರ್ತೃತ್ವ" ಲಕ್ಷಣದಿಂದ ಶ್ರೀಹರಿಗೇನೇ ಸರ್ವೋತ್ತಮತ್ವವು ಸಿದ್ಧಿಸಿತು.

೮-೯. **"ಜ್ಞಾನ ಮತ್ತು ಅಜ್ಞಾನ ಪ್ರದತ್ವ":-** ಈ ನಿಖಿಲ ಜಗತ್ತಿಗೂ ಜ್ಞಾನ ಮತ್ತು ಅಜ್ಞಾನ ಇವೇ ಮೊದಲಾದ ಸಕಲ ಮನೋಧರ್ಮಗಳನ್ನು ಸ್ವಾತಂತ್ರ್ಯದಿಂದ ಪ್ರೇರಿಸುವ ಸಾಮರ್ಥ್ಯವು ಶ್ರೀಹರಿಗೇ ಹೊರ್ತು ಇತರರಿಗಿಲ್ಲ. ಆದ್ದರಿಂದ ಬ್ರಹ್ಮರುದ್ರಾದಿ ಸಕಲ ದೇವತೆಗಳಿಗೂ ಜ್ಞಾನಪ್ರದನು ಶ್ರೀಹರಿಯು. ಆದರೆ ಶ್ರೀಹರಿಯ ಜ್ಞಾನಕ್ಕೆ ನಿಯಾಮಕರು ಮತ್ತೊಬ್ಬರಿಲ್ಲ. ತಾನು ಸ್ವತಃ ಸರ್ವಜ್ಞನು. ಶ್ರೀಹರಿಯ ಅನುಗ್ರಹದಿಂದಲೇನೆ ಬ್ರಹ್ಮಾದಿಗಳು ಆತನನ್ನು ತಿಳಿಯುವುದಕ್ಕೆ ಸಮರ್ಥರಾಗುವರು. ಯಾವ ಯಾವನು ಯಾವ ಯಾವ

ದೇವತೆಗಳಲ್ಲಿ ಭಕ್ತಿಯುಳ್ಳವನಾಗಿ ಶ್ರದ್ಧೆಯಿಂದ ಪೂಜಿಸಬೇಕೆಂದು ಅಪೇಕ್ಷಿಸುತ್ತಾನೋ ಅವರವರಿಗೆ ತಾನು ಆ ಭಕ್ತಿಯನ್ನು ದೃಢವಾಗುವಂತೆ ಮಾಡುತ್ತಾನೆ. ಇಂಥಾ ಪುರಾತನವಾದ ಜನನಮರಣ ರೂಪವಾದ ಸಂಸಾರ ಪ್ರವಾಹವು ಯಾವಾತನಿಂದ ಉಂಟಾಯಿತೋ ಅಂಥಾ ಪುರಾತನವಾದ ಪರಮಾತ್ಮನನ್ನೇ ಶರಣು ಹೊಂದಬೇಕು. ಇಂಥಾ ಪರಾಪರತತ್ವಜ್ಞಾನವೂ ಆ ಪರಮಾತ್ಮನ ಅನುಗ್ರಹದಿಂದಲೇ ಬರಬೇಕಾಗಿರುತ್ತದೆ. ಆದ್ದರಿಂದ ಶ್ರೀಹರಿಯ ಸ್ಮರಣೆಯನ್ನೂ, ಜ್ಞಾನವನ್ನೂ, ಮತ್ತು ವಿಪರ್ಯಾಯ ಜ್ಞಾನವನ್ನೂ ಸಹ ಕೊಡುವವನಾದ್ದರಿಂದ "ಜ್ಞಾನಾಜ್ಞಾನಪ್ರದತ್ವ" ಲಕ್ಷಣದಿಂದ ಸರ್ವೋತ್ತಮನೆನಿಸಿಕೊಂಡನು.

೧೦-೧೧ **ಬಂಧ-ಮೋಕ್ಷಪ್ರದತ್ವ** :- ಬದ್ಧರನ್ನು ಬಿಡುಗಡೆ ಮಾಡುವವನು ಬದ್ಧರಿಗಿಂತ ಉತ್ತಮನು ಎಂಬುದು ಲೋಕಪ್ರಸಿದ್ಧವಾಗಿರುವುದು ಅಂದರೆ ಯಾರಿಗೆ ಯಾರು ಬಂಧಕನೋ ಅವನು ಅವರಿಗಿಂತ ಉತ್ತಮನು. ಈ ಬಂಧನವನ್ನು ಬಿಡಿಸುವ ಲಕ್ಷಣವು ಶ್ರೀಹರಿಯಲ್ಲಿ ಇರೋಣದರಿಂದ ಸರ್ವೋತ್ತಮತ್ವವು ಸಿದ್ಧಿಯಾಯಿತು. ಯಾರು ಶ್ರೀಹರಿಯನ್ನೇ ಆಶ್ರಯಿಸಿ ಕೊಂಡಿರುತ್ತಾರೆಯೋ ಅವರು ಪ್ರಕೃತಿಬಂಧನವನ್ನು ದಾಟುತ್ತಾರೆ. ಅಂದರೆ ಪ್ರಕೃತಿಬಂಧ ನಿವೃತ್ತಿರೂಪವು ಆತನಿಂದಲೇ ಆಗುತ್ತದೆ. ಆದ್ದರಿಂದ ಆತನ ಪ್ರೀತ್ಯರ್ಥವಾಗಿ ವಿಹಿತಕರ್ಮಗಳನ್ನು ಮಾಡುವವನಾಗಿ ಆತನೇ ಸರ್ವೋತ್ತನೆಂಬ ಜ್ಞಾನವುಳ್ಳವನಾಗಿ ಆತನಲ್ಲೇ ಭಕ್ತಿಯುಳ್ಳವನಾಗಿ, ವಿಷಯುಗಳಲ್ಲಿ ಸ್ನೇಹವರ್ಜಿತನಾಗಿ ಸಕಲ ಸಜ್ಜನರಲ್ಲಿಯೂ ವಿರೋಧರಹಿತನಾಗಿರುವವನು ಪರಮಾತ್ಮನನ್ನು ಹೊಂದುತ್ತಾನೆ (ಮುಕ್ತನಾಗುತ್ತಾನೆ) ಹೊಂದುವುದು ಅಂದರೆ ಅವನ ನಿತ್ಯವಾದ ಲೋಕಗಳಲ್ಲಿ ಅವನ ಪೂರ್ಣಾನುಗ್ರಹದಿಂದ ವಾಸಮಾಡುವುದೇ ಮುಕ್ತಿಯು. ಯಾರು ಶ್ರೀಹರಿಯಲ್ಲಿಯೇ ಚಿತ್ತವುಳ್ಳವರಾಗುತ್ತಾರೆಯೋ ಅವರೇ ಪ್ರಕೃತಿ, ಅವಿದ್ಯಾದಿಕೃತ ಸರ್ವದುಃಖಗಳನ್ನೂ ಆತನ ಅನುಗ್ರಹದಿಂದ ದಾಟುತ್ತಾರೆ. ಮತ್ತು ಸರ್ವಧರ್ಮ ಫಲಗಳನ್ನೂ ಆತನಲ್ಲಿ ಸಮರ್ಪಿಸಿ ಸರ್ವ ಅವೈಷ್ಣವ ಧರ್ಮಗಳನ್ನು ಪರಿತ್ಯಾಗ ಮಾಡಿ ಅಂದರೆ ಆತನು ಶರಣಾಗತನಾಗಿ ಆತನನ್ನೇ ಸರ್ವೋತ್ತಮನೆಂದು ತಿಳಿದರೆ ಆತನು ಅಂಥವನನ್ನು ಸರ್ವಪಾಪಗಳಿಂದಲೂ ಬಿಡಿಸಿ ದುಃಖವಾಗದಂತೆ ಸಂಸಾರ ಬಂಧನದಿಂದ ಮುಕ್ತನನ್ನಾಗಿ ಮಾಡುತ್ತಾನೆ. ಈ ರೀತಿ ಬಂಧ ಕರ್ತೃತ್ವವೂ ಮೋಕ್ಷದಾನ ಸಾಮರ್ಥ್ಯವು ಶ್ರೀಹರಿ ಒಬ್ಬನಿಗೇ ಸಿದ್ಧಿಸುವುದು. ಆದ್ದರಿಂದ ದೇವತೆಗಳ ಸೇವೆಯಿಂದ ಆಗುವ ಫಲಪ್ರಾಪ್ತಿಯು ಅತ್ಯಲ್ಪವೂ ಮತ್ತು ಅಶಾಶ್ವತವೂ ಆದದ್ದು. ಶ್ರೀಹರಿಯ ಸೇವೆಯಿಂದ ಆಗುವ ಫಲವೇ ಸ್ಥಿರವಾದದ್ದು ಮತ್ತು ನಿರವಧಿಕವಾದದ್ದು.

(ಮುದುವರೆದುದು)

ಆದಕಾರಣದಿಂದ "ಬಂಧ-ಮೋಕ್ಷಪ್ರದತ್ವ" ಲಕ್ಷಣವು ಶ್ರೀಹರಿ ಒಬ್ಬನಲ್ಲೇ ಇರುವುದರಿಂದ ಅವನು ಸರ್ವೋತ್ತಮನು ಎನಿಸಿಕೊಂಡನು.

೧೨. **"ಅಂತರ್ಬಹಿರ್ವ್ಯಾಪ್ತತ್ವ":-** ಶ್ರೀಹರಿಯ ಸರ್ವತ್ರ ವ್ಯಾಪ್ತತ್ವವನ್ನು ತಿಳಿಯುವ ಮಹಾತ್ಮನು ಅತಿ ದುರ್ಲಭನು. "ಸರ್ವಂಖಲ್ವಿದಂಬ್ರಹ್ಮ" ಎಂಬ ಶೃತಿಯಿಂದ ಶ್ರೀಹರಿಯು ಸರ್ವವನ್ನು ವ್ಯಾಪಿಸಿಕೊಂಡಿರುವುದರಿಂದ ತಾನೇ ಸರ್ವವೂ ಎನಿಸಿಕೊಳ್ಳುತ್ತಾನೆ. ಚರಾಚರಾತ್ಮಕವಾದ ಈ ಸರ್ವ ಪ್ರಪಂಚವೂ ಸೂಕ್ಷ್ಮರೂಪಿಯಾದ ಆತನಿಂದ ವ್ಯಾಪ್ತವಾಗಿರುತ್ತದೆ. ತಾನು ಸರ್ವತ್ರ ವ್ಯಾಪ್ತನಾಗಿ ಸರ್ವದೇಹಿಗಳ ಅಂತಃಕರಣದಲ್ಲಯೂ ಸ್ಥಿತನಾಗಿರುತ್ತಾನೆ. ಮತ್ತು ತಾನು ಈ ಪ್ರಮಾಣಪ್ರಮಿತವಾದ ಸರ್ವ ಜಗತ್ತನ್ನೂ ತನ್ನ ಅನಂತಾಂಶಗಳಲ್ಲಿ ಏಕಾಂಶದಿಂದಲೇ ವ್ಯಾಪಿಸಿಕೊಂಡಿರುತ್ತಾನೆ. ಆತನ ವ್ಯಾಪ್ತಿಯ ಆದಿಯನ್ನೂ, ಮಧ್ಯವನ್ನೂ ಮತ್ತು ಅಂತವನ್ನೂ ಯಾರೂ ತಿಳಿಯಲಾರರು:- ಅಂದರೆ ಆತನು ಅಪರಿಚ್ಛಿನ್ನ ವ್ಯಾಪ್ತಿಯುಳ್ಳವನೆಂದರ್ಥವು. ಇಂಥಾ ಸರ್ವಗತತ್ವವು, ಅಪರಿಚ್ಛಿನ್ನವ್ಯಾಪ್ತಿಯೂ ಬ್ರಹ್ಮಾದಿ ದೇವತೆಗಳಿಗೆ ಇರುವುದಿಲ್ಲ. ಶ್ರೀಹರಿಯಿಂದ ಸರ್ವವೂ ಪ್ರವರ್ತಿಸುತ್ತದೆಯಾದ್ದರಿಂದ ಸ್ವಾತಂತ್ರ್ಯೇಣ ಸರ್ವತ್ರವ್ಯಾಪ್ತನಾಗಿರುವನು ತಾನೊಬ್ಬನೇ ಆದ್ದರಿಂದ ಆತನೇ ಸರ್ವೋತ್ತಮನು. ಇಂಥಾ ಸರ್ವಗತನಾದ ಪರಮಾತ್ಮನಿಗೆ ನಾನಾ ಪದಾರ್ಥಗಳ ಸಂಬಂಧದಿಂದ ಉಂಟಾಗುವ ಗುಣದೋಷ ಲೇಪವು ಇರುವುದಿಲ್ಲ. ಶ್ರೀಹರಿಯು ದೇಹಿಗಳ ಶರೀರದಲ್ಲೇ ಇದ್ದರೂ ಫಲಾಪೇಕ್ಷೆಯಿಂದ ಕರ್ಮವನ್ನು ಮಾಡುವುದಿಲ್ಲ. ಜೀವಕೃತ ಕರ್ಮದ ಲೇಪವೂ ಆತನಿಗಿಲ್ಲ. ಜೀವದೇಹದಲ್ಲಿರುವ ದೋಷಗಳ ಲೇಪವೂ ಆತನಿಗಿಲ್ಲ. ಆದ್ದರಿಂದ ಶ್ರೀಹರಿಯು ಸುಖ ದುಃಖಾದಿಗಳನ್ನು ಹೊಂದುವುದಿಲ್ಲ. ಈ ರೀತಿ "ಅಂತರ್ಬಹಿವ್ಯಾಪ್ತತ್ವ" ಲಕ್ಷಣವು ಶ್ರೀಹರಿ ಒಬ್ಬನಲ್ಲೇ ಇರುವುದರಿಂದ ಸರ್ವೋತ್ತಮನೆನಿಸಿಕೊಂಡನು.

೧೩. **"ಪುರುಷಸೂಕ್ತ ಪ್ರತಿಪಾದ್ಯತ್ವ":-** ಪುರುಷಸೂಕ್ತ ಪ್ರತಿಪಾದ್ಯವಾದ ಭಗವದ್ರೂಪವು ಅಂದರೆ " ಸಹಸ್ರಶೀರ್ಷಾಪುರುಷಃ ಸಹಸ್ರಾಕ್ಷಸ್ಸಹಸ್ರಪಾತ್" ಎಂಬ ವೇದದಿಂದ ಅನಂತಾನಂತ ಅವಯವವುಳ್ಳವನಾದ್ದರಿಂದ "ಪುರುಷಸೂಕ್ತಪ್ರತಿಪಾದ್ಯತ್ವ" ಲಕ್ಷಣದಿಂದ ಶ್ರೀಹರಿಯು ಸರ್ವೋತ್ತಮನೆನಿಸಿಕೊಂಡನು.

೧೪. **"ನಿಖಿಲ ವೇದವೇದಾಂತ ಪ್ರತಿಪಾದ್ಯತ್ವ":-** "ವೇದೈಶ್ಚ ಸರ್ವೈರಹಮೇವವೇದ್ಯ" ಎಂಬ ಶೃತಿಯಿಂದ ಅಪೌರುಷೇಯವಾದ ಸಮಸ್ತ ವೇದಗಳಿಗೂ ಮತ್ತು ಪೌರುಷೇಯವಾದ

ಭಾರತಾದಿ ಗ್ರಂಥಗಳಿಗೂ ತಾನೇ ಮುಖ್ಯ ಪ್ರತಿಪಾದ್ಯನು, ಆದ್ದರಿಂದ "ನಿಖಿಲ ವೇದವೇದಾಂತ ಪ್ರತಿಪಾದ್ಯತ್ವ" ಲಕ್ಷಣವು ಶ್ರೀಹರಿ ಒಬ್ಬನಿಗೇ ಅನ್ವಯಿಸತಕ್ಕದ್ದಾದುರಿಂದ ಆತನು "ಸರ್ವೋತ್ತಮ" ನೆನಿಸಿಕೊಂಡನು.

೧೫. **"ಪ್ರಣವ ಪ್ರತಿಪಾದ್ಯತ್ವ"**:- "ಪ್ರಣವಂವೇದಗರ್ಭಸ್ತು" ಎಂಬ ಪ್ರಮಾಣದಿಂದ ಸಹಸ್ರ ವೇದವೂ ಓಂಕಾರದಲ್ಲಿ ಅಡಗಿರುವುದರಿಂದ ಶ್ರೀಹರಿಯು "ಪ್ರಣವ ಪ್ರತಿಪಾದ್ಯತ್ವ" ಲಕ್ಷಣದಿಂದ "ಸರ್ವೋತ್ತಮ" ನೆನಿಸಿಕೊಂಡನು.

೧೬. **"ಸತ್ವಾದಿ ಗುಣರಾಹಿತ್ಯ"**:- ಅಂದರೆ ಪ್ರಕೃತಿ ಸಂಬಂಧರಾಹಿತ್ಯವು. ಶ್ರೀಹರಿಯು ಉತ್ಪತ್ತಿಯುಳ್ಳ ಪ್ರಾಕೃತ ದೇಹೇಂದ್ರಿಯ ಗುಣಕರ್ಮವಿಹೀನನು. ಆತನು ಕಾರ್ಯರೂಪ ಪ್ರಪಂಚದಲ್ಲೂ ಕಾರಣ ಅಂದರೆ ಅವ್ಯಕ್ತಾದಿ ರೂಪ ಪ್ರಪಂಚದಲ್ಲೂ ಸೇರಿದವನಲ್ಲ. ಅಂದರೆ ಸರ್ವಥಾ ಪ್ರಕೃತಿ ನಿರ್ಮಿತವಲ್ಲದ ದೇಹ, ಇಂದ್ರಿಯ, ಗುಣ ಕರ್ಮಾದಿಗಳುಳ್ಳವನು. ಮತ್ತು ಉತ್ಪತ್ತಿ ರಹಿತನಾದುದರಿಂದ ಅವ್ಯಯನು. ಈ ರೀತಿಯಿಂದ "ಸತ್ವಾದಿಗುಣರಾಹಿತ್ಯ" ಲಕ್ಷಣವು ಶ್ರೀಹರಿಯೊಬ್ಬನಲ್ಲಿಯೇ ಇರುವುದುರಿಂದ ಆತನಿಗೆ "ಸರ್ವೋತ್ತಮ"ತ್ವವು ಸಿದ್ಧವಾಯಿತು.

೧೭. **"ಕರ್ಮಬಂಧರಾಹಿತ್ಯ"**:- ಬ್ರಹ್ಮಾದಿ ಸರ್ವಜೀವರೂ ಸತ್ಕರ್ಮದಿಂದ ಪುಣ್ಯವನ್ನೂ ದುಷ್ಕರ್ಮದಿಂದ ಪಾಪವನ್ನೂ ಹೊಂದುತ್ತಾರೆ. ಶ್ರೀಹರಿಯು ಮಾತ್ರ ಸ್ವತಂತ್ರನಾಗಿಯೂ ಮತ್ತು ಕರ್ಮಾಧ್ಯಕ್ಷನಾಗಿರುವುದರಿಂದ ಆತನಿಗೆ ಪುಣ್ಯ ಪಾಪಗಳ ಲೇಪವಿಲ್ಲ. ಇತರರು ಕರ್ಮದಲ್ಲಿ ಅಧಿಕಾರಿಗಳು. ಆದ್ದರಿಂದ ಶಾಸ್ತ್ರ ವಿಧಿಯನ್ನು ತಿಳಿದು ಸತ್ಕರ್ಮವನ್ನು ಆಚರಿಸಬೇಕು. ಶ್ರೀಹರಿಯ ಜಗತ್ಸರ್ಜನಾದಿ ವ್ಯಾಪಾರಗಳು ಆತನ ಸ್ವಭಾವದಿಂದಲೇ ನಡೆಯುತ್ತದೆಯಾದ್ದರಿಂದ ಆತನು ಕರ್ಮ ಬಂಧನಕ್ಕೆ ಸಿಕ್ಕುವವನಲ್ಲ. ತಾನು ಕರ್ಮ ಫಲದಲ್ಲಿ ಅಪೇಕ್ಷಾರಹಿತನಾಗಿಯೂ, ಸ್ವತಂತ್ರನಾಗಿಯೂ, ಪೂರ್ಣಾನಂದನಾಗಿಯೂ ಇರುವುದುರಿಂದ ಆತನು ಕರ್ಮಬದ್ಧನಲ್ಲವೆಂದು ತಿಳಿದವನು ಜ್ಞಾನವನ್ನು ಹೊಂದಿ ಕರ್ಮಗಳಿಂದ ಮುಕ್ತನಾಗುತ್ತಾನೆ. ಆದ್ದರಿಂದ ಶ್ರೀಹರಿಯು "ಕರ್ಮಬಂಧರಾಹಿತ್ಯ" ಲಕ್ಷಣದಿಂದ "ಸರ್ವೋತ್ತಮ" ನೆನಿಸಿಕೊಂಡನು.

೧೮. **"ಸರ್ವಸತ್ಕರ್ಮಫಲಭೋಕ್ತೃತ್ವ"**:- ಜ್ಯೋತಿಷ್ಟೋಮಾದಿ ಯಾಗಗಳು ಮತ್ತು ಕೃಚ್ಛಚಾಂದ್ರಾಯಣಾದಿ ತಪಸ್ಸು ಇವುಗಳ ಫಲ ಭೋಕ್ತೃವು ಶ್ರೀಹರಿಯೇ ಆದ್ದರಿಂದ ಆತನನ್ನೇ ಉಪಾಸನೆ ಮಾಡಬೇಕು. ಮತ್ತು ಆತನೇ ಸಕಲ ಜೀವರುಗಳ ದೇಹದಲ್ಲಿದ್ದು ದ್ರವ್ಯಯಜ್ಞ, ತಪೋಯಜ್ಞ ಮತ್ತು ಯೋಗಯಜ್ಞ, ಪ್ರವರ್ತಕನಾಗಿಯೂ ಯಜ್ಞಫಲ ಮುಂತಾದ ಯಜ್ಞಗಳಿಗೆ

ತಾನೇ ಭೋಕ್ತೃವೂ ಆಗಿರುತ್ತಾನೆ. ಈ ಕರ್ಮಫಲ ಭೋಗದಿಂದ ಶ್ರೀಹರಿಗೆ ಯಾವ ಆನಂದಾತಿಶಯವೂ ಇರುವುದಿಲ್ಲ. ಆತನು ಪೂರ್ಣಾನಂದನಾಗಿರುವನು. ಆದ್ದರಿಂದ "ಸರ್ವಸತ್ಕರ್ಮಫಲ ಭೋಕ್ತೃತ್ವ" ಲಕ್ಷಣದಿಂದ ಶ್ರೀಹರಿಯು "ಸರ್ವೋತ್ತಮ" ನೆನಿಸಿಕೊಂಡನು.

೧೯. "ಸರ್ವತ್ರ ಸಮತ್ವ":- "ನಸ್ಥಾನತೋಪಿ ಪರಸ್ಯೋಭಯ ಲಿಂಗಂಸರ್ವತ್ರಹಿ" ಎಂಬ ಸೂತ್ರದಿಂದ ಶ್ರೀಹರಿಯು ಸುಹೃದಾದಿ ಅನೇಕ ಅಧಿಷ್ಠಾನಗಳಲ್ಲಿ ಅಂತರ್ಯಾಮಿಯಾಗಿದ್ದರೂ, ಸ್ವಲ್ಪವೂ ಭೇದವಿಲ್ಲದೆ ಆನಂದ ಪೂರ್ಣನಾಗಿರುವನಾದ್ದರಿಂದ ಸರ್ವತ್ರ ಸಮತ್ವ ಲಕ್ಷಣದಿಂದ ಆತನೇ ಸರ್ವೋತ್ತಮನೆನಿಸಿಕೊಂಡನು.

೨೦. **ಪ್ರತ್ಯೇಕಂ ಸರ್ವೇಂದ್ರಿಯ ಕಾರ್ಯಕಾರಿ ವಿಲಕ್ಷಣ ದೇಹೇಂದ್ರಿಯಾದಿಮತ್ವ:-** ಅಂದರೆ ಪರಮಾತ್ಮನ ಸರ್ವಾವಯಗಳೂ ಸರ್ವೇಂದ್ರಿಯ ಶಕ್ತಿ ಉಳ್ಳವು. ಆದ್ದರಿಂದ ಶ್ರೀಹರಿಯು ಸರ್ವವನ್ನೂ ವ್ಯಾಪಿಸಿಕೊಂಡಿರುತ್ತಾನೆಯಾದ ಕಾರಣ ಈ ಲಕ್ಷಣದಿಂದ ಸರ್ವೋತ್ತಮನೆನಿಸಿಕೊಂಡನು.

೨೧. **"ಮುಕ್ತಿಹೇತು ಭೂತಜ್ಞಾನ ವಿಷಯತ್ವ:-** ಮರಣಕಾಲದಲ್ಲಿ ಯಾರ ಸ್ಮರಣೆಯನ್ನು ಮಾಡಿದರೆ ಪುನರಾವೃತ್ತಿ ರಹಿತವಾದ ಮೋಕ್ಷ ದೊರೆಯುವುದೋ ಅವನೇ ಸರ್ವೋತ್ತಮನು. ವಿನಾಶಿಯಾದ ಸರ್ವಭಾಗಗಳಲ್ಲಿಯೂ ಅಂತರ್ಗತನಾಗಿ, ಹಿರಣ್ಯಗರ್ಭಾದಿ ಸರ್ವದೇವತಾಂತರ್ಗತನಾಗಿ, ಸರ್ವಯಜ್ಞಪ್ರವರ್ತಕನೂ, ಫಲಭೋಕ್ತೃವೂ ಆದ ಪರಮಾತ್ಮನನ್ನು ತಿಳಿದು ಯಾವಾತನು ದೇಹತ್ಯಾಗ ಮಾಡುತ್ತಾನೋ ಆತನು ನಿರ್ದುಃಖಾನಂದಾನುಭವಾತ್ಮಕವಾದ ಸ್ಥಿತಿ ಅಂದರೆ ಮುಕ್ತಿಯನ್ನು ಹೊಂದುತ್ತಾನೆ. ಈ ಮುಕ್ತಹೇತು ಭೂತ ಅಂತ್ಯಕಾಲೀನ ಸ್ಮೃತಿ ವಿಷಯತ್ವ ಲಕ್ಷಣವು ಶ್ರೀಹರಿಗೇ ಎಂದು ನಿರ್ಧರಿಸಿರುವುದರಿಂದ ಸರ್ವೋತ್ತಮನೆನಿಸಿಕೊಂಡನು.

೨೨. **"ಪರಮಾಕ್ಷರತ್ವ":-** ಅಕ್ಷರನೆಂದರೆ ನಾಶರಹಿತನೆಂದರ್ಥ- ನಾಶವು ನಾಲ್ಕು ಪ್ರಕಾರವಿರುತ್ತದೆ. ಯಾವುವೆಂದರೆ ೧ ಅನಿತ್ಯತ್ವ, ೨ ದೇಹಹಾನಿ, ೩ ದುಃಖಪ್ರಾಪ್ತಿ ೪ ಅಪೂರ್ಣತೆ ಈ ನಾಲ್ಕುವಿಧವಾದ ನಾಶವೂ ಶ್ರೀಹರಿಗೆ ಇಲ್ಲದಿರುವುದರಿಂದ ಅಕ್ಷರನೆನಿಸಿದನು. ಲಕ್ಷ್ಮೀದೇವಿಯು ಪರಮಾತ್ಮನ ಅನುಗ್ರಹದಿಂದ ಅಕ್ಷರಳು; ಮುಕ್ತರು ಅಕ್ಷರರು; ಇವರಿಗಿಂತ ಪರಮಾತ್ಮನು ಅಧಿಕನಾದ್ದರಿಂದಪರಮಾಕ್ಷರತ್ವ ಲಕ್ಷಣವು ಸಿದ್ಧಿಸಿ ಸರ್ವೋತ್ತಮನೆನಿಸಿಕೊಂಡನು.

೨೩. **"ಅವ್ಯಕ್ತತ್ವ":-** ಅಂದರೆ ವ್ಯಕ್ತನಲ್ಲದವನು. ಈ ಅವ್ಯಕ್ತ ಶಬ್ದಾರ್ಥವು ಮೂರು ಪ್ರಕಾರವಾಗಿರುವುದು. ೧. ಶ್ರೀಹರಿಯು ಶಬ್ದಾದಿ ವಿಷಯಗಳಂತೆ ಪಂಚಜ್ಞಾನೇಂದ್ರಿಯಗಳಿಂದ ವೇದ್ಯನಾಗುವುದಿಲ್ಲವಾದುದರಿಂದ ಅವ್ಯಕ್ತನೆಂತಲೂ, ಆದುದರಿಂದ ಅಧೋಕ್ಷಜನೆಂತಲೂ,

೨. "ದೃಶ್ಯತೇತ್ವಗ್ರ್ಯಯಾಬುದ್ಧ್ಯಾ" ಎಂಬ ಶ್ರುತ್ಯನುಸಾರ ದಿವ್ಯದೃಷ್ಟಿಗೆ ಶ್ರವಣಾದಿಗಳಿಂದ ಸಂಸ್ಕೃತವಾದ ಮನಸ್ಸಿಗೆ ವ್ಯಕ್ತನಾಗುವನು; ಆದರೂ ಅದೂ ಸಹ ಆತನ ಪ್ರಸಾದದಿಂದಲೇ ಆಗಬೇಕಾಗಿರುವುದು. ಆದ್ದರಿಂದ ಅಧಿಕಾರಿಗಳ ಭಕ್ತ ನಿಮಿತ್ತವಾದ ಆ ಪರಮಾತ್ಮನ ಅನುಗ್ರಹ (ಪ್ರಸಾದ)ದಿಂದಲೇ ವ್ಯಕ್ತನಾಗುವ ಸ್ವಭಾವವುಳ್ಳವನಾದ್ದರಿಂದ ಅವ್ಯಕ್ತನೆಂತಲೂ, ೩. ಒಂದು ವೇಳೆ ಪರಮಾತ್ಮನು ಪ್ರಸನ್ನನಾದರೂ ಆತನನ್ನು ಸಾಕಲ್ಯೇನ ತಿಳಿಯಲು ಆಗುವುದಿಲ್ಲ. ನಿರವಧಿಕ ಪರಿಪೂರ್ಣವಾದ ಅವರ ವೈಭವವು ಸಾಕಲ್ಯೇನ ಯಾರಿಗೂ ವ್ಯಕ್ತವಾಗುವುದಿಲ್ಲ ವಾದ್ದರಿಂದ ಅವ್ಯಕ್ತನೆನಿಸಿಕೊಂಡನು. ತೆರೆಯು ಮಧ್ಯದಲ್ಲಿದ್ದರೆ ತೆರೆಯಿಂದಾಚೆನ ಪದಾರ್ಥವು ನಮಗೆ ಹೇಗೆ ಕಾಣಿಸುವುದಿಲ್ಲವೋ ಹಾಗೆಯೇ ಅವಿದ್ಯಾರೂಪ ತೆರೆಯಿಂದ ಸಹಿತರಾದ ಜೀವರು ಪರಮಾತ್ಮನ ಅಚಿಂತ್ಯ ಶಕ್ತಿಯಿಂದ ಅವ್ಯಕ್ತನಾದ ಆತನನ್ನು ಕಾಣಲಾರರು. ಹಾಗಾದರೆ ವ್ಯಕ್ತನಾಗುವ ಬಗೆ ಹೇಗೆಂದರೆ:– ಅನನ್ಯ ಭಕ್ತಿಯಿಂದ ಅಪರಿಮಿತವಾದ ಆತನನ್ನು ತಿಳಿಯುವುದಕ್ಕೂ ನೋಡುವುದಕ್ಕೂ ಸೇರುವುದಕ್ಕೂ ಸಹ ಭಕ್ತಿ ರಹಿತವಾದ ವೇದಾರ್ಥ ಜ್ಞಾನದಿಂದಲಾಗಲೀ ತಪಸ್ಸಿನಿಂದಲಾಗಲೀ ದಾನದಿಂದಲಾಗಲೀ, ಯಜ್ಞದಿಂದಲಾಗಲೀ ಸಾಧ್ಯವಿರುವುದಿಲ್ಲ. ಭಕ್ತಿಯಿಂದ ಮಾತ್ರವೇ ಅವ್ಯಕ್ತನಾದ ಪರಮಾತ್ಮನು ಪ್ರಸನ್ನನಾಗಿ ತನ್ನ ಸ್ವರೂಪವನ್ನು ವ್ಯಕ್ತ ಮಾಡುವನು. ಹೀಗೆ ಭಕ್ತಿಯಿಂದಲೇ ಪರಮಾತ್ಮನ ಯಥಾರ್ಥ ಸ್ವರೂಪವನ್ನು ತಿಳಿದು ಆತನ ದರ್ಶನವನ್ನು ಹೊಂದಿ ಮುಕ್ತರಾಗಬೇಕು. ಈ ಕಾರಣಗಳಿಂದ ಮುಕ್ತಿಪ್ರದನಾದ ವಾಸುದೇವನೇ ಮುಖ್ಯತಃ ಅವ್ಯಕ್ತ ಶಬ್ಧವಾಚ್ಯ ಲಕ್ಷಣದಿಂದ ಸರ್ವೋತ್ತಮ ನೆನಿಸಿಕೊಂಡನು.

೨೪. **"ಅಚಿಂತ್ಯ ಶಕ್ತಿಮತ್ವ":–** ತಾರತಮ್ಯೋಪೇತರಾದ ಜೀವರಾಶಿಗಳಲ್ಲಿ ಪರಮಾತ್ಮನಿದ್ದರೂ ನಾನು ಸರ್ವತ್ರ ಪ್ರಧಾನ ಗುಣನಾಗಿ ತಾರತಮ್ಯ ರಹಿತನಾಗಿಯೂ ತಾನು ವಾಸಿಸುವ ದೇಹಾದ್ಯಧಿಷ್ಠಾನಗಳು ನಾಶಹೊಂದಿದರೂ, ತನಗೆ ನಾಶವಿಲ್ಲ ದಿರುವುದರಿಂದಲೂ ಮತ್ತು ಒಂದೇ ರೂಪಿನಿಂದ ಒಂದೇ ಕಾಲದಲ್ಲಿ ಅತಿ ದೂರದಲ್ಲೂ ಅತಿ ಸಮೀಪದಲ್ಲೂ ಇರುವವನಾದ್ದರಿಂದಲೂ, ಮೂರು ಲೋಕವನ್ನು ಪ್ರವೇಶಿಸಿ, ಪ್ರಪಂಚವು ನಾಶಹೊಂದಿದರೂ ತಾನು ನಾಶರಹಿತನಾಗಿರುವುದರಿಂದಲೂ; ಇಂಥ ಅಚಿಂತ್ಯವಾದ ಸ್ವರೂಪ ಭೂತವಾದ ಮಹಿಮೋಪೇತನನ್ನು ಯಾವ ಲೌಕಿಕ ಉಪಾಯುಗಳಿಂದಲೂ ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದು ದಾಸ್ಯಭಾವದಿಂದ ನಮಸ್ಕಾರ ಮಾಡಬೇಕು. ಮತ್ತು ಈ ಅಚಿಂತ್ಯ ಶಕ್ತಿಯು ಪರಮಾತ್ಮನಿಗೆ ಅವಿದ್ಯಾದಿ ಉಪಾಧಿಗಳಿಂದ ಪ್ರಾಪ್ತವಾದ ಮಾಯಾಬಲವಲ್ಲವೆಂದು ಸ್ವಭಾವತಃ ಸ್ವರೂಪ ಭೂತವಾದ ಸಾಮರ್ಥ್ಯವೆಂದೇ ತಿಳಿಯಬೇಕು. ಅಚಿಂತ್ಯ ಶಕ್ತಿಮತ್ವ ಲಕ್ಷಣದಿಂದ ಶ್ರೀಹರಿಯು ಸರ್ವೋತ್ತಮ ನೆನಿಸಿಕೊಂಡನು.

ಈ ರೀತಿ ಶ್ರೀಹರಿಯೊಬ್ಬನೇ ಸರ್ವವೇದ ಪ್ರತಿಪಾದ್ಯನೆಂದೂ ಆತನೇ ಮುಕ್ತಪ್ರದನೆಂದೂ ಹೇಳಿರುವುದರಿಂದ ಆತನೇ ಸರ್ವೋತ್ತಮನೆಂದು ತಿಳಿದು ಆತನ

ಪಾದಪಲ್ಲವದಲ್ಲಿಯೇ ಲಗ್ನ ಮನಸ್ಕನಾಗಿ ಆತನ ಪ್ರಸಾದಾತಿಶಯಕ್ಕೆ ಪಾತ್ರನಾಗಿ ಸಂಸಾರವೇದನೆಯನ್ನು ಪರಿಹರಿಸಿಕೊಂಡು ನಿತ್ಯ ಸುಖವನ್ನು ಪಡೆಯಬೇಕೆಂಬುವುದನ್ನು ಸರ್ವರೂ ಆಚರಿಸಬೇಕಾಗಿರುತ್ತದೆ.

ಮನುಷ್ಯನಿಗೆ ಉತ್ಕೃಷ್ಟವಾದ ಇಂದ್ರಿಯವು "ಜ್ಞಾನವು" ಅದು ಯಾವುವೆಂದರೆ– ಹರಿಸರ್ವೋತ್ತಮತ್ವ – ಪಂಚಭೇದಗಳು–ತಾರತಮ್ಯ – ವಾಯುಜೀವೋತ್ತಮ ಇವೇ ಮುಂತಾದವುಗಳ ಶ್ರವಣ ಮನನಾದಿಗಳನ್ನು ಮಾಡುವುದೇ ಜ್ಞಾನವು. ಇದರಿಂದಲೇ ಮೋಕ್ಷ ಪ್ರಾಪ್ತಿಯಾಗುತ್ತದೆ. ಇವುಗಳನ್ನು ಬಿಟ್ಟು ಇತರೇ ವಿಷಯಗಳ ಶ್ರವಣ ಮನನಾದಿಗಳನ್ನು ಮಾಡುವುದರಿಂದ ಕೇವಲ ಅಂಧಂತಮಸ್ಸನ್ನು ಹೊಂದುತ್ತಾನೆ.

ಅಧೋಕ್ಷಜ ನಾಮವುಳ್ಳ ಶ್ರೀಪರಮಾತ್ಮನು ಸರ್ವರಿಗೂ ಸ್ವಾಮಿಯಾಗಿ ಸರ್ವೋತ್ತಮ ನೆನಿಸಿಕೊಂಡಿರುತ್ತಾನೆ. "ಈ ಅಧೋಕ್ಷಜನಾಮ ಶಬ್ದಾರ್ಥವೇನೆಂದರೆ:– ೧. "ಅಧೋಕ್ಷಾಣಾಂ ಜೀತೇಂದ್ರಿಯಾಣಾಂಜಾಯತೇ ಪ್ರತ್ಯಕ್ಷೀಭವತೀತಿವಾ ಅಧೋಕ್ಷಜಃ" ಅಂದರೆ ಜಿತೇಂದ್ರಿಯರಿಗೆ ಪ್ರತ್ಯಕ್ಷನಾಗುವವನೆಂದರ್ಥ.೨. ಅಧಃಕೃತಂ ಅಕ್ಷಜಂ ಇಂದ್ರಿಯ ಜನ್ಯಜ್ಞಾನಂ ಏನೇತಿವಾ ಅಧೋಕ್ಷಜಃ ॥ ಅಂದರೆ ಇಂದ್ರಿಯ ಜನ್ಯಜ್ಞಾನವನ್ನು ಅಧಃಕರಿಸುವವನು. ೩. ಯಸ್ಯೇಂದ್ರಿಯಂ ಪ್ರಮಥಿತುಂ ಪ್ರಮದಾನ ಶಕ್ತಾ ಇತಿ ॥ ಅಂದರೆ ಇಂದ್ರಿಯಗಳನ್ನು ಅಧಃಕರಿಸಿ ಜನಿಸಿದವನು. ಆದ್ದರಿಂದ ಶ್ರೀಹರಿಗೆ ಅಧೋಕ್ಷಜನೆಂದು ಹೆಸರಾಗಿರುತ್ತದೆ.

ನಾಹಂನಚ ಶಿವೋಽನ್ಯೇಚ ತತ್ ಶಕ್ತ್ಯೇಕಾಂಶಭಾಗಿನಃ ॥
ಬಾಲಃಕ್ರೀಡನ ಕೈರ್ಯದ್ವತ್ ಕ್ರೀಡತೇ ಸ್ಮಾಭಿರಚ್ಯುತಃ ॥

ತಾ॥ ಶ್ರೀನಾರಾಯಣನ ಸಾಮರ್ಥ್ಯದೊಳಗಿನ ಒಂದಂಶವೂ ಸಹ ನನ್ನಲ್ಲಿಯಾಗಲೀ, ಶಿವನಲ್ಲಿಯಾಗಲೀ ಇರುವುದಿಲ್ಲ; ಆದರೂ ಮಕ್ಕಳು ಬೊಂಬೆಗಳನ್ನಿಟ್ಟು ಆಡುವಂತೆ ಆ ಮಹಾಸ್ವಾಮಿಯು ನಮ್ಮಗಳೊಡನೆ ಆಡುತ್ತಾನೆ ಎಂಬುದಾಗಿ ಬ್ರಹ್ಮವೈವರ್ತ ಪುರಾಣದಲ್ಲಿ ಬ್ರಹ್ಮದೇವರ ಪ್ರಶಂಸ ಕಾಲದಲ್ಲಿ ಹೇಳಿರುತ್ತದೆ. ಆದ್ದರಿಂದ

ಏಷನಿಷ್ಕಂಟಕಃ ಪಂಥಾಯತ್ರ ಸಂಪೂಜ್ಯತೇ ಹರಿಃ ॥
ಕುಪಥಂತದ್ವಿ ಜಾನೀಯಾತ್ ಗೋವಿಂದರಹಿತಾಗಮಂ ॥

ಪ್ರತಿಯೊಬ್ಬ ಮನುಷ್ಯನೂ ಗೋವಿಂದ ನಾಮಕನಾದ ಶ್ರೀಹರಿಯು ಪೂಜಿಸಿಕೊಳ್ಳಲ್ಪಡತಕ್ಕ ಮಾರ್ಗವೇ ಕಂಟಕವಿಲ್ಲದ ರಾಜಮಾರ್ಗವೆಂದರಿತು ಅದರಲ್ಲಿಯೇ ಹೋಗಬೇಕು. ಗೋವಿಂದನ ಉತ್ಸವಾದಿ ವೈಭವಗಳು ನಡೆಯದ ಮಾರ್ಗವೇ ದುರ್ಮಾರ್ಗಗಳೆಂದು ಅರಿತು ಅಂತಹವುಗಳನ್ನು ತ್ಯಜಿಸಬೇಕು.

ಗೋವಿಂದ ನಾಮ ಶಬ್ಧರ್ಥವೇನೆಂದರೆ

೧. ನಷ್ಟಾವ್ಯೆಧರಣೀಂ ಪೂರ್ವಮವಿಂದಂ ಯದ್ಗು ಹಾಗತಾಂ ॥
ಗೋವಿಂದ ಇತಿತೇನಾಹಂ ದೇವೈರ್ವಾಗ್ಭಿರಭಿಷ್ಟುತಃ ॥

ಪೂರ್ವದಲ್ಲಿ ಆದಿ ಹಿರಣ್ಯಾಕ್ಷನಿಂದ ಅಪಹೃತವಾದ ಭೂಮಿಯನ್ನು ತಂದು ಪುನಃ ಅದರ ಸ್ಥಾನದಲ್ಲೇ ಸ್ಥಾಪಿಸಿದವನಾದ್ದರಿಂದ ಪರಮಾತ್ಮನಿಗೆ ಗೋವಿಂದನೆಂಬ ನಾಮವು ಬಂತು ಇದರ ವ್ಯುತ್ಪತ್ತಿಯೂ ಸಹ "ಗಾಂಭೂಮಿಂ ವಿಂದವಾನ್ ಗೋವಿಂದಃ ಭೂಮಿಯನ್ನು ಹೊಂದಿದವನೆಂದು ಇರುತ್ತದೆ.

೨. ಗವಾಅವಿಂಅಜ್ಞಾನಂ, ದ್ಯತಿಖಂಡಯತೀತಿವಾ ಗೋವಿಂದಃ ॥ ಅಜ್ಞಾನವನ್ನು ನಾಶಮಾಡುವವನು.

೩. ಗಾಂಧೇನುಂ ವಿಂದತೀತಿವಾ ಗೋವಿಂದಃ ॥ ಗೋವುಗಳನ್ನು ಸ್ವಾಧೀನ ಮಾಡಿಕೊಂಡವನು. ಈ ಅರ್ಥಗಳಿಂದ ಶ್ರೀಹರಿಗೆ ಗೋವಿಂದನಾಮವು ಬಂದಿತು.

ಪೂರ್ವದಲ್ಲಿ ಭೃಗುಋಷಿಗಳು ತ್ರಿಮೂರ್ತಿಗಳ ದರ್ಶನವನ್ನು ಮಾಡಿ ಶ್ರೀಹರಿಯೇ ಸರ್ವೋತ್ತಮನೆಂತ ತಿಳಿದು ಬ್ರಹ್ಮದೇವರಿಗೆ ಪೂಜೆಯೇ ಬೇಡವೆಂತ ಶಪಿಸಿಯೂ, ರುದ್ರದೇವರಿಗೆ ಆತನ ಲಿಂಗಕ್ಕೆ ಮಾತ್ರ ಪೂಜೆಯಾಗಲೆಂದು ಶಪಿಸಿಯೂ, ಶ್ರೀಹರಿಯೊಬ್ಬನೇ ಸರ್ವೋತ್ತಮನೆಂದೂ ನಿರ್ಣಯಿಸಿರುವುದನ್ನು ಭವಿಷ್ಯೋತ್ತರ ಪುರಾಣ ವೆಂಕಟೇಶ ಮಹಾತ್ಮೆಯಿಂದಲೂ ಭಾಗವತ ಪುರಾಣಶ್ರವಣದಿಂದಲೂ ಸಹ ತಿಳಿಯಬಹುದು. ಮತ್ತು ಶ್ರೀನಿವಾಸ ದೇವರ ಕಲ್ಯಾಣದಲ್ಲಿಯೂ ಸಹ ೩೩ ಕೋಟಿ ದೇವತೆಗಳೂ ಆ ಪರಮಾತ್ಮನಿಗೆ ದಾಸಾನುದಾಸರಾಗಿ ಬಂದು ಆತನ ಸೇವೆಯನ್ನು ಮಾಡಿ ಹೋಗಿರುವುದನ್ನು ಕೇಳಿರಬಹುದು. ಈ ವಿಷಯವನ್ನು ಚೆನ್ನಾಗಿ ವಿಮರ್ಶಿಸಿ ತಿಳಿದರೆ ಆ ಪರಮಾತ್ಮನ ಲೀಲೆಗಳೆಲ್ಲವೂ ನಮ್ಮ ಆಚರಣೆಯ ಸಲುವಾಗಿಯೇ ಇರುತ್ತವೆ. ಇವು ಕೇವಲ ಜೀವರ ಉದ್ಧಾರಕ್ಕಾಗಿಯೇ ಹೊರ್ತು ತನ್ನ ಪ್ರಯೋಜನಕ್ಕಲ್ಲವೆಂಬುವುದು ಸ್ಪಷ್ಟವಾಗುತ್ತೆ. ಮತ್ತು ಮಾರ್ಕಂಡೇಯರಿಗೆ ಸ್ವಾಮಿಯು ಮಹಾಪ್ರಳಯವನ್ನು ಸೃಷ್ಟಿದಶಾದಲ್ಲೇ ತೋರಿಸಿರುತ್ತಾನೆ. ಆದ್ದರಿಂದ ಸಜ್ಜನರು ಸಾತ್ವಿಕ ಮಾರ್ಗವನ್ನೇ ಸರ್ವದಾ ಆಶ್ರಯಿಸಬೇಕು. ಈ ಮಾರ್ಗವನ್ನು ಆಶ್ರಯಿಸಬೇಕಾಗಿದ್ದಲ್ಲಿ ಅಭಿಮಾನ ತ್ಯಾಗ ಮಾಡಿ ಸ್ವಾಮಿಯು ನಮಗೆ ಕರುಣಿಸಿರುವ ಬುದ್ಧಿಯಿಂದ ವಿಷಯಗಳನ್ನು ವಿಮರ್ಶಿಸಿ, ದುಡುಕದೆ ತಿಳಿದಿದ್ದನ್ನು ಸ್ಪಷ್ಟ ಮಾಡಿಕೊಂಡು, ಪದೇ ಪದೇ ಆ ವಿಷಯಗಳನ್ನು ಮನನ ಮಾಡಿ ಧ್ಯಾನಮಾಡಬೇಕು.

ಹರಿಸರ್ವೋತ್ತಮ ಪ್ರಕರಣ ಸಂಪೂರ್ಣಂ

ತಾರತಮ್ಯ ಪ್ರಕರಣ

ತಾರತಮ್ಯ ಅಂದರೆ ಒಂದು ವಸ್ತುವಿಗಿಂತ ಇನ್ನೊಂದು ವಸ್ತುವಿನಲ್ಲಿ (ಸಜಾತೀಯ) ಕಾಣುವ ವ್ಯತ್ಯಾಸವನ್ನು ತಿಳಿಯುವಿಕೆಯೇ ತಾರತಮ್ಯವು. ಉದಾಹರಣೆ :-

ಈ ತಾರತಮ್ಯದಲ್ಲಿ ಗುಣತಾರತಮ್ಯ, ಆವೇಶಾವತಾರತಾರತಮ್ಯ, ಅವರೋಹಣ, ಅನುಕ್ರಮಣಿಕ ತಾರತಮ್ಯ, ಅಣುತಾರತಮ್ಯ, ದೈತ್ಯ ತಾರತಮ್ಯ, ಕಕ್ಷತಾರತಮ್ಯ ಮೊದಲಾದ ತಾರತಮ್ಯಗಳಿರುತ್ತವೆ.

೬. ಗುಣತಾರತಮ್ಯ ಪ್ರಕರಣ

ಸಂಪುಟ ೫ ಸಂಚಿಕೆ ೭ ಆಂಗೀರಸ ಆಶ್ವಯುಜ ಅಕ್ಟೋಬರ್ ೧೯೩೨

ಶ್ಲೋ॥ ತಾರತಮ್ಯಂತತೋಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ॥
ಏತದ್ವಿನಾನಕಸ್ಯಾಪಿ ವಿಮುಕ್ತಿ ಸ್ಯಾತ್ಕಥಂಚನ ॥

ಗುಣಪೂರ್ಣನಾದ ಪರಮಾತ್ಮನು ಸರ್ವೋತ್ತಮನು ಎಂದು ತಿಳಿದು ಭಕ್ತಿಯಿಂದ ಉಪಾಸನೆ ಮಾಡಬೇಕು. ಮತ್ತು ಪರಮಾತ್ಮನಲ್ಲಿ ವಿದ್ಯಮಾನವಾದ ಗುಣಗಳಿಗೂ ತದನ್ಯರಲ್ಲಿ ವಿದ್ಯಮಾನವಾದ ಗುಣಗಳಿಗೂ ತಾರತಮ್ಯವನ್ನು ತಿಳಿದುಕೊಳ್ಳಬೇಕು. ಇದನ್ನು ತಿಳಿದುಕೊಳ್ಳದಿದ್ದ ಮೇಲೆ ಅಂಥವನಿಗೆ ಮುಕ್ತಿಯು ಎಂದಿಗೂ ದೊರೆಯಲಾರದು. ಆದ್ದರಿಂದ ಶ್ರೀಪರಮಾತ್ಮನನ್ನು ಆರಂಭಿಸಿಕೊಂಡು ವಿಷ್ಣುಭಕ್ತರಾದ ದೇವತೆಗಳವರಿವಿಗೂ ಅವರ ಗುಣ ತಾರತಮ್ಯವನ್ನು ವಿವರಿಸಲ್ಪಡುತ್ತದೆ.

೧. ಶ್ರೀಹರಿಯು:- ಈ ಪರಮಾತ್ಮನು ಎಂಥವನೆಂದರೆ – ಶ್ರೀದೇವಿಯರಿಗೆ ಪತಿಯಾಗಿ ವಿಷ್ಣುರೂಪದಿಂದಲೂ, ಭೂದೇವಿಯರಿಗೆ ಪತಿಯಾಗಿ ಬ್ರಹ್ಮರೂಪದಿಂದಲೂ, ದುರ್ಗಾದೇವಿಯರಿಗೆ ಪತಿಯಾಗಿ ರುದ್ರರೂಪದಿಂದಲೂ, ಶ್ರೀ, ಭೂ, ದುರ್ಗಾದೇವಿಯರಿಗೆ ಆಯಾಯ ರೂಪಗಳಿಂದ ಹರ್ಷಪಡಿಸುತ್ತಾ, ಆಯಾರೂಪದಿಂದ ಜಗತ್‌ಸೃಷ್ಟಿ, ಸ್ಥಿತಿ, ಲಯಾದಿಗಳನ್ನು ಮಾಡುತ್ತಾ, ನಿಷಿದ್ಧ ಸ್ವರೂಪರಾದ ದೈತ್ಯರಿಗೆ ಪ್ರತ್ಯಕ್ಷನಾಗದೆ ದೂರನಾಗಿರತಕ್ಕವನಾಗಿಯೂ, ವಿಚಿತ್ರವಾದ ಅವತಾರಗಳಿಂದ ಲೋಕವನ್ನು ಆಶ್ಚರ್ಯಪಡಿಸುತ್ತಾ,

ಅತ್ಯಂತ ಶ್ರೇಷ್ಠರಾದ ಮುಕ್ತಿಯೋಗ್ಯರ ದೋಷಗಳನ್ನು ದೂರಮಾಡಿ, ಅವರನ್ನು ಪವಿತ್ರರನ್ನಾಗಿ ಮಾಡಿ ಮನೋಹರವಾದ ಮತ್ತು ಅತ್ಯಾಶ್ಚರ್ಯವಾದ ಚರಿತ್ರೆಯುಳ್ಳವನು. ಇಂಥಾ ಮಹಾಮಹಿಮೋಪೇತನಾದ ಪರಮಾತ್ಮನು ಒಬ್ಬನೇ ಹೊರ್ತು ಮತ್ತೊಬ್ಬರಿಲ್ಲ. ಆದ್ದರಿಂದ ಈತನೇ ಸರ್ವೋತ್ತಮನು.

೨. ಲಕ್ಷ್ಮೀದೇವಿಯರು :– ಈಕೆಯು ಶ್ರೀಪರಮಾತ್ಮನಿಗೆ ಪಟ್ಟದರಸಿಯಾಗಿ ಆತನ ಅಪರಿಮಿತವಾದ ಗುಣರೂಪಗಳನ್ನು ಹುಡುಕುತ್ತಾ ಪರಮಾತ್ಮನು ಧರಿಸಿರುವ ವಸ್ತ್ರಗಳು, ಒಡವೆಗಳು ಆಯುಧಗಳು ಇವುಗಳ ಸ್ವರೂಪವೆಲ್ಲವೂ ತಾನೇ ಆಗಿ, ಆಯಾ ರೂಪಗಳಿಂದ ತಾನೇ ಪರಮಾತ್ಮನ ಬಳಿ ಸರ್ವದಾ ಇರುತ್ತಾ ಆತನ ಸೇವೆ ಮಾಡುತ್ತಾ ಗದಾಚಕ್ರಾದಿ ರೂಪಗಳಿಂದ ಇದ್ದು ಶತೃಸಂಹಾರ ನಾಶಮಾಡುವಳಾಗಿರುತ್ತಾಳೆ. ಇವಳೂ ಸಹ ಅಕ್ಷರಳು ತಾರತಮ್ಯದಲ್ಲಿ ರಮಾದೇವಿಯರಿಗಿಂತ ಪರಮಾತ್ಮನೇ ಉತ್ತಮನಾದನು. ಈಕೆಯು ಪರಮಾತ್ಮನಿಗಿಂತಲೂ ಅನಂತಗುಣ ಕಮ್ಮಿ ಎನಿಸುವಳು. ("ನಿತ್ಯಾವಿಯೋಗಿನೀಲಕ್ಷ್ಮೀಸ್ತದನಂತ ಗುಣಾಧಮಾ" ಇತಿ) ಈಕೆಯು ನಿತ್ಯ ಮುಕ್ತಳೆಂತಲೂ, ನಿರ್ವಿಕಾರಳೆಂತಲೂ ತಿಳಿಯಬೇಕು.

೩. ಬ್ರಹ್ಮ–ವಾಯುಗಳು:– ಬ್ರಹ್ಮದೇವರು ಮತ್ತು ವಾಯುದೇವರಿಬ್ಬರೂ ಸಮರು. ಇವರು ಪರಮಾತ್ಮನ ಗುಣಗಳನ್ನು ಸಮವಾಗಿ ತಿಳಿದು ಸಮವಾಗಿ ಉಪಾಸನೆ ಮಾಡುವವರು,. ಕಲ್ಪಸಾಧನೆಯಲ್ಲಿ ಮಾತ್ರ ವಾಯುದೇವರು, ಬ್ರಹ್ಮದೇವರಿಗಿಂತ ಕಮ್ಮಿಯಾದರೂ ಮಿಕ್ಕ ಗುಣಗಳಲ್ಲೆಲ್ಲಾ ಇಬ್ಬರೂ ಸಮನಾಗಿರುತ್ತಾರೆ. ರುದ್ರಾದಿ ಸಕಲ ದೇವತೆಗಳಿಗಿಂತ ಉತ್ತಮರು. ಇವರಿಬ್ಬರಿಗಿಂತಲೂ ಕೋಟಿ ಸಜಾತಿಗುಣಗಳಿಂದ ರಮಾದೇವಿಯರು ಉತ್ತಮರು. ಸಜಾತಿ ಎಂದರೆ ಸಮಜಾತಿ ಎಂತಲೂ; ವಿಜಾತಿ ಎಂದರೆ ಬೇರೆ ಜಾತಿ ಎಂತಲೂ ತಿಳಿಯಬೇಕು. ಆದ್ದರಿಂದ ಇವರುಗಳು ಲಕ್ಷ್ಮೀದೇವಿಯರಿಗಿಂತಲೂ ಕೋಟಿಗುಣ ಅಧಮರು, ("ಮುಖ್ಯ ಪ್ರಾಣಾತ್ಮಕೋಬ್ರಹ್ಮಾಶ್ರಿಯಃ ಕೋಟಿಗುಣಾಧಮ" ಇತಿ)

೪. ಸರಸ್ವತೀ– ಭಾರತೀಯವರು :– ಬ್ರಹ್ಮದೇವರ ಪತ್ನಿ ಸರಸ್ವತೀದೇವಿಯವರೂ ಮತ್ತು ವಾಯುದೇವನ ಪತ್ನಿ ಭಾರತೀದೇವಿಯರು ಬಲದಲ್ಲೂ ಮತ್ತು ಜ್ಞಾನದಲ್ಲೂ ಸಹ ಅವರ ಪತಿಗಳಾದ ಬ್ರಹ್ಮ–ವಾಯುಗಳಿಗಿಂತ ೧೦೦ ವಿಜಾತಿ ಗುಣಗಳಿಂದ ಕಮ್ಮಿಯಾಗಿರುವರು. ವಾಯು ದೇವರ ಪತ್ನಿಯರಾದ ಭಾರತೀ ದೇವಿಯರಿಗಿಂತಲೂ ಬ್ರಹ್ಮದೇವರ ಪತ್ನಿಯಾದ ಸರಸ್ವತೀ ದೇವಿಯವರು ಸ್ವಲ್ಪ ಉತ್ತಮಳೆಂದು ತಿಳಿಯಬೇಕು. ("ವಾಣೀಹಿಭಾರತೀರೂಪಾ ವಿಧೇಃಶತಗುಣಾಧಮಾ" ಇತಿ).

೫. **ಗರುಡ–ಶೇಷ–ರುದ್ರರು:–** ಇವರು ಮೂವರೂ ಸಮರು, ಸರಸ್ವತೀ ಭಾರತೀ ದೇವಿಯರಿಗಿಂತಲೂ ೧೦೦ ಗುಣ ಕಮ್ಮಿಯವರು. ("ರುದ್ರಾತ್ಮಶೇಷಸಾರ್ಕ್ಷ್ಯಾಶ್ಚ ವಾಣ್ಯಾಃ ಶತಗುಣಾಧಮಾ" ಇತಿ) ಈ ಮೂವರೂ ಸಮರಾದರೂ ರುದ್ರದೇವರಿಗಿಂತ ಶೇಷದೇವರು ಪದವಿಯ ವಿಶೇಷದಿಂದ ಸ್ವಲ್ಪ ಅಧಿಕರು. ಯಾಕೆಂದರೆ ಇವರು ೩೯ ಕಲ್ಪಸಾಧನ ಮಾಡಿ ರುದ್ರಪದವಿಯನ್ನು ಹೊಂದಿ, ಮುಂದಿನ ಕಲ್ಪಕ್ಕೆ ಶೇಷ ಪದವಿಗೆ ಬರುವರು. ಆದ್ದರಿಂದ ರುದ್ರದೇವರು ಶೇಷ ದೇವರಿಗಿಂತ ಸ್ವಲ್ಪ ಕಮ್ಮಿಯವರಾದರು.

೬. **ಷಣ್ಮಹಿಷಿಯರು :–** ಇವರು ಆರು ಜನರು ಯಾರೆಂದರೆ:–

"ವಿಷ್ಣುಸ್ತ್ರೀಯೋಜಾಂಬವತೀನೀಲಾಭದ್ರಾಚಲಕ್ಷಣಾ।
ಕಾಳಂದೀಮಿತ್ರವಿಂದಾಚಾಶೇಷಾತ್ಪಂಚಗುಣಾಧಮ" ಇತಿ.

ತಾ॥ ೧. ಜಾಂಬವತಿ, ೨. ನೀಲ, ೩. ಭದ್ರ, ೪. ಲಕ್ಷಣ, ೫. ಕಾಳಿಂದಿ, ೬. ಮಿತ್ರವಿಂದಾ, ಈ ಆರು ಮಂದಿಯೂ ಶ್ರೀಕೃಷ್ಣನ ಪತ್ನಿಯರು. ಇದರಲ್ಲಿ ಜಾಂಬವತಿಯು ಲಕ್ಷ್ಮ್ಯಾವೇಶ ಬಲದಿಂದ ನೀಲಾದಿಗಳಿಗಿಂತ ಪ್ರಧಾನಳು, ಆವೇಶವಿಲ್ಲದ ಕಾಲದಲ್ಲಿ ಸಮರು. ಇವರು ರುದ್ರಾದಿಗಳಿಗಿಂತ ೫ ಗುಣ ಕಮ್ಮಿ, ಸೌಪರ್ಣ್ಯಾದಿಗಳಿಗಿಂತ ೨ ಗುಣಗಳಿಂದ ಅಧಿಕರು. ("ಉಮಾತ್ಮಾ ವಾರುಣೀತಾರ್ಕ್ಷ್ಯೇವಿಷ್ಣುಸ್ತ್ರೀ ದ್ವಿಗುಣಾಧಮ") ಇತಿ.

೭. **ಸೌಪರ್ಣಿ–ವಾರುಣಿ–ಪಾರ್ವತಿ :–** ಗರುಡನ ಪತ್ನಿ ಸೌಪರ್ಣಿಯು ಶೇಷಪತ್ನಿ ವಾರುಣಿಯು, ರುದ್ರ ಪತ್ನಿ ಪಾರ್ವತಿಯೂ ಇವರು ತಮ್ಮ ತಮ್ಮ ಪತಿಗಳಿಗಿಂತ ೧೦ ಗುಣ ಕಮ್ಮಿ ("ಸ್ವಭರ್ತೃಭ್ಯಾಂದಶನ್ಯೂನೇಸುಖವೀರ್ಯಾದಿಕೈರ್ಗುಣೈಃ") ಇತಿ. ವಾರುಣಿಗಿಂತಲೂ ಪಾರ್ವತೀ ದೇವಿಯು ಸ್ವಲ್ಪ ಕಮ್ಮಿ. ಪಾರ್ವತೀ ದೇವಿಗಿಂತಲೂ ಇಂದ್ರ ಕಾಮರು ೧೦ ಗುಣ ಅಧಮರು (ಇಂದ್ರೋನಕಾಮ ಇಂದ್ರಶ್ಚಸೌಪರ್ಣ್ಯಾಸ್ತುದಶಾಧಮಾ") ಇತಿ.

೮. **ಇಂದ್ರ–ಕಾಮರು :–** ಇವರು ಅಹಂಕಾರ ಪ್ರಾಣಕ್ಕಿಂತ ೧೦ ಗುಣ ಅಧಿಕರು.

೯. **ಅಹಂಕಾರ ಪ್ರಾಣ :–** ಇವನು ಇಂದ್ರ ಕಾಮರಿಗಿಂತ ಹತ್ತು ಗುಣ ಕಮ್ಮಿಯವನು. ("ತತೋಹಂಕಾರಿಕಪ್ರಾಣಕಾಮಾದ್ದಶಗಣಾಧಮಃ") ಇತಿ.

೧೦. (i) ಕಾಮನ ಮಗ ಅನಿರುದ್ಧ, (ii) ಕಾಮನ ಹೆಂಡತಿ ರತಿ, (iii) ಸ್ವಾಯಂಭುವ ಮನು, (iv) ದಕ್ಷಪ್ರಜೇಶ್ವರ, (v) ಬೃಹಸ್ಪತ್ಯಾಚಾರ್ಯರು, (vi) ಇಂದ್ರನ ಹೆಂಡತಿ ಶಚಿದೇವಿ. ತತೋಸ್ವಾಯಂಭುವೋದಕ್ಷೋಹ್ಯನಿರುದ್ಧೋ ಬೃಹಸ್ಪತಿಃ ॥ ಶಚೀರತಿಸ್ತಥಾಪ್ರಾಣಾನ್ಮತಾ ದಶಗುಣಾಧಮೇತಿ" ಇವರು ಅಹಂಕಾರ ಪ್ರಾಣನಿಗಿಂತ ೧೦ ಗುಣ ಕಮ್ಮಿಯವರು.

೧೧. **ಪ್ರವಹವಾಯು** :– ಈತನಿಗೆ ಮರೀಚಿ ಎಂತಲೂ ನಾಮವುಂಟು. ಪ್ರ॥ ಮರೀಚಿನಾಮಾಂತರವಾನ್‌ಪ್ರವಹೋಮುಖ್ಯವಾಯುಜಃ ॥ ಕೋಣಾಧಿಪಸ ಏವೋಕ್ತೋನಾಸಿಕ್ಯೋಭೌತಿಕಸ್ತಥಾ ॥ ಮುಮುಕ್ಷುಭಿರ್ಗಮ್ಯತಯಾಸೂತ್ರೇಪ್ರೋಕ್ತೇರ್ಚಿರಾದಿಕೆ॥ ಅತಿವಾಹಿಕ ಇತ್ಯುಕ್ತೋಗುರೋಃ ಪಂಚಗುಣಾಧಮಃ ॥ ಇವನು ಪ್ರಧಾನ ವಾಯುದೇವರ ಮಗ. ಇವನಿಗೆ ಮರೀಚಿಯೆಂತಲೂ, ವಾಯುವ್ಯದಿಕ್ಕಿಗೆ ಅಧಿಪತಿಯೆಂತಲೂ; ಪಂಚಭೂತದಲ್ಲಿ ಸಂಬಂಧಪಟ್ಟು ಎಲ್ಲರ ಮೂಗಿನಲ್ಲಿಯೂ ಶ್ವಾಸರೂಪನಾಗಿ, ತ್ವಗಿಂದ್ರಿಯ ವಿಷಯನಾಗಿಯೂ, ಅರ್ಚಿರಾದಿ ಮಾರ್ಗದಲ್ಲಿ ಅತಿ ವಾಹಿಕನೆಂತಲೂ, ಮೋಕ್ಷಾಪೇಕ್ಷಯುಳ್ಳವರಿಂದ ತಿಳಿಯತಕ್ಕದ್ದು. ಇವನು ಬೃಹಸ್ಪತ್ಯಾಚಾರ್ಯರಿಗಿಂತ ೫ ಗುಣ ಕಮ್ಮಿಯವನು.

೧೨. ೧.ಸೂರ್ಯ, ೨. ಚಂದ್ರ, ಅಥವಾ ಮಾನಿನಿ, ೩. ಶತರೂಪ (ಸ್ವಾಯಂಭು ಮನುವಿನ ಪತ್ನಿ), ೪. ಯಮ– ಈ ನಾಲ್ವರೂ ಬೃಹಸ್ಪತಿಗಿಂತಲೂ ೧೦ ಗುಣ ಕಮ್ಮಿ, ಪ್ರವಾಹ ವಾಯುವಿಗಿಂತಲೂ ೨ ಗುಣ ಕಮ್ಮಿ ಪ್ರ॥ ವಿವಸ್ವಾಂಶ್ಚಯಮಶ್ಚಂದ್ರಃಶತರೂಪಾಚ ಮಾನವೀ॥ ಗುರೋರ್ದಶಾಧಮಾಃಪ್ರೋಕ್ತಾಃ ಪ್ರವಹಾದ್ವಿಗುಣಾಧಮಾಃ ॥

೧೩. **ವರುಣ** :– ಇವನು ಪಾದಪಾದಾರ್ಧ ಕಮ್ಮಿ ಗುಣವುಳ್ಳವನು. ಅಂದರೆ– ಪಾದ ಅಂದರೆ ನಾಲ್ಕಾಣೆ; ಪಾದಾರ್ಧ ಅಂದರೆ ಎರಡಾಣೆ: ಒಟ್ಟು ಆರು ಆಣೆ ಭಾಗ ಸೂರ್ಯನಿಗಿಂತ ಕಮ್ಮಿ ಉಳ್ಳವನು. ಪ್ರ ॥ ತತಸ್ತುವರುಣಃಸೂರ್ಯಾತ್ಪಾದಪಾದಾರ್ಧತೋಧಮಃ॥

೧೪. **ನಾರದ** :– ಇವ ವರುಣನಿಗಿಂತಲೂ ಪಾದಾರ್ಧ ಅಂದರೆ ೨ ಅಣೆ ಭಾಗ ಅಧಮನು. ಪ್ರ ॥ ನಾರದಸ್ತುವರಃಕಿಂಚಿತ್ ವರುಣಾತ್ಪಾದಕೋಧಮಃ॥

೧೫. **ಭೃಗು, ಅಗ್ನಿ, ಪ್ರಸೂತಿ (ದಕ್ಷಪ್ರಜೇಶ್ವರನ ಪತ್ನಿ)**:– ಇವರು ನಾರದರಿಗಿಂತಲೂ ೨ ಆಣೆ ಭಾಗ ಕಮ್ಮಿಯವರು.

೧೬. **ಮರೀಚ್ಯಾದಿ ಸಪ್ತ ಋಷಿಗಳು, ವೈವಸ್ವತಮನು, ವಿಶ್ವಾಮಿತ್ರ, ಸಪ್ತ ಋಷಿಗಳು ಯಾರೆಂದರೆ**:– ೧. ಮರೀಚಿ, ೨. ಅತ್ರಿ, ೩. ಅಂಗೀರಸ, ೪. ಪುಲಸ್ತ್ಯ, ೫. ಪುಲಹ, ೬.ಕ್ರತು, ೭. ವಶಿಷ್ಠ. ಇವರೇಳು ಜನರೂ ಬ್ರಹ್ಮದೇವರ ಮಕ್ಕಳು. ಇವರು ೭ ಜನವೂ ವೈವಸ್ವತ ಮನುವೂ ಮತ್ತು ವಿಶ್ವಾಮಿತ್ರ ಈ ಒಂಭತ್ತು ಮಂದಿಯೂ ಅಗ್ನಿಗಿಂತ ೨ ಗುಣ ಅಧಮರು. ಪ್ರ॥ ಮರೀಚಿರತ್ರ್ಯಂಗಿರಸೋಪುಲಸ್ತ್ಯಃ ಪುಲಹಃಕ್ರತುಃ ॥ ವಸಿಷ್ಠಶ್ಚೇತ್ಯಜಸುತಾವ್ವೈವಸ್ವತಮನುಸ್ತಥಾ ॥ ವಿಶ್ವಾಮಿತ್ರೋವಹ್ನಿನೀಚಾಃಮಿತ್ರಾತ್ಕಿಂಚಿದ್ಗುಣಾಧಿಕಾ ॥ ಇತಿ. ಮಿತ್ರಾದಿಗಳಿಂದ ೨ ಗುಣ ಅಧಿಕರು.

೧೭. ಮಿತ್ರನಾಮಕ ಸೂರ್ಯ, ದಿಕ್ಪಾಲಕನಾದ ನಿರುಋತಿ, ಪ್ರಾವಹಿ (ಪ್ರವಹ ವಾಯುವಿನ ಪತ್ನಿ) ತಾರೆ (ಬೃಹಸ್ಪತ್ಯಾಚಾರ್ಯರ ಹೆಂಡತಿ) ಈ ನಾಲ್ಕು ಮಂದಿಯೂ ಅಗ್ನಿಗಿಂತ ೨ ಗುಣ ಅಧಮರು. ಪ್ರ॥ ಪ್ರಾವಹೀನಿರುಋತಿಸ್ತಾರಾಮಿತ್ರಾಗ್ನೇರ್ದ್ವಿಗುಣಾಧಮಾ ॥

೧೮. ಕುಬೇರ–ವಿಷ್ವಕ್ಸೇನ (ವಾಯುಪುತ್ರ) ಗಣಪತಿ–ಶತಸ್ಥರು :– ೧೦೦ ಮಂದಿ ದೇವತೆಗಳು. ಪ॥ ಪ್ರದಾನವಾಯುರ್ವಸವೋರುದ್ರಾದಿತ್ಯಮರುದ್ಗಣಾಃ ॥ ಬೃಹಸ್ಪತೀ ಋಭುರ್ದ್ಯಾವಾಪೃಥಿವ್ಯಾವಶ್ವಿನೌತಥಾ ॥ ವಿಶ್ವೇದೇವಾಶ್ಚಪಿತರಃಶತಸ್ಥಾದೇವತಾಮತಾಃ॥

ಈ ನೂರುಮಂದಿ ದೇವತೆಗಳ ವಿವರ :–

೧ ಪ್ರಧಾನವಾಯು

೮ ವಸುಗಳು:–

೧. ದ್ರೋಣ, ೨. ಪ್ರಾಣ, ೩. ಧೃವ, ೪. ಅರ್ಕ, ೫. ಅಗ್ನಿ, ೬. ದೋಷ, ೭. ವಸು, ೮. ದ್ಯುನಾಮಕಾ.

ಪ್ರ॥ ದ್ರೋಣಃಪ್ರಾಣೋಧೃವೋಕೋರ್ಗ್ನಿ ದೋಷಾವಸು
ವಿಭಾವಸುರಿತ್ಯಷ್ಟವಸವಃ॥

೧೧ ರುದ್ರರು:–

೧. ರೈವತ, ೨. ಓಜ, ೩. ಭವ, ೪. ಭೀಮ, ೫. ವಾಮ, ೬. ಉಗ್ರ, ೭. ವೃಷಾಕಪಿ, ೮. ಅಜೈಕಪಾತ್, ೯. ಅಹೀರ್ಭುರ್ಧ್ನ, ೧೦, ಬಹುರೂಪ, ೧೧. ಮಹಾನ್,

ಪ್ರ॥ ರೈವತೋಜೋಭವೋಭೀಮೋ ವಾಮೋಉಗ್ರವೃಷಾಕಪಿಃ॥
ಅಜೈಕಪಾದಹಿರ್ಬುಧ್ನೋಬಹುರೂಪೋಮಹಾನಿತಿಏಕಾದಶರುದ್ರಾಃ ॥

೧೨ ಆದಿತ್ಯರು:–

೧. ವಿವಸ್ವಾನ್, ೨. ಆರ್ಯಮ, ೩. ಪೂಷಾ, ೪. ತ್ವಷ್ಟಾ, ೫. ಸವಿತಾ, ೬. ಭಗ, ೭.ಧಾತಾ, ೮. ಪರ್ಜನ್ಯ, ೯. ವರುಣ, ೧೦. ಮಿತ್ರ, ೧೧, ಶಕ್ರ, ೧೨. ಉರುಕ್ರಮ,

ಪ್ರ॥ ವಿವಸ್ವಾನರ್ಯಮಾಪೂಷಾತ್ವಷ್ಟಾಸವಿತಾಭಗಃ ॥ ಧಾತಾಪರ್ಜನ್ಯವರುಣೌಮಿತ್ರಃಶಕ್ರ ಉರುಕ್ರಮ॥
ಇತಿ ದ್ವಾದಶಾದಿತ್ಯಾಃ ॥

೪೯ ಮರುತ್ತುಗಳು :–

೧. ಪ್ರಾಣಾ, ೨. ಅಪಾನಾ, ೩. ವ್ಯಾನಾ, ೪. ಉದಾನಾ, ೫. ಸಮಾನಾ, ೬. ನಾಗಾ, ೭. ಕೃಕಲಾ, ೮. ಕೂರ್ಮ, ೯. ದೇವದತ್ತ, ೧೦. ಧನಂಜಯ, ೧೧. ಪ್ರವಹ, ೧೨. ವಿವಹ,

೧೩. ಶಂಭು, ೧೪. ಸಂವಹ, ೧೫. ಪರಾವಹ, ೧೬. ವಹ, ೧೭. ಉದ್ವಹ, ೧೮. ಶಂಕುಃ, ೧೯. ಕಾಲ, ೨೦. ಶ್ವಾಸ, ೨೧. ನಲ, ೨೨. ನೀಲಾ, ೨೩. ಪ್ರತಿಭ, ೨೪. ಕುಮುದಾ, ೨೫. ಕಾಂತಾ, ೨೬. ಶುಚೀ, ೨೭. ಶ್ವೇತಾ, ೨೮. ಅಜಿತಾ, ೨೯. ಗುರು, ೩೦. ಸಂಜ್ಞ, ೩೧. ಸಂವರ್ತಾ, ೩೨. ಕಾಲ, ೩೩. ಜಿತಾ, ೩೪. ಸೌಮ್ಯ, ೩೫. ಕವಿ, ೩೬. ಜಡ, ೩೭. ಮಂಡೂಕ, ೩೮. ಸಂಹತಃ, ೩೯. ಸಿದ್ಧ, ೪೦. ರಕ್ತ, ೪೧. ಕೃಷ್ಣಾ, ೪೨. ಕಪಿ, ೪೩. ಶುಕಾ, ೪೪. ಯತಿ, ೪೫. ಭೀಮ, ೪೬. ಹನೂ, ೪೭. ಪಿಂಗಳ, ೪೮. ಅಹಂಕಾರಿಕಪ್ರಾಣ, ೪೯. ಕಂಪನ.

ಪ್ರ॥ ಪ್ರಾಣೋಪಾನಸ್ತಥಾವ್ಯಾನಉದಾನಶ್ಚಸಮಾನಕಃ । ನಾಗಶ್ಚಕೃಕಲಃಕೂರ್ಮೋದೇವದತ್ತೋಧನಂಜಯಃ ॥ ಪ್ರವಹೋವಿವಹಃಶಂಭುಃಸಂವಹಶ್ಚಪರಾವಹಃ। ಉದ್ವಹಶ್ಚವಹಃ ಶಂಕುಃಕಲಃಸ್ವಾಸೋನಲೋನೀಲಃ ॥ ಪ್ರತಿಭಃಕುಮುದಃಕಾಂತಃ ಶುಚೀಶ್ವೇತೋಜಿತೋಗುರುಃ। ಸಂಜ್ಞಃಸಂವರ್ತಕಃಕಾಲೋಜಿತಃಸೌಮ್ಯಃಕವಿರ್ಜಡಃ ॥ ಮಂಡೂಕಸಂಹತಃ ಸಿದ್ಧೋರಕ್ತಃ ಕೃಷ್ಣಃಕಪಿಃಶುಕಃ । ಯತೀರ್ಭೀಮೋಹನುಃ ಪಿಂಗಅಹಂಪ್ರಾಣೋಥಕಂಪನಃ ॥ ಇತ್ಯೇಕೋನ ಪಂಚಾಶನ್ಮರುತಃ ॥

೧೦ ವಿಶ್ವೇ ದೇವತೆಗಳು

೧. ಪುರೂರವ, ೨. ಆದ್ರವ, ೩. ಕಾಮ, ೪. ಕಾಲ, ೫. ಧುರಿ, ೬. ಲೋಚನ, ೭. ದಕ್ಷ, ೮. ಕ್ರತು, ೯. ವಸು, ೧೦. ಸತ್ಯ ಪ್ರ ॥ ಪುರೂರವಾದ್ರವೌಕಾಮಃಕಾಲಶ್ಚಧುರಿಲೋಚನೌ॥ ದಕ್ಷಕ್ರತುರ್ವಸುಸುಸತ್ಯೇತಿ ॥

೧ ಬೃಹಸ್ಪತಿ

೧ ಋಭುಗುಣ.

೧ ದ್ಯಾವಾ

೧ ಪೃಥ್ವೀ

೨ ಅಶ್ವಿನಿದೇವತೆಗಳು

೧.ನಾಸತ್ಯ, ೨. ದಸ್ರ

೩ ಪಿತೃಗಳು

೧ ಕವ್ಯವಾಹ, ೨. ಯಮ, ೩. ಸೋಮ ಪ್ರ॥ ಕವ್ಯವಾಹೋಯಮಃಸೋಮ ಇತಿ ಪಿತೃತ್ರಯ ॥

೧೦೦ ಒಟ್ಟಿನಲ್ಲಿ ನೂರು ಮಂದಿ

ಇದರಲ್ಲಿ ಪ್ರದಾನ ವಾಯುದೇವರು	೧
ವಸುಗಳಲ್ಲಿ ಪ್ರಧಾನಾಗ್ನಿ	೧
ರುದ್ರರಲ್ಲಿ ಭವನಾಮಕ ಉಮಾಪತಿರುದ್ರ	೧
ಸೂರ್ಯರಲ್ಲಿ ೬ ಮಂದಿ. ಅವರ ವಿವರ :-	೬

೧. ಶ್ರೀಹರಿಯೇ ಉರುಕ್ರಮ ಸೂರ್ಯ, ೨. ಚಂದ್ರಗೆ ಸಮನಾದ ವಿವಸ್ವಾನ್‌ನಾಮಕ ಸೂರ್ಯ, ೩. ನಿಋತಿಗೆ ಸಮನಾದ ಮಿತ್ರನಾಮಕ ಸೂರ್ಯ, ೪. ಸಮುದ್ರನಾಥನೆ ವರುಣನಾಮಕ ಸೂರ್ಯ, ೫. ಇಂದ್ರನೇ ಶಕ್ರನಾಮಕ ಸೂರ್ಯ, ೬. ಗಂಗೆಗೆ ಸಮನಾದ ಪರ್ಜನ್ಯನಾಮಕ ಸೂರ್ಯ

ಮರುದ್ಗಣದಲ್ಲಿ ಅಹಂಕಾರಿಕ ಪ್ರಾಣ	೧
ಪ್ರವಾಹಮಾರುತ	೧
ಬೃಹಸ್ಪತಿ	೧
ದ್ಯುಲೋಕಾಭಿಮಾನಿ ಭಾರತೀದೇವಿ	೧
ಪಿತೃಗಳಲ್ಲಿ ಯಮ	೧
ಸೋಮ	೧
ಒಟ್ಟು ಮಂದಿ	೧೫

ಮೇಲ್ಕಂಡ ೧೦೦ ಮಂದಿಯಲ್ಲಿ ಈ ೧೫ ಮಂದಿ ಹೋಗಲಾಗಿ ಉಳಿದ ೮೫ ಮಂದಿ ಕುಬೇರ, ವಿಷ್ವಕ್ಸೇನ, ಗಣಪತಿ ಇವರಿಗೆ ಸಮರು.

೧೯ ಕರ್ಮಜರು :- ಚ್ಯವನ, ಚನಕ, ಸನಂದನ, ಸನತ್ಕುಮಾರ, ಸನತ್ಸುಜಾತ, ಪಾವಕನಾಮಕಅಗ್ನಿ, ಶುಕ್ರಾಚಾರ್ಯರು, ಉಚಿಥ್ಯ, ಇಂದ್ರನ ಮಗ ಜಯಂತ, ಕಶ್ಯಪ, ಏಕಾದಶ ಮನುಗಳು (೧. ಸ್ವಾರೋಚಿಷ, ೨. ಉತ್ತಮ, ೩. ರೈವತ, ೪, ಚಕ್ಷುಷಾ, ೫. ಸೌವರ್ಣಿ, ೬. ದಕ್ಷಸಾವರ್ಣಿ, ೭. ಬ್ರಹ್ಮಸಾವರ್ಣಿ, ೮. ಧರ್ಮಸಾವರ್ಣಿ, ೯. ರುದ್ರಸಾವರ್ಣಿ, ೧೦. ದೇವಸಾವರ್ಣಿ, ೧೧. ಇಂದ್ರಸಾವರ್ಣಿ), ಧೃವ, ನಹುಷ, ಶಶಿಬಿಂದು, ಕಾರ್ತವೀರ್ಯಾರ್ಜುನ, ದುಷ್ಯಂತ, ಬಲಿಚರ್ಕವರ್ತಿ, ಸಪ್ತೇಂದ್ರರು (೧. ಚವನ, ೨. ಅದ್ಭುತ, ೩. ಶಂಭು, ೪. ವೈಧೃತಿ, ೫. ದಿವಸ್ಪತಿ, ೬. ಶುಚಿ, ೭. ರಿತನಾಮ), ಕುಕುಸ್ಥ, ಗಯ ಇವರೆಲ್ಲರೂ ೮೫ ಮಂದಿ ದೇವತೆಗಳಿಗಿಂತ ಕಮ್ಮಿಯವರು. ಪೃಥುಚಕ್ರವರ್ತಿ, ದುಷ್ಯಂತನಮಗ ಭರತ, ಮಾಂಧಾತ, ಪ್ರಿಯವ್ರತ, ಮರುತ, ಪ್ರಹ್ಲಾದ, ಪರಿಕ್ಷಿದ್ರಾಜ, ಹರಿಶ್ಚಂದ್ರ, ಅಂಬರೀಷ, ಉತ್ತಾನಪಾದ ಮೊದಲಾದ ೧೦೦ ಮಂದಿ ಪುಣ್ಯಕೀರ್ತಿ ಸಂಪನ್ನರಾದ ರಾಜರು ಇವರೆಲ್ಲರೂ ಕರ್ಮಜರು. ಇವರು

(ಮುಂದುವರೆಯುವುದು)

ಸಂಪುಟ ೫ ಸಂಚಿಕೆ ೮ ಅಂಗೀರಸ, ಕಾರ್ತಿಕ ನವೆಂಬರ್ ೧೯೩೨

ಪ್ರಿಯವ್ರತ ರಾಜನಿಗಿಂತ ಎರಡು ಗುಣ ಕಮ್ಮಿಯವರು. ಕರ್ಮಜ ದೇವತೆಗಳು ಅಂದರೆ: ಕರ್ಮದಿಂದ ದೇವತ್ವವನ್ನು ಹೊಂದಿದವರೆಂದರ್ಥ.

೨೦. ಗಂಗಾದಿಗಳು:– ೧. ಗಂಗೆಯು, ೨. ವಿವಸ್ವಾನ್ ಎಂಬ ಸೂರ್ಯನ ಹೆಂಡತಿಯಾದ ಸಂಜ್ಞಾದೇವಿಯು, ೩. ಚಂದ್ರನ ಹೆಂಡತಿಯಾದ ರೋಹಿಣಿಯು, ೪. ಯಮನ ಹೆಂಡತಿಯಾದ ಶಾಮಲೆಯೂ, ೫. ಅನಿರುದ್ಧನ ಹೆಂಡತಿಯಾದ ಉಷಾದೇವಿಯು, ೬. ಪರ್ಜನ್ಯನೆಂಬ ಸೂರ್ಯ ಇವರು ಆರು ಮಂದಿ ಸಮರು. ಕರ್ಮಜದೇವತೆಗಳಿಗಿಂತ ೨ ಗುಣ ಕಮ್ಮಿ. ಪ್ರ ॥ ಸಂಜ್ಞಾಗಂಗಾಚಪರ್ಜ್ಯನ್ಯಭಾರ್ಯೇರ್ವೈಯಮಚಂದ್ರಯೋಃ ॥ ಅನಿರುದ್ಧಪ್ರಿಯೋಷಾಚಮಿತ್ರಾತ್ತುದ್ವಿಗುಣಾಧಮಾಃ ॥

೨೧. ಅನಾಖ್ಯಾತ ದೇವತೆಗಳು:– (ಇವರ ವಿಚಾರವನ್ನು ಮುಂದಿನ ತಾರತಮ್ಯದಲ್ಲಿ ವಿವರಿಸಲ್ಪಡುತ್ತದೆ.)

೨೨. ಸ್ವಾಹಾದೇವಿ:– ಅಗ್ನಿಯ ಹೆಂಡತಿಯಾದ ಸ್ವಾಹಾದೇವಿಯು ಗಂಗೆಗಿಂತಲೂ ೨ ಗುಣ ಕಮ್ಮಿ. ಪ್ರ॥ ಸ್ವಾಹಾದೇವೀವಹ್ನಿಜಾಯಪರ್ಜನ್ಯಾದ್ವಿಗುಣಾಧಮಾಃ ॥

೨೩. ಬುಧ:– ಚಂದ್ರನ ಮಗ ಉದಕಾಭಿಮಾನಿಯಾದ ಬುಧನು ಸ್ವಾಹಾದೇವಿಗಿಂತಲೂ ೨ ಗುಣ ಕಮ್ಮಿ.

೨೪. ಉಷಾ, ಯಶೋದಾದೇವಿ, ದೇವಕೀದೇವಿ:– ಇವರುಗಳು ಬುಧನಿಗಿಂತ ಕಮ್ಮಿಯವರು.

೨೫. ಭೂದೇವಿ ಮತ್ತು ಶನೈಶ್ಚರ:– ಇವರಿಬ್ಬರೂ ಉಷಾದೇವಿಗಿಂತ ಅಧಮರು. ಪ್ರ॥ ಧರಾಮಾನಿಶನಿಸ್ತಸ್ಯಾ ಉಷಾಸೋಽಹ್ಯಧಮಃಸ್ಮೃತಃ ॥

೨೬. ಪುಷ್ಕರ:– ಕರ್ಮಾಭಿಮಾನಿಯಾದ ಪುಷ್ಕರನು ಶನೈಶ್ಚರನಿಗಿಂತ ಕಮ್ಮಿ. ಪ್ರ॥ ಶನೈಶ್ಚರಾತ್ಕರ್ಮಮಾನಿಪುಷ್ಕರೋಽಹ್ಯವರಸ್ಮೃತಃ ॥

೨೭. ಆಜಾನಜದೇವತೆಗಳು:– ಇವರು ದೇವಗಂಧರ್ವ ಪರ್ಯಂತ ಪುಷ್ಕರನಿಗೆ ೧೦ಗುಣದಿಂದ ಕಮ್ಮಿ ಎನಿಸುವರು. ಅಜಾನಜರು ಯಾರೆಂದರೆ; ಪ್ರ॥ ಅನಾಖ್ಯಾತಾದೇವತಾಸ್ತು ಜಾತಾದೇವಕುಲೇಚಯಾಃ ॥ ಗಂಧರ್ವಾಸ್ತುಂಬರುಮುಖಾಃ ಶತಮಪ್ಸರಸಾಂಶತಂ ॥ ನಾರದಾದೀನುಚಿಥ್ಯಂತಾನ್ ವಿನಾತುಋಷಯೋಖಿಲಾಃ ॥ ಅಜಾನದೇವತಾಂ ತಾಹಿತಾಭ್ಯೋಯೋಗ್ಯಾಪಿಕರ್ಮ ದೇವತಾಃ ॥ ದೇವತಾ ಕುಲದಲ್ಲಿ ಹುಟ್ಟಿ ದೇವತೆಗಳೆಂದು ಲೆಕ್ಕಕ್ಕೆ ಬಾರದೆ ಇರುವ ತುಂಬುರು ಮೊದಲಾದ ೧೦೦ ಮಂದಿ ಗಂಧರ್ವರು, ೧೦೦ ಮಂದಿ ಅಪ್ಸರಸ್ತ್ರೀಯರು, ನಾರದರು ಮೊದಲುಮಾಡಿ ಉಚಿಥ್ಯರವರೆವಿಗೂ ಹೇಳಿರುವ ಋಷಿಗಳನ್ನು ಬಿಟ್ಟು ಉಳಿದವರಿಗೆ ಆಜಾನ ದೇವತೆಗಳೆಂದು ಹೆಸರು. ಅವರೆಲ್ಲರೂ ಪುಷ್ಕರನಿಗಿಂತ ೧೦ ಗುಣ ಕಮ್ಮಿ.

೨೮. ಚಿರಪಿತೃಗಳು:– ಇವರು ಆಜಾನು ದೇವತೆಗಳಿಗಿಂತಲೂ ಮತ್ತು ಪಿತೃಗಳಿಗಿಂತಲೂ ನೂರು ಗುಣ ಕಮ್ಮಿ. ಪ್ರ॥ ಆಜಾನೇಭ್ಯೋ ಶತಂನೂನ್ಯಾಃ ಪಿತೃಭ್ಯಶ್ಚ ಶತಾಧಮಾಃ ॥

೨೯. ದೇವ, ಗಂಧರ್ವರು, ಇವರ ಪತ್ನಿಯರು, ಅಪ್ಸರ ಸ್ತ್ರೀಯರು ಇವರು ಸಮರು. ಇವರು ಆಜಾನು ದೇವತೆಗಳಿಗಿಂತ ಕೊಂಚ ಕಮ್ಮಿ. ಪ್ರ॥ ಉಕ್ತಾನ್ಯೇದೇವಗಂಧರ್ವಾ ಸ್ತಚ್ಛತೋನಾನ್ಯಗಾಯಕಾಃ ॥

೩೦. ಮನುಷ್ಯ ಗಂಧರ್ವರು:– ಇವರು ದೇವ ಗಂಧರ್ವರಿಗಿಂತಲೂ ೧೦೦ ಗುಣ ಕಮ್ಮಿ. ಪ್ರ॥ ಗಂಧರ್ವೇಭ್ಯೋ ಮಾನುಷೇಭ್ಯಃ ಶತೋನಾಶ್ಚಕ್ರವರ್ತಿನಃ ॥

೩೧. ಚಕ್ರವರ್ತಿಗಳು:– ಇವರು ಮನುಷ್ಯಗಂಧರ್ವರಿಗಿಂತ ೧೦೦ ಗುಣ ಕಮ್ಮಿ.

೩೨. ಮನುಷ್ಯೋತ್ತಮರು:– ಇವರು ಚಕ್ರವರ್ತಿಗಳಿಗಿಂತಲೂ ೧೦೦ಗುಣ ಕಮ್ಮಿ. ಪ್ರ॥ ಕ್ಷಿತಿಪಾಶ್ಚಶತಂಶೋನಾ ಈರಿತಾಮಾನುಷೋತ್ತಮಾಃ ॥

ತ್ರಿವಿಧ ಜೀವರ ಲಕ್ಷಣ

ಜೀವರಾಶಿಗಳು:– **೧. ಸಾತ್ವಿಕರು, ೨. ರಾಜಸರು, ೩. ತಾಮಸರೆಂಬುದಾಗಿ** ಮೂರು ಪ್ರಕಾರ ಅನಾದಿ ಕಾಲದಿಂದಲೂ ಇರುವವರು. ಈ ಒಂದೊಂದರಲ್ಲಿಯೂ ಮೂರು ಪ್ರಕಾರ–

೧. ಸತ್ವ ಗುಣದಲ್ಲಿ:– **೧. ಸತ್ವ ಸತ್ವ**
೨. ಸತ್ವ ರಜ
೩. ಸತ್ವತಮ

೨. ರಜೋಗುಣದಲ್ಲಿ
೧. ರಜೋ ಸತ್ವ
೨. ರಜೋ ರಜ
೩. ರಜೋ ತಮ

೩. ತಮೋಗುಣದಲ್ಲಿ
೧. ತಮಸ್ಸತ್ವ
೨. ತಮೋ ರಜ
೩. ತಮೋತಮ

೧. **ಸತ್ವಸತ್ವರು:–** ಸತ್ವಗುಣದ ವಿಭಾಗವಾದ ಸತ್ವಪ್ರಾಚುರ್ಯವಾದ ಸತ್ವ ಶರೀರವುಳ್ಳ ಬ್ರಹ್ಮಾದಿ ಪುಷ್ಕರಾಂತ ದೇವತೆಗಳು. ಪ್ರ ॥ ಸಾಪರೋಕ್ಷಾಹರೌಹೇತು ನಾನ್ಯಭಾವಸಮಾಶ್ರಯಾಃ। ಯೋಗಾದ್ಭಾವಂವರ್ಧಯಂತಃ ಶುದ್ಧಸತ್ವಾಇಮೇಮತಾಃ ॥ ತತ್ವಾಭಿಮಾನಿನೋ ದೇವಬ್ರಹ್ಮಾದ್ಯಾಃ ಪರಿಕೀರ್ತಿತಾಃ ॥

೨. **ಸತ್ವರಾಜಸರು:–** ಸತ್ವಗುಣದಲ್ಲಿ ವಿಭಾಗವಾದ ರಜಃಪ್ರಾಚುರ್ಯ ಸತ್ವಶರೀರವುಳ್ಳ ಆಜಾನಜರ ಆರಂಭಮಾಡಿ ದೇವಗಂಧರ್ವಾಂತ ದೇವತೆಗಳು. ಪ್ರ॥ ಅತಾತ್ವಿಕಾಸ್ತಥಾಖ್ಯಾತಾಃ ಸ್ಮೃತಾಃಸತ್ವಿಕರಾಜಸಾ ॥

೩. **ಸತ್ವತಾಮಸರು:–** ಸ್ವಗುಣದಲ್ಲಿ ವಿಭಾಗವಾದ ತಮಃಪ್ರಾಚುರ್ಯ ಸತ್ವ ಶರೀರವುಳ್ಳ ನಿರಂಶರಾದ ಮಾನುಷ ಗಂಧರ್ವರಾರಭ್ಯ ತೃಣಾಂತ ಜೀವರು. ಪ್ರ ॥ ದೇವಾಃಪೃಥಗ್ಗಣಾಃ ಖ್ಯಾತಾಃ ಸ್ಮೃತಾಃ ಸತ್ವಿಕತಾಮಸಾ ॥

೪. **ರಜಃಸತ್ವರು:–** ಮನುಷ್ಯೋತ್ತಮರು. ಪ್ರ॥ ಜೀವಾಸ್ತ್ರೇರಾಜಸಾಪ್ರೋಕ್ತಾ ಮುಕ್ತಿಗಾಮಾನುಷೋತ್ತಮಾ ॥ ಮೇಲ್ಕಂಡ ನಾಲ್ಕು ಪಂಗಡದವರೂ ಮುಕ್ತಿಯೋಗ್ಯರು.

೫. **ರಜೋರಜರು:–** ಮಿಶ್ರಜ್ಞಾನಿಗಳಾದ ನಿತ್ಯ ಸಂಸಾರಿಗಳು. ಪ್ರ ॥ ಕ್ವಚಿತ್ತಾಮ ಸಭಾವಾಶ್ಚಕ್ವಚಿನ್ಮಿಶ್ರ ಸ್ವರೂಪಿಣಃ ॥ ಸತ್ವಾರಂಭವಿಹೀನಾಯೇತೇಸ್ಮೃತಾಃಶುದ್ಧರಾಜಸಾ ॥ ಈ ನಿತ್ಯ ಸಂಸಾರಿಗಳಲ್ಲಿ ಮೂರು ವಿಧ–೧. ಸ್ವರ್ಗಪ್ರಚುರರು, ೨. ನಿರಯಪ್ರಚುರರು, ೩. ಭೂ ಪ್ರಚುರರು.

೧. ಸ್ವರ್ಗ ಪ್ರಚುರರಾದ ನಿತ್ಯ ಸಂಸಾರಿಗಳಿಗೆ ಸ್ವರ್ಗದಲ್ಲಿ ಅಧಿಕ ಸುಖವೂ ಕಮ್ಮಿ ದುಃಖವೂ ಉಂಟು.

೨. ನಿರಯ ಪ್ರಚುರರಾದ ನಿತ್ಯ ಸಂಸಾರಿಗಳಿಗೆ ನರಕದಲ್ಲಿ ಅತಿ ದುಃಖವೂ ಕಮ್ಮಿ ಸುಖವೂ ಉಂಟು.

೩. ಭೂಪ್ರಚುರರಿಗೆ ಸುಖ ದುಃಖಾದಿಗಳು ಭೂಲೋಕದಲ್ಲಿ ಸಮವು.

೬. **ರಜೋತಮರು:**– ತಮೋಯೋಗ್ಯರು. ಪ್ರ॥ ಉಚ್ಚಾವಚೇಷುಲೋಕೇಷು ಭ್ರಮಂತಸ್ತಾಮಸಾಸ್ಮೃತಾಃ ॥ ಈ ತಮೋಯೋಗ್ಯರಲ್ಲಿ ಮೂರುಪ್ರಕಾರ.

೭. **ತಮಃಸತ್ವರು :**– ದೈತ್ಯ ಸ್ವಭಾವವುಳ್ಳ ಮನುಷ್ಯಾಧಮರು. ಪ್ರ॥ ಅನಾಖ್ಯಾತಾಸುರಾಃ ಪ್ರೋಕ್ತಾ ಮಾನುಷಾದುಷ್ಟಚಾರಿಣಾ॥

೮. **ತಮೋರಜರು:**– ಪ್ರಸಿದ್ಧರಾದ ಕಲಿ ಮೊದಲಾದ ದೈತ್ಯರ ಭೃತ್ಯರು.

೯. **ತಮೋತಮರು:**– ಪ್ರಸಿದ್ಧರಾದ ದಾನವರು, ದೈತ್ಯರು. ಪ್ರ॥ ಕಲ್ಯಾದಿಪ್ರಧಾನಾ ಅಸುರಾಸ್ತಾಮಸಸ್ತಾಮಸಾಃ ॥ ಮೇಲ್ಕಂಡ ರೀತಿ ಮಾನುಷೋತ್ತಮ ಮೊದಲುಗೊಂಡು ಬ್ರಹ್ಮದೇವರ ಪರ್ಯಂತವೂ ಒಬ್ಬರಿಗಿಂತ ಒಬ್ಬರು ತಾರತಮ್ಯ ರೀತಿಯಿಂದ ಉತ್ತಮರೆಂದು ಚಿಂತನ ಮಾಡತಕ್ಕವರಿಗೆ ಶ್ರೀಹರಿಯು ಚತುರ್ವಿಧ ಪುರುಷಾರ್ಥವನ್ನು ಕೊಡುವನು.

ಪದ್ಯ ॥ ಮಾನುಷೋತ್ತಮರನಪಿಡಿದುಚತು । ರಾನನಾಂತ ।
ಶತೋತ್ತಮತ್ವ । ಕ್ರಮೇಣಚಿಂತಿಪಭಕ್ತರಿಗೆಚತು
ರ್ವಿಧಪುರುಷಾರ್ಥಾ ॥ ಶ್ರೀನಿಧಿಜಗನ್ನಾಥವಿಠಲ ।
ತಾನೆವಲಿದೀವನು ನಿರಂತರ । ಸಾನುರಾಗದಿಪಠಿ
ಸುವುದುಪ್ರಾಜ್ಞರಿದು ಮರೆಯದಲೆ ॥

ಆದ್ದರಿಂದ ಸರ್ವರೂ ಈ ಗುಣತಾರತಮ್ಯವನ್ನು ಪಠಿಸಬೇಕು.

ಗುಣತಾರತಮ್ಯ ಸಂಪೂರ್ಣವು

೭. ಆವೇಶಾವತಾರತಾರತಮ್ಯ ಪ್ರಕರಣ

ಸಂಪುಟ ೫ ಸಂಚಿಕೆ ೮ ಅಂಗೀರಸ, ಕಾರ್ತಿಕ ನವೆಂಬರ್ ೧೯೩೨

ಶ್ಲೋ॥ ಅವತಾರಾನ್ ಹರೇಃಜ್ಞಾತ್ವಾನಾವತಾರಾ ಹರೇಶ್ಚಯೇ॥
ತಥಾವೇಶಾನ್ಸ್ತಥಾಸಮ್ಯಕ್ಜ್ಞಾತ್ವಾ ಮುಕ್ತಿರ್ನಚಾನ್ಯಥಾ॥

ಶ್ರೀಪರಮಾತ್ಮನ ಮತ್ತು ದೇವತೆಗಳ ಅವತಾರ, ಆವೇಶ, ಅಂಶ ಇವುಗಳನ್ನು ತಾರತಮ್ಯರೀತ್ಯಾ ತಿಳಿಯದಿದ್ದರೆ ಮೋಕ್ಷ ಇಲ್ಲದಿರುವುದರಿಂದ ಅದನ್ನು ವಿವರಿಸಲ್ಪಡುತ್ತದೆ.

೧. **ಶ್ರೀಪರಮಾತ್ಮ** :- ಪ್ರಥಮತಃ ಮೂಲರೂಪನಾದ ಶ್ರೀನಾರಾಯಣ ದೇವರ ಅಂಶತ್ವದಿಂದ ಹೊರಟ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ಬ್ರಹ್ಮಚಾರಿಯಾದ ಶ್ರೀವಾಮನ, ಪರಶುರಾಮ, ದಶರಥರಾಯನ ಪುತ್ರನಾದ ಶ್ರೀರಾಮ, ಶ್ರೀಕೃಷ್ಣ, ಬೌದ್ಧ, ಕಲ್ಕಿ, ಸಾಂಖ್ಯಶಾಸ್ತ್ರ ಬೋಧ ಮಾಡಿದ ಕಪಿಲ, ಋಷಿ ಪತ್ನಿಯಾದ ವಿಕುಂಠ, ತಿರುಪತಿ ಕ್ಷೇತ್ರಸ್ಥನಾದ ಶ್ರೀವೆಂಕಟೇಶ, ಪರಾಶರ ಋಷಿಗಳ ಪುತ್ರನಾದ ಋಷಭ, ಬ್ರಹ್ಮದೇವರಿಗೆ ಜ್ಞಾನೋಪದೇಶ ಮಾಡಿದ ಹಯವದನ, ಅಮೃತ ವಿಭಾಗ ಮಾಡಿದ ಶ್ರೀರೂಪ, ಹಂಸನಾಮಕ ಪರಮಾತ್ಮ, ಅನಿರುದ್ಧರೂಪ, ತ್ರಿವಿಕ್ರಮ ಲಕ್ಷ್ಮೀದೇವಿಯನ್ನು ವಕ್ಷಸ್ಥಳದಲ್ಲಿವುಳ್ಳ ಇಂದ್ರಿಯ ನಿಯಾಮಕನಾದ ಪರಮಾತ್ಮ ಇವೇ ಮೊದಲಾದವು ಆತನ ಅವತಾರಗಳು. ಪ್ರ॥ಮತ್ಸ್ಯಃಕೂರ್ಮಃಕ್ರೋಡಸಿಂಹೌ ವಟುರಾಮೌಚಭಾರ್ಗವಃ॥ ಕೃಷ್ಣಬುದ್ಧೌದತ್ತಕಲ್ಕಿಹಯಗ್ರೀವೈತರೇಯಕಾಃ ॥ ವೇದವ್ಯಾಸಶ್ಚ ವೈಕುಂಠೋಕಪಿಲೋಃಋಷಭಸ್ತಥಾ॥

ಶ್ರೀಶನ ಮೂಲರೂಪಕ್ಕೂ ಅವತಾರ ರೂಪಗಳಿಗೂ ಲೇಶ ಭೇದವಿಲ್ಲ. ಪ್ರ॥ ಅವತಾರಾಹ್ಯಸಂಖ್ಯೇಯಾ ವಿಷ್ಣೋರ್ನಾರಾಯಣಸ್ಯಚ । ಸ್ವಯಂನಾರಾಯಣಸ್ತ್ವೇತೇನಾಣು ಮಾತ್ರವಿಭೇದತಃ॥ ಬಲತೋರೂಪತಶ್ಚಾಪಿಗುಣತಶ್ಚಕಥಂಚನ। ಅನಂತಾನಂತಗುಣತಃ ಪೂರ್ಣೋ ವಿಷ್ಣುರ್ನಚಾನ್ಯಥ ॥

೨. **ಲಕ್ಷ್ಮೀದೇವಿಯರ ಅವತಾರ**:- ಕಮಲದಿಂದ ಜನಿಸಿದ ಬ್ರಹ್ಮದೇವರ ತಾಯಿಯಾದ ಶ್ರೀ ಲಕ್ಷ್ಮೀದೇವಿಯರು ಪರಮಾತ್ಮನ ಕೃಪಾ ಬಲದಿಂದ, ಜ್ಞಾನ, ಬಲ, ಭಕ್ತ್ಯಾದಿ ಗುಣಗಳಿಂದ

ಬ್ರಹ್ಮಾದಿ ಸಕಲ ದೇವತೆಗಳಿಗಿಂತಲೂ ಅತ್ಯಧಿಕಳು. ಪುರಾತನ ಪುರುಷನಾದ ಶ್ರೀನಾರಾಯಣನ ಅನಂತಾನಂತ ಗುಣಗಳಿಂದ ಹೀನಳು. ದೇಶಕಾಲಗಳಲ್ಲಿ ಸಮಳು. ಪ್ರಕೃತಿಯು ಪುರುಷನಾಮಕ ಪರಮಾತ್ಮನಪತ್ನಿ. ಪ್ರ॥ ಪುರುಷಸ್ಯಭಾರ್ಯಾಪ್ರಕೃತಿಃ ಪ್ರಕೃತೇಶ್ಚಾಭಿಮಾನಿನೀ ॥ ಈಕೆಯು ಜಡಪ್ರಕೃತಿಗೂ, ಗುಣತ್ರಯಗಳಿಗೂ, ಸೃಷ್ಟಿ, ಸ್ಥಿತಿ, ಲಯಗಳಿಗೂ ಅಭಿಮಾನಿಯು. ಪ್ರ॥ ಸೃಷ್ಟೌಲಯೇರಮಾತೇಷಾಂ ಮಾನಿನೀಚನಿರಂತರಂ ॥

ಪರಮಾತ್ಮನ ಅವತಾರ	**ಶ್ರೀಲಕ್ಷ್ಮೀದೇವಿಯರ ಅವತಾರ (ಪತ್ನಿ)**
ವಿಷ್ಣು	ಶ್ರೀ
ವರಾಹ	ಕುಂಭಿಣೀ
ರುದ್ರನಾಮಕ ಪರಮಾತ್ಮ	ದುರ್ಗಾ
ಶ್ರೀಕೃಷ್ಣ	ರುಕ್ಮಿಣಿ, ಸತ್ಯಭಾಮಾ
ಅನಿರುದ್ಧ	ಶಾಂತಿ
ಪ್ರದ್ಯುಮ್ನ	ಕೃತಿ
ಸಂಕರ್ಷಣ	ಜಯಾ
ವಾಸುದೇವ	ಮಾಯಾ
ಶ್ರೀಮನ್ನಾರಾಯಣ	ಲಕ್ಷ್ಮೀ
ಶ್ರೀರಾಮ	ಸೀತಾ
ಶ್ರೀಹರಿ	ಕಮಲಾಲಯಾ
ಯಜ್ಞ	ದಕ್ಷಿಣಾ

ಮೇಲ್ಕಂಡ ರೀತಿಯಲ್ಲಿ ಪರಮಾತ್ಮನ ಅವತಾರದೊಂದಿಗೆ ಲಕ್ಷ್ಮೀದೇವಿಯು ಆಯಾ ಅವತಾರಕ್ಕೆ ಮೇಲ್ಕಂಡ ನಾಮಾಂತರಗಳಿಂದ ಪತ್ನಿಯಾಗಿರುತ್ತಾಳೆ. ಈಕೆಯ ಮೂಲರೂಪಕ್ಕೂ ಅವತಾರ ರೂಪಕ್ಕೂ ಭೇದವಿಲ್ಲ. ಪ್ರ ॥ ಇತ್ಯಾದಿಕಾಹ್ಯನಂತಾಶ್ಚ ಹ್ಯವತಾರಾಃಪೃಥಗ್ವಿಧಾಃ॥ ರಮಾಯಾಃಸಂತಿಪಕ್ಷೀಂದ್ರಭೇದಹೀನಾಃಪರಸ್ಪರಂ ॥

೩. ಬ್ರಹ್ಮ–ವಾಯು :– ೧. ವಾಸುದೇವನ ಪತ್ನಿಯಾದ ಮಾಯಾದೇವಿಯಲ್ಲಿ ಸೂಕ್ಷ್ಮದೇಹದಿಂದ ಜನಿಸಿದ ಪುರುಷ ನಾಮಕ ವಿಧಿ, ೨. ಅನಿರುದ್ಧನ ಪತ್ನಿ ಶಾಂತೀ ದೇವಿಯಲ್ಲಿ ಜನಿಸಿದ ಮಹತ್ತತ್ವಾಭಿಮಾನಿಯಾದ ಬ್ರಹ್ಮರೂಪ, ೩. ಸಂಕರ್ಷಣ ಪತ್ನಿಯಾದ ಜಯಾದೇವಿಯಲ್ಲಿ ಸೂತ್ರನಾಮಕ ಬ್ರಹ್ಮ, ಶ್ರೀಮನ್ನಾರಾಯಣನ ನಾಭಿಕಮಲದಿಂದ ಉತ್ಪನ್ನನಾದ ಚತುರ್ಮುಖ ಬ್ರಹ್ಮ, ಹೀಗೆ ಬ್ರಹ್ಮನಿಗೆ, ಪುರುಷ, ವಿರಿಂಚಿ, ಮಹಾನ್, ಬ್ರಹ್ಮ ಎಂದು ನಾಲ್ಕು

ರೂಪಗಳು. ಈ ವಿಷಯದಲ್ಲಿ ಪುರಂದರ ದಾಸರಾಯರ ಸುಳಾದಿ. ಪ್ರ॥ ಪುರುಷನಾಮಕವಿಧಿ। ಕಾಲನಾಮಕ ವಿಧಿ । ತುರೀಯರೂಪನಾದ । ವಾಸುದೇವನಿಂದ ಜನಿತರಾಗಿಹರ್‍ಯ್ಯ । ಸಿರಿಶಾಂತೀಯನಿರುದ್ಧ । ದೇವಾನಾತ್ಮಜನೆನಿಸಿ । ಪರಮಮಹತ್ತತ್ವತನು ವಿಧಿಪುಟ್ಟಿಹನು । ಕರಿವರದನಾರಾಯಣನ । ನಾಭೀಕಮಲದಿಂದ ಚತುರಾನನವಿಧಿಜನಿಸಿಹ ಕೇಳೋಮನವೇ। ವಿರಿಂಚಿಗೆ ಅವತಾರಭುವಿಯಲ್ಲಿ ಇಲ್ಲ ಕಾಣೋ । ನಿರ್ದುಷ್ಟರೂಪಗಳು ಸದಾಕಾಲ । ಕರುಣಾಕರ ಶ್ರೀಪುರಂದರ ವಿಠಲನ । ಚರಣಾವಮನದಲ್ಲಿಟ್ಟು । ಮೆರಿಯುವ ರೂಪಕಂಡಿಯಾ॥ ಪ್ರ॥ ರೂಪೈಶ್ಚತುಷ್ಟಯೈಶ್ಚೈವ ಬ್ರಹ್ಮಣಃಪರಮೇಷ್ಠಿನಃ ॥ ಪ್ರಜ್ಞಯಾಸಹಸಾಯಸ್ಯನಾಸ್ತಿ ಲೋಕೇಚತುರ್ದಶೇ ॥ ಶುಕ್ಲಶೋಣಿತಸಂಬಂಧಹ್ಯವತಾರಚತುಷ್ಟಯೇ ॥ ಈತನಿಗೆ ಶುಕ್ಲಶೋಣಿತ ಸಂಬಂಧ ದೇಹವಿಲ್ಲ ಮತ್ತು ಭೂಲೋಕದಲ್ಲಿ ಅವತಾರವಿಲ್ಲ.

೨. ವಾಯುರೂಪಗಳು :- ಪಂಚಾಶತ್ ಮರುತ್ತುಗಳಿಗೆ ಪ್ರೇರಕನಾದ ಮಹಾನ್ ಮರುತ್ತು, ಸರ್ವರಿಗೂ ಪ್ರಾಣಭೂತನಾದ್ದರಿಂದ ಮುಖ್ಯ ಪ್ರಾಣರೂಪ, ಸರ್ವಚೇತನರಿಗೂ ಮುಖ್ಯಗುರುವಾದ್ದರಿಂದ ಗುರುವರ ಎಂದೂ, ಶ್ರೀಪರಮಾತ್ಮನನ್ನು ಸರ್ವದಾ ಮನಸ್ಸಿನಲ್ಲಿ ಧ್ಯಾನ ಮಾಡುವರಾದ ಪ್ರಯುಕ್ತ ಮಹಾಧ್ಯಾತ ಎಂತಲೂ, ಬಲದಾಯಕನಾದ್ದರಿಂದ ಬಲ ಎಂದೂ, ವಿಶೇಷ ತಿಳಿದವರಾದ್ದರಿಂದ, ವಿಜ್ಞಾತ ಎಂತಲೂ ರೂಪಗಳು. ಪ್ರ॥ ವಿರಿಂಚಿಶ್ಚ ಮಹಾನ್‌ಬ್ರಹ್ಮಾಪ್ರಾಣಃಸೂತ್ರಂಧೃತಿಃಸ್ಮೃತಿಃ। ಮೇಧಾಮುಕ್ತಿರ್ವಿಷ್ಣುಭಕ್ತಿಶ್ಚಿತ್ತಂ ವಾಯುರ್ಮಹಾಪ್ರಭುಃ॥ ಬಲಂಸ್ಥಿತಿ ಋಜುರ್ಯೋಗಃಪ್ರಜ್ಞಾಜ್ಞಾನಂಮಹಾಗುರುಃ । ಮಹಾಧ್ಯಾತಾಚ ವಿಜ್ಞಾತಾವೈರಾಗ್ಯಂರೋಚನಃಸುಖಂ ॥ ಹನೂಮಾನ್‌ಭೀಮ ಆನಂದ ಇತ್ಯಾದಿ ಬಹುರೂಪಿಣಃ॥ ಮತ್ತು ಹನುಮ, ಭೀಮ, ಮಧ್ವಾಚಾರ್ಯರೆಂಬ ಮೂರು ಅವತಾರಗಳನ್ನು ತ್ರೇತಾ, ದ್ವಾಪರಮ ಕಲಿಯುಗದಲ್ಲಿ ಸ್ವೀಕರಿಸಿದರು. ಈ ವಾಯುದೇವರಿಗೂ ಅವತಾರಗಳಲ್ಲಿ ಶುಕ್ಲಶೋಣಿತ ಸಂಬಂಧವಿಲ್ಲ. ವಾಯುದೇವರಿಗೆ ಅಸುರಾವೇಶವಿಲ್ಲ. ಪ್ರ ॥ ಪ್ರಾಣಸ್ಯನಾಸುರಾವೇಶೋ ಆಖಣಾಶ್ಮಸಮೋಹಿಸಃ ॥ ಈತನೇ ಭಗವಂತನ ಸ್ವರೂಪವನ್ನು ಚೆನ್ನಾಗಿ ವ್ಯಕ್ತಮಾಡಿ ಕೊಡುವವನು. ಬ್ರಹ್ಮವಾಯು ಇಬ್ಬರೂ ಪರಮಾತ್ಮನ ಸಂಪೂರ್ಣಾನುಗ್ರಹ ಬಲದಿಂದ ಆತನಂತೆಯೇ ಇವರೂ ಚೇತನಾ ಚೇತನಾತ್ಮಕವಾದ ಪ್ರಪಂಚದಲ್ಲಿ ಸರ್ವತ್ರ ವ್ಯಾಪ್ತರಾಗಿರುತ್ತಾರೆ. ಪ್ರ ॥ ಸಂಪೂರ್ಣಾನುಗ್ರಹಾದ್ವಿಷ್ಣೋಃ ವಾಯುಃಪೂರ್ಣಗುಣಾತ್ಮಕಃ॥ ಇವರು ಜಗತ್ತಿನ ಸರ್ವ ಕಾರ್ಯಗಳನ್ನೂ ಪರಮಾತ್ಮನ ಆಜ್ಞೆಯಿಂದಲೇ ನಡೆಸುತ್ತಾರೆ.

೩. ಸರಸ್ವತಿ- ಭಾರತಿ :- ೧. ಸರಸ್ವತಿಯ ಸರ್ವ ವೇದಕ್ಕೂ ಅಭಿಮಾನಿಯಾದ್ದರಿಂದ ವೇದಾತ್ಮಿಕಳು ಎಂದು ಹೆಸರು. ಪ್ರ ॥ ಸರ್ವವೇದಾಭಿಮಾನಿತ್ವಾತ್ಸರ್ವವೇದಾತ್ಮಿಕಾಸ್ಮೃತಾ॥

೪. ಭಾರತಿ :– ಸಮಸ್ತ ಭೋಗಗಳು ಪರಮಾತ್ಮನ ಪ್ರೀತ್ಯರ್ಥವಾಗಿಯೇ ಮಾಡುವಳಾದ್ದರಿಂದ ಭುಜಿ ಎಂತ ಹೆಸರು. ಭುಜ್ಯತೇಸರ್ವ ಭೋಗಾಂಸ್ತು ವಿಷ್ಣುಪ್ರೀತ್ಯರ್ಥಮೇವಚ ॥ ಅತಸ್ತುಭಾರತೀಜ್ಞೇಯಾ ಭುಜಿಸಂಜ್ಞೇತಿಕೀರ್ತಿತಾ ॥ ಗಾಯತ್ರೀ ಗುರುಭಕ್ತಿಶ್ಚಶ್ರದ್ಧಾಪ್ರೀತಿಃಸುಖಾತ್ಮಿಕಾ ॥ ಕಾಶಿರಾಜನ ಮಗಳಾದ ಭೀಮಸೇನ ದೇವರ ಹೆಂಡತಿಯಾದ ಕಾಳಿಯೇ ಸಾಕ್ಷಾತ್ ಭಾರತೀ ದೇವಿಯ ಅವತಾರವು. ಪ್ರ ॥ ಕೇವಲಾಭಾರತೀಜ್ಞೇಯಾಕಾಶಿರಾಜಸ್ಯಕನ್ಯಕಾ ॥ ಈಕೆಯೇ ದ್ರುಪದರಾಜನ ಮಗಳು. ವಾಯುದೇವರು ಸರ್ವರನ್ನು ಭರಣ ಮಾಡುವುದರಿಂದ ಭರತ ಎಂದು ಹೆಸರಿರುವುದರಿಂದ ಇವರ ಪತ್ನಿಗೆ ಭಾರತೀ ಎಂತಲೂ ಹೇಳುವುದುಂಟು. ಬ್ರಹ್ಮನಿಂದ ಶಾಪಗ್ರಸ್ತರಾದ ಪಾರ್ವತೀ, ಶಚೀ, ಶಾಮಳಾ, ಉಷಾ ಈ ನಾಲ್ವರನ್ನು ಉದ್ಧರಿಸುವ ಸಲುವಾಗಿ ಭಾರತೀದೇವಿಯರು ಮೊದಲು ಶಿವನೆಂಬ ಬ್ರಾಹ್ಮಣನ ಮಗಳಾಗಿ ಶಿವಕನ್ಯೆಯೆಂದು ಹುಟ್ಟಿ ಕನ್ಯಾವಸ್ಥೆಯಲ್ಲಿಯೇ ಮರಣವನ್ನು ಹೊಂದಿ, ಎರಡನೇ ಜನ್ಮದಲ್ಲಿ ನಳರಾಜನ ಮಗಳಾಗಿ ಇಂದ್ರಸೇನೆಯೆಂದು ಕರೆಸಿಕೊಂಡು, ಆ ದೇಹವನ್ನು ಬಿಟ್ಟ ನಂತರ ದ್ರುಪದರಾಜನ ಮಗಳಾಗಿ ಜನಿಸಿದಳು. ವಾಯುದೇವರು ಕಲಿಯುಗದಲ್ಲಿ ಮಧ್ವಾಚಾರ್ಯರಾಗಿ ಜನಿಸಿದ ಕಾಲದಲ್ಲಿ

(ಮುಂದುವರೆದುದು)

ಸಂಪುಟ ೫, ಸಂಚಿಕೆ ೯ ಅಂಗೀರಸ, ಮಾರ್ಗಶಿರ ಡಿಸೆಂಬರ್ ೧೯೩೨

ಶಂಕರನೆಂಬ ಒಬ್ಬ ಬ್ರಾಹ್ಮಣ ಮನೆಯಲ್ಲಿ ದ್ರೌಪದಿಯು ಚಂದ್ರಾ ಎಂಬ ಹೆಸರಿನಿಂದ ಹುಟ್ಟಿ ಕನ್ಯಾವಸ್ಥೆಯಲ್ಲಿಯೇ ಮೃತಿ ಹೊಂದಿದಳು. ಹೀಗೆ ಶಚ್ಯಾದಿಗಳೊಂದಿಗೆ ನಾಲ್ಕು ಅವತಾರಗಳನ್ನು ಮಾಡಿದರು. ಅಂದರೆ ಹನುಮದವತಾರ ಕಾಲದಲ್ಲಿ ಶಿವಕನ್ಯೆಯಾಗಿಯೂ, ತ್ರೇತಾಯುಗದ ಕೊನೆಯಲ್ಲಿ ಇಂದ್ರಸೇನೆಯಾಗಿಯೂ, ಭೀಮಸೇನಾವತಾರ ಕಾಲದಲ್ಲಿ ದ್ರೌಪದಿಯಾಗಿಯೂ, ಮಧ್ವವತಾರಕಾಲದಲ್ಲಿ ಚಂದ್ರಾ ಎಂಬುದಾಗಿಯೂ ನಾಲ್ಕು ಅವತಾರಗಳು.

ಪ್ರ॥ ಹನುಮಾಂಶ್ಚಯದಾಜಜ್ಞೇ ತ್ರೇತಾಯಾಂಪಕ್ಷಿಸತ್ತಮ । ತದಾಶಿವಾಖ್ಯ ವಿಪ್ರಾಚ್ಚಜಜ್ಞೇಸಾ ಭಾರತೀಸ್ಮೃತಾ॥ ನಕೇವಲಾಭಾರತೀ ಸಾಶಚ್ಯಾದ್ಯಾಭಿಶ್ಚ ಸಂಯುತಾ। ತಸ್ಮಿನ್‌ಜನ್ಮನಿತಾಃ ಸರ್ವಾನಾಪುಂಯೋಗಂಸ್ವಭರ್ತೃಭಿಃ ॥ ಅನ್ಯಗಾತ್ವಂಚನ್ಯೈ ವಾಪಕನ್ಯಾಜನ್ಮನಿಸಾಮೃತಾ । ತ್ರೇತಾಂತೇಸ್ಯೈವ ಪಕ್ಷೀಂದ್ರಶಚ್ಯಾದ್ಯಾಭಿಶ್ಚ ಸಂಯುತಾ॥ ದಮಯಂತ್ಯಾನಳಾಜ್ಜಾತ ಇಂದ್ರಸೇನೇತಿಸಂಜ್ಞ ಕಾ । ನಲಂನಂದ ಯತೀಯ ಸ್ತ್ವತ್ತಸ್ತ್ವಚ್ಚನಲನಂದಿನೀ ॥ ತತ್ರಸ್ವಭರ್ತೃಸಂಯೋಗಂ ನೈವಚಾಪಖಗೇಶ್ವರ । ತತ್ರಾನ್ಯಾಗಾತ್ವಂ ವಿಜ್ಞೇಯಂ ಮುದ್ಗಲಸ್ಥೇನವಾಯುನಾ ॥ ಕಿಂಚಿತ್ಕಾಲಂತತ್ರಸ್ಥಿತ್ವಾ ಕನ್ಯೈವಮೃತಿಮಾಪಸಾ ।

ಶಚ್ಯಾದಿಸಂಯುತಸಾಭೂದ್ನೃಪದಸ್ಯ ಮಹಾತ್ಮನಃ ॥ ವೇಧಿಮಧ್ಯೆಸಮುದ್ಭೂತಾ ಭೀಮಸೇನಾರ್ಥಮೇವಚ । ಸಂಕರಸ್ಯಗೃಹೇಚಂದ್ರಾ ಭವಿಷ್ಯತಿಕಲೌಯುಗೇ ॥ ವಾಯೋಸ್ತೃತೀಯರೂಪಾರ್ಥಂಕನ್ಯಾಸ್ಯೈವಮ್ಯತಿಂಗತಾ ॥

೫. ಗರುಡ–ಶೇಷ–ರುದ್ರ :– (i) ಪರಮಾತ್ಮ ಮತ್ತು ವಾಯುದೇವರು ಇವರಿಬ್ಬರ ಆವೇಶದಿಂದ ಕೂಡಿದ ಶೇಷದೇವರ ಅವತಾರವು ನರನಾರಾಯಣರ ಪೈಕಿ ನರರೂಪವು. ಸಂಕರ್ಷಣನಾಮಕ ಪರಮಾತ್ಮಾ ಅಂಶದಿಂದ ಕೂಡಿದ ಇವರ ಅವತಾರವು ಲಕ್ಷ್ಮಣ ರೂಪವು. ಪ್ರ॥ ಸಂಕರ್ಷಣಾವೇಶಯುತ್ತೋಲಕ್ಷ್ಮಣಃಪರಿಕೀರ್ತಿತಃ ॥ ಪರಮಾತ್ಮನ ಶುಕ್ಲಕೇಶಾವೇಶದಿಂದ ಕೂಡಿದ ಇವರ ಅವತಾರವು ಬಲರಾಮ ರೂಪವು. ಪ್ರ॥ ಶುಕ್ಲಕೇಶಯುಕ್ತೋಬಲಸ್ತಥಾ ॥
(ii) ರುದ್ರದೇವರ ಅವತಾರ:– ಈತನು ಸಕಲ ಪಾಪಗಳನ್ನು ಸ್ಮರಣಮಾತ್ರದಿಂದ ಪರಿಹರಿಸುವನಾದ್ದರಿಂದ ಹರ ಎಂತಲೂ; ಸದಾ ಮಂಗಳ ಸ್ವರೂಪನಾದ್ದರಿಂದ ಸದಾಶಿವ ಎಂತಲೂ; ೧೦ ಕಲ್ಪಗಳು ಲವಣ ಸಮುದ್ರದಲ್ಲಿ ತಪಸ್ಸು ಮಾಡಿರುವ ಪ್ರಯುಕ್ತ ತಪಃ ಎಂತಲೂ; (ಪ್ರ ॥ ದಶಕಲ್ಪತಪಃಕರ್ತ್ಯಂ ವಿವೇಶಲವಣಾಂಭಸಂ । ಅತೋ ರುದ್ರಸ್ತಪಃಸಂಜ್ಞೇತಿ॥) ಅಹಂಕಾರ ತತ್ವಕ್ಕೆ ಅಭಿಮಾನಿಯಾದ್ದರಿಂದ ಅಹಂಕೃತು ಎಂತಲೂ; ಊರ್ಧ್ವರೆತಸ್ಸು ಉಳ್ಳವನಾದ್ದರಿಂದ ಊರ್ಧ್ವಪಟ ಎಂತಲೂ; ಜೈಗೀಷ ಋಷಿರೂಪ, ಭೃಗುಕುಲದಲ್ಲಿ ತೊಡೆಯಿಂದ ಜನಿಸಿದ ಋಷಿರೂಪ, ದ್ರೋಣಪುತ್ರರಾದ ಅಶ್ವತ್ಥಾಮಾಚಾರ್ಯರು, ಕಿರಾತರೂಪ, ದೂರ್ವಾಸ ಋಷಿರೂಪ ಇವುಗಳಲ್ಲವೂ ರುದ್ರಾವತಾರಗಳು. ಪ್ರ॥ ಸದಾಶಿವಸ್ತಪೋಹಂ ಕೃದ್ವಾಯ್ವಾವಿಷ್ಟಃಶುಕಸ್ತಥಾ॥ ಊರ್ಧ್ವಪಟೋವಾಮದೇವಃ ಸದ್ಯೋಜಾತೋಹ್ಯಘೋರಕಃ । ತತ್ಪುಮಾನ್ದ್ರೌಣಿರೌರ್ವಶ್ವದೂರ್ವಾಸಾಮುನಿರೇವಚ॥ ಜೈಗೀಷಾವ್ಯಾಧರೂಪೇಣ ಶೇಷರುದ್ರೌಪ್ರಕೀರ್ತಿತಾ ॥
(iii) ಗರುಡದೇವರಿಗೆ ಭೂಮಿಯಲ್ಲಿ ಅವತಾರವಿಲ್ಲ.

೬. ಷಣ್ಮಹಿಷಿಯರು :– ತುಳಸಿಯೇ ಜಾಂಬವತಿಯು. ಲಕ್ಷ್ಮ್ಯಾವೇಶವುಳ್ಳವಳು. ಪ್ರ॥ ತುಳಸೀಜಾಂಬವತೀತ್ಯುಕ್ತಾ ಲಕ್ಷ್ಮ್ಯಾವೇಶೇನ ಸಂಯುತಾ॥ (i) ಚಂದ್ರಪುತ್ರಿಯಾದ ಈ ಜಾಂಬವತೀ ದೇವಿಯು ಜೈಗೀಷವ್ಯಸಮೇತ ಶ್ರೀನಿವಾಸದೇವರ ಯಾತ್ರೆಯನ್ನೂ ಮತ್ತು ತಪಸ್ಸನ್ನೂ ಮಾಡಿದ್ದರಿಂದ ಶ್ರೀಕೃಷ್ಣನ ಪತ್ನಿಯಾದಳು. (ii) ಅಗ್ನಿಪುತ್ರಿ ನೀಲಾದೇವಿಯು ಶ್ರೀ ಕುಮಾರ ಕ್ಷೇತ್ರದಲ್ಲಿ ಬಹು ತಪಸ್ಸು ಮಾಡಿ ಶ್ರೀನಿವಾಸನ ಯಾತ್ರೆಯನ್ನು ಅನುಸಂಧಾನಪೂರ್ವಕ ಮಾಡಿದ್ದರಿಂದ ಶ್ರೀಕೃಷ್ಣನ ಪತ್ನಿಯಾದಳು. (iii) ನಳಪುತ್ರಿಯಾದ ಭದ್ರಾದೇವಿಯು ಪ್ರದಕ್ಷಿಣ ನಮಸ್ಕಾರ ಸೇವಾರೂಪವಾದ ತಪಸ್ಸಿನಿಂದ ಶ್ರೀಕೃಷ್ಣನ ಪತ್ನಿಯಾದಳು. (iv) ವಿವಸ್ವಾನ್‌ನಾಮಕ ಸೂರ್ಯನ ಮಗಳಾದ ಕಾಳಿಂದೀ ದೇವಿಯು ಶ್ರೀಹರಿನಾಮ ಮತ್ತು ಧ್ಯಾನಾಖ್ಯ

ತಪಃಪ್ರಭಾವದಿಂದ ಶ್ರೀಕೃಷ್ಣನ ಪತ್ನಿಯಾದಳು. (v) ಬರ್ಹಿಷದನ ಮಗಳಾದ ಲಕ್ಷ್ಮಣಾದೇವಿಯು ಶ್ರೀಹರಿಯ ಲಕ್ಷಣಗಳನ್ನೇ ಲಕ್ಷವಾಗಿಟ್ಟು ಧ್ಯಾನಮಾಡಿದವಳಾದ ಪ್ರಯುಕ್ತ ಶ್ರೀಕೃಷ್ಣನ ಪತ್ನಿಯಾದಳು. (vi) ಮಿತ್ರವಿಂದಾದೇವಿಯು ಶ್ರೀಹರಿಕಥಾ ಶ್ರವಣರೂಪವಾದ ತಪಸ್ಸಿನಿಂದ ಅತ್ಯಂತ ಸುದೃಢ ಜ್ಞಾನ ಭಕ್ತಿ ವೈರಾಗ್ಯ ಪೂರ್ವಕ ಭಜಿಸಿದ್ದರಿಂದ ಶ್ರೀಕೃಷ್ಣನ ಪತ್ನಿಯಾದಳು. ಈ ೬ ಮಂದಿಯೊಳಗೆ ಜಾಂಬವತಿಯಲ್ಲಿ ಲಕ್ಷ್ಮ್ಯಾವೇಶವಿರುವುದರಿಂದ ಈಕೆಯು ಉತ್ತಮಳು. ಪ್ರ॥ ನೀಲಾಭದ್ರಾಮಿತ್ರವಿಂದಾ ಕಾಳಿಂದೀಲಕ್ಷಣಾತಥಾ ॥ ಜಾಂಬವತ್ಯಾಃಕಿಂಚಿದೂನಾ ದೇವ್ಯಾವೇಶಯುತಾ ಅಪಿ॥

೭. **ಸೌಪರ್ಣಿ-ವಾರುಣಿ-ಪಾರ್ವತಿ** :-೧.ಗರುಡದೇವರ ಪತ್ನಿಯಾದ **ಸೌಪರ್ಣಿ**ಗೆ ತನ್ನ ಪತಿಗೆ ಭೂಲೋಕದಲ್ಲಿ ಹೇಗೆ ಅವತಾರವಿಲ್ಲವೋ ಹಾಗೆಯೇ ಈಕೆಗೂ ಸಹ ಅವತಾರವಿರುವುದಿಲ್ಲ. ೨. **ವಾರುಣಿ**ಯು ರೇವತರಾಜನ ಮಗಳಾಗಿ ರೇವತೀ ಎಂಬ ಹೆಸರಿನಿಂದ ಬಲರಾಮನ ಪತ್ನಿಯಾಗಿ ಅವತರಿಸಿದಳು. ಬಲರಾಮನಲ್ಲಿ ಹೇಗೆ ಪರಮಾತ್ಮನ ಶುಕ್ಲ ಕೇಶಾವಿರುವುದೋ ಹಾಗೆಯೇ ಈತನ ಪತ್ನಿಯಲ್ಲಿಯೂ ಲಕ್ಷ್ಮ್ಯಾವೇಶವುಂಟು. ಈಕೆಗೆ ಶ್ರೀ ಎಂದೂ ಹೆಸರುಂಟು. ಈಕೆಯು ಮೂಲರೂಪದಿಂದ ಮದ್ಯರೂಪಳಾಗಿ ಬಲರಾಮನನ್ನು ತೃಪ್ತಿಪಡಿಸಿದಳು. (ಸುರಾಪ್ರತ್ಯಕ್ಚ ವಾರುಣೀ ಇತ್ಯಮರಃ) ಹೇಗೆಂದರೆ – ಬಲರಾಮನು ರಾತ್ರಿಕಾಲದಲ್ಲಿ ಯಮುನಾ ನದೀ ತೀರದಲ್ಲಿ ಕುಮುದ ಪುಷ್ಪಾದಿಗಳ ವಾಸನೆಯಿಂದ ಕೂಡಿದ ಗಾಳಿಯನ್ನು ಸೇವಿಸುತ್ತಾ ಗೋಪಿಕಾ ಸ್ತ್ರೀಯರಿಗೆ ಆನಂದವನ್ನುಂಟು ಮಾಡುತ್ತಾ ರಮಿಸುತ್ತಿರುವ ಆ ಸಮಯದಲ್ಲಿ ಶೇಷದೇವರ ಪತ್ನಿಯಾದ ಈಕೆಯು ವರುಣನಿಂದ ಕಳುಹಿಸಲ್ಪಟ್ಟವಳಾಗಿ ಬಲರಾಮನ ಸೇವಾರ್ಥವಾಗಿ ವೃಕ್ಷದ ಮಧ್ಯದ ಗೊಂಬೆಯಿಂದ ಮದ್ಯರೂಪಳಾಗಿ ಹೊರಟು ಆ ವನವನ್ನೆಲ್ಲಾ ವ್ಯಾಪಿಸಿದಳು. ಆಗ ಬಲರಾಮನು ಗಾಳಿಯಿಂದ ಬಂದ ಆ ವಾಸನೆಯನ್ನು ಆಘ್ರಾಣಿಸಿ ಆ ಮಧುವನ್ನು ಪಾನ ಮಾಡಿದ್ದರಿಂದ ಪೇಯಳೆನಿಸಿದಳು. ಇದೂ ಆಕೆಯ ಒಂದು ಅವತಾರರೂಪ. ಪ್ರ॥ ರೇವತೀಶ್ರೀಯುತಾಶ್ರೀಶ್ಚಪೇಯರೂಪಾಚವಾರುಣೀ॥

೩.**ಪಾರ್ವತಿ** – ಈಕೆಯು ಕಾತ್ಯಾಯನ ಋಷಿಯ ಗೋತ್ರದಲ್ಲಿ ಹುಟ್ಟಿದವಳಾದ್ದರಿಂದ ಕಾತ್ಯಾಯನೀ ಎಂತಲೂ ಹಿಮವಂತನ ಮಗಳಾದ್ದರಿಂದ ಹೇಮವತೀ ಎಂತಲೂ; (ಹಿಮವತ ಅಪತ್ಯಂ ಸ್ತ್ರೀ ಹೈಮವತೀ) ಪರ್ವತ ಪುತ್ರಿಯಾದ್ದರಿಂದ ಪಾರ್ವತೀ ಎಂತಲೂ; (ಪರ್ವತಸ್ಯ ಅಪತ್ಯಂ ಸ್ತ್ರೀಪಾರ್ವತೀ) ದಕ್ಷನ ಮಗಳಾದ್ದರಿಂದ ದಾಕ್ಷಾಯಣೀ ಎಂತಲೂ; (ದಕ್ಷಸ್ಯಾಪತ್ಯಂ ಸ್ತ್ರೀ ದಾಕ್ಷಾಯಣೀ) ಪರ್ವತದ ದೆಶೆಯಿಂದ ಹುಟ್ಟಿದವಳಾದ್ದರಿಂದ ಗಿರಿಜಾ ಎಂತಲೂ; (ಗಿರೇರ್ಜಾತಾ ಗಿರಿಜಾ) ಮತ್ತು ಮೇನಕಿಯ ಮಗಳಾದ್ದರಿಂದ ಮೇನಕಾತ್ಮಜೆ ಎಂತಲೂ ರೂಪಗಳು. (ಮೇನಕಾಯಾ ಆತ್ಮಜಾ ಮೇನಕಾತ್ಮಜಾ)

೮. ಇಂದ್ರ– ಕಾಮರು:– ೧. ಇಂದ್ರನಿಗೆ ಏಳು ಅವತಾರಗಳು:– ೧. ಇಂದ್ರನು ಕುಂತೀದೇವಿಯಲ್ಲಿ ಅರ್ಜುನನಾಗಿ ಅವತರಿಸಿದನು. ನರಾಂಶ ಅಂದರೆ ಪರಮಾತ್ಮನ ಅಂಶದಿಂದ ಕೂಡಿದವನಾದ್ದರಿಂದ ನರನೆಂತಲೂ, ೨. ಕಶ್ಯಪನ ಮಗನಾಗಿ ಪುರಂದರನೆಂದು ಅವತರಿಸಿದುದೂ, ೩.ಚಂದ್ರವಂಶದಲ್ಲಿ ವಿಶ್ವಾಮಿತ್ರನಿಗೆ ಜನಕನಾಗಿ ಗಾಧಿ ಎಂದು ಅವತರಿಸಿದುದೂ, ೪. ರಾಮದೇವರ ಮಕ್ಕಳಾದ ಕುಶ ಲವರ ಪೈಕಿ ಈತನು ಕುಶನಾಗಿ ಅವತರಿಸಿದುದೂ, ೫. ಮಂದ್ರದ್ಯುಮ್ನನೆಂಬ ಹೆಸರಿನಿಂದ ಇಂದ್ರಪಟ್ಟವನ್ನಾಳಿದ್ದರಿಂದ ಮಂದ್ರದ್ಯುಮ್ನನೆಂತಲೂ, ೬. ಇಕ್ಷ್ವಾಕು ಮಗನಾಗಿ ಅವತರಿಸಿದುದರಿಂದ ವಿಕುಕ್ಷಿ ಎಂತಲೂ, ೭. ವಾಲಿಯೂ ಇಂದ್ರಾವತಾರವೆಂತಲೂ ಇಂದ್ರನಿಗೆ ಏಳು ಅವತಾರಗಳು. ಪ್ರ॥ ಪುರಂದರೋಮಂದ್ರದ್ಯುಮ್ನೋರ್ಜುನನ್ನೃಹರೀರಯುತ್ ॥ ವಾಲಿಗಾಧಿವಿಕುಕ್ಷಿಶ್ಚ ಕುಶಾದ್ಯಾ ಇಂದ್ರಉಚ್ಯತೇ ॥ **೨. ಕಾಮನಿಗೆ ಆರು ಅವತಾರಗಳು:–** ೧. ರಾಮಾವತಾರದಲ್ಲಿ ಮನ್ಮಥನು (ಕಾಮ) ಕೈಕೇಯಿ ಮಗನಾದ ಭರತನೆಂದು ರಾಮದೇವರ ತಮ್ಮನಾಗಿ ಅವತರಿಸಿದುದೂ, ೨. ಮನ್ಮಥನು ತಪಸ್ಸುಮಾಡಿ ಸುದರ್ಶನನೆಂಬ ಅವತಾರದಿಂದ ಚಕ್ರನಾಗಿದ್ದನು. ೩. ಈತನು ಬ್ರಹ್ಮಾವೇಶದಿಂದ ಕೂಡಿ ರೋಹಿಣಿಯ ಪುತ್ರನಾಗಿ ಸಾಂಬನೆಂದು ಅವತರಿಸಿದನು. ೪. ಈತನೇ ಷಣ್ಮುಖನೆಂತಲೂ; ೫. ಪ್ರದ್ಯುಮ್ನನಾಮಕ ಪರಮಾತ್ಮನ ಅಂಶದಿಂದ ರುಕ್ಮಿಣೀದೇವಿಯಲ್ಲಿ ಜನಿಸಿದವನಾದ್ದರಿಂದ ಪ್ರದ್ಯುಮ್ನನೆಂತಲೂ; ೬. ಬ್ರಹ್ಮದೇವರ ಮಾನಸಪುತ್ರರಾದ ಸನಕಾದಿ ನಾಲ್ವರಲ್ಲಿ ಸನತ್ಕುಮಾರ ನಾಮಕ ಪರಮಾತ್ಮನ ಅಂಶದಿಂದ ಕೂಡಿ ಅವತರಿಸಿದ ಸನತ್ಕುಮಾರ ರೂಪವೂ ಈ ಆರೂ (ಕಾಮ) ಮನ್ಮಥನ ಅವತಾರ ರೂಪಗಳು. ಪ್ರ॥ ಪ್ರದ್ಯುಮ್ನಯುಕ್ತಃ ಪ್ರದ್ಯುಮ್ನೋ ಭರತಶ್ಚ ಸುದರ್ಶನಃ ॥ ಬ್ರಹ್ಮಯುಕ್ಸಾಂಬಸ್ಕಂದ ಶ್ರೀಕುಮಾರಃಕಾಮಉಚ್ಯತೇ॥

೯.ಅಹಂಕಾರಿಕಪ್ರಾಣ:– ತ್ವಗಭಿಮಾನಿಯಾದ ಈತನು ಜೀವೋತ್ತಮರಾದ ವಾಯುದೇವರಿಗೆ ಅನ್ಯನು.

೧೦. ೧. ಅನಿರುದ್ಧ ೨. ಬೃಹಸ್ಪತಿ ೩. ಸ್ವಾಯಂಭುವ ಮನು ೪.ದಕ್ಷಪ್ರಜಾಪತಿ ೫.ರತಿ ೬. ಶಚಿ :–

೧. ಅನಿರುದ್ಧನಿಗೆ (ಕಾಮನ ಮಗ) ಎರಡು ಅವತಾರಗಳು. ೧. ಶ್ರೀರಾಮಚಂದ್ರದೇವರ ತಮ್ಮನಾದ ಶತೃಘ್ನಾವತಾರ ೨. ಬಲರಾಮದೇವರ ತಮ್ಮನಾದ ಶ್ರೀಕೃಷ್ಣದೇವರ ಮಗನಾದ ಪ್ರದ್ಯುಮ್ನನ ಪುತ್ರನಾದ ಅನಿರುದ್ಧ ಎಂಬ ಅವತಾರವು. ಈತನಿಗೆ ಅನಿರುದ್ಧನಾಮಕ ಪರಮಾತ್ಮನ ಆವೇಶವುಂಟು. ಪ್ರ॥ ಅನಿರುದ್ಧಯುಕ್ಶತೃಘ್ನೋಽನಿರುದ್ಧೋ ಕಾಮನಂದನ ॥

೨. ಬೃಹಸ್ಪತ್ಯಾಚಾರ್ಯರ ಅವತಾರಗಳು ಮೂರು. ೧. ತ್ರೇತಾಯುಗದಲ್ಲಿ ರಾಮದೇವರ ಸೇವಾರ್ಥವಾಗಿ ತಾರನೆಂಬ ಕಪಿಯಾಗಿ ಅವತರಿಸಿರುವುದು, ೨. ದ್ವಾಪರಯುಗದಲ್ಲಿ ಕೃಷ್ಣಾವತಾರ ಕಾಲದಲ್ಲಿ ಉದ್ಧವನಾಗಿ ಅವತಾರಮಾಡಿದುದು, ೩.ದ್ರೋಣಾಚಾರ್ಯರಾಗಿ ಅವತರಿಸಿರುವುದು. ಶ್ರೀವಾಯುದೇವರ ಆವೇಶದಿಂದ ಯುಕ್ತನಾಗಿ ಉದ್ಧವನಾಗಿಯೂ ಬ್ರಹ್ಮದೇವರ ಆವೇಶದಿಂದ ಯುಕ್ತನಾಗಿ ತಾರಾನಾಮಕ ಕಪಿಯಾಗಿಯೂ ಮತ್ತು ದ್ರೋಣನಾಗಿಯೂ ಅವತರಿಸಿದುದು. ಪ್ರ॥ ಬ್ರಹ್ಮಾಂಶಯುಗ್ದ್ರೋಣೋ ವಾಯುಯುಕ್ತೋದ್ಧವೋಗುರುಃ ॥

೩ ಮತ್ತು ೪. ಸ್ವಾಯಂಭುವ ಮನುವಿಗೂ ದಕ್ಷಪ್ರಜಾಪತಿಗೂ ಅವತಾರವಿಲ್ಲ.

೫. ಮನ್ಮಥನ ಹೆಂಡತಿಯಾದ ರತಿದೇವಿಗೆ ಎರಡು ಅವತಾರಗಳು. ೧.ರುಗ್ಮಿಯ ಮಗಳಾದ ರುಗ್ಮವತಿಯೆಂದೂ ೨. ದುರ್ಯೋಧನನ ಮಗಳಾದ ಲಕ್ಷಣೆ ಎಂತಲೂ, ಪ್ರ॥ ಕಾಮಭಾರ್ಯಾರುಗ್ಮವತೀಲಕ್ಷಣೇತ್ಯಾದಿರೂಪಿಣೀ ॥

೬. ಇಂದ್ರನ ಹೆಂಡತಿಯಾದ ಶಚಿದೇವಿಗೆ ಎರಡು ಅವತಾರಗಳು. ೧. ಪಾಂಡ್ಯದೇಶಾಧಿಪತಿಯಾದ ವೀರಸೇನನ ಮಗಳಾದ ಚಿತ್ರಾಂಗದೆಯ ಅವತಾರ ೨. ವಾಲಿಯ ಹೆಂಡತಿಯಾದ ತಾರೆಯ ಅವತಾರ. ಪ್ರ ॥ ತಾರಾಚಿತ್ರಾಂಗದೇತ್ಯಾದಿರೂಪಾಶಚ್ಯಪಿಹಿಸ್ಮೃತಾ ॥

೧೧. ಪ್ರವಹವಾಯು:– ಈತಗೆ ನಾಶಿಕ್ಯ ಎಂತಲೂ, ಭೌತಿಕ ಎಂತಲೂ, ಅತಿವಾಹ ಎಂತಲೂ ಹೆಸರು. ಪ್ರ ॥ ನಾಶಿಕ್ಯಸ್ತುಸಏವೋಕ್ತೋಭೌತಿಕಸ್ತುಸಏವಚ ॥ ಅತಿವಾಹಸ ಏವೋಕ್ತಃ ಯತೋಗಮ್ಯೈಮುಮುಕ್ಷಿಭಿಃ ॥

೧೨. ೧. ಸೂರ್ಯ, ೨. ಚಂದ್ರ, ೩. ಶತರೂಪ (ಸ್ವಾಯಂಭುವ ಮನುವಿನ ಪತ್ನಿ), ೪. ಯಮ:– ೧. ಸೂರ್ಯನಿಗೆ ಎರಡು ಅವತಾರಗಳು. ೧. ಬ್ರಹ್ಮದೇವರ ಆವೇಶದಿಂದ ಕೂಡಿದ ಸುಗ್ರೀವನೆಂಬ ಕಪಿರೂಪ, ೨. ಪರಮಾತ್ಮನಾವೇಶದಿಂದ ಕೂಡಿದ ಕರ್ಣರೂಪ. ಪ್ರ॥ ಬ್ರಹ್ಮಾವಿಷ್ಟಶ್ಚ ಸುಗ್ರೀವೋಹರಿಯುಕ್ಕರ್ಣಏವಚ ॥ **೨. ಚಂದ್ರನು** ಇಂದ್ರನಾವೇಶದಿಂದ ಕೂಡಿ ಅಂಗದನೆಂಬ ಕಪಿಯಾಗಿ ಅವತರಿಸಿದನು. ಪ್ರ ॥ ಏವಂದ್ವಿರೂಪಸೂರ್ಯಸ್ಯ ಇಂದ್ರಾವಿಷ್ಟೋಂಗದಶ್ಶಶೀ॥ ೩. ಸ್ವಾಯಂಭುವ ಮನುವಿಗೆ ಹೇಗೆ ಅವತಾರ ಇಲ್ಲವೋ ಆತನ ಪತ್ನಿಯಾದ ಶತರೂಪಾದೇವಿ(ಮಾನಿನೀ)ಗೂ ಅವತಾರವಿಲ್ಲ. **೪. ಯಮಧರ್ಮನಿಗೆ** ನಾಲ್ಕು ಅವತಾರಗಳು ೧. ವಾಯುದೇವರ ಆವೇಶದಿಂದ ಕೂಡಿ ಕುಂತೀ ಪುತ್ರನಾಗಿ ಧರ್ಮರಾಯನಾಗಿ ಅವತರಿಸಿದುದು, ೨. ಕರಡಿ ರೂಪವಾದ ಜಾಂಬವಂತನೆಂಬ ಅವತಾರ, ೩. ವೇದವ್ಯಾಸದೇವರ

ದಶೆಯಿಂದ ಶೂದ್ರಸ್ತ್ರೀಯಲ್ಲಿ ವಿದುರನಾಗಿ ಅವತರಿಸಿದುದು, ೪. ಮೂರನೇ ಮನ್ವಂತರದಲ್ಲಿ ಸತ್ಯಜಿತ್ ಎಂಬ ಹೆಸರಿನಿಂದ ಇಂದ್ರನಾಗಿ ಅವತರಿಸಿದುದು. ಪ್ರ ॥ ಜಾಂಬುವಾನ್ವಾಯು ಯುಗ್ಧರ್ಮೋವಿದುರಃಸತ್ಯಜಿದ್ಯಮಃ ॥ ನಮ್ಮ ಆಯಸ್ಸನ್ನು ಸಾರ್ಥಕಗೊಳಿಸಿಕೊಳ್ಳುವುದಕ್ಕಾಗಿ ಹಗಲು ಸೂರ್ಯನನ್ನೂ, ರಾತ್ರಿ ಚಂದ್ರನನ್ನೂ ಧರ್ಮಾಧರ್ಮಗಳ ಸೂಕ್ಷ್ಮವನ್ನು ತಿಳಿದುಕೊಳ್ಳುವುದಕ್ಕೆ ಯಮಧರ್ಮರಾಯನನ್ನು ಯಾವ ಯಾವ ದೇವತೆಗಳದ್ವಾರಾ ಸನ್ಮಾರ್ಗಗಳು ಸಿದ್ಧಿಸಬೇಕೋ, ಯಾವ ಯಾವ ದೇವತೆಗಳು ಯಾವ್ಯಾವುದಕ್ಕೆ ಅಭಿಮಾನಿಗಳೋ ಅದನ್ನು ತಿಳಿದು ಆಯಾ ದೇವತಾರೂಪಗಳ ಅಂತರ್ಗತನಾದ ಪರಮಾತ್ಮನನ್ನು ತಿಳಿದು ಕ್ಷಣಲವಾದಿ ಸರ್ವಕಾಲದಲ್ಲಿಯೂ ಭಜಿಸುತ್ತಿರಬೇಕಾದ್ದರಿಂದ ಅವರುಗಳನ್ನು ಈ ಕೆಳಗೆ ತಿಳಿಸಲ್ಪಟ್ಟಿರುತ್ತದೆ.

ಕಾರ್ಯಗಳು	ಅಭಿಮಾನಿ ದೇವತೆಗಳು
೧. ಬ್ರಹ್ಮವರ್ಚಸ್ಸು	ಬ್ರಹ್ಮದೇವರು
೨. ಇಂದ್ರಿಯ ಪಟುತ್ವ	ಇಂದ್ರದೇವರು
೩. ಪ್ರಜಾಕಾಮ	ದಕ್ಷಾದಿ ಪ್ರಜಾಪತಿಗಳು
೪. ಭೋಜನಕಾಮ	ದಿತಿದೇವಿಯರು
೫. ವರ್ಣಕಾಮ	ಆದಿತ್ಯ
೬. ರಾಜ್ಯಕಾಮ	ವಿಶ್ವೇದೇವತೆಗಳು
೭. ದೇಶ ಮತ್ತು ಪ್ರಜಾಸ್ವಾಧೀನ	ಸಾಧ್ಯರು
೮. ಶ್ರೀಕಾಮ	ದುರ್ಗಾದೇವಿಯರು
೯. ತೇಜೋಕಾಮ	ಅಗ್ನಿದೇವರು
೧೦. ಧನಕಾಮ	ಅಷ್ಟವಸುಗಳು
೧೧. ವೀರ್ಯಕಾಮ	ರುದ್ರದೇವರು
೧೨. ಆಯಸ್ಸು	ಅಶ್ವಿನೀದೇವತೆಗಳು
೧೩. ಪುಷ್ಟಿಕಾಮ	ಭೂದೇವಿಯರು
೧೪. ಪ್ರತಿಷ್ಠಾಕಾಮ	ಗಗನಭೂದೇವತೆಗಳು
೧೫. ಸರ್ವಾಧಿಪತ್ಯ	ಬ್ರಹ್ಮದೇವರು
೧೬. ಕೀರ್ತಿಕಾಮ	ಶ್ರೀವಿಷ್ಣುರೂಪಿ ಪರಮಾತ್ಮ
೧೭. ಆಸ್ತಿಸಂಗ್ರಹಕಾಮ	ಪ್ರಚೇತಸರು
೧೮. ವಿದ್ಯಾಕಾಮ	ಉಮಪತಿಯಾದ ರುದ್ರದೇವರು
೧೯. ದಾಂಪತ್ಯಪ್ರೀತಿಕಾಮ	ಉಮಾದೇವಿಯರು

೨೦. ಧರ್ಮಕಾಮ	ಶ್ರೀವಿಷ್ಣುರೂಪಿ ಪರಮಾತ್ಮ
೨೧. ಸಂತಾನಕಾಮ	ಪಿತೃದೇವತೆಗಳು
೨೨. ರಕ್ಷಕಾಮ	ಯಕ್ಷರು
೨೩. ಸೌಂದರ್ಯಕಾಮ	ಗಂಧರ್ವರು
೨೪. ಸ್ತ್ರೀ ಅಪೇಕ್ಷಕಾಮ	ಊರ್ವಶೀ ಮೊದಲಾದ ಅಪ್ಸರ ಸ್ತ್ರೀಯರುಗಳು
೨೫. ಬಲಕಾಮ	ಮರುದ್ಗಣರು
೨೬. ರಾಜ್ಯಕಾಮ	ಮನುಗಳು
೨೭. ಶತೃಮರಣ	ಗೋಪಾಲ
೨೮. ಭೋಗಕಾಮ	ಚಂದ್ರದೇವರು

ಈ ಪ್ರಕಾರವಾಗಿ ಆಯಾ ಕಾರ್ಯಗಳಲ್ಲಿ ಆಯಾ ಅಭಿಮಾನಿ ದೇವತೆಗಳಂತರ್ಗತ ಪರಮಾತ್ಮನನ್ನು ಪೂಜೆ ಮಾಡಬೇಕು.

೧೩. ವರುಣ:- ಈತನಿಗೆ ನಾಲ್ಕು ಅವತಾರಗಳು, ೧. ಮಹಾಭಿಷಕ್ ಎಂಬ ರಾಜನ ಅವತಾರ, ೨. ಕಪ್ಪೆಯ ರೂಪಿನಿಂದ ಶ್ರೀಹರಿಯನ್ನು ಸ್ತೋತ್ರ ಮಾಡಿರುವುದರಿಂದ ಮಂಡೂಕ ಅವತಾರ, ಪ್ರ ॥ ಮಂಡೂಕರೂಪೀವರುಣಃ ತುಷ್ಟಾವಹರಿಮವ್ಯಯಂ ॥ ೩.ಸುಷೇಣ ಎಂಬ ಕಪಿಯ ಅವತಾರ, ೪. ಪ್ರತೀಪ ರಾಜನ ಮಗನಾಗಿ ಶಂತನು ಚಕ್ರವರ್ತಿಯಾಗಿ ಅವತರಿಸಿದುದು. ಪ್ರ ॥ ಮಹಾಭಿಷಕ್ ಸುಷೇಣಶ್ಚ ಮಂಡೂಕಃ ಶಂತನುಸ್ತಥಾ ॥

೧೪. ನಾರದ :- ಇವರು ಕಲಿಯುಗದಲ್ಲಿ ವಾಯ್ವಾವೇಶದಿಂದ ಪುರಂದರದಾಸರಾಗಿ ವಿಷ್ಣು ಸೇವಾರ್ಥಕ್ಕಾಗಿ ಅವತರಿಸಿದರು. ಪ್ರ ॥ ನಾರದೋವಿಷ್ಣು ಸೇವಾರ್ಥಂ ವಾಯ್ವಾವೇಶಯುತೋಜನಿ । ಪುರಂದರಮಿತಿ ಖ್ಯಾತಃ ತತ್ವಮಾರ್ಗಪ್ರದರ್ಶಯನ್ ॥

೧೫. ೧. ಅಗ್ನಿ, ೨. ಪ್ರಸೂತಿ, ೩. ಭೃಗು :- ೧. ಅಗ್ನಿಗೆ ಮೂರು ಅವತಾರಗಳು. ೧. ರಾಮಾವತಾರದಲ್ಲಿ ನೀಲನೆಂಬ ಕಪಿರೂಪ, ೨. ದ್ರುಪದರಾಜನ ಮಗನಾಗಿ ಧೃಷ್ಟದ್ಯುಮ್ನನಾಗಿ ಅವತರಿಸಿದುದು, ೩. ರಾಮಚಂದ್ರದೇವರ ಮಗನಾದ ಲವ ಅವತಾರ. ಪ್ರ ॥ ಧೃಷ್ಟದ್ಯುಮ್ನೋ ಲವೋನೀಲೋಽಇತ್ಯಾದ್ಯಗ್ನಿಃ ॥ ಈ ಅಗ್ನಿಗೆ ಲೇಲಿಹಾನನೆಂದೂ ಹೆಸರು. (ಲೇಲಿಹಾನೋದ್ವಿರಸನೋಽಇತ್ಯಮರಃ) ೨. ದಕ್ಷಪ್ರಜೇಶ್ವರನಿಗೆ ಹೇಗೆ ಅವತಾರವಿಲ್ಲವೋ ಹಾಗೆಯೇ ಈತನ ಪತ್ನಿಯಾದ **ಪ್ರಸೂತಿ**ಗೂ ಸಹ ಅವತಾರವಿರುವುದಿಲ್ಲ. ೩. **ಭೃಗು** ಋಷಿಗಳು

ಶ್ರೀನಾರಾಯಣನನ್ನು ಕಾಲಲೊದ್ದದರಿಂದ ಜರಾ ಎಂಬ ವ್ಯಾಧನಾಗಿ ಅವತರಿಸಿದರು. ಪ್ರಾಜರಾವ್ಯಾಧೋಭೃಗುಃ ॥

೧೫. **ಪ್ರಹ್ಲಾದ:**- ಈತನು ೧೯ನೇ ಕಕ್ಷಾದ ದೇವತೆಗಳೊಳಗೆ ಒಬ್ಬನಾದರೂ, ಈತನು ತಾಯಿಯ ಗರ್ಭದಲ್ಲಿರುವಾಗಲೇ ನಾರದರು ಪರಮಾನುಗ್ರಹಮಾಡಿ ಭಗವನ್ಮಹಿಮೆಯನ್ನು ಉಪದೇಶಮಾಡಿದುದರಿಂದ ಅಧಿಕವಾದ ಭಗವದ್ಭಕ್ತಿಯಿಂದ ಈ ಅಗ್ನಿ ಮೊದಲಾದವರಿಗೆ ಸಮನಾದನು. ಈತನು ವಾಯು ಅಂಶಯುಕ್ತನಾದವನು. ಪ್ರಾ ಪ್ರಕೃಷ್ಟಾಹ್ಲಾದರೂಪತ್ವಾನ್ನಾರದಸ್ಯೋಪದೇಶತಃ ॥ ವಾಯುಯುಗ್ಬಾಹ್ಲಿಕಃ ಪೂರ್ವಂಪ್ರಹ್ಲಾದೋ ನಾರದಾದಧಮಃ ॥

೧೬. ೧. ಮರೀಚಿ, ೨. ಅತ್ರಿ, ೩. ಆಂಗೀರಸ, ೪. ಪುಲಸ್ತ್ಯ, ೫. ಪುಲಹ ೬.ಕ್ರತು, ೭. ವಸಿಷ್ಠ ೮. ವಿಶ್ವಾಮಿತ್ರ ೯,. ವೈವಸ್ವತ ಮನು :- ಇದರಲ್ಲಿ ಸಪ್ತ ಋಷಿಗಳು ಬ್ರಹ್ಮನ ಅವಯವಗಳಿಂದ ಜನಿಸಿದರು. ಸುಳಾದಿ ಪ್ರಮಾಣ ॥ ಮನದಿಂದ ಮರೀಚಿಯು । ನೇತ್ರದಿಂ

(ಮುಂದುವರೆದುದು)

ಸಂಪುಟ ೫ ಸಂಚಿಕೆ ೧೦ ಆಂಗೀರಸ ಪುಷ್ಯ ಜನವರಿ ೧೯೩೩

ದತ್ರಿಋಷೀ। ಘನಮುಖದಿಂದಂಗೀರನು । ನಾಭೀಯಿಂದ ಪುಲಹಋಷೀ। ಮುನಿಕ್ರತುಕರದಿಂದ ಪ್ರಾಣಾದಿ ವಸಿಷ್ಠನು। ಕರ್ಣದಿ ಪುಲಸ್ತ್ಯನು। ಜನಿಸಿಹರ್‍ಯ್ಯ ವಿಧಿ ಅವಯವದಿಂದ ಕೇಳೋ॥ ಎಂದು ಪುರಂದರ ದಾಸರಾಯರು ಸೃಷ್ಟಿ ಸುಳಾದಿಯಲ್ಲಿ ಹೇಳಿರುತ್ತಾರೆ. ಅಂದರೆ ಬ್ರಹ್ಮದೇವರ ಮನಸ್ಸಿನಿಂದ ಮರೀಚಿಯೂ, ನೇತ್ರದಿಂದ ಅತ್ರಿಯೂ, ಮುಖದಿಂದ ಆಂಗೀರಸನೂ, ನಾಭಿಯಿಂದ ಪುಲಹನೂ, ಕರದಿಂದ ಕ್ರತುವೂ, ಪ್ರಾಣದಿಂದ ವಸಿಷ್ಠನೂ, ಕರ್ಣದಿಂದ ಪುಲಸ್ತ್ಯನೂ ಹೀಗೆ ಏಳುಮಂದಿಯೂ ಆತನ ಅವಯವದಿಂದ ಜನಿಸಿದರು ಇವರಿಗೆ ಅವತಾರವಿಲ್ಲ.

೧೭. ೧. ಮಿತ್ರನಾಮಕ ಸೂರ್ಯ, ೨.ನಿಋಋತಿ, ೩. ಪ್ರಾವಹಿ (ಪ್ರವಹಪತ್ನಿ), ೪.ತಾರಾ, (ಬೃಹಸ್ಪತಿ ಪತ್ನಿ):- ೧. ಮಿತ್ರನಾಮಕ ಸೂರ್ಯನಿಗೆ ೨ ಅವತಾರಗಳು. ೧.ಭೀಷ್ಮಕರಾಯನಾಗಿ ಅವತರಿಸಿದುದು. ೨. ತ್ರೇತಾಯುಗದಲ್ಲಿ ತಾರನಾಮಕ ಅವತಾರ. ೨. ನಿಋಋತಿಗೆ ೨ ಅವತಾರಗಳು- ೧.ದುರ್ಮುಖನೆಂಬ ಕಪಿರೂಪ. ೨.ಭೀಮಸೇನದೇವರ ಮಗನಾದ ಘಟೋತ್ಕಚ. ಇವನಿಗೆ ರುದ್ರದೇವರ ಆವೇಶವುಂಟು. ಪ್ರ ॥ ಮಹಾಬಲೀದುರ್ಮುಖಶ್ಚ ರುದ್ರಯುಕ್ತೋಘಟೋತ್ಕಚಃ॥ ದ್ವಾವೇತೌನಿಋಋತಿಃಪೂರ್ವಂ॥ ಪ್ರಾವಹಿ ಮತ್ತು ತಾರಾ ಇವರಿಗೆ ಅವತಾರವಿಲ್ಲ.

೧೮. ೧.ಕುಬೇರ, ೨.ವಿಷ್ವಕ್ಸೇನ, ೩.ಗಣಪತಿ, (ಶತಸ್ಥ ಶೇಷರು ೮೫ ಜನ:- ೧.ಕುಬೇರನಿಗೆ ೨ ರೂಪಗಳು, ೧. ನರಕಾಸುರನ ಮಗನಾದ ರುದ್ರಾವೇಶದಿಂದ ಕೂಡಿದ ಭಗದತ್ತನೆಂಬ ರಾಜನ ರೂಪ, ೨. ಕತ್ಥನ ಎಂಬ ಕಪಿರೂಪ. ಪ್ರ॥ ರುದ್ರಯುತ್ಭಗದತ್ತಶ್ಚ ಕತ್ಥನಾದ್ವೌಧನೇಶ್ವರಃ॥ ೩. ಗಣಪತಿಯು ಶ್ರೀಕೃಷ್ಣದೇವರ ಪತ್ನಿಯಾದ ರುಕ್ಮಿಣೀದೇವಿಯಲ್ಲಿ ಚಾರುದೇಷ್ಣನಾಗಿ ಅವತರಿಸಿದುದು.

ಅಷ್ಟವಸುಗಳು:- ಇವರಲ್ಲಿ ೮ನೆಯವನಾದ ದ್ಯುನಾಮಕವಸು ಬ್ರಹ್ಮಾವೇಶದಿಂದ ಕೂಡಿ ಭೀಷ್ಮಾಚಾರ್ಯನಾಗಿ ಅವತರಿಸಿದುದು. ಮೊದಲನೇ ದ್ರೋಣನಾಮಕ ವಸುವೇ ನಂದಗೋಪನಾಗಿ ಅವತರಿಸಿದುದು. ಪ್ರ॥ ದ್ರೋಣಃಪ್ರಾಣೋಧೃವೋಕೋರ್ಗ್ನಿ ದೋರ್ಷಾ ವಸುವಿಭಾವಸುಃ। ವಸುಷ್ವೇತೇಷುಭೀಷ್ಮಃಪ್ರಾಕ್ ಬ್ರಹ್ಮಯುಕ್ತೋದ್ಯುನಾಮಕ॥ ವಸುಸಪ್ತಕಯುಗ್ಭೀಷ್ಮಃ ಬ್ರಹ್ಮಾವೇಶೀದ್ಯುನಾಮಕ॥ ನಂದಗೋಪಃಪುರಾದ್ರೋಣೋವಸ್ವನ್ಯೇ ಸಪ್ತಕೀರ್ತಿತಾ॥ ಈ ಅಷ್ಟವಸುಗಳಲ್ಲಿ ಅಗ್ನಿಯು ವ್ಯತಿರಿಕ್ತನು.

ಏಕಾದಶ ರುದ್ರರು :- ಈ ಏಕಾದಶ ರುದ್ರರಲ್ಲಿ ಭವ ಎಂಬ ಹೆಸರುಳ್ಳ ಪಾರ್ವತಿ ಪತಿಯು ಬೇರೆ ಕಕ್ಷದಲ್ಲಿ ಸೇರಿರುತ್ತಾನೆ. ಈ ಏಕಾದಶ ರುದ್ರರಲ್ಲದೆ ಇನ್ನೂ ಕೋಟಿಸಂಖ್ಯಾಕರಾದ ರುದ್ರರಿರುವರು. ಅವರು ಹೇಗಾದರೆಂದರೆ:- ದಕ್ಷಪ್ರಜೇಶ್ವರನು ಪ್ರಾಚೇತಸನಾಗಿ ಹುಟ್ಟಿ ೬೦ ಹೆಣ್ಣು ಮಕ್ಕಳನ್ನು ಪಡೆದನು, ಭೂತನಿಗೆ ಈ ಹೆಣ್ಣುಮಕ್ಕಳ ಪೈಕಿ ಭೂತೆ ಮತ್ತು ಸುರೂಪೆ ಎಂಬುವರನ್ನು ಕೊಟ್ಟು ಲಗ್ನ ಮಾಡಿದನು. ಅವರ ಪೈಕಿ ಭೂತೆ ಎಂಬಾಕೆಯಲ್ಲಿ ಏಕಾದಶ (೧೧) ರುದ್ರರೂ, ಸುರೂಪೆ ಎಂಬಾಕೆಯಲ್ಲಿ ಕೋಟಿಶಃ ರುದ್ರರು ಹುಟ್ಟಿದರು. ಇದರೊಳಗೆ ಪ್ರಧಾನರಾದವರು ಯಾರೆಂದರೆ:- ಪತ್ರತಾಪ, ವಿರೂಪಾಕ್ಷ, ವಿಷ್ಕಂಭ ಇವರುಗಳ ಅವತಾರ ಆವೇಶಗಳನ್ನು ಇಲ್ಲಯೇ ವಿವರಿಸಲಾಗುತ್ತೆ. ಪ್ರ ॥ ಭೂತಸ್ಯ ಭಾರ್ಯಾ ಭೂತಯಾ ರುದ್ರಾವೇಕಾದಶಾಸುವತ್ ॥ ಸುರೂಪ್ಯಾಸೂತ ಭೂತಸ್ಯಭಾರ್ಯಾ ರುದ್ರಾಂಶ್ಚ ಕೋಟಿಶಃ ॥ (ಭಾಗವತೆ) ಈ ಏಕಾದಶ ರುದ್ರರ ಪೈಕಿ ಅಜೈಕಪಾತ್, ಅಹಿರ್ಬುಧ್ನಿ ಮತ್ತು ಕೋಟಿ ರುದ್ರರ ಪೈಕಿ ವಿರೂಪಾಕ್ಷ ಈ ಮೂರು ಮಂದಿ ರುದ್ರರೂ ಸೋಮದತ್ತನ ಮಕ್ಕಳಾಗಿ ಭೂರಿ, ಶಿವಾಂಶಯುಕ್ತನಾದ ಭೂರಿಶ್ರವ ಶಲ ಎಂಬ ಹೆಸರುಗಳಿಂದ ಜನಿಸಿದರು. ಬಾಹ್ಲಿಕ ರಾಜನ ಮಗನಾದ ಈ ಸೋಮದತ್ತ ರಾಜನೇ ಪತ್ರತಾಪನೆಂಬ (ಕೋಟಿರುದ್ರರಪೈಕಿ) ರುದ್ರನ ಅವತಾರ. ಈತನಿಗೆ ಜರಾಸಂಧನ ಮಗನಾದ ಸಹದೇವನೆಂಬ ಮತ್ತೊಂದು ಅವತಾರ ಉಂಟು. ವಿಷ್ಕಂಭ ಹೆಸರುಳ್ಳ ಮತ್ತೊಬ್ಬ ರುದ್ರನೇ ಕೃಪಚಾರ್ಯರಾಗಿ ಅವತರಿಸಿದುದು. ಪ್ರ॥ರುದ್ರ ಏಕಾದಶ್ಯೆತೇಷು ಭೂರಿಃಪೂರ್ವಮಜೈಕಪಾತ್ । ಭೂರಿಶ್ರವಾಸರ್ವರುದ್ರ ಯುಕ್ತೋಹಿಃರ್ಬುಧ್ನಿರುಚ್ಯತೆ॥ ಶಲಃಪೂರ್ವವಿರೂಪಾಕ್ಷಃ ಕೃಪೋ ವಿಷ್ಕಂಭಉಚ್ಯತೆ। ಸಹದೇವಃ ಸೋಮದತ್ತ ಏತೌಪ್ರಾಕ್ ಪತ್ರತಾಪಕಃ॥

ದ್ವಾದಶಾದಿತ್ಯರು:– ಇವರ ಪೈಕಿ ಸವಿತಾ ಎಂಬ ಸೂರ್ಯನು ಕೃಷ್ಣನ ದೆಶೆಯಿಂದ ಸತ್ಯಭಾಮೆಯಲ್ಲಿ ಭಾನು ಎಂಬುದಾಗಿ ಜನಿಸಿದನು. ತ್ವಷ್ಟಾನಾಮಕ ಸೂರ್ಯನು ಪಾಂಡ್ಯದೇಶಾಧಿಪತಿಯಾದ ವೀರಸೇನರಾಜನಾಗಿ ಯಮದೇವರ ಆವೇಶದಿಂದ ಜನಿಸಿದನು. ಪ್ರ॥ ಕೃಷ್ಣಜೋಭಾನುಃಸವಿತಂತ್ರಊದಾಹೃತಃ॥ ವೀರಸೇನೋಯಮಾವಿಷ್ಟಸ್ತ್ವಷ್ಟಾವೈಪರಿಕೀರ್ತಿತಃ॥

೪೯ ಮರುತ್ತುಗಳು:– ಇವರುಗಳ ಪೈಕಿ ೧೫ನೆಯವನಾದ ಪರಾವಹನೆಂಬುವನು ವಾಯುದೇವರ ಆವೇಶದಿಂದ ಪಾಂಡುರಾಜನಾಗಿ ಜನಿಸಿದನು. ೨೭ನೆಯವನಾದ ಶ್ವೇತನೆಂಬುವನು ಸಂಪಾತಿ, ಕೇಸರಿ ಎಂಬದಾಗಿ ಕಪಿಗಳ ಅವತಾರ ಮಾಡಿರುವನು. ೨೩ನೆಯವನಾದ ಪ್ರತಿಭನು ಚೇಕಿತಾನನಾಗಿ ಅವತರಿಸಿದನು. ೩೪ನೆಯವನಾದ ಸೌಮ್ಯನು ವಿಪೃಥು ಎಂಬ ಯಾದವನಾಗಿ ಕೃಷ್ಣನ ಸೇವಾರ್ಥವಾಗಿ ಜನಿಸಿದನು. ೧ನೆಯವನಾದ ಪ್ರಾಣನು ವಿತತ, ಶರ್ವೋತ್ತುಂಗನಾಗಿಯೂ, ಗಜನೆಂಬ ಕಪಿಯಾಗಿಯೂ ಅವತರಿಸಿದನು. ೨ನೆಯವನಾದ ಅಪಾನನು ಗವಾಕ್ಷನೆಂಬ ಕಪಿಯಾದನು. ೩ನೆಯ ವ್ಯಾನನು ಗವಯನೆಂಬ ಕಪಿಯಾದನು. ೪ನೆಯವನಾದ ಉದಾನನು ವೃಷಭನೆಂಬ ಕಪಿಯಾದನು. ೫ನೆಯ ಸಮಾನನು ಭೀಮಸೇನನ ಮಗನಾದ ಶರ್ವತ್ರಾತನೆಂಬ ಅವತಾರವೂ ಗಂಧಮಾದನನೆಂಬ ಕಪಿರೂಪವು ಅಂತು ೨ ಅವತಾರಗಳು. ೮ನೆಯವನಾದ ಕೂರ್ಮನು ಶೂರರಾಜನ ಸಖನಾದ ಕುಂತೀಭೋಜನಾಗಿ ಜನಿಸಿದನು. ಇತರೆಯವರಿಗೆ ಅವತಾರವಿಲ್ಲ. ಪ್ರ ॥ವಾಯುಯುಕ್ತಃ ಪಾಂಡುರಾಜಃ ಪರಾವಹ ಊದಾಹೃತಃ। ಸಂಪಾತಿಕೇಸರೀಚೈತೇತ್ರಯೋಮರುತ ಏವಚ॥ ಚೇಕಿತಾನಃಪ್ರಾಕ್ ಪ್ರತಿಭೋವಿಪೃಥುಃ ಸೋಮಊಚ್ಯತೇ । ಗವಾಕ್ಷಸ್ತುಪ್ರಾಗಪಾನೋ ಮರುಚ್ಛ್ವೇಷ್ಟಃಪ್ರಕೀರ್ತಿತಃ॥ ಗವಯಃಪ್ರಾಗ್ವ್ಯಾನನಾಮಾವೃಷಃ ಪೂರ್ವಮುದಾನಕಃ॥ ಶರ್ವತ್ರಾತೋಗಂಧಮಾದೋದ್ವೌಸಮಾನ ಉದಾಹೃತಾ। ಕುಂತೀಭೋಜಃಪುರಾಕೂರ್ಮಇತಿ॥

ವಿಶ್ವದೇವತೆಗಳು :– ೧.ಪುರೂರವ ೨. ಆದ್ರವ ೩.ಕಾಮ, ೪. ಕಾಲ, ೫. ಧುರಿ, ೬. ಲೋಚನ, ೭. ದಕ್ಷ, ೮. ಕ್ರತು, ೯.ವಸು, ೧೦.ಸತ್ಯ – ಇವರ ಪೈಕಿ ಮೊದಲನೇ ಐದು ಮಂದಿಯೂ ದ್ರೌಪದೀ ಮಕ್ಕಳಾಗಿ, ಧರ್ಮರಾಯನ ದಶೆಯಿಂದ ಪ್ರತಿವಿಂಧ್ಯ ಎಂತಲೂ, ಭೀಮಸೇನನಿಂದ ಶೃತಸೋಮ ಎಂತಲೂ, ಅರ್ಜುನನಿಂದ ಶೃತಕೀರ್ತಿ ಎಂತಲೂ, ನಕುಲನಿಂದ ಶೃತಾನೀಕನೆಂತಲೂ, ಸಹದೇವನಿಂದ ಶೃತಕರ್ಮ (ಶೃತಕ್ರಿಯ) ನೆಂತಲೂ ಹುಟ್ಟಿದರು. ಪ್ರತಿವಿಂಧ್ಯನಲ್ಲಿ ಚಿತ್ರರಥನ ಆವೇಶವೂ, ಶೃತಸೋಮನಲ್ಲಿ ಅಭಿತಾಮ್ರನೆಂಬ ಗಂಧರ್ವನ ಆವೇಶವೂ, ಶೃತಕೀರ್ತಿಯಲ್ಲಿ ಕಿಶೋರನ ಆವೇಶವೂ, ಶೃತಾನೀಕನಲ್ಲಿ ಗೋಪಾಲನೆಂಬ ಗಂಧರ್ವನ ಆವೇಶವೂ, ಶೃತಕ್ರಿಯನಲ್ಲಿ ಬಲನೆಂಬ ಗಂಧರ್ವನ ಆವೇಶವೂ ಉಂಟು. ಈ ಐದು ಮಂದಿ ವಿಶ್ವದೇವತೆಗಳೂ, ಗಂಧರ್ವರ ಆವೇಶದಿಂದ ದ್ರೌಪದಿಯ ಮಕ್ಕಳಾಗಿ ಅವತರಿಸಿದರು. ಉಳಿದ ಐದು ಮಂದಿಯರು ಕೈಕೇಯಾಧಿಪರಾಗಿ ಅವತರಿಸಿದರು.

ಪ್ರಾ॥ ದ್ರೋಪದೇಯಾಃ ಕೈಕೇಯಾಃಪ್ರಾಕ್ ವಿಶ್ವೇದೇವಾದಶಾಸ್ಮೃತಾ ॥ ಆವೇಶಪ್ರ ॥ ಪ್ರತಿವಿಂಧ್ಯಃ ಶೃತಸೋಮಃಶೃತಕೀರ್ತಿಸ್ತೆ ಥೈವಚ । ಶತಾನೀಕಶ್ರುತಕರ್ಮಾಪಂಚೈತೇದ್ರ್ಯ ಪದೀಸುತಾಃ॥ ಸಮಾವಿಷ್ಟಾಶ್ಚಿತ್ರರಥಾಭಿತಾಮ್ರಾಭ್ಯಾಂತಥೈವಚ । ಕಿಶೋರಗೋಪಬಾಲೈಶ್ಚ ಧರ್ಮ ಭೀಮಾರ್ಜುನಾದಿಜಾ ॥

ಅಶ್ವಿನೀ ದೇವತೆಗಳು :– ೧. ನಾಸತ್ಯ, ೨.ದಸ್ರ. ಈ ಅಶ್ವಿನೀ ದೇವತೆಗಳೆಂಬುವರು ಕುದುರೆಯ ೨ ಮೂಗುಗಳ ರಂಧ್ರದಿಂದ ಸಮವಾಗಿ ಹುಟ್ಟಿರುವುದರಿಂದ ಅವರು ಯಾವಾಗಲೂ ಇಬ್ಬರೂ ಒಂದೇ ರೂಪವುಳ್ಳವರಾಗಿ ಒಂದೇ ಸ್ಥಳದಲ್ಲಿ ಇಬ್ಬರೂ ಇರುವರು. ಎಲ್ಲಿ ಅವತಾರ ಮಾಡಿದರೂ ಇಬ್ಬರೂ ಸೇರಿ ಅವತರಿಸುವರು. ಹಾಗೆಯೇ ರಾಮಾವತಾರ ಕಾಲದಲ್ಲಿ ಶ್ರೀರಾಮದೇವರ ಸೇವಾರ್ಥವಾಗಿ ಇವರು ವಿವಿದ, ಮೈಂದನೆಂಬ ಕಪಿಗಳಾಗಿ ಅವತರಿಸಿದರು. ಮತ್ತು ಕೃಷ್ಣಾವತಾರ ಕಾಲದಲ್ಲಿ ಪಾಂಡುರಾಜನ ಪತ್ನಿಯಾದ ಮಾದ್ರಿಯಲ್ಲಿ ತಮ್ಮ ದಶೆಯಿಂದ ತಾವೆ ನಕುಲ, ಸಹದೇವರಾಗಿ ಅವತರಿಸಿದರು. ವಿವಿದನೆಂಬುವನು ಇಂದ್ರನಾವೇಶಯುಕ್ತನಾದವನು. ನಾಸತ್ಯನಿಗೆ ವಿಭು ಎಂಬ ಅವತಾರವೂ, ದಸ್ರನಿಗೆ ತ್ರಿಶಿಖ ಎಂಬ ಅವತಾರವೂ ಉಂಟು. ಪ್ರಾ॥ ಇಂದ್ರಯುಗ್ವಿವಿದೋ ಮೈಂದೋ ನಕುಲಃ ಸಹದೇವಕಃ॥ ತ್ರಿಶಿಖೋವಿಭುರಿತ್ಯೇತಿ ಅಶ್ವಿನೌಪರಿಕೀರ್ತಿತೌ॥

೧೯ ಕರ್ಮಜರು:– ಸಾಧನಾತ್ಪೂರ್ವ ಅಪರೋಕ್ಷ ರಹಿತರು. ಸಾಧನಾನಂತರ ಅಪರೋಕ್ಷ ಜ್ಞಾನಿಗಳು.

೧. **ದೇವಜಾತಿ:–** ಅಗ್ನಿ, ಪುತ್ರ, ಪಾವಕ, ವಾಯು ಪುತ್ರ ಮರೀಚಿ (ತಾಪಸ), ಇಂದ್ರಪುತ್ರ ಜಯಂತ, ಯಜ್ಞ, ಶಂಭು,

೨. **ಋಷಿಜಾತಿ:–** ಚ್ಯವನ, ಉಚಥ್ಯ, ಕರ್ದಮ, ಭಾರದ್ವಾಜಾದಿ ೮೦ ಮಂದಿ ಋಷಿಗಳು.

೩. **ಗಂಧರ್ವರು:–** ಎಂಟುಜನ. ಈ ಗಂಧರ್ವರ ಹೆಸರು, ಅವತಾರ, ಆವೇಶಗಳನ್ನೂ ಸಹ ಉದಹರಿಸುತ್ತದೆ.

ಹೆಸರು	ಅವತಾರ	ಆವೇಶ
೧. ಹಾಹಾ	ವಿರಾಟರಾಯ(ಗಜೇಂದ್ರಕೂಡ)	ವಿವಹ ಮರುತ್ತ
೨. ಹೂಹೂ	೧.ದೃಪದರಾಯ ೨. ನಕ್ರ	ಅವಹ ಮಾರುತ
೩. ಧೃತರಾಷ್ಟ್ರ	ಧೃತರಾಷ್ಟ್ರರಾಯ	ವಾಯುದೇವರ ಆವೇಶ

೪. ತುಂಬುರ	೧.ವಿರಾಧ ೨.ಸಂಜಯ	ಉದ್ವಹ ಮಾರುತ
೫. ಚಿತ್ರರಥ	ಜನಮೇಜಯ	ತ್ವಷ್ಟ್ರನಾಮಕ ಸೂರ್ಯ
೬. ವಿಶ್ವಾವಸು	ಯುಧಾಮನ್ಯು	ವಿವಸ್ವಾನಾಮಕ ಸೂರ್ಯ
೭. ಪರಾವಸು	ಉತ್ತಮೋಜ	ಆರ್ಯನಾಮಕ ಸೂರ್ಯ
೮. ವಿದ್ಯಾಧರ	ಅಜಗರ	ಆರ್ಯನಾಮಕ ಸೂರ್ಯ

ತುಂಬುರು ಎಂಬ ಗಂಧರ್ವನಿಗೆ ವಿರಾಧನೆಂಬ ರಾಕ್ಷಸನ ರೂಪ ಒಂದು, ಸಂಜಯನೆಂಬ ರೂಪ ಒಂದು ಅಂತು ಎರಡು ಅವತಾರಗಳು.

ಈತನು ವಿರಾಧನೆಂಬ ರಾಕ್ಷಸನಾಗಲು ಕಾರಣವೇನೆಂದರೆ:– ಒಂದಾನೊಂದು ಕಾಲದಲ್ಲಿ ಕುಬೇರನ ಅಪ್ಪಣೆ ಮೇರೆಗೆ ಊರ್ವಶಿಯು ಕುಬೇರನ ಮನೆಗೆ ಅವಸರದಿಂದ ಹೋಗುತ್ತಿರುವಾಗ ತುಂಬುರುನಾದ ಈ ಗಂಧರ್ವನು ಆಕೆಯನ್ನು ನಿರ್ಬಂಧದಿಂದ ನಿಲ್ಲಿಸಿ ಮಾತನಾಡಿಸಲು ಅವಳು ಸಕಾಲಕ್ಕೆ ಕುಬೇರನಲ್ಲಿ ಹೋಗಲು ಸಾವಕಾಶವಾದ ಕಾರಣ ಆತನು ತಿಳಿದು ರಾಕ್ಷಸನಾಗೆಂದು ಶಾಪವನ್ನು ಕೊಟ್ಟನು. ಧೃತರಾಷ್ಟ್ರರಾಜನ ಸಾರಥಿಯಾದ ಗವದ್ಗಣನೆಂಬ ಸೂತಜಾತಿಯವನ ದೇಶೆಯಿಂದ ತುಂಬುರು ಎಂಬ ಗಂಧರ್ವನು ಉದ್ವಹನೆಂಬ ಮರುತ್ತನ ಆವೇಶದಿಂದ ಸಂಜಯನೆಂದು ಹುಟ್ಟಿದನು. ಪ್ರ ||ವಿರಾಧಶ್ಚೋದ್ವಹಾವಿಷ್ಟೋ ಸಂಜಯೊದ್ವಾಚತುಂಬರುಃ||

ಚಿತ್ರರಥನೆಂಬ ಗಂಧರ್ವನು ತ್ವಷ್ಟ್ರನೆಂಬ ಸೂರ್ಯನ ಆವೇಶದಿಂದ ಕೂಡಿದ ದೃಪದರಾಜನ ಮಗನಾಗಿ ಜನಮೇಜಯನೆಂದು ಅವತರಿಸಿದನು. ಪ್ರ|| ಜನಮೇಜಯಶ್ಚಾವಿಷ್ಟಸ್ತ್ವಷ್ಟ್ರಾ ಚಿತ್ರರಥಃಪುರಾ||

ದನು ಎಂಬ ಗಂಧರ್ವನು ಕಬಂಧನೆಂಬ ರಾಕ್ಷಸನಾಗಿಯೂ ಮತ್ತು ದಮಘೋಷ ರಾಜನಾಗಿಯೂ ಎರಡು ಅವತಾರಗಳು. ಪ್ರ ||ದಮಘೋಷ ಕಬಂಧೌದ್ವಾದನು ಗಂಧರ್ವ ಉಚ್ಯತೆ||

ಕಿಶೋರನೆಂಬ ಗಂಧರ್ವನು ಸ್ವಾಯಂಭುವ ಮನು ಆವೇಶದಿಂದಲೂ ಮತ್ತು ಬ್ರಹ್ಮದೇವರ ಆವೇಶದಿಂದಲೂ ಅಕ್ರೂರನಾಗಿ ಅವತರಿಸಿದನು. ಪ್ರ||ಬ್ರಹ್ಮಾಸ್ವಾಯಂಭುವಾ ವಿಷ್ಟೋಹ್ಯಕ್ರೂರಃಪ್ರಾಕ್ಕಿಶೋರಕ ||

ಧೃತರಾಷ್ಟ್ರನೆಂಬ ಗಂಧರ್ವನು ವಾಯುದೇವರ ಆವೇಶದಿಂದ ಕೂಡಿದವನಾಗಿ ಅಂಬಿಕೆ ಎಂಬ ಸ್ತ್ರೀಯಲ್ಲಿ ಧೃತರಾಷ್ಟ್ರನಾಗಿ ಅವತರಿಸಿದನು. ಪ್ರ॥ ಅಭೂಚ್ಚತಸ್ಯಾಂಧೃತರಾಷ್ಟ್ರ ನಾಮಕೋ ಗಂಧರ್ವರಾಟ್ ಪವನಾವೇಶಯುಕ್ತಃ ಬಭೂವರಾಜಾ ಧೃತರಾಷ್ಟ್ರನಾಮಕಾ ಇತಿ ನಿರ್ಣಯೇ॥

ಹೂಹೂ ಎಂಬ ಗಂಧರ್ವನು ಗಾನದಲ್ಲಿ ತನ್ನ ಸಮಾನರಿಲ್ಲವೆಂಬ ಅಹಂಕಾರದಿಂದ ಬ್ರಹ್ಮದೇವರ ಸಭೆಯಲ್ಲಿ ದೇವಲರೆಂಬ ಋಷಿಗಳನ್ನು ತಿರಸ್ಕಾರ ಮಾಡಿದ್ದರಿಂದ ಅವರ ಶಾಪದಿಂದ ಮೊಸಳೆಯಾಗಿ, ನಕ್ರಾವತಾರ ಮಾಡಿದನು. ಮತ್ತು ಪಾಂಚಾಲ ದೇಶಾಧಿಪತಿಯಾದ ಪೃಷತರಾಜನು ಸಂತಾನಾಪೇಕ್ಷೆಯಿಂದ ತಪಸ್ಸು ಮಾಡುತ್ತಿರಲು ಆ ಸಮಯದಲ್ಲಿ ಓರ್ವ ರೂಪವತಿಯಾದ ಉತ್ತಮ ಅಪ್ಸರ ಸ್ತ್ರೀಯನ್ನು ಕಂಡ ಕೂಡಲೇ ರೇತಸ್ಸು ಸ್ಖಲನವಾಗಲು ನಾಚಿಕೆಯಿಂದ ಅದನ್ನು ಕಾಲಿನಿಂದ ಮೆಟ್ಟಿ ಮುಚ್ಚಿಕೊಳ್ಳಲು, ಅದರಿಂದಲೇ ಮಗನು ಹುಟ್ಟಲು ದ್ರುಪದನೆಂಬ ಹೆಸರಿನಿಂದ ಈ ಗಂಧರ್ವನು ಅವತರಿಸಿದನು. ಈತನಿಗೆ ಆವಹನೆಂಬ ಮರುತ್ತನ ಆವೇಶವುಂಟು. ಪ್ರ॥ ನಕ್ರಸ್ತಥೋದ್ವಹಾವಿಷ್ಟದ್ರುಪದೋದ್ವೌಹುಹುಃಪುರಾ॥

ಹಾಹಾ ಎಂಬ ಗಂಧರ್ವನು ವಿರಾಟರಾಜನಾಗಿ ವಿವಹನೆಂಬ ಮರುತ್ತಿನ ಆವೇಶದಿಂದ ಅವತರಿಸಿದನು. ಪ್ರ॥ ವಿರಾಟ್ ಪ್ರಾಗ್ವಿವಹಯುಕ್ ಹಾಹಾದೇವಸ್ಯಗಾಯಕಃ॥

ಸುದರ್ಶನನೆಂಬ ಗಂಧರ್ವನು ಬಹುರೂಪ, ಐಶ್ವರ್ಯದಿಂದ ಕೂಡಿ ಅಹಂಕಾರದಿಂದ ವಿಮಾನಾರೂಢನಾಗಿ ಸಂಚರಿಸುತ್ತಿರಲು ಕುರೂಪಿಗಳಾದ ಆಂಗೀರಸ ಋಷಿಗಳನ್ನು ಕಂಡು ಹಾಸ್ಯಮಾಡಲು ಅವರ ಶಾಪದಿಂದ ಅಜಗರನೆಂಬ ಸರ್ಪನಾಗಿ ಅವತರಿಸಿ ಗೋಪಾಲಕರೆಲ್ಲರೂ ದೇವಯಾತ್ರೆಯ ನಿಮಿತ್ತ ಬಲರಾಮ ಕೃಷ್ಣರಿಂದ ಕೂಡಿ ಸರಸ್ವತೀ ತೀರದಲ್ಲಿ ಒಂದು ರಾತ್ರಿ ಮಲಗಲು ಈ ಅಜಗರನಾದ ಸರ್ಪನು ನಂದಗೋಪನನ್ನು ನುಂಗಲು ಶ್ರೀಕೃಷ್ಣನು ಪಾದದಿಂದ ಈ ಸರ್ಪವನ್ನು ಒದೆಯಲು ತನ್ನ ದಿವ್ಯ ದೇಹವನ್ನು ಹೊಂದಿದನು. ಪ್ರ ॥ ನಂದದಂಶೀಹ್ಯ ಜಗರೋವಿದ್ಯಾಧರ ಉದಾಹೃತ ॥

ಉಗ್ರಸೇನನೆಂಬ ಗಂಧರ್ವನೇ ಉಗ್ರಸೇನರಾಜನಾಗಿ ಜನಿಸಿದನು. ಪ್ರ॥ ಉಗ್ರಸೇನ ಸ್ತೂಗ್ರಸೇನೋಗಂಧರ್ವಃಸಮುದಾಹೃತಾ॥

ವಿಶ್ವಾವಸು ಎಂಬ ಗಂಧರ್ವನು ಬ್ರಹ್ಮಾವೇಶದಿಂದ ಕೂಡಿ ಯುಧಾಮನ್ಯುವೆಂತಲೂ; ಪರಾವಸು ಎಂಬ ಗಂಧರ್ವನು ಆರ್ಯಮಾವೇಶದಿಂದ ಕೂಡಿ ಉತ್ತಮೌಜಸ ಎಂತಲೂ; ಚಿತ್ರಸೇನನೆಂಬ ಗಂಧರ್ವನು ಮಿತ್ರಾಂಶದಿಂದ ಕೂಡಿ ಸತ್ಯಜಿತ್ ಎಂತಲೂ ಅವತರಿಸಿದರು.

ಪ್ರ॥ ಯುಧಾಮನ್ಯುರ್ಧಾತೃಯುಕ್ತೋವಿಶ್ವಾವಸ್ವಭಿಧಃಪುರಾ । ಉತ್ತಮೌಜಾಸ್ತ್ವರ್ಯಮಾಂಶಯುಕ್ತಶ್ಚೈವ ಪರಾವಸುಃ। ಸತ್ಯಜಿನ್ಮಿತ್ರಯುಕ್ತಶ್ಚ ಚಿತ್ರಸೇನೋಮಹಾಬಲ ॥ ಇವರೆಲ್ಲರೂ ೧೯ನೇ ಕಕ್ಷಾದಲ್ಲಿ ಸೇರಿರುತ್ತಾರೆ.

೪. **ಪಿತೃಗಳು :–** ಏಳುಜನ (ಸಾಂಶರು)
೫. **ಅಪ್ಸರರು:–** ಸ್ತ್ರೀಯರು ೯೨ ಜನರು
೬. **ಜಯವಿಜಯಾದಿ ದ್ವಾರಪಾಲಕರು :–** ೫೬ ಜನರು
೭. **ಸನಕಸನಂದನ ಸನತ್ಸುಜಾತ :–** ಮಾನಸ ಪುತ್ರರು
೮. **ವಿಶ್ವಕರ್ಮ:–** ದೇವ ಬಡಗಿ
೯. **ರಾಹು,ಕೇತು, ಮಂಗಳ, ಶುಕ್ರಾಚಾರ್ಯರು**
೧೦. **ಚಿತ್ರಗುಪ್ತರು**
೧೧. **ಯಜ್ಞಸಾಧನ ಪದಾರ್ಥಾಭಿಮಾನಿ ದೇವತೆಗಳು.**
೧೨. **ವಾಹನ ಜೀವರು:–** ಐರಾವತ, ಉಚ್ಚೈಶ್ರವಸ್ಸು ಮುಂತಾದುದಕ್ಕೆ ಅಭಿಮಾನಿ ದೇವತೆಗಳು
೧೩. **ಹನ್ನೊಂದು ಜನ ಮನುಗಳು.**

ಒಟ್ಟು ಮನುಗಳು ೧೪ ಮಂದಿ. ಇವರಲ್ಲಿ ೪ನೇ ಮನ್ವಂತರಾಧಿಪತಿಯಾದ ೧. ತಾಪಸನೆಂಬುವನು ಶ್ರೀಪರಮಾತ್ಮನ ಅವತಾರದವನು. ೨. ಸ್ವಾಯಂಭುವ ಮನುವು ೧೦ನೇ ಕಕ್ಷಾದಲ್ಲಿ ಸೇರಿರುವನು. ೩. ವೈವಸ್ವತ ಮನುವು ೧೬ನೇ ಕಕ್ಷಾದಲ್ಲಿ ಸೇರಿರುವನು. ಈ ಮೂರು ಜನಗಳು ಹೋಗುತ್ತಾ ಉಳಿದ ೧೧ ಮನುಗಳನ್ನು ಈ ಕಕ್ಷಾದಲ್ಲಿ ಸೇರಿಸಿರುವುದು. ಪ್ರ ॥ ಪಾವಕಾಗ್ನೇಃಪ್ರಥಮಜಃಉಚಿಥ್ಯಶ್ಚವನಸ್ತಥಾ । ರೈವತಶ್ಚಾಕ್ಷುಶಶ್ಚೈವಸ್ವಾರೋಚಿಷ ಉತೋತ್ತಮಃ । ಸಾವರ್ಣೀರ್ಬ್ರಹ್ಮಸಾವರ್ಣೀರ್ರುದ್ರ ಸಾವರ್ಣೀರ್ರೇವಚ । ದೇವೇಂದ್ರದಕ್ಷ ಧರ್ಮಾದಿಸಾವರ್ಣಿಪಿತೃಸಪ್ತಕಂ॥ ಇವರು ತಮ್ಮ ತಮ್ಮ ಮನ್ವಂತರಕ್ಕೆ ಅಧಿಪತಿಗಳು. ೧.ಸ್ವಾಯಂಭುವ ಮನ್ವಂತರದಲ್ಲಿ ಯಜ್ಞನಾಮಕನಾದ ಪರಮಾತ್ಮನೇ ಇಂದ್ರನು; ೨.ಸ್ವಾರೋಚಿಷ ಮನ್ವಂತರದಲ್ಲಿ ರೋಚನರೆಂದು ವಾಯುದೇವರು ಇಂದ್ರರು; ೩. ಉತ್ತಮ ಮನ್ವಂತರದಲ್ಲಿ ಸತ್ಯಜಿತ್ ಎಂದು ಯಮಧರ್ಮರು ಇಂದ್ರರು; ೪. ಮತ್ತು ೫. ಮನ್ವಂತರಗಳಲ್ಲಿ ತ್ರಿಶಿಖ, ವಿಭು ಎಂದು ನಾಸತ್ಯ, ದಸ್ರರೆಂಬ ಅಶ್ವಿನೀ ದೇವತೆಗಳು ಇಂದ್ರರು; ೬.ಚಾಕ್ಷುಷ ಮನ್ವಂತರದಲ್ಲಿ ಮಂದ್ರದ್ಯುಮ್ನ ಇಂದ್ರನು; ೭. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಪುರಂದರನು ಇಂದ್ರನು. ೮. ಎಂಟನೇ ಮನ್ವಂತರಕ್ಕೆ ಬಲಿಚಕ್ರವರ್ತಿಯು ಇಂದ್ರನಾಗುವನು; ೯.ಒಂಭತ್ತನೆಯ ಮನ್ವಂತರಕ್ಕೆ ಅದ್ಭುತನೆಂಬುವನು ಇಂದ್ರನು; ೧೦. ಹತ್ತನೆಯ ಮನ್ವಂತರಕ್ಕೆ ಶಂಭು ಎಂಬ ಇಂದ್ರನು; ೧೧.ಹನ್ನೊಂದನೆಯ ಮನ್ವಂತರಕ್ಕೆ ವಿಧೃತನೆಂಬ ಇಂದ್ರನು; ೧೨.ಹನ್ನೆರಡನೆಯ

ಮನ್ವಂತರಕ್ಕೆ ಸ್ವಧಾಮನೆಂಬ ಇಂದ್ರನು; ೧೩. ಹದಿಮೂರನೆಯ ಮನ್ವಂತರಕ್ಕೆ ದಿವಸ್ಪತಿ ಇಂದ್ರನು. ೧೪. ಹದಿನಾಲ್ಕನೆಯ ಮನ್ವಂತರಕ್ಕೆ ಶುಚಿ ಇಂದ್ರನು.

(೧೪) **ಬಲ್ಯಾದಿ ಇಂದ್ರರು ಏಳುಜನ:–** (೧)ಬಲಿ, (೨)ಅದ್ಭುತ, (೩) ಶಂಭು, (೪) ವಿಧೃತ, (೫) ಸ್ವಧಾಮ, (೬) ದಿವಸ್ಪತಿ, (೭) ಶುಚಿ. ಪ್ರ॥ ಬಲಿರದ್ಭುತಶಂಭೂಚ ವಿಧೃತಶ್ಚಸ್ವಧಾಮಕಃ । ದಿವಸ್ಪತಿಶುಚಿಶ್ಚೈವೇತಿ ॥

(೧೫) **ಪುಣ್ಯಶ್ಲೋಕರಾದ ೧೦೦ ಮಂದಿ ರಾಜರು :–** ಇವರಿಗೆ ಶ್ರೀಪರಮಾತ್ಮನ ಆವೇಶವೂ, ವಾಯುದೇವರ ಆವೇಶವೂ ಇರುವುದು. ಇವರ ಪೈಕಿ ಭರತರಾಜನು ವೃಷಭ ಜನ್ಮದಿಂದಲೂ, ಜಿಂಕೆಯ ಜನ್ಮದಿಂದಲೂ ಮತ್ತು ಬ್ರಾಹ್ಮಣ ಜನ್ಮದಿಂದಲೂ ಉತ್ಪನ್ನನಾಗಿದ್ದನು. ಪ್ರ॥ ವೃಷಭಾದ್ಧರಿಣಾವಿಪ್ರಾ ತ್ರಜನ್ಮಾಭರತಸ್ತಥಾ ॥ ಮಾಂಧಾತೇತ್ಯಾದಿ ರಾಜಾನೋವಿಷ್ಣ್ವಾವೇಶಯುತಾಃ ಸದಾ ॥

೨೦. **(೧) ಗಂಗಾ (ಭಾಗೀರಥಿ), (೨) ಸಂಜ್ಞಾ, (೩) ರೋಹಿಣಿ, (೪) ಶ್ಯಾಮಲಾ, (೫) ಉಷಾ, (೬) ಪರ್ಜನ್ಯ** ಇವರಪೈಕಿ ಶ್ಯಾಮಲೆಗೆ ಧರ್ಮರಾಜನ ಹೆಂಡತಿಯಾಗಿ ದೇವಕೀ ಎಂಬ ಅವತಾರವುಂಟು. ಈಕೆಯು ಶಿಶುಪಾಲನ ಮಗಳು. ಈಕೆಯು ಪೂರ್ವದಲ್ಲಿ ಯಮನ ಪತ್ನಿಯಾಗಿಯೂ ಯಮನೇ ಧರ್ಮರಾಜನ ಅವತಾರವಾದ್ದರಿಂದ ಆಕೆಯೇ ದೇವಕಿಯಾಗಿ ಅವತರಿಸಿದಳು. ಪ್ರ॥ ಅಥೋಪಯೇಮೇ ಶಿಶುಪಾಲಪುತ್ರೀಂ ಯುಧಿಷ್ಠರೋದೇವಕೀನಾಮಪೂರ್ವಾಂ । ಸ್ವೀಯಾಂಭಾರ್ಯಾಂ ಇತಿ ನಿರ್ಣಯೆ ॥ ೬ನೆಯ ಪರ್ಜನ್ಯನೆಂಬ ಸೂರ್ಯನು ಶರಭನೆಂಬ ಕಪಿಯಾಗಿ ಅವತರಿಸಿದನು. ಪ್ರ॥ ಶರಭೋರ್ಕೇಷುಪರ್ಜನ್ಯೋದೇವಕೀಶಾಮಲಾಪುರಾ ॥

೨೧. **ಅನಾಖ್ಯಾತರು:–** ಇವರು ಅಖ್ಯಾತರಾದ ಆಜಾನಜರಿಂದ ಉತ್ಪನ್ನರಾದವರಾದ್ದರಿಂದ ಅನಾಖ್ಯಾತರೆಂದು ಕರೆಸುವರು.

೨೨. **ಸ್ವಾಹಾದೇವಿ:–**

೨೩. **ಬುಧ:–** ಚಂದ್ರನ ಮಗನಾದ ಈತನು ಚಂದ್ರಾಂಶದಿಂದಲೂ, ಸುದರ್ಶನವೆಂಬ ಭಗವಚ್ಚಕ್ರದ ಆವೇಶದಿಂದಲೂ, ಯಮ, ವಾಯು, ಇಂದ್ರ, ಅಶ್ವಿನೀ ಇವರ ಆವೇಶದಿಂದಲೂ ಯುಕ್ತನಾಗಿ ಸುಭದ್ರೆಯಲ್ಲಿ ಅರ್ಜುನನ ದಶೆಯಿಂದ ಅಭಿಮನ್ಯುವಾಗಿ ಅವತರಿಸಿದನು. ಪ್ರ॥ ಸುದರ್ಶನಂಕೃಷ್ಣಶರ್ಮೇರೇಂದ್ರಾಶ್ವಯುಗ್ಬುಧಃ ॥

೨೪. **(೧) ಉಷಾ, (೨) ಯಶೋದಾದೇವಿ, (೩) ದೇವಕೀದೇವಿ** ಇವರಲ್ಲಿ ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಗೆ ಎರಡು ಅವತಾರಗಳು. (೧) ಶಲ್ಯರಾಜನ ಮಗಳಾಗಿ ನಕುಲನ ಹೆಂಡತಿಯಾದ ರೇಣುಮತಿಯ ಅವತಾರ (೨) ಸಹದೇವನ ಹೆಂಡತಿಯಾದ ವಿಜಯಾ ಎಂಬ ಅವತಾರ.

ಅಪ್ಸರ ಸ್ತ್ರೀಯರು

೧. ಊರ್ವಶಿ, ೨. ಘೃತಾಚಿ, ೩. ಮೇನಕಾ, ೪. ರಂಭ, ೫. ತಿಲೋತ್ತಮ, ೬. ಸುಕೇಶಿ, ೭. ಮಂಜುಘೋಷ, ೮. ಪಿಂಗಳ, ೯. ಪೂರ್ವಚಿತ್ತಿ, ೧೦. ಸಹಜನ್ಯಾ, ೧೧. ವಿಶ್ವಾಚಿ, ೧೨. ತ್ರಿಜಟೆ.

ಮೇಲ್ಕಂಡ ಅಪ್ಸರಸ್ತ್ರೀಯರಲ್ಲಿ ೮ನೆಯವಳಾದ ಪಿಂಗಳೆ ಎಂಬುವಳು ವೇಶ್ಯೆಯಾಗಿ ವಿದೇಹ ದೇಶದಲ್ಲಿದ್ದು ತನ್ನ ಅಂತರ್ಗತನಾದ ಪರಮಾತ್ಮನೇ ಪತಿ ಎಂದು ತಿಳಿದು ಧ್ಯಾನಮಾಡುತ್ತಾ ಆದೇಹವನ್ನು ಬಿಟ್ಟು ಕೃಷ್ಣಾವತಾರದಲ್ಲಿ ತ್ರಿವಕ್ರೆಯಾಗಿ ಸೈರಂಧ್ರಿ ಎಂದು ಹುಟ್ಟಿ ಶ್ರೀಕೃಷ್ಣನಿಗೆ ಗಂಧವನ್ನು ಕೊಟ್ಟು ಕೃಷ್ಣನ ಅಂಗಸಂಗವನ್ನು ಪಡೆದಳು. ಇದೇ ಇವಳ ಅವತಾರ. ಪ್ರ॥ ಅಥರ್ವೇಶ್ಯಾದಪ್ಸರಸಃ ಸೈರಂಧ್ರೀಪಿಂಗಳಾಪುರಾ ॥

೫ನೆಯವಳಾದ ತಿಲೋತ್ತಮೆಯು ಪಾರ್ವತೀ ಎಂಬ ಹೆಸರಿನಿಂದ ನಕುಲನಿಗೆ ಪತ್ನಿಯಾಗಿದ್ದಳು. ಪ್ರ॥ ನಕುಲಸ್ತ್ರೀಪಾರ್ವತೀಯಾಸಾಚಪೂರ್ವೇತಿಲೋತ್ತಮಾ ॥

ಶಬರಿ ಎಂಬುವಳೂ ಸಹ ಪೂರ್ವದಲ್ಲಿ ಒಬ್ಬ ಅಪ್ಸರ ಸ್ತ್ರೀಯು. ಕೃಷ್ಣನ ಪತ್ನಿಯರಾದ ೧೬ ಸಾವಿರದ ೧೦೦ ಮಂದಿಯರು ಅಗ್ನಿಪುತ್ರರಾದ ಋಷಿಗಳು. ಶ್ರೀಕೃಷ್ಣನ ಅಂಗಸಂಗೇಚ್ಛೆಯಿಂದ ವಾಯುದೇವರನ್ನು ಕುರಿತು ತಪಸ್ಸುಮಾಡಿ ವರ ಪಡೆದು ಸ್ತ್ರೀಯರಾಗಿ ಹುಟ್ಟಿ ಶ್ರೀಕೃಷ್ಣನಿಗೆ ಪತ್ನಿಯರಾದರು. ಇವರಪೈಕಿ ತ್ವಷ್ಟ್ರನ ಮಗಳಾದ ಕಶೇರು ಎಂಬಾಕೆ ಶ್ರೇಷ್ಠಳು. ಈ ಅಪ್ಸರ ಸ್ತ್ರೀಯರೆಲ್ಲರೂ ನರಕಾಸುರನ ಮನೆಯಲ್ಲಿ ನಿರ್ಬಂಧದಲ್ಲಿರಲು ಶ್ರೀಕೃಷ್ಣನು ಅವನನ್ನು ಸಂಹಾರ ಮಾಡಿ ಅವರನ್ನು ನಿರ್ಬಂಧದಿಂದ ಬಿಡಿಸಿ ಅವರನ್ನು ಸ್ವೀಕಾರಮಾಡಿದನು. ಇವರೆಲ್ಲರೂ ಸದ್ವ್ರತವುಳ್ಳ ಕನ್ಯೆಯರಾಗಿದ್ದರು. ಇವರಲ್ಲಿ ಕೆಲವರು ದೇವಕನ್ಯೆಯರೂ, ರಾಜಕನ್ಯೆಯರೂ ಅಗಿದ್ದರು. ಇವರೆಲ್ಲರಿಗೂ ದೇವಿಯರ ಆವೇಶವುಂಟು. ಪ್ರ॥ ಕೃಷ್ಣಾಂಗಸಂಗಗೋಪ್ಯಃ ಪ್ರಾಕ್ ಶಬರೀಚಾಪ್ಸರಸ್ತ್ರಿಯಃ । ಶ್ರೀಯುಕ್ ಷೋಡಶಸಾಹಸ್ರಸ್ತ್ರಿಯಃ ಪ್ರಾಗ್ವಹ್ನಿಪುತ್ರಕಾಃ । ಕಶೇರುಸ್ತ್ವಷ್ಟ್ರಪುತ್ರೀ ಯಾತಾಸಾಮಧ್ಯೇಗುಣಾಧಿಕಾ। ತಾಸಾಂಪ್ರಧಾನಾತ್ತ್ವಷ್ಟ್ರಪುತ್ರೀಕಶೇರುಃ ॥

ಅಗ್ನಿಪುತ್ರರಾದ ೧. ಕ್ರತು, ೨. ಸಿಂಧು, ೩. ಶುಚಿ, ೪. ಪವಮಾನ, ೫. ಕಾರ್ಶಿಕ ಎಂಬ ೫ ಮಂದಿಗಳು ತುಂಬುರು ಮೊದಲಾದ ೧೦೦ ಮಂದಿ ಗಂಧರ್ವರು, ಊರ್ವಶೀ ಮೊದಲಾದ ೧೦೦ ಮಂದಿ ಅಪ್ಸರಸ್ತ್ರೀಯರು, ವಸಿಷ್ಠಾದಿ ಉತ್ತಮಗುಣದಲ್ಲಿ ಶೇರಿದ ಋಷಿಗಳ ಹೊರತು ಉಳಿದ ಋಷಿಗಳು ಅಜಾನ ದೇವತೆಗಳು. ಪ್ರ॥ ಪವಮಾನಕ್ರಥೌದ್ವೌ ಪ್ರಾಕ್‌ಪವಮಾನೋಗ್ನಿಜಃ ಸ್ಮೃತೇಃ । ಕೌಶಿಕೋಽಗ್ನಿಜಃಸಿಂಧುಃಶುಚಿಃಪ್ರಾಕ್‌ಶುಚಿರಗ್ನಿಜಃ । ತುಂಬುರ್ವಾದಿಶತಂಚೈವ ಊರ್ವಶ್ಯಾದಪ್ಸರಸ್ತಥಾ। ಋಷಶಯಶ್ಚವಸಿಷ್ಠಾದೀನ್ ಋತೇ ಅಜಾನಜಾಸ್ಮೃತಾಃ ॥

ಅನಾಖ್ಯಾತ ಅಜಾನಜರ ವಿವರ :-

೧.	ವಿಬುಧರು	೧೦೦ ವಿಧ
೨.	ದೇವಭೃತ್ಯರಾದ ಪಿತೃಗಳು	೧೦೦ ವಿಧ
೩.	ದೇವಭೃತ್ಯರಾದ ಅಸುರ ನಾಮಧೇಯ ಭಗವದ್ಭಕ್ತರು	೧೦೦ ವಿಧ
೪.	ಗಾಯನ ಮಾಡುವ ಗಂಧರ್ವರು	೧೦೦ ವಿಧ
೫.	ನೃತ್ಯಮಾಡುವ ಅಪ್ಸರಸ್ತ್ರೀಯರು	೧೦೦ ವಿಧ
೬.	ದೇವಕಾರ್ಯದ ಸಿದ್ಧರು	೭೦ ವಿಧ
೭.	ಶಿಬಿಕಾ (ಪಲ್ಲಕ್ಕಿ) ಹೊರುವ ರಕ್ಷರು	೩೦ ವಿಧ
೮.	ಪರಿಚರ್ಯ ಮಾಡುವ ಚಾರಣರು	೩೦ ಇಧ
೯.	ಸೇವ ಮಾಡುವ ಭೂತರು	೭೦ ವಿಧ
೧೦.	ಪ್ರೇತರು	೭೦ ವಿಧ
೧೧.	ವಿದ್ಯಾಧರರು	೭೦ ವಿಧ
೧೨.	ಕಿನ್ನರರು	೭೦ ವಿಧ
೧೩.	ಪಿಶಾಚಾದಿಗಳು	೭೦ ವಿಧ
೧೪.	ಕುಬೇರ ಭೃತ್ಯರಾದ ಗುಹ್ಯಕರು	೭ ವಿಧ
೧೫.	ವರುಣ ಭೃತ್ಯರಾದ ನಾಗರು	೭ ವಿಧ

ಮೇಲ್ಕಂಡವರ ಪೈಕಿ ಕೆಲವು ದುಷ್ಟರಾದ ದೈತ್ಯರನ್ನ ದೇವತಾ ತಾರತಮ್ಯದಲ್ಲಿ ಹ್ಯಾಗೆ ಗಣನೆಗೆ ತಂದರೆಂದು ಅಕ್ಷೇಪಿಸಿದರೆ ಇದಕ್ಕೆ ಪುರಂದರದಾಸರ ಸುಳಾದಿಯೇ ಪ್ರಮಾಣ - ಮನಮುಖಕರಣಾಧಿಪರೆನಿಪ ರುದ್ರಾದಿಗಳತನ್ನಾಮಕಾಸುರರು ಇಂದ್ರಿಯಯೆಂಬೋ। ಮನೆಮಾಡಿ ವ್ಯಾಪಾರವ ಮಾಡುತ್ತಾ ಜೀವರಲ್ಲಿ। ಅನುವಾಗಿಹರ್‍ಯ್ಯ

ಬಳಲಿಸುತ । ಅನಿಮಿಷಾಗಣದವರನಾಮ ಧರಿಸಿಕೊಂಡು । ದನುಜರ ಸಮೂಹವು ಇಹೋದುಂಟು ॥ ಇವರುಗಳು ಅಸುರರು, ಪ್ರೇತ, ಪಿಶಾಚಿಗಳಾದಾಗ್ಯೂ ಭಕ್ತರಾದ ಜ್ಞಾನಿಗಳಾಗಿ ಪರಿಚರ್ಯದಿಂದಲೂ, ಗಾನ ವಿದ್ಯೆಗಳಿಂದಲೂ ತಮಗಿಂತಲು ಉತ್ತಮರಾದವರಿಗೆ ಪ್ರತಿದಿನದಲ್ಲೂ ಸೇವೆ ಮಾಡುತ್ತಲೂ, ತಮಗಿಂತ ಕಡಿಮೆಯಾದವರಿಗೆ ಸರ್ವೋತ್ತಮನಾದ ಪರಮಾತ್ಮನ ಕಲ್ಯಾಣಗುಣಗಳನ್ನು ಉಪದೇಶ ಮಾಡುವರು. ದೇವತೆಗಳಲ್ಲಿ ಬ್ರಾಹ್ಮಣ, ಕ್ಷತ್ರಿಯರೆಂಬ ವರ್ಣಾಶ್ರಮ ಭೇದವಾಗಲೀ, ಆಶ್ರಮ ಭೇದವಾಗಲೀ ಇರುವುದಿಲ್ಲ. ಋಷಿಗಳಲ್ಲಿಗುರುಶಿಷ್ಯತ್ವ ಲಕ್ಷಣಗಳುಂಟು.

ಪ್ರ॥ ವರ್ಣಾಶ್ರಮಾನುಸಾರೇಣ ವಿಶೇಷಃಕಶ್ಚನಾತ್ರಹಿ । ಋಷ್ಯಾದಿಷು ವಿಶೇಷೋಸ್ತಿ ಗುರುಶಿಷ್ಯತ್ವ ಲಕ್ಷಣಂ ॥ ದೇವತೆಗಳಿಗೆ ಶಿಷ್ಯರೆನಿಸಿ ಅವರ ಆಜ್ಞಾಧಾರಕರಾಗಿರುವವರು ದೇವಗಂಧರ್ವರು; ಅವರ ಶಿಷ್ಯರೂ ಅಜ್ಞಾಧಾರಕರಾಗಿರುವವರು ಮನುಷ್ಯ ಗಂಧರ್ವರು; ಇತರ ವಿಷಯಾಸಕ್ತಿಯನ್ನು ಬಿಟ್ಟು, ಅತ್ಯಂತ ಸದ್ಭಕ್ತಿಪೂರ್ವಕವಾಗಿ, ಅಂದರೆ, ನವವಿಧ ಭಕ್ತಿಪೂರ್ವಕವಾಗಿ (೧.ಶ್ರವಣಂ, ೨. ಕೀರ್ತನಂ-ವಿಷ್ಣೋ, ೩. ಸ್ಮರಣಂ, ೪. ಪಾದಸೇವನಂ॥ ೫. ಅರ್ಚನಂ, ೬. ವಂದನಂ, ೭. ದಾಸ್ಯಂ, ಸಖ್ಯಂ, ೯. ಆತ್ಮನಿವೇದನಂ ॥) ಪರಮಾತ್ಮನನ್ನು ಭಜಿಸುತ್ತಾ ಎಲ್ಲಾ ಇಂದ್ರಿಯಗಳೂ ನಿಯಾಮಕನೂ ಶ್ರೀಲಕ್ಷ್ಮೀಪತಿಯೆಂದು ತಿಳಿದು ಚಿಂತಿಸುವವರು ಮನುಷ್ಯೋತ್ತಮರು. ಪ್ರ॥ ಸಾಕ್ಷಾದ್ದೇವಮುಖಾಪ್ರೇಷ್ಯಾಃ ದೇವಗಂಧರ್ವನಾಮಕಾಃ । ಗಂಧರ್ವಂ ಮುಖಪ್ರೇಷ್ಯಾಃ ಗಂಧರ್ವಾಮಾನುಷಾಸ್ಮೃತಾಃ ॥

ನಿತ್ಯ ಸಂಸಾರಿಗಳು ಸರ್ವಕಾಲದಲ್ಲೂ ಗುಣದೋಷ ಮಿಶ್ರವಾದ ಸ್ವಭಾವವುಳ್ಳವರಾಗಿ ಪರಮಾತ್ಮನು ಸಾಧಾರಣ ಓರ್ವ ರಾಜನೆಂತಲೂ ಆತನಿಗೂ ಓರ್ವ ಪ್ರೇರಕನಿರಬಹುದೆಂಬ ಸಂಶಯಗ್ರಸ್ತರು. ಬ್ರಹ್ಮ, ರುದ್ರ, ಶ್ರೀವಿಷ್ಣು ಇವರು ಮೂವರೂ ಸಮರೆಂತಲೂ; ರಾಮಕೃಷ್ಣಾದಿ ಅವತಾರಗಳಲ್ಲಿ ಸುಖ, ದುಃಖ, ಉತ್ಪತ್ತಿ, ನಾಶ, ಭಯ, ಇವುಗಳು ಉಂಟೆಂತಲೂ, ತಿಳಿದಿರುವುದರಿಂದಿವರಿಗೆ ನಿತ್ಯ ಸಂಸಾರರೂಪವಾದ ಸಾಂತಾನಿಕಲೋಕ ಪ್ರಾಪ್ತಿಗಾಗಿ ಅಲ್ಲಯೂ ಸಹ ಸುಖ, ದುಃಖ ಮಿಶ್ರಫಲಗಳನ್ನನುಭವಿಸುವರು. ಪ್ರ॥ ತತ್ರಸಂಸೃತಿಬದ್ಧಾಸ್ತು ಗುಣದೋಷೋ ಭಯಾತ್ಮಕಃ । ತತ್ರೋಚ್ಚಾರಾಜಿವದ್ವಿಷ್ಣೋಃ ಸರ್ವಾಧಿಕ್ಯೇತುಸಂಶಯಾಃ ॥ ಜಾನಂತ್ಯಥಾಪಿಬ್ರಹ್ಮಾದಿದೇವಾನಾಂ ಪರಿವಾರತಾಂ ॥

ತಮೋಯೋಗ್ಯರು ತಾರತಮ್ಯ ಜ್ಞಾನವಿಲ್ಲದೇ ಭಗವದ್ಭಕ್ತರನ್ನು ದೂಷಿಸುತ್ತಾ, ನೋಡುವ ಜನರಿಗೆ ಜ್ಞಾನಿಗಳೆಂತಲೂ ಕೃತಕ ವೇಷದಿಂದ ತೋರ್ಪಡಿಸಿಕೊಳ್ಳುತ್ತಾ, ಕ್ಷುದ್ರ ದೇವತೆಗಳ ಉಪಾಸನೆಯನ್ನು ಮಾಡುತ್ತಾ, ಹೊಟ್ಟೆಪಾಡಿಗಾಗಿ ನೀಚರ ಮನೆಗಳಿಗೆ ತಿರುಗುತ್ತಾ,

ಹರಿಭಕ್ತರನ್ನು ದ್ವೇಷಿಸುತ್ತಾ, ಪರಮಾತ್ಮನಲ್ಲಿಯೂ ಸಹ ದ್ವೇಷ ಮಾಡುವವರಾಗಿ ಅಂಧಂತಮಸ್ಸಿಗೆ ಹೋಗುವರು. ಪ್ರ॥ ಹರಿಭಕ್ತಿಮೃತೇಮೋಕ್ಷಂ ತತ್ವಜ್ಞಾನಂವಿನಾಪಿವಾ । ಹರಿದ್ವೇಷಾನ್ಮುಕ್ತಿಮಪಿ ದಾನತೀರ್ಥಾದಿಭಿಸ್ತಥಾ ॥ ಮುಕ್ತಾವಭೇದಂಜೀವಾನಾಂ ಸಾಮ್ಯಂವಾಜ್ಞಾನಹೀನತಾಂ ।ಆರೋಪತ್ವಂಹಿಜೀವಾನಾಂ ಮುಕ್ತಾನಾಂಬದ್ಧತಾಮಪಿ । ಪರಸ್ಪರಮಭೇದಂಚ ಜೀವಾನಾಮಚಿತಾಂತಥಾ । ಮಿಥ್ಯಾತ್ವಂಚಪ್ರಪಂಚಸ್ಯ ಬ್ರಹ್ಮಜ್ಞಾನೇನಭಾಧ್ಯತಾಂ । ಸರ್ವೇಷಾಮಪಿಮುಕ್ತಿಂಚಾ ಪ್ರಮಾಣ್ಯಂಚಶೃತೇಸ್ತಥಾ । ಅತತ್ವಾವೇದಕತ್ವಂಚ ಯುಕ್ತೇರ್ದುಲತಾಮಪಿ । ದುರಾಗ್ರಹಗೃಹೀತಾರ ಕುತರ್ಕಪರಿನಿಷ್ಠತಾಃ । ಹರಿದ್ವೇಷಪರಾನಿತ್ಯಂ ತಬ್ಧಕ್ತದ್ವೇಷಿಣಸ್ತಥಾ ।ಇತಿನಾನಾಪ್ರಕಾರೇಣ ಮನ್ಯಂತೇಕುಬುದ್ಧಯಃ ॥ ಈ ತಾರತಮ್ಯವನ್ನು ಮನಸ್ಸಿನಲ್ಲಿ ಸರ್ವದಾ ಮನನ ಮಾಡಲು ಮೂರು ಶ್ಲೋಕಗಳಲ್ಲಿ ಹೇಳಲ್ಪಡುತ್ತವೆ.

ಶ್ಲೋ॥ ವಿಷ್ಣುಃ ಶ್ರೀಬ್ರಹ್ಮವಾಣೀಶಾನೀಲೋಮೇಂದ್ರಾಸ್ಮರೋಗುರುಃ । ಪ್ರವಾಹ 'ಸೂರ್ಯ ವರುಣನಾರದಾಗ್ನಿ ವಸಿಷ್ಠಕಾಃ ॥೧॥ ಮಿತ್ರೋವಿಘ್ನೇಶ್ವರಶ್ಚೈವ ಪೃಥುರ್ಗಂಗಾಚಕೇಚನ। ಸ್ವಾಹಾಬುಧೋಷಾಶನಯಃ ಪುಷ್ಕರಾಜಾನದೇವತಾಃ ॥೨॥ ಪಿತರೋದೇವಮನುಜಾ ಗಂಧರ್ವಾಶ್ಚಕ್ರವರ್ತಿನಃ ॥ ಮನಷ್ಯೋತ್ತಮಪರ್ಯಂತಾ ಪ್ರೀಯತಾಂಗುರುವೋಮಮ ॥೩॥

ಈ ತಾರತಮ್ಯವನ್ನು ತಿಳಿದು ಆಚರಿಸತಕ್ಕವರಿಗೆ ಶ್ರೀಹರಿಯು ಚತುರ್ವಿಧ ಪುರುಷಾರ್ಥಗಳನ್ನು ಕೊಟ್ಟು ಸಲಹುವನು.

ಆವೇಶಾವತಾರತಾರತಮ್ಯ ಸಂಪೂರ್ಣವು

೮. ಆರೋಹಣ ಅವರೋಹಣ ತಾರತಮ್ಯ ಪ್ರಕರಣ

ಸಂಪುಟ ೫ ಸಂಚಿಕೆ ೧೧ ಅಂಗೀರಸ ಮಾಘ ಫೆಬ್ರವರಿ ೧೯೩೩

ಪ್ರ॥ ತತ್ರಸ್ಥಾವರಮುಕ್ತೇಭ್ಯೋ ವರಾಜಂಗಮಮುಕ್ತಿಗಾಃ ।ತೇಭ್ಯೋಮಾನುಷಮುಕ್ತಾಸ್ತು ತೇಭ್ಯೋಮುಕ್ತಾದ್ವಿಜಾಪರೇ ॥ ತತ್ವೋಪದೇಶ ಕರ್ತಾರೋ ಮುಕ್ತೇಭ್ಯೋಹ್ಯಧಿಕಾಮತಾಃ । ತೇಭ್ಯೋಧಿಕಾಸ್ತುಭೂಪಾಲಾಮುಕ್ತಿಗಾಃ ಪರಿಕೀರ್ತಿತಾಃ ॥ ಅಧಿಕಾಪಿತರೋ ಭೂಪೈರ್ಮುಕ್ತಿಗಾಸ್ತೇಭ್ಯ ಏವಚ । ಋಷಯೋಪ್ಯಧಿಕಾಪ್ರೋಕ್ತಾಸ್ತೇಭ್ಯೋವೈ ಕರ್ಮಜಾಃಪರೇ॥ ತೇಭ್ಯೋ ಅಜಾನಜಾದೇವಾಸ್ತೇಭ್ಯೋ ಸಪ್ತರ್ಷಯಃ ಪರೆ । ತೇಭ್ಯೋವಹ್ನಿಸ್ತತಃ ಸೂರ್ಯಸ್ತಸ್ಮಾದ್ವಾಚಸ್ಪತಿಃಪರಃ ॥ ತಸ್ಮಾದಿಂದ್ರಃ ಪರೋಮುಕ್ತಸ್ತಸ್ಮಾದ್ಗೌರೀತತೋಹರಃ । ಹರಾದ್ಬುದ್ಧಿಸ್ತತೋಬ್ರಹ್ಮಾ ಮುಕ್ತೌಜೀವಾಧಿಕೋಮತಃ ॥ ಬ್ರಹ್ಮಣಃಪರಮಂವ್ಯಕ್ತಂ ತಸ್ಮಾದ್ವಿಷ್ಣುರ್ಮಹಾಪ್ರಭುಃ ॥

ಶುದ್ಧ ಜಡಗಳು ಮೊದಲುಮಾಡಿ ಮಾನುಷ ಚಕ್ರವರ್ತಿಗಳ ಪರ್ಯಂತ ಆರೋಹಣ ಮತ್ತು ಅವರೋಹಣ ತಾರತಮ್ಯವನ್ನು ವಿವರಿಸುತ್ತೇವೆ.

ಆರೋಹಣ ಕಕ್ಷ ಸಂಖ್ಯಾ	ವಿವರ	ಅವರೋಹಣ ಕಕ್ಷ ಸಂಖ್ಯಾ
೧	ಚೇತನರಹಿತವಾದ ಶುದ್ಧಜಡಗಳು	೪೮
೨	ತೃಣಜೀವರು	೪೭
೩	ಕ್ರಿಮಿಜೀವರು	೪೬
೪	ಮೇಕೆಜೀವರು	೪೫
೫	ಕುರಿಜೀವರು	೪೪
೬	ಆಕಳುಜೀವರು	೪೩
೭	ಆನೆಯಜೀವರು	೪೨
೮	ವ್ಯಾಘ್ರಜೀವರು	೪೧
೯	ಸಿಂಹಜೀವರು	೪೦
೧೦	ಶೂದ್ರಜೀವರು	೩೯
೧೧	ವೈಶ್ಯಜೀವರು	೩೮
೧೨	ಕ್ಷತ್ರಿಯಜೀವರು	೩೭

ಆರೋಹಣ ಕಕ್ಷ ಸಂಖ್ಯಾ	ವಿವರ	ಅವರೋಹಣ ಕಕ್ಷ ಸಂಖ್ಯಾ
೧೩	ಬ್ರಾಹ್ಮಣಜೀವರು	೩೬
೧೪	ಜ್ಞಾನಿಯಾದ ಬ್ರಾಹ್ಮಣಜೀವರು	೩೫
೧೫	ಮಾನುಷ ಚಕ್ರವರ್ತಿಗಳು	೩೪
೧೬	ಮಾನುಷ ಗಂಧರ್ವರು	೩೩
೧೭	ದೇವಗಂಧರ್ವರು	೩೨
೧೮	೧೦೦ ಕಡಿಮೆ ೧೦೦ ಕೋಟಿ ಋಷಿಗಳು; ಅಪ್ಸರಸ್ತ್ರಿಯರು	೩೧
೧೯	ಚಿರಪಿತೃಗಳು	೩೦
೨೦	೯೦ ಮಂದಿ ಋಷಿಗಳು, ೯೨ ಮಂದಿ ಗಂಧರ್ವರು ಅಪ್ಸರಸ್ತ್ರೀಯರು	೨೯
೨೧	ಕೃಷ್ಣಪತ್ನಿಯಾದ ೧೬,೦೦೦ ಸ್ತ್ರೀಯರು	೨೮
೨೨	ಕಶೇರು ಮತ್ತು ಅಜಾನ ದೇವತೆಗಳಲ್ಲಿ ಸೇರಿದ ೭೪ ಜನರು	೨೭
೨೩	ಪುಷ್ಕರ	೨೬
೨೪	ಶನ್ಯೈಶ್ಚರ	೨೫
೨೫	ಉಷಾ	೨೪
೨೬	ಬುಧ (ಉದಕಾಭಿನಾನಿ).	೨೩
೨೭	ಸ್ವಾಹಾದೇವಿ (ಅಗ್ನಿಭಾರ್ಯೆ)	೨೨
೨೮	ಅನಾಖ್ಯಾತ ದೇವತೆಗಳು	೨೧
೨೯	ಮೇಘಾಭಿಮಾನಿ ಪರ್ಜನ್ಯ, ಅನಿರುದ್ಧ ಪತ್ನಿ, ಉಷಾ, ಗಂಗಾ, ಸಂಜ್ಞಾ (ಸೂರ್ಯಪತ್ನಿ), ಶ್ಯಾಮಲಾ (ಯಮದೇವರ ಪತ್ನಿ), ರೋಹಿಣಿ (ಚಂದ್ರ ಪತ್ನಿ)	೨೦
೩೦	೧೦೦ ಮಂದಿ ಕರ್ಮಜರು	೧೯
೩೧	ಪೃಥು, ನಹುಷ, ಶಶಿಬಿಂದು, ಪ್ರಿಯವ್ರಥ, ಪರೀಕ್ಷಿದ್ರಾಜ ಬಲ್ಯಾದಿ ಸಪ್ತೇಂದ್ರರು, ೮ ಮಂದಿ ಪಿತೃಗಳು, ಏಕಾದಶ ಮನುಗಳು, ಶುಕ್ರಾಚಾರ್ಯರು, ಉಚಿಥ್ಯರು, ಕುಬೇರ, ವಿಷ್ವಕ್ಸೇನ, ಗಣಪತಿ, ಅಶ್ವಿನೀ ದೇವತೆಗಳು, ೮೫ ಮಂದಿ ಶೇಷಶತಸ್ಥರು	೧೮
೩೨	ಮಿತ್ರನಾಮಕ ಸೂರ್ಯ, ಬೃಹಸ್ಪತ್ಯಾಚಾರ್ಯರ ಪತ್ನಿ ತಾರಾ, ನಿಋುಋುತಿ ಮತ್ತು ಪ್ರಾವಹಿ	೧೭

ಆರೋಹಣ ಕಕ್ಷ ಸಂಖ್ಯಾ	ವಿವರ	ಅವರೋಹಣ ಕಕ್ಷ ಸಂಖ್ಯಾ
೩೩	ಮರೀಚ್ಯಾದಿಸಪ್ತಋಷಿಗಳು, ವಿಶ್ವಾಮಿತ್ರ, ವೈವಸ್ವತ ಮನು	೧೬
೩೪	ಅಗ್ನಿದೇವರು, ಭೃಗುಋಷಿಗಳು, ದಕ್ಷಪ್ರಜೇಶ್ವರನ ಪತ್ನಿ ಪ್ರಸೂತಿ	೧೫
೩೫	ನಾರದ ಋಷಿ	೧೪
೩೬	ವರುಣ	೧೩
೩೭	ಯಮ, ಚಂದ್ರ, ವಿವಸ್ವಾನಾಮಕ ಸೂರ್ಯ, ಶತರೂಪ (ಸ್ವಾಯಂಭು ಮನುವಿನ ಪತ್ನಿ)	೧೨
೩೮	ಪ್ರವಹ ವಾಯು	೧೧
೩೯	ಕಾಮಪುತ್ರ ಅನಿರುದ್ಧ	೧೦
೪೦	ಅಹಂಕಾರಿಕ ಪ್ರಾಣ	೯
೪೧	ಇಂದ್ರದೇವರು–ಕಾಮದೇವರು	೮
೪೨	ರುದ್ರದೇವರ ಪತ್ನಿ ಪಾರ್ವತೀದೇವಿ, ಶೇಷಪತ್ನಿ ವಾರುಣೀದೇವಿ, ಗರುಡದೇವರ ಪತ್ನಿ ಸೌಪರ್ಣಿದೇವಿ	೭
೪೩	ಕೃಷ್ಣದೇವರ ಪತ್ನಿಯರಾದ ಷಣ್ಮಹಿಷಿಯರು	೬
೪೪	ಗರುಡದೇವರು, ರುದ್ರದೇವರು, ಶೇಷದೇವರು	೫
೪೫	ಸರಸ್ವತೀದೇವಿ, ಭಾರತೀದೇವಿಯರು	೪
೪೬	ವಾಯುದೇವರು, ಬ್ರಹ್ಮದೇವರು	೩
೪೭	ಲಕ್ಷ್ಮೀದೇವಿಯರು	೨
೪೮	ಶ್ರೀಹರಿ	೧

ಈ ಆರೋಹಣ ತಾರತಮ್ಯವನ್ನು ಯಾರು ಬರೆಯುವರೋ, ಯಾರು ಪಠಿಸುವರೋ ಅವರ ಮನೋರಥಗಳನ್ನು ಸಮಸ್ತ ದೇವಗಣಾಂತರಾತ್ಮಕನೂ, ಕರುಣಾಸಮುದ್ರನೂ, ಮುಕ್ತಿದಾಯಕನೂ, ಭಯಶೋಕರಹಿತನೂ ಆದ ಶ್ರೀಲಕ್ಷ್ಮೀನರಸಿಂಹನು ಪೂರೈಸುವನು; ಮತ್ತು ಅವರ ಸಮಸ್ತ ಪಾಪಗಳನ್ನೂ ಪರಿಹಾರಮಾಡುವನು.

ನಂತರ ಅವರೋಹಣ ತಾರತಮ್ಯವನ್ನು ಅನುಸರಿಸಿ ಶ್ರೀಮನ್ನಾರಾಯಣ ದೇವರು ಮೊದಲುಮಾಡಿಕೊಂಡು ಶ್ರೀಪರಮಾತ್ಮನ ದಾಸರಾದ ಮನುಷ್ಯೋತ್ತಮರವರಿವಿಗೂ ನಮಸ್ಕರಿಸಿ ತಾರತಮ್ಯರೀತ್ಯಾ ಪಠನಮಾಡಿ ಚಿಂತಿಸತಕ್ಕವರಿಗೆ ಧರ್ಮಾರ್ಥ ಕಾಮಮೋಕ್ಷಗಳು ಸಿದ್ಧಿಸುವುವು. ಆದ್ದರಿಂದ ಸರ್ವರೂ ಇದನ್ನು ಸ್ತುತಿಸುವುದು.

ಆರೋಹಣ ಅವರೋಹಣ ತಾರತಮ್ಯ ಸಂಪೂರ್ಣವು

೯. ದೈತ್ಯ ತಾರತಮ್ಯ ಪ್ರಕರಣ

ಸಂಪುಟ ೫ ಸಂಚಿಕೆ ೧೨ ಅಂಗೀರಸ, ಫಾಲ್ಗುಣ ಮಾರ್ಚ್ ೧೯೩೩

ಶ್ಲೋಕ ॥ ದೇವಜೀವಾಭಿಮಾನೀತು ಬ್ರಹ್ಮೈವತುಚತುರ್ಮುಖಃ ।ಮಾನುಷಾಣಾಂತು ಜೀವಾನಾಂ ಅಭಿಮಾನೀಪುರಂಜನಃ। ಸತುರಾಜಾ ಹರೇಃಪುತ್ರಸ್ತ್ವಿತಸುರಾಣಾಂಕಲಿಃಸ್ವಯಃ॥

ಸತ್ವಜೀವರಾದ ದೇವತೆಗಳಿಗೆ ಬ್ರಹ್ಮದೇವರು ಅಭಿಮಾನಿಯು; ನಿತ್ಯ ಸಂಸಾರಿಗಳಾದ ಮನುಷ್ಯರಿಗೆ ಪುರಂಜನನೆಂಬ ರಾಜನು ಅಭಿಮಾನಿಯು; ದೈತ್ಯಜೀವರುಗಳಿಗೆ ಕಲಿಯೇ ಅಭಿಮಾನಿಯು.

ಆದ್ದರಿಂದ ದೇವತೆಗಳ ತಾರತಮ್ಯವನ್ನು ನಾವು ಹೇಗೆ ತಿಳಿದುಕ್ಕೊಂಡೇವೋ ಹಾಗೆಯೇ ದೈತ್ಯರನ್ನು ದ್ವೇಷಿಸುವುದಕ್ಕಾಗಿ ಅಂಥಾ ದೈತ್ಯರ ಸ್ವಭಾವಗಳನ್ನು ತಿಳಿದು ಅವರ ತಾರತಮ್ಯವನ್ನೂ ಸಹ ತಿಳಿದುಕೊಳ್ಳಬೇಕಾಗಿರುವುದು.

ದೈತ್ಯರು ಯಾರೆಂದರೆ, ಬ್ರಹ್ಮದೇವರಿಗೆ ಶ್ರೀಪರಮಾತ್ಮನಲ್ಲಿ ಎಷ್ಟು ಜ್ಞಾನ ಭಕ್ತಿಗಳಿರುವುವೋ ಅಷ್ಟೇ ಜ್ಞಾನ ಭಕ್ತಿಗಳು ವಾಯುದೇವರಲ್ಲಿಯೂ ಇದೆಯೆಂದು ತಿಳಿಯದೆ, ಬ್ರಹ್ಮದೇವರಿಗೂ ವಾಯುದೇವರಿಗೂ ಭಕ್ತಿಜ್ಞಾನಗಳಲ್ಲಿ ತಾರತಮ್ಯವನ್ನು ಹೇಳುವವನೂ, ಬಳಿತ್ಥಾದಿ ಸೂಕ್ತ ಪ್ರತಿಪಾದ್ಯರಾದ ವಾಯುದೇವರ ಮೂಲ ಮತ್ತು ಅವತಾರ ರೂಪಗಳಿಗೆ ಪರಸ್ಪರ ಭೇದಗಳುಂಟೆಂದು ಹೇಳುವವರೂ ಮಹಾ ದೈತ್ಯರು.

ದೈತ್ಯರ ಸ್ವಭಾವಗಳಾವುವೆಂದರೆ, ಶ್ಲೋ॥ ಗುಣಪೂರ್ಣಸ್ಯವಿಷ್ಣೋಸ್ತುನಿರ್ಗುಣತ್ವ ವಿಚಿಂತನಂ। ಜ್ಞಾನಾನಂದಾದಿಪೂರ್ಣಸ್ಯಸೋಹಮಿತ್ಯಾದಿಚಿಂತನಂ ॥ ಚಿದಾನಂದಾತ್ಮಕೇದೇಹೇ ವಿಯೋಗಾದಿವಿಚಿಂತನಂ ॥ ಅಚ್ಛೇದ್ಯಾಭೇದ್ಯಗಾತ್ರೇಷು ಛೇದಭೇದಾದಿಚಿಂತನಂ ॥

ಪೂರ್ಣಜ್ಞಾನ, ಪೂರ್ಣಬಲ, ಪೂರ್ಣಾನಂದ ಸ್ವರೂಪನಾದ ಶ್ರೀಪರಮಾತ್ಮನನ್ನು ನಿರ್ಗುಣನೆಂದು ಉಪಾಸನೆ ಮಾಡುವವನೂ, ತಾನೇ ಈಶ್ವರನೆಂದು ತಿಳಿದಿರುವವನೂ, ಶಶ್ವದೇಕಪ್ರಕಾರವಾಗಿ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನಿಗೆ ಜನನಾದಿಗಳುಂಟೆಂದು ತಿಳಿಯುವವನೂ, ರಮಾದೇವಿಯರಿಗೂ, ಪರಮಾತ್ಮನಿಗೂ ರಾಮಾವತಾರ ಮೊದಲಾದ

ಅವತಾರದಲ್ಲೇ ಆಗಲೀ ಮೂಲರೂಪದಲ್ಲೇ ಆಗಲೀ ಒಬ್ಬರಿಗೊಬ್ಬರ ವಿಯೋಗವನ್ನು ತಿಳಿಯುವವನೂ; ಅಚ್ಛೇದ್ಯವೂ ಅಭೇದ್ಯವೂ ಆದ ಪರಮಾತ್ಮನ ದೇಹಕ್ಕೆ ಆಯುಧಗಳಿಂದ ಛೇದ, ಭೇದಗಳುಂಟೆಂದು ತಿಳಿಯುವವನೂ, ಮತ್ತು

ಶ್ಲೋ ॥ ಕ್ಲೇಶಶೋಕಾದಿಶೂನ್ಯಸ್ಯಹರೇಃಕ್ಲೇಶಾದಿಚಿಂತನಂ । ವ್ಯಾಸರಾಮಾದಿ ರೂಪೇಷುಋಷಿವಿಪ್ರತ್ವಚಿಂತನಂ ॥ ಸಂತಾನಾರ್ಥಂತುಕೃಷ್ಣೇನಶಿವಪೂಜಾದಿಚಿಂತನಂ । ತೇಸರ್ವೇ ಅಸುರಾಜ್ಞೇಯಾ ನಾತ್ರಕಾರ್ಯಾವಿಚಾರಣಾ ॥

ಪರಮಾತ್ಮನಿಗೆ ಶೋಕ ಮೊದಲಾದವುಗಳುಂಟೆಂದು ತಿಳಿಯುವವನೂ; ಪರುಶುರಾಮದೇವರನ್ನು ಸಾಕ್ಷಾತ್ ಪರಮಾತ್ಮನೆಂದು ತಿಳಿಯದೆ ಕೇವಲ ಬ್ರಾಹ್ಮಣನೆಂದು ತಿಳಿಯುವವನೂ; ವೇದವ್ಯಾಸದೇವರು ವಸಿಷ್ಠಾದಿ ಋಷಿಗಳಂತೆ ಅವರೂ ಒಬ್ಬರು ಋಷಿಗಳೆಂದು ತಿಳಿಯುವವನೂ; (ವ್ಯಾಸೋಕಶ್ಚನಋಷಿಃ) ನಮ್ಮಂತೆಯೇ ಪರಮಾತ್ಮನಿಗೆ ಕೇಶ ಖಂಡನಾದಿಗಳು (ಕ್ಷೌರ) ಉಂಟೆಂದು ತಿಳಿಯುವವನೂ; ಕೃಷ್ಣಾವತಾರದಲ್ಲಿ ಶ್ರೀಕೃಷ್ಣನು ಸಂತಾನಾರ್ಥವಾಗಿ ಶಿವಾರ್ಚನೆಯನ್ನು ಮಾಡಿದನೆಂಬದಾಗಿ ತಿಳಿಯುವವನೂ; ಶ್ರೀರಾಮದೇವರು ರಾವಣನ ವಧೆಯ ಪಾಪಪರಿಹಾರಕ್ಕಾಗಿ ರಾಮೇಶ್ವರದಲ್ಲಿ ರಾಮಲಿಂಗವನ್ನು ಪ್ರತಿಷ್ಠೆ ಮಾಡಿದನೆಂದು ತಿಳಿಯುವವನೂ; ರಾಮಕೃಷ್ಣಾದಿ ರೂಪಗಳಿಗೆ ಪರಸ್ಪರ ಭೇದವನ್ನು ತಿಳಿಯುವವನೂ; (ರಾಮಕೃಷ್ಣಾದಿರೂಪೇಷು ತಥಾಭೇದವಿಚಿಂತನಂ) ಗಂಗೆಯೇ ಮೊದಲಾದ ಪುಣ್ಯನದಿಗಳಲ್ಲಿರುವ ಉದಕರೂಪನಾದ ಪರಮಾತ್ಮನೇ ನಮ್ಮನ್ನು ಪವಿತ್ರ ಮಾಡುತ್ತಾನೆಂದು ತಿಳಿಯದೆ ಉದಕ ಮಾತ್ರದಿಂದಲೇ ನಾವು ಪವಿತ್ರವಾದೆವೆಂದು ತಿಳಿಯುವವನೂ; ಗುರುಗಳು, ತಾಯಿ, ತಂದೆ, ಕಣ್ಣಿಗೆ ಗೋಚರಿಸುವ ತಾಮ್ರಾದಿ ಪ್ರತಿಮೆಗಳು, ದೇವಸ್ಥಾನಗಳಲ್ಲಿನ ಶಿಲಾಪ್ರತಿಮೆಗಳು, ಅರಸು, ಪ್ರಾಣಿಗಳಲ್ಲಿ ದಯೆಯುಳ್ಳವರು ಇಂತಹವರಲ್ಲಿ ಪರಮಾತ್ಮನು ತದ್ವ್ಯಾಪಿಯಾಗಿ ಆಯಾಯ ಹೆಸರುಗಳಿಂದ ಅಲ್ಲಲ್ಲಿ ಇರುವನೆಂದು ತಿಳಿಯದೇ, ನಮ್ಮ ಕಣ್ಣಿಗೆ ಕಾಣಿಸುವ ಚರಾಚರ ಪ್ರಾಣಿಗಳೇ ದೇವರೆಂದು ತಿಳಿಯುವವನೂ, (ಮಾತಾಪಿತೃದ್ವಿಜಾತೀನಾಂಹರಿರೂಪತ್ವಚಿಂತನಂ ॥ ಪಂಚಧಾತುಮಯೀಮೂರ್ತೌ ಹರಿರೂಪತ್ವಚಿಂತನಂ ॥) ತಿರುಪತಿ ಮೊದಲಾದ ಪುಣ್ಯಕ್ಷೇತ್ರಗಳಲ್ಲಿ ಕಾಣುವ ಶ್ರೀನಿವಾಸಾದಿ ಸ್ವಯಂವ್ಯಕ್ತ ಪ್ರತಿಮೆಗಳಲ್ಲೂ ಸಹ ಅವು ತಾನೇ ಉದ್ಭವಿಸಿದೆಯೆಂದೂ; ಪರಮಾತ್ಮನೇ ಪ್ರತಿಮೆಯಲ್ಲವೆಂದೂ; ಪ್ರತಿಮೆಯಲ್ಲಿ ಪರಮಾತ್ಮನ ಅಧಿಷ್ಠಾನವನ್ನು ತಿಳಿಯದೇ ಪ್ರತಿಮೆಗೂ ಪರಮಾತ್ಮನಿಗೂ ಅಭೇದವನ್ನು ತಿಳಿಯುವವನೂ; ಶಿವಲಿಂಗಗಳಲ್ಲಿ ಸ್ವಯಂವ್ಯಕ್ತ ಸ್ಥಳಗಳಲ್ಲಿರುವ ಈಶ್ವರನಿಗೆ ನಮಸ್ಕಾರ ಮಾಡದೆ, ಮನಷ್ಯರಿಂದ ಪ್ರತಿಷ್ಠಿತವಾದ ಲಿಂಗಗಳಿಗೆ ನಮಸ್ಕಾರ ಮಾಡುವವನೂ; (ಅಸ್ವಯ್ಯಂವ್ಯಕ್ತಲಿಂಗೇಷು ನಮನಂ ಏ ಪ್ರಕುರ್ವತೆ ॥ ತೇಸರ್ವೇ ಅಸುರಾಜ್ಞೇಯಾನಾತ್ರಕಾರ್ಯಾವಿಚಾರಣಾ॥)ಈಶ್ವರನಿಗೂ, ಸೂರ್ಯನಿಗೂ, ಪರಮಾತ್ಮನಿಗೂ ಪರಸ್ಪರ

ಭೇದವಿಲ್ಲವೆಂದು ಹೇಳುವವನೂ; ಅಸ್ವತಂತ್ರರಾದ ರುದ್ರದೇವರಿಗೂ ಪರಮಾತ್ಮನಿಗೂ ಐಕ್ಯಚಿಂತನೆಮಾಡುವವನೂ; ವಿಷ್ಣುವಿಗೂ, ಸೂರ್ಯನಿಗೂ ಅಭೇದವನ್ನು ಚಿಂತಿಸುವವನೂ; (ಅಸ್ವತಂತ್ರೇಣರುದ್ರೇಣ ಹರೇರೈಕ್ಯವಿಚಿಂತನಂ। ವಿಷ್ಣೋಃಸೂರ್ಯೇಣಸಾಕಂಚ ಅಭೇದಾದಿವಿಚಿಂತನಂ॥)

ಸೂರ್ಯನು ಸರ್ವೋತ್ತಮನು, ಬ್ರಹ್ಮಾದಿವಂದ್ಯನು, ವಿಷ್ಣು ಮೊದಲಾದವರು ಅವನ ಕಿಂಕರರು ಎಂದು ತಿಳಿಯುವವನೂ;(ಸರ್ವೋತ್ತಮಃ ಸೂರ್ಯಏವವಿಷ್ಣ್ವಾದ್ಯಾಸ್ಯಕಿಂಕರಾಃ) ಸ್ವಯಂವ್ಯಕ್ತ ಲಿಂಗಗಳಿಗೂ, ಅಶ್ವತ್ಥ, ತುಲಸೀ ಗಿಡಗಳಿಗೂ ನಮಸ್ಕಾರ ಮಾಡುವಾಗ ಅವುಗಳ ಬಳಿ ಸಾಲಿಗ್ರಮವನ್ನಿಡದೆ ಹಾಗೆಯೇ ನಮಸ್ಕಾರ ಮಾಡುವವರೂ; (ಸ್ವಯಂ ವ್ಯಕ್ತೇಷುಲಿಂಗೇಷು ಅಶ್ವತ್ಥತುಲಸೀಷುಚ) । ಸಾಲಿಗ್ರಾಮಂವಿಹಾಯ್ಯೆವ ನಮನಂಯೇಪ್ರಕುರ್ವತೇ॥) ಬ್ರಹ್ಮಾದಿ ದೇವತೆಗಳಿಗೆ ನಮಸ್ಕರಿಸುವಾಗ ಅವರುಗಳ ಅಂತರ್ಯಾಮಿ ಪರಮಾತ್ಮನನ್ನು ಚಿಂತಿಸದಿರುವವನೂ; ಶಿವ ಪಾಷಂಡಿಗಳು, ಶೂದ್ರರು ಇವರುಗಳ ಹಸ್ತದಿಂದ ಅರ್ಚಿತವಾದ ಲಿಂಗಗಳನ್ನಾಗಲೀ, ರಾಮಕೃಷ್ಣಾದಿ ಹರಿಪ್ರತಿಮೆಗಳನ್ನಾಗಲೀ, ಹನುಮಂತ ಮೊದಲಾದ ಪ್ರತಿಮೆಗಳನ್ನಾಗಲೀ ಪೂಜಿಸುವವನೂ, ತುಲಸೀ ವೃಂದಾವನದಲ್ಲಿ ಸಸಿಯನ್ನು ನೆಟ್ಟು ಎರಡು ತಿಂಗಳೊಳಗಾಗಿ ತುಳಸಿಯನ್ನು ಕುಯ್ಯುವವನೂ; ಈಯದ ಹಸುವನ್ನು ಪೂಜೆ ಮಾಡುವವನೂ, ಮದುವೆಯಾಗದ ಅಶ್ವತ್ಥ ವೃಕ್ಷಕ್ಕೆ ಪೂಜೆಮಾಡುವವನೂ; (ಶೈವಶೂದ್ರಾರ್ಚಿತಂ ಚೇಶಂವಾಯುಂತುಹರಿಮೇವಚ । ದ್ವಿಮಾಸಹೀನಾಂತುಲಸೀಂ ಅಪ್ರಸೂತಾಂಚಗಾಂಸತೀಂ। ವಿವಾಹಶೂನ್ಯಮಶ್ವತ್ಥಂ ನಮನಂಯೇಪ್ರಕುರ್ವತೇ। ತೇಸರ್ವೇಅಸುರಾಜ್ಞೇಯಾನಾತ್ರ ಕಾರ್ಯಾವಿಚಾರಣಾ॥) ಮೇಲೆ ಉದಹರಿಸಿರುವ ಸ್ವಭಾವವುಳ್ಳವರು ಯಾರೋ ಅವರೇ ದೈತ್ಯರು.

ಈ ದೈತ್ಯರಲ್ಲಿ ಕಲಿಯು ಒಬ್ಬನು ಮಾತ್ರ ಬ್ರಹ್ಮದೇವರಿಗೆ ಸಮವಾದ ೧೦೦ ವರ್ಷ ಆಯಸ್ಸುಳ್ಳವನು, ಇವನಿಗೆ ಸಮಾನರಾದ ದೈತ್ಯರ್ಯಾರೂ ಇಲ್ಲ. ದ್ವೇಷಾದಿಗಳಲ್ಲಿ ಇವನಿಗೆ ಸಮನಾದ ಪಾಪಿಯು ಮತ್ತೊಬ್ಬನಿಲ್ಲ. ಕಲಿ ಎಂಬ ಹೆಸರು ಮತ್ತೆ ಕೆಲವರಿಗಿದ್ದರೂ ಬ್ರಹ್ಮಕಲ್ಪ ಸಂಪೂರ್ಣ ಬದುಕಿರುವನು ಮಹಾ ಕಲಿಯೊಬ್ಬನೇ. ಮಿಕ್ಕವರು ಬ್ರಹ್ಮದೇವರ ಪ್ರತಿ ದಿವಸದಲ್ಲಿಯೂ ಸಾಧನೆಯನ್ನು ಮುಗಿಸಿಕೊಂಡು ಅವತ್ತವತ್ತೆ ಅಂಧಂತಮಸ್ಸಿನಲ್ಲಿ ಬಿದ್ದು, ಕಲಿಯ ಆಗಮನವನ್ನೇ ನಿರೀಕ್ಷಿಸುತ್ತಿದ್ದು ಅವನು ಬಂದಮೇಲೆ ಅವನೊಂದಿಗೆ ವಾಯುದೇವರ ಗದಾಪ್ರಹಾರದಿಂದ ಲಿಂಗಭಂಗವನ್ನು ಹೊಂದಿ ಶಾಶ್ವತ ತಮಸ್ಸನ್ನು ಹೊಂದುವರು. ಪ್ರ॥ ಏಕಸ್ಮಿಬ್ರಹ್ಮದಿವಸೇತೇಗಚ್ಛಂತಿತಮೋಂಧಕಂ। ತತ್ರಸ್ಥಿತ್ವಾಕಲೇರ್ಮಾರ್ಗಂ ಪ್ರತೀಕ್ಷಂತೇನಸಂಶಯಃ॥ ಸಾಧನ್ಯೈಃಪರಿಪೂರ್ಣಾಸ್ತೇವಾಯು ಶಸ್ತ್ರೈಃಪ್ರಪೀಡಿತಾಃ। ಶತವರ್ಷಾನಂತರಂತುಸರ್ವೇಷಾಂಕಲಿನಾಸಹ। ವಾಯೋರ್ಗದಾಪ್ರಹಾರೇಣಲಿಂಗಭಂಗೋ ಭವಿಷ್ಯತಿ॥

ಈ ರೀತಿ ವಾಯುದೇವರ ಗದಾಪ್ರಹಾರದಿಂದ ಲಿಂಗಭಂಗವನ್ನು ಹೊಂದಿದ ದೈತ್ಯರು ಶ್ರೀಹರಿಯಲ್ಲೂ ಮತ್ತು ಹರಿಭಕ್ತರಲ್ಲೂ ಸಹ ಮಾಡುವ ದ್ವೇಷವನ್ನು ಅನುಸರಿಸಿ ತಾರತಮ್ಯ ಪ್ರಕಾರವಾಗಿ ಅಂದರೆ ಹೆಚ್ಚಾಗಿ ದ್ವೇಷ ಮಾಡುವವರಿಗೆ ಹೆಚ್ಚಾದ ಸ್ವರೂಪ ದುಃಖಗಳೂ, ಕಮ್ಮಿ ದ್ವೇಷ ಮಾಡುವವರಿಗೆ ಕಮ್ಮಿಯಾಗಿಯೂ, ಮನುಷ್ಯಾಧಮರಿಗೆ ತಮಸ್ಸಿನಲ್ಲಿಯೂ ನಿತ್ಯ ಸಂಸಾರದಲ್ಲಿಯೂ ದುಃಖವೂ, ಮಿಕ್ಕವರಿಗೆ ಸ್ವರೂಪ ದುಃಖಾನುಭವವೂ ಆಗುವುದು. ಆದರೆ ಕಲಿಗೆ ಮಾತ್ರ ಅತ್ಯಧಿಕವಾದ ದುಃಖಾನುಭವವಾಗುವುದು. ಪ್ರ॥ ತತೋಂಧಂಪ್ರವಿಶ್ಯಂತ್ಯೇತಾರ ತಮ್ಯೇನಸರ್ವಶಃ। ತಮಸ್ಯಂಧೇಪಿಸಂಸಾರೇನಾತ್ರ ಕಾರ್ಯಾವಿಚಾರಣಾ॥

ಮಿಥ್ಯಾಜ್ಞಾನವನ್ನೇ ಜ್ಞಾನವನ್ನಾಗಿಯೂ, ದುಃಖವನ್ನೇ ಸುಖವನ್ನಾಗಿಯೂ ತಿಳಿದಿರುವ ಸ್ವಭಾವವುಳ್ಳವನೇ ಕಲಿಯು. ಪ್ರ॥ ಮಿಥ್ಯಾಜ್ಞಾನೇಜ್ಞಾನಬುದ್ಧಿರ್ದುಃಖೇಚಸುಖಬುದ್ಧಿಮಾನ್॥ ಇವನ ಹೆಂಡತಿಯಾದ ಅಲಕ್ಷ್ಮೀಯು ಇವನ ಸಮಪಾಪಿಯಲ್ಲ. ಹರಿದ್ವೇಷಾದಿಗಳನ್ನು ಮಾಡುವುದರಲ್ಲಿ ಇವನಿಗಿಂತಲೂ ೧೦೦ ಅಂಶಗಳು ಕಮ್ಮಿಯಾದವಳು, ಹೀಗೆಯೇ ಈ ದೈತ್ಯರ ತಾರತಮ್ಯವನ್ನೂ ಇವರುಗಳು ಎಷ್ಟು ಗುಣದಿಂದ ಯಾರಿಗಿಂತ ನೀಚರೆಂಬುದನ್ನೂ ಸಹ ಈ ಕೆಳಗೆ ವಿವರಿಸಲ್ಪಟ್ಟಿರುತ್ತದೆ.

ಕಕ್ಷಾ ಸಂಖ್ಯಾ	ಹೆಸರು	ಗುಣ		
೧.	ಉಪಮಾನರಹಿತವಾದ ನೀಚತನದಲ್ಲಿ ಅತ್ಯುತ್ತಮನಾದ ಕಲಿ ಪುರುಷ			
೨.	ಈತನಪತ್ನಿ ಅಲಕ್ಷ್ಮೀ	ಪತಿಗಿಂತ ೧೦೦ ಗುಣ ಕಮ್ಮಿ ನೀಚಳು		
೩.	ವಿಪ್ರಚಿತ್ತಿ	ಅಲಕ್ಷ್ಮೀಗಿಂತ	ಕಮ್ಮಿ	ನೀಚನು
೪.	ಕಾಲನೇಮಿ	ವಿಪ್ರಚಿತ್ತಿಗಿಂತ	"	"
೫.	*(i) ಮಧು (ii) ಕೈಭಟ	ಕಾಲನೇಮಿಗಿಂತ ೫	"	"
೬.	#(i) ಐಲ (ii) ವಿಪ್ರಚಿತ್ತಿ	ಮಧುಕೈಭಟರಿಗಿಂತ	"	"
೭	ನರಕಾಸುರ	ಐಲವಿಪ್ರಚಿತ್ತರಿಗಿಂತ	"	"
೮.	ಹಿರಣ್ಯಕಷ್ಯಪ	ನರಕಾಸುರನಿಗಿಂತ	೧೦೦	"

*ಮಧುವೆ ಹಂಸನಾಗಿ ಅವತರಿಸುದುದು, ಕೈಟಭನೇ ಡಿಬಿಕನಾಗಿ ಅವತರಿಸುದುದು
#೩ನೇ ಕಕ್ಷಾ ವಿಪ್ರಚಿತ್ತಿಯೂ ೬ನೇ ಕಕ್ಷಾ ವಿಪ್ರಚಿತ್ತಿಯೂ ಅನ್ಯರು.

ಕಕ್ಷಾ ಸಂಖ್ಯಾ	ಹೆಸರು	ಗುಣ		
೯.	(i) ಹಿರಣ್ಯಾಕ್ಷಕ (ii) ಮಣಿಮಂತ	ಹಿರಣ್ಯಕಶ್ಯಪನಿಗಿಂತ	೩	”
೧೦.	ಬಕ	ಹಿರಣ್ಯಾಕ್ಷ ಮಣಿಮಂತರಿಗಿಂತ ಒಂದಾಣೆ ಭಾಗ ಕಮ್ಮಿ		
೧೧.	ತಾರಕ	ಬಕನಿಗಿಂತಲೂ	೨೦	”
೧೨.	ಶಂಬರ	ತಾರಕನಿಗಿಂತ	೬	”
೧೩.	(i) ಸಾಲ್ವ (ii) ಸಂಕರ	ಶಂಬರನಿಗಿಂತ	೧೦	”
೧೪.	(i) ಹಿಡಿಂಬ (ii) ಬಾಣ **(iii) ದ್ವಾಪರ (iv) ಕೀಚಕ	ಸಾಲ್ವ ಸಂಕರರಿಗಿಂತ	೬	”
೧೫.	(i) ನಮುಚಿ (ii) ಇಲ್ವಲ (iii) ಪಾಕ	ಹಿಡಿಂಬಾದಿ ನಾಲ್ವರಿಗಿಂತ	೧೦	”
೧೬.	ವಾತಾಪಿ	ನಮೂಚಾದಿಗಳಿಗಿಂತ	೧೦೦	”
೧೭.	ಧೇನುಕ	ವಾತಾಪಿಗಿಂತ	”	”
೧೮.	ವಮನ	ಧೇನುಕನಿಗಿಂತ	ಅರ್ಧಗುಣ	”
೧೯.	ಕೇಶಿ	ವಮನನಿಗಿಂತ	”	”
೨೦.	(i) ತೃಣಾವೃತ್ತ (ii) ಲವಣ	ಕೇಶಿಗಿಂತ	೧೧	”
೨೧.	ಅರಿಷ್ಟ	ತೃಣಾವೃತ್ತರಿಗಿಂತ	೫	”
೨೨.	ಹಂಸ	ಅರಿಷ್ಟನಿಗಿಂತ	೫	”
೨೩.	(i) ಡಿಬಿಕ (ii) ವೇನ (iii) ಪೌಂಡ್ರ	ಹಂಸನಿಗಿಂತ	೮೦	”
೨೪.	(i) ದುಶ್ಯಾಸನ (ii) ವೃಷಸೇನ (iii) ಜರಾಸಂಧ	ಡಿಬಿಕಾದಿಗಳಿಗಿಂತ	೧೦೦	”
೨೫.	(i) ಕಂಸ (ii) ಕೂಪವಿಕರ್ಣ (iii) ರುಗ್ಮಿ	ದುಶ್ಯಾಸನಾದಿಗಳಿಗಿಂಥ	”	”
೨೬.	(i) ಮಹಾಸುರ (ii) ಶತಧನ್ವಿ (iii) ಕಿರ್ಮೀರ	ಕಂಸಾದಿಗಳಿಗಿಂತ	”	”

**ದ್ವಾಪರನೇ ಶಕುನಿಯಾಗಿ ಅವತರಿಸುದುದು.

ಕಕ್ಷಾ ಸಂಖ್ಯಾ	ಹೆಸರು	ಗುಣ
೨೭.	(i) ಮದಿರಾಪಾನಿ	ಮಹಾಸುರಾದಿಗಳಿಗಿಂತ " "
	(ii) ಕಾಲಿಕೇಯರು	
೨೮.	ಕಾಲಿಕೇಯರ ಇಂದ್ರಾಭಿಮಾನಿ ದೈತ್ಯರು	ಕಾಲಿಕೇಯರಿಗಿಂತ " "
(i)	ಚಿತ್ತಾಭಿಮಾನಿ ದೈತ್ಯ	ಕಾಲಕೇಯರಿಗಿಂತ ೧೦೦ ಗುಣ ಅಧಮ
(ii)	ದೇಹಾಭಿಮಾನಿ ದೈತ್ಯ	ಚಿತ್ತಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(iii)	ಹಸ್ತಾಭಿಮಾನಿ ದೈತ್ಯರು	ದೇಹಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(iv)	ಪಾದಾಭಿಮಾನಿ ದೈತ್ಯರು	ಹಸ್ತಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(v)	ಶ್ರೋತ್ರೇಂದ್ರಿಯಾಭಿಮಾನಿ ದೈತ್ಯರು	ಪಾದಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(vi)	ಚಕ್ಷುರೇಂದ್ರಿಯಾಭಿಮಾನಿ ದೈತ್ಯ	ಶ್ರೋತ್ರೇಂದ್ರಿಯಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(vii)	ಸ್ಪರ್ಶೇಂದ್ರಿಯಾಭಿಮಾನಿ ದೈತ್ಯ	ಚಕ್ಷುರೇಂದ್ರಿಯಾಭಿಮಾನಿ ದೈತ್ಯಗಿಂತ ೧೦೦ ಗುಣ ಅಧಮ
(viii)	ಘ್ರಾಣೇಂದ್ರಿಯಾಭಿಮಾನಿ ದೈತ್ಯ	ಸ್ಪರ್ಶೇಂದ್ರಿಯಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(xi)	ವಾಕ್ಯಾಭಿಮಾನಿ ದೈತ್ಯ	ಘ್ರಾಣೇಂದ್ರಯಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ
(x)	ಶಿಶ್ನಾಭಿಮಾನಿ ದೈತ್ಯ	ವಾಕ್ಯಾಭಿಮಾನಿ ದೈತ್ಯನಿಗಿಂತ ೧೦೦ ಗುಣ ಅಧಮ

ಇದಕ್ಕೆ ಗರುಡ ಪುರಾಣ ವಾಕ್ಯ ಪ್ರಣಾಮ :–

ಪ್ರ॥ ಕಲ್ಯಾದ್ಯಾಶ್ಚಮನುಷ್ಯಾಂತಾಃತೇಜ್ಞೇಂಯಾಬ್ರಹ್ಮವದ್ಗಣಾಃ । ಸಾಧನಾದಿಷು ಪೂರ್ಣಾಸ್ತೇವಾಯುನಾಸಪ್ರಪೀಡಿತಾನ್ ॥೧॥ ಶತವರುಷಾನಂತರಂತು ಸರ್ವೇಷಾಂ ಕಲಿನಾಸಹ। ವಾಯೋರ್ಗದಾಪ್ರಹಾರೇಣ ಲಿಂಗಭಂಗಭವಿಷ್ಯತಿ ॥೨॥ ತತೋಂಧಂ ಪ್ರವಿಶಂತ್ಯೇವತಾರತಮ್ಯೇನನಿತ್ಯದಾ। ಸರ್ವೇಷಾಮುತ್ತಮೋಜ್ಞೇಯಃ ಕಲಿರೇವನಸಂಶಯಃ

॥೩॥ ದೂಷಣೇ ವಿಷ್ಣು ಭಕ್ತಾನಾಂ ತತ್ಸಮೋನಾಸ್ತಿ ಸರ್ವದಾ । ಸಂಸಾರೇಹ್ಯಂಧತಮಸಿಸರ್ವದಾ ಹರಿದೂಷಕಃ ॥೪॥ಜ್ಞಾನೇಮಿಥ್ಯಾಜ್ಞಾನಬುದ್ಧಿಃ ದುಃಖೇಚಸುಖಬುದ್ಧಿವಾನ್ ॥ ತಸ್ಮಾತ್ಕಲಿಸಮೋಲೋಕೇ ವಿಷ್ಣುದ್ವೇಷಿನಕುತ್ರಚಿತ್ ॥೫॥ ದುರ್ಯೋಧನಸಏಕೋದುಃಖಾನಂತ ಸ್ವರೂಪವಾನ್ । ತಸ್ಮಾಚ್ಛತಗುಣಾಂತೇನ ಕಲಿಭಾರ್ಯಾಚ ಸರ್ವದಾ ॥೬॥ ಅಲಕ್ಷ್ಮೀತಿವಿಖ್ಯಾತಾಸಾಲೋಕೇಮಂಥರಾಸ್ಮೃತಾ । ತಸ್ಮಾದಶಗುಣಾಂಶೇನವಿಪ್ರಚಿತ್ತಿಸ್ತು ಸರ್ವದಾ ॥೭॥ ಜರಾಸಂಧಸ್ತಥೈವೋಕ್ತೋ ಕಾಲನೇಮಿಸ್ತತಃಪರಂ। ತಸ್ಮಾಚ್ಛತಗುಣಾಂ ಶೇನಸಕಂಸೇತಿವಿಶ್ರುತಃ॥೮॥ ತಸ್ಮಾತ್ಪಂಚಗುಣೈರ್ಹೀನೋಮಧು ಕೈಟಭಸಂಜ್ಞಿಕೌ। ತಾವೇತೌಹಂಸಡಿಬಿಕೌಜ್ಞೇಯೌತೌಚಜನಾರ್ದನೇ ॥೯॥ ವಿಪ್ರಚಿತ್ತಿಸಮೋಜ್ಞೇಯೋಭೌಮಿರ್ಭೂಮಿ ತಲೇಸ್ಮೃತಃ॥ ತಸ್ಮಾದಷ್ಟ ಗುಣೈರುಚ್ಯೋಹಿರಣ್ಯಕಶಿಪುಸ್ಮೃತಃ ॥೧೦ ॥ ತಸ್ಮಾಚ್ಛತಗುಣೈರ್ಹೀನೋ ಹಿರಣ್ಯಾಕ್ಷೋಮಹಾಸುರಃ॥ ಮಣಿಮಾನ್ತತ್ಸಮೋಜ್ಞೇಯೋಕಿಂಚಿದೂನೋ ಬಕಸ್ತತಃ ॥೧೧॥ ತಸ್ಮಾದ್ವಿಂಶಗುಣೈರ್ಹೀನೋತಾರ ಕಾಖ್ಯೋಮಹಾಸುರಃ । ತಸ್ಮಾತ್‌ಷಡ್ವಿಂಶಗುಣತೋ ಶಂಬರೋಲೋಕಕಂಟಕಃ ॥ ೧೨॥ ಶಂಬರಸ್ಯ ಸಮೋಜ್ಞೇಯೋಸಾಲ್ವೋದೈತ್ಯೇಷುಚಾಧಮಃ॥ ಶಂಬರೈಸ್ತು ಗುಣೈರರ್ಧೈಃ ಹಿಡಂಬೋನ್ಯೂನಉಚ್ಯತೇ ॥೧೩॥ ಬಾಣಸ್ತುತತ್ಸ ಮೋಜ್ಞೇಯಃಕೀಚಕೋ ನಾಮದೈತ್ಯರಾಟ್। ಮಹಾದೈತ್ಯೋದ್ವಾಪರಾಖ್ಯೋ ಬಾಣಾಸುರ ಸಮಸ್ಮೃತಃ ॥೧೪॥ ತಸ್ಮಾದಶ ಗುಣೈರ್ಹೀನಃನಮುಚೇದೈತ್ಯಸತ್ತಮಃ । ನಮುಚೇಸ್ತು ಸಮೋಜ್ಞೇಯಃ ವಾತಾಪಿಇಲ್ವಲಸ್ತಥಾ॥೧೫॥ ತಸ್ಮಾತ್ತುತ್ರಿಗುಣೈರ್ಹೀನಃ ವಾತಾಪೀರ್ದಾನವಾಧಮಃ॥ ತಸ್ಮಾಚ್ಚಾರ್ಧ ಗುಣೈರ್ಹೀನಃಧೇನು ಕೋನಾಮದೈತ್ಯರಾಟ್ ॥೧೬॥ ಧೇನುಕಾರ್ಧಗುಣೈರ್ಹೀನೊ ಕೇಶಿನಾಮೋಮಹಾಸುರಃ॥ ಕೇಶಿದೈತ್ಯಸಮೋಜ್ಞೇ ಯೋತೃಣಾವರ್ತೋಮಹಾಸುರಃ ॥೧೭॥ ತಸ್ಮಾದ್ದಶಗುಣೈರ್ಹೀನಃ ಲವಣೋದೈತ್ಯಸತ್ತಮಃ॥ ತಸ್ಮಾತ್ಪಂಚ ಗುಣೈರ್ಹೀನೋದುಂದು ಮಾರೋಮಹಾಸುರಃ ॥೧೮॥ ಡಿಬಿಕಸ್ತತ್ಸಮೋಜ್ಞೇಯಃ ತತ್ಸಮೋಪೌಂಡ್ರಕಸ್ತತಃ॥ ವೇನಸ್ಸಏವವಿಜ್ಞೇಯೋಪೂರ್ವ ಜನ್ಮಸ್ಯಸತ್ತಮಃ ॥೧೯॥ ದುಶ್ಯಾಶನಸ್ತು ವಿಜ್ಞೇಯೋ ಜರಾಸಂಧಸಮಸ್ಮೃತಃ॥ ತಸ್ಮಾಚ್ಛತ್ರಿ ಗುಣೈರ್ಹೀನೋ ಶತಧನ್ವೋಸುರೋಮಹಾನ್॥೨೦॥ ಪವನಸ್ತಸ್ಯ ವಿಜ್ಞೇಯೋಕಿರ್ಮೀರೋ ದೈತ್ಯಸತ್ತಮಃ॥ ಕಾಲಕೇಯುಸ್ತುವಿಜ್ಞೇಯೋ ಸದಾವೇನಸಮೋಮತಃ ॥೨೧॥ ತಸ್ಮಾಚ್ಛತ ಗುಣೈರ್ಹೀನೋಚಿತ್ತಮಾನ್ಯಸುರೋಮಹಾನ್। ಶರೀರಸ್ವಾಭಿಮಾನೀತುತಸ್ಮಾಚ್ಛತ ಗುಣೋವರಃ ॥೨೨॥ ಚಕ್ಷುರಿಂದ್ರಿಯಮಾನೀತುತಸ್ಮಾಚ್ಛ ತಗುಣಾವರಃ । ತಸ್ಮಾದ್ದಶ ಗುಣೈರ್ಹೀನೋವಾಙ್ಮಾನೀ ಅಸುರೋಮಹಾ ॥೨೩॥ ತಸ್ಮಾಚ್ಛತ ಗುಣೈರ್ಹೀನಃಕರ್ಮ ಮಾನ್ಯಸುರೋಮಹಾನ್। ಏವಮನ್ಯೇಸ್ತು ದೈತ್ಯಾಸ್ತು ತತ್ತತ್ತತ್ವಾಭಿಮಾನಿನಃ ॥೨೪॥ ದೈತ್ಯಾನಾಂತಾರತಮ್ಯಂತುಜ್ಞೇಯ ಏವನಸಂಶಯಃ ॥ (ಗರುಡಪುರಾಣ ವಾಕ್ಯ)

ತತ್ತ್ವಾಭಿಮಾನಿಗಳು ದೇಹದಲ್ಲಿರುವಂತೆಯೇ ದೈತ್ಯರು ಈ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಅಭಿಮಾನಿಗಳಾಗಿ ಕಲ್ಯಾದಿ ಪ್ರೇರಣೆಯಿಂದ ಪಾಪಕರ್ಮಗಳನ್ನು ರುದ್ರದೇವರೇ ಮೊದಲಾದ ತತ್ವೇಶರೆಲ್ಲರಿಗೂ ಮಾಡಿಸುವರು. ಪ್ರ॥ ಕಲ್ಯಾದ್ಯೈಃಪ್ರೇರಿತಾಸ್ಸರ್ವೇ ರುದ್ರಾದ್ಯಾಪ್ಯಧಿಕಾರಿಣಃ ॥

ಸರಸ್ವತಿ, ಭಾರತಿ, ವಾಯುದೇವರು, ಬ್ರಹ್ಮದೇವರು ಇವರಿಗೆ ಮಾತ್ರ ಕಲ್ಯಾವೇಶವಿರುವುದಿಲ್ಲ.

ಆದ್ದರಿಂದ ದೇವತೆಗಳನ್ನು ಸ್ತೋತ್ರಮಾಡುವುದರಿಂದ ಹೇಗೆ ಪುಣ್ಯ ಸಾಧನೆಯೋ ಹಾಗೆಯೇ ದೈತ್ಯರನ್ನು ದೂಷಿಸುವುದು ಪುಣ್ಯ ಸಾಧನವು. ಇಲ್ಲವಾದಲ್ಲಿ ಅವನೂ ಸಹ ದೈತ್ಯನೇ ಆಗುವನು. ಪ್ರ॥ ದೈತ್ಯನಿಂದಾಂ ನಕುರ್ವಂತಿತೇಪಿತತ್ಫಲಭಾಗಿನಃ ॥ ನಾವುಗಳು ಮಾಡಿದ ಪುಣ್ಯ ಪಾಪ ಕರ್ಮಗಳನ್ನು ಪ್ರತಿ ದಿನವೂ ಪುಷ್ಕರ ಮೊದಲು ಮಾಡಿ ಬ್ರಹ್ಮದೇವರವರಿವಿಗೂ ತಾರತಮ್ಯ ಪ್ರಕಾರ ದೇವತೆಗಳನ್ನು ಸ್ಮರಿಸಿ ಅವರ ಅಂತರ್ಯಾಮಿಯಾದ ಶ್ರೀಪರಮಾತ್ಮನನ್ನು ಚಿಂತನೆ ಮಾಡುತ್ತಾ ಸಮರ್ಪಣೆ ಮಾಡಿದಲ್ಲಿ, ಶ್ರೀಪರಮಾತ್ಮನು ಅದನ್ನು ಸ್ವೀಕರಿಸಿ ಪುಣ್ಯವನ್ನು ತತ್ತ್ವಾಭಿಮಾನಿಗಳಿಗೂ, ಅದರ ಇಮ್ಮಡಿಯಷ್ಟು ಜೀವರಿಗೂ, ಪಾಪದ ಫಲವನ್ನು ಕಲ್ಯಾದಿಗಳಿಗೂ, ಮಧ್ಯಮರಿಗೆ ಸುಖದುಖಃ ಮಿಶ್ರವಾದ ಫಲಗಳನ್ನೂ, ತ್ರಿವಿಧ ಜೀವರಾಶಿಗಳೊಳಗೂ ಇದ್ದು ಅವರುಗಳ ಯೋಗ್ಯತಾನುಸಾರವಾಗಿ ಕರ್ಮಗಳ ಫಲವನ್ನು ಕೊಡುವವನಾಗುತ್ತಾನೆ.

ದೈತ್ಯತಾರತಮ್ಯ ಪ್ರಕರಣ ಸಂಪೂರ್ಣವು

೧೦. ವ್ಯಾಪ್ತತ್ವ ಪ್ರಕರಣ

ಸಂಪುಟ ೬, ಸಂಚಿಕೆ ೧ ಶ್ರೀಮುಖ, ಚೈತ್ರ ಏಪ್ರಿಲ್, ೧೯೩೩

ಶ್ಲೋ ॥ ಅರ್ಚಿತಃಸಂಸ್ಮೃತೋಧ್ಯಾತಃಕೀರ್ತಿತಃಕಥಿತಃಶ್ರುತಃ ।
ಯೋದದಾತ್ಯಮೃತತ್ವಂಹಿಸಮಾಂರಕ್ಷತು ಕೇಶವಃ ॥

ಶ್ರೀ ಪರಮಾತ್ಮನು ಸೃಷ್ಟಿಕಾಲದಲ್ಲಿ ಮೂರು ಪುರುಷರೂಪಗಳನ್ನು ಸ್ವೀಕರಿಸುವನು. ತನ್ನ ಮೊದಲನೆಯ ಪುರುಷರೂಪದಿಂದ ಮಹತ್ತಾತ್ವಾದಿಗಳನ್ನು ಸೃಷ್ಟಿಸುವನು. ಬ್ರಹ್ಮಾಂಡದಾಕಾರನಾಗಿ ಒಳಗೆ ಪ್ರವಿಷ್ಟನಾಗಿರುವುದೇ ಈತನ ಎರಡನೆಯ ಪುರುಷರೂಪವು. ದೇಹಧಾರಣ ಮಾಡಿದಂಥ ಜೀವರುಗಳಲ್ಲಿ ಅಂತರ್ಯಾಮಿಯಾಗಿರುವುದೇ ಮೂರನೇ ಪುರುಷರೂಪವು. ಪ್ರ॥ ಪ್ರಥಮಂಮಹತಃಸ್ರಷ್ಟೃದ್ವಿತೀಯಂತ್ವಂಡಸಂಸ್ಥಿತಂ ॥ ತೃತೀಯಂದೇಹಿನಾಂದೇಹೇ ॥

ಈ ಪುರುಷ ಶಬ್ದಾರ್ಥವೇನೆಂದರೆ :– "ಪೂರ್ಣಷಡ್ಗುಣತ್ವಾತ್‌ಪುರುಷಃ" ಷಡ್ಗುಣ್ಯೈಶ್ವರ್ಯಾಂಪನ್ನನಾದುದರಿಂದ ಪುರುಷನೆಂತಲೂ; "ಕಿಂಚಪುರಿದೇಹೇಶೇತ ಇತಿವಾಪುರುಷಃ" ದೇಹದಲ್ಲಿ ವಾಸವಾಗಿರತಕ್ಕವನಾದರಿಂದ ಪುರುಷನೆಂತಲೂ; "ಪುರಿಪ್ರಾಣಾಖ್ಯನಿವಾಸಸ್ಥಾನೇಶೇತ ಇತಿವಾಪುರುಷಃ" ಉತ್ತಮಾಧಿಷ್ಠಾನನಾದಂಥ ಮುಖ್ಯಪ್ರಾಣ ದೇವರ ದೇಹದಲ್ಲಿ ವಾಸವಾಗಿರತಕ್ಕವನಾದ್ದರಿಂದ ಪುರುಷನೆಂತಲೂ' "ಪುರುಕರ್ಮಫಲಂ ಜೀವಾನಾಂಸನೋತಿದದಾತಿವಾಪುರುಷಃ" ಜೀವರಿಗೆ ಕರ್ಮಫಲ ಕೊಡುವವನಾದ್ದರಿಂದ ಪುರುಷನೆಂತಲೂ; ಈ ಪರಮಾತ್ಮನಿಗೆ ಬ್ರಹ್ಮ, ವಿಷ್ಣು, ಮಹೇಶ್ವರ ಎಂದು ಮೂರು ರೂಪಗಳುಂಟು. ಬ್ರಹ್ಮದೇವನಲ್ಲಿ ಬ್ರಹ್ಮರೂಪದಿಂದ ಸೃಷ್ಟಿಮಾಡುತ್ತಾ, ವಿಷ್ಣುರೂಪದಿಂದ ಪರಿಪಾಲನ ಮಾಡುತ್ತಾ, ರುದ್ರದೇವರಲ್ಲಿ ರುದ್ರರೂಪದಿಂದ ಸಂಹಾರ ಮಾಡುತ್ತಾನೆ. ಪ್ರ॥ ಬ್ರಹ್ಮಾವಿಷ್ಣ್ವೀಶರೂಪಾಣಿತ್ರೀಣಿವಿಷ್ಣೋರ್ಮಹಾತ್ಮನಃ । ಬ್ರಹ್ಮಣಿಬ್ರಹ್ಮರೂಪಸ್ಸನ್ಶಿವರೂಪೀಶಿವಸ್ಥಿತಃ॥ ಈ ಪರಮಾತ್ಮನ ಅವತಾರಗಳು ಸಹ ಮೂರು ವಿಧವಾಗಿರುತ್ತವೆ. (i) ಶಾಂತಾವತಾರ, (ii) ಘೋರಾವತಾರ, (iii) ಮೂಢಾವತಾರಗಳು. ಪ್ರ॥ ನಮಃಶಾಂತಾಯಘೋರಾಯ ಮೂಢಾಯಗುಣಕರ್ಮಣೇ ॥ (i) ವಾಸುದೇವಾದಿರೂಪಗಳೇ ಶಾಂತಾವತಾರ ರೂಪಗಳು (ii) ಪರಶುರಾಮಾದಿ ರೂಪಗಳೇ ಘೋರಾವತಾರಗಳು (iii) ಮತ್ಸ್ಯಕೂರ್ಮಾದ್ಯವತಾರಗಳೇ ಮೂಢಾವತಾರಗಳು. ಇಂಥಾ ಪರಮಾತ್ಮನಿಂದ ಜನ್ಯವಾದ ಬ್ರಹ್ಮಾಂಡದ ಒಳಗೂ, ಹೊರಗೂ,

ಸರ್ವಕಾಲದೇಶಗಳಲ್ಲೂ ಸರ್ವತ್ರಾಣುರೇಣುತೃಣಕಾಷ್ಠಾದಿಗಳಲ್ಲಿಯೂ, ದೇವ ದೈತ್ಯ ಉರಗ ಪಶುಪಕ್ಷಿಗಳಲ್ಲಿಯೂ ಸಹ ವ್ಯಾಪ್ತನಾಗಿರುತ್ತಾನೆ. ಪ್ರ॥ ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ॥ ಹೀಗೆ ವ್ಯಾಪ್ತನಾಗಿದ್ದರೂ ಅವುಗಳ ಸಂಬಂಧದಿಂದ ನಿರ್ಲಿಪ್ತನಾಗಿರುವನು. ಹೇಗೆಂದರೆ:- ಅಗ್ನಿಯಿಂದಲೂ, ಉದಕದಿಂದಲೂ, ಭೂಸಂಬಂಧದಿಂದಲೂ, ಗಾಳಿಯಿಂದ ಚಲಿಸಲ್ಪಟ್ಟ ಮೇಘಗಳ ಗುಂಪುಗಳಿಂದಲೂ ಆಕಾಶವು ಹೇಗೆ ಲೇಪವಿಲ್ಲದಿರುವುದೋ ಹಾಗೆಯೇ ಪರಮಾತ್ಮನು, ನರಮೃಗ ಮೊದಲಾದ ಸರ್ವಪ್ರಾಣಿಗಳಲ್ಲಿ ವ್ಯಾಪ್ತನಾಗಿದ್ದಾಗ್ಯೂ ಅವುಗಳ ಸಂಬಂಧವಾದ ಗುಣದೋಷಗಳ ಸಂಪರ್ಕವು ಮಾತ್ರ ಇರುವುದಿಲ್ಲವಾದ್ದರಿಂದ ಈತನು ನಿರ್ಲಿಪ್ತನು. ಪ್ರ ॥ ನಿರ್ಲಿಪ್ತೋನಿರ್ವಿಕಾರಶ್ಚ ಸದಾಸರ್ವತ್ರಸನ್ನಪೀತಿ ॥

ಈ ಪರಮಾತ್ಮನು ಸ್ತ್ರೀಯು ಅಲ್ಲ, ಪುರುಷನೂ ಅಲ್ಲ, ನಪುಂಸಕನೂ ಅಲ್ಲ. ಪೃಥ್ವ್ಯಾದಿ ಪಂಚಭೂತಗಳಲ್ಲವನಲ್ಲ. ಚಿತ್ತ, ಬುದ್ಧಿ, ಮನಸ್ಸು, ಅಹಂಕಾರ ಇವುಗಳಿಗೆ ಸಂಬಂಧಪಟ್ಟವನಲ್ಲ. ಚಂದ್ರ-ಸೂರ್ಯನಲ್ಲ, ಕಾಲನಲ್ಲ, ಗುಣಪ್ರಕೃತಿಯೂ ಅಲ್ಲ, ಇವುಗಳೆಲ್ಲಕ್ಕೂ ವಿಲಕ್ಷಣನಾಗಿ ಯಾವುದು ಉಳಿದಿರುವುದೋ ಅದೇ ಭಗವಂತನ ಸ್ವರೂಪವು. ಇಂಥವನ ಮಹಿಮೆಯನ್ನು ಬ್ರಹ್ಮರುದ್ರಾದಿಗಳೇ ತಿಳಿಯದಿರುವಾಗ ನಮ್ಮಗಳಿಗೆ ಆತನ ಸ್ವರೂಪವು ತಿಳಿಯಲು ಸಾಧ್ಯವೇ? ಎಂದಿಗೂ ಇಲ್ಲ. ಈತನಿಗೆ ಸ್ವರೂಪಭೂತವಾದಂಥ ಸ್ತ್ರೀಪುರುಷರೂಪಗಳಿವೆಯೇ ಹೊರ್ತು ನಪುಂಸಕರೂಪ ಮಾತ್ರ ಎಂದಿಗೂ ಇರುವುದಿಲ್ಲ. ಪ್ರ॥ ನಸ್ತ್ರೀನಷಂಡೋನಪುಮಾನ್ನಜಂತುಃ॥ ಗರುಡಪುರಾಣ ಪ್ರ॥ ನಪುಂಸಕಂನ್ಯೆವಸ್ವರೂಪಭೂತಂಅತೋಹರೌನಾಸ್ತಿವಿಚಿಂತನೀಯಂ ॥ ಋಗ್ಭಾಷ್ಯ ಪ್ರ॥ ಸ್ತ್ರೀಪುಂದೋಷವಿಹೀನತ್ವಾದ್ಭಗವಾನ್ ನನಪುಂಸಕಇತಿ ॥

ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ಇವೇ ಜೀವನ ದಶೇಂದ್ರಿಯಗಳು, ಇದರ ವಿವರ ಮತ್ತು ಇವುಗಳ ಅಭಿಮಾನಿದೇವತೆಗಳನ್ನು ಕೆಳಗೆ ವಿವರಿಸಲ್ಪಟ್ಟಿರುತ್ತದೆ.

	ಗುಣಗಳು	ಅಭಿಮಾನಿ ದೇವತೆಗಳು
ಜ್ಞಾನೇಂದ್ರಯಗಳು ೫		
೧. ಕಿವಿ (ಶ್ರೋತ್ರ)	ಕೇಳುವುದು	ದಿಗ್ದೇವತೆಗಳು
೨. ಕಣ್ಣು (ನೇತ್ರ)	ನೋಡುವುದು	ಸೂರ್ಯ
೩. ಮೂಗು (ನಾಶಿಕ)	ವಾಸನೆ ತಿಳಿಯುವುದು	ಅಶ್ವಿನಿ ದೇವತೆಗಳು
೪. ಚರ್ಮ (ತ್ವಕ್)	ಶೀತೋಷ್ಣಗಳನ್ನನುಭವಿಸುವುದು	ವಾಯು
೫. ನಾಲಿಗೆ (ರಸನಾ)	ರುಚಿಯನ್ನು ತಿಳಿಯುವುದು	ವರುಣ

ಕರ್ಮೇಂದ್ರಿಯಗಳು ೫

೬. ಬಾಯಿ(ವದನ)	ಮಾತನಾಡುವುದು	ಅಗ್ನಿ
೭. ಕೈ (ಹಸ್ತ)	ಕೆಲ್ಸ ಮಾಡುವುದು	ದೇವೇಂದ್ರ
೮. ಕಾಲು (ಪಾದ)	ನಡೆಯುವುದು	ಜಯಂತ
೯. ಗುದ	ಮಲವಿಸರ್ಜನೆ ಮಾಡುವುದು	ಮಿತ್ರ
೧೦. ಉಪಸ್ಥ	ಮೂತ್ರವಿಸರ್ಜನ ಮತ್ತು ರೇತೋಸ್ಸರ್ಜನ ಮಾಡುವುದು	ದಕ್ಷ (ಮನು)

ಹೀಗೆ ಶ್ರೀಪರಮಾತ್ಮನು ತತ್ವಾಭಿಮಾನಿ ದೇವತೆಗಳಲ್ಲಿ ವ್ಯಾಪ್ತನಾಗಿದ್ದು ಜೀವರುಗಳಿಂದ ಅವರವರ ಅನಾದಿ ಕರ್ಮಗಳನ್ನನುಸರಿಸಿ ಸಂಸಾರಕ್ಕೆ ಕಾರಣಭೂತವಾದ ಕರ್ಮಗಳನ್ನು ತಾನುಮಾಡಿ, ಮಾಡಿಸಿ ಅವರುಗಳಿಗೆ ತಿಳಿಸಗೊಡದೆ ನಾನೇ ಮಾಡಿದನೆಂದು ಅವರುಗಳಿಂದ ನುಡಿಸಿ ಸಂಸಾರಾರಣ್ಯದಲ್ಲಿ ತಿರುಗಿಸುವನು. ಇಂಥಾ ಶ್ರೀಪರಮಾತ್ಮನ ಮಹಿಮೆಯನ್ನು ತಿಳಿದು ಧ್ಯಾನೋಪಾಸನ ಮಾಡತಕ್ಕವನೇ ಪಂಡಿತನು. ವೇದಪ್ರತಿಪಾದ್ಯನೂ, ಆದಿಮಧ್ಯಾಂತ ರಹಿತನೂ, ಸಮಸ್ತ ಜಗಜ್ಜೀವಾಧಾರಕನೂ, ಅಪ್ರಾಕೃತನೂ ಆದ ಶ್ರೀಪರಮಾತ್ಮನು ಪ್ರತಿದಿನದಲ್ಲೂ, ಪ್ರತಿಕಲ್ಪದಲ್ಲೂ, ಪ್ರಕೃತಿ ಸಂಬಂಧವಾದ, ಸ್ಥೂಲದೇಹದಿಂದ ಸಹಿತರಾದ ಚೇತನರೊಳಗೆ ಕೂಡಿಕೊಂಡು ತಾನೂ ಸಾಧಾರಣ ಮನುಷ್ಯರ ಹಾಗೆ ಹೊರಗೆ ಸಂಚಾರ ಮಾಡುತ್ತಾ ದುಷ್ಟನಿಗ್ರಹ–ಶಿಷ್ಟಪರಿಪಾಲನ ಮಾಡುತ್ತಾ ಆಯಾಯ ತತ್ವಾಭಿಮಾನಿ ದೇವತೆಗಳಿಗೆ ಆಯಾಯ ಇಂದ್ರಿಯ ವ್ಯಾಪಾರಗಳನ್ನು ಸದ್ವ್ಯಾಪಾರದಲ್ಲೇ ಮಾಡಲು ಆಜ್ಞೆ ಮಾಡುತ್ತಾ, ದುಷ್ಟರಾದ ದೈತ್ಯರ ಭಾದೆಯಿಲ್ಲದಂತೆ ಅವರನ್ನು ನಿಗ್ರಹ ಮಾಡಿ ತನ್ನ ಭಕ್ತರಾದವರನ್ನು ಸಂರಕ್ಷಣೆ ಮಾಡುವನು. ಈ ಪರಮಾತ್ಮನು ದೇಹದಲ್ಲಿ ವ್ಯಾಪ್ತನಾಗಿರುವವರಿವಿಗೂ ಜನರು ಪ್ರಾಣಿಗಳೆಂದೆನಿಸಿಕೊಂಡು ಎಲ್ಲರಿಗೂ ಬೇಕಾದವರಾಗಿ ಒಬ್ಬರಿಗೊಬ್ಬರು ಉಪಕಾರ ಮಾಡುತ್ತಾ, ಮಾಡಿಸಿಕೊಳ್ಳುತ್ತಾ ಶೋಭಿಸುವರು. ಈ ಪರಮಾತ್ಮನು ಶರೀರದಲ್ಲಿಲ್ಲದಿದ್ದರೆ ಹೆಣವಾಗಿ ಯಾರಿಗೂ ಬೇಡವಾಗುವನು. ಆದ್ದರಿಂದ ಸರ್ವಜ್ಞನಾದ, ಜೀವನಿಂದ ಭಿನ್ನನಾದ, ಶ್ರೀಪರಮಾತ್ಮನನ್ನು ಉತ್ಕೃಷ್ಟವಾದ ಭಕ್ತಿಭಾವದಿಂದ ಭಗವತ್ಸ್ವರೂಪವನ್ನು ತಿಳಿದು ಬಂಧಮುಕ್ತನಾಗಿ ಇಚ್ಛಾದ್ವೇಷಾದಿಗಳನ್ನು ಬಿಟ್ಟು ಸರ್ವತ್ರ ವ್ಯಾಪ್ತನಾದ ಭಗವಂತನ ರೂಪಗಳಲ್ಲಿ ಸಮಬುದ್ಧಿಯನ್ನಿಟ್ಟು ಭಗವಂತನ ಭಕ್ತಿಯೋಗದಿಂದ ಮೋಕ್ಷವನ್ನು ಹೊಂದಬೇಕಾಗಿರುವುದರಿಂದ ಅಂಥಾ ಪರಮಾತ್ಮನು ಎಲ್ಲರಲ್ಲಿಯೂ, ಅಂಥಾ ಪರಮಾತ್ಮನಲ್ಲಿ ಸರ್ವವೂ, ಆ ಪರಮಾತ್ಮನು ತನ್ನೊಳಗೂ, ವ್ಯಾಪ್ತನಾಗಿರುತ್ತಾನೆಂಬುದನ್ನು ಸರ್ವರೂ ತಿಳಿಯಬೇಕು.

ವ್ಯಾಪ್ತತ್ವ ಪ್ರಕರಣ ಸಂಪೂರ್ಣವು

೧೧. ಭೂಗೋಳ ಪ್ರಕರಣ

ಸಂಪುಟ ೬, ಸಂಚಿಕೆ ೧   ಶ್ರೀಮುಖ, ಚೈತ್ರ   ಏಪ್ರಿಲ್ ೧೯೩೩

ಶ್ರೀನಿವಾಸಂ ಪೂರ್ಣಬೋಧಂನತ್ವಾ ಲಕ್ಷ್ಮೀಪತೀನ್ಗುರೂನ್। ಲಕ್ಷ್ಮೀನಾರಯಣಂವಕ್ಷ್ಯೇ ಭಾಷಾಭೂಗೋಳಸಂಗ್ರಹಂ ॥ ಶ್ರೀಪರಮಾತ್ಮನ ಸೃಷ್ಟಾದ್ಯಷ್ಟಕರ್ತೃವನ್ನು ತಿಳಿಯುವತನಕ ಮುಕ್ತಿ ಇಲ್ಲವು. ಆದ ಕಾರಣ ಸೃಷ್ಟಿಯನ್ನು ತಿಳಿದುಕೊಳ್ಳಬೇಕು. ಇದಕ್ಕೆ ಪೂರ್ವ ಭೂಗೋಳವನ್ನು ತಿಳಿಯುವುದು ಮುಖ್ಯ ಕರ್ತವ್ಯವು. ಭೂಗೋಳವನ್ನು ತಿಳಿಯುವುದರಿಂದ ಸಕಲ ಬಂಧನಗಳಿಂದಲೂ ಮುಕ್ತನಾಗುವನು. ಪ್ರ॥ ಏತದ್ಜ್ಞಾತ್ವಾಚಭೂಗೋಳಂ ಯಥಾವದನುವರ್ಣಿತಂ । ಸಮಸ್ತಸರ್ವಬಂಧೇಭ್ಯೋಯಾತಿವಿಷ್ಣೋಃಪರಂಪದಂ॥

೧. **ಸೃಷ್ಟಿ ಬ್ರಹ್ಮಾಂಡದೊಳಗೆ ಪಂಚಾಶತ್ಕೋಟಿ (೫೦) ವಿಸ್ತೀರ್ಣವುಳ್ಳ ಭೂಮಂಡಲವಿದೆ.** ಬ್ರಹ್ಮಾಂಡ ಖರ್ಪರದ ೫೦ ಕೋಟಿಗೆ ೫೦ ಕೋಟಿ ಸುವರ್ಣ ಪರ್ವತ ತಗಲಿಕೊಂಡಿದೆ. ಒಟ್ಟು ೧೦೦ ಕೋಟಿ ದಳವಾಯಿತು. ಅದರ ಹೊರಗೆ ಅಪ್ಪು–ತೇಜಸ್ಸು–ವಾಯು–ಆಕಾಶ–ಅಹಂಕಾರತತ್ವ –ಮಹತ್ತತ್ವ– ತಮೋಗುಣ– ರಜೋಗುಣ –ಸತ್ವಗುಣ. ಇವು ಒಂದಕ್ಕೊಂದು ಹತ್ತು ಮಡಿಯಾಗಿ ಅಧಿಕವಾಗಿ ಬ್ರಹ್ಮಾಂಡಕ್ಕೆ ಆವರಣವಾಗಿವೆ. ಇದರ ತರುವಾಯ ಅವ್ಯಾಕೃತಾಕಾಶವು ಸುತ್ತಲೂ ಆವರಕವಾಗಿವೆ. ಬ್ರಹ್ಮಾಂಡದ ಒಳಗೆ ಸಪ್ತದ್ವೀಪ – ಸಪ್ತಸಮುದ್ರ –ಶ್ವೇತದ್ವೀಪ –ಅನಂತಾಸನ– ವೈಕುಂಠ – ಹದಿನಾಲ್ಕುಲೋಕಗಳು – ಸುವರ್ಣಭೂಮಿ – ಲೋಕಾಲೋಕ ಪರ್ವತ – ಅಂಧಂತಮಸ್ಸು– ಘನೋದಕ ಇವುಗಳಿವೆ.

೨. **ಈ ಬ್ರಹ್ಮಾಂಡದಲ್ಲಿನ ಉದಕವರ್ಣನೆ :–** ಬ್ರಹ್ಮಾಂಡದ ಒಳಗೆ ೫೦ ಕೋಟಿ ಯೋಜನ ವಿಸ್ತಾರವಿದೆ. ಇದರೊಳಗೆ ಉದಕ ೨೪ ಕೋಟಿ ೯೯ ಲಕ್ಷ ಯೋಜನ ವಿಸ್ತಾರವು. ಈ ಉದಕದಲ್ಲಿಯೇ ಪರಮಾತ್ಮನು ಕೂರ್ಮಾವತಾರದಿಂದ (ಆಮೆ) ಇರುತ್ತಾನೆ. (ಆತನೆ ಬೆನ್ನು ಭಾಗದಲ್ಲಿ ರೋಮಕೂಪಾಂತರದಲ್ಲಿ ಪರಮಾಣು ವಿನೋಪಾದಿಯಲ್ಲಿ ಈ ಪಂಚಾಶತ್ಕೋಟಿ ವಿಸ್ತೀರ್ಣ ದಳ ಬ್ರಹ್ಮಾಂಡವಿದೆ). ತದುಪರಿವಾಯು ಕೂರ್ಮಾವತಾರವಿದೆ. ಅದರ ಮೇಲೆ ಶೇಷದೇವರು ಇರುತ್ತಾರೆ. ಅವರ ಮಧ್ಯ ಫಣಾಗ್ರದಲ್ಲಿ ಚತುರ್ದಶ ಭುವನಗಳೂ ಸರ್ಷಪ (ಸಾಸಿವೆ) ದೋಪಾದಿಯಲ್ಲಿ ಇವೆ. ಈ ಉದಕದಲ್ಲಿ ಸಂಕರ್ಷಣಾಂಶಮೂರ್ತಿಗಳು ಅನಂತವಾಗಿಯೂ ರುದ್ರಕೋಟಿ ಸಮಾವೃತರಾದ ಕಾಲರುದ್ರಮೂರ್ತಿಗಳು ಇರುತ್ತಾರೆ

ಮತ್ತು ಕಾಲವಹ್ನಿಸ್ವರೂಪರಾದಂಥಾ ಜಾಲಾಮಾಲಾ ಮೂರ್ತಿಗಳು ಇದ್ದಾರೆ. ಈ ಉದಕದ ಮೇಲೆ ಘೋರವಾದ ನರಕಗಳೂ ಇವೆ.

೩. ಉದಕದ ಮೇಲಿರುವ ಪಾತಾಳಾದಿ ಸಪ್ತಲೋಕಗಳ ವರ್ಣನೆ:– ಪಾತಾಳದ ಕೆಳಗೆ, ಭರತಖಂಡಕ್ಕೆ ದಕ್ಷಿಣ ಸೂತ್ರ ಭಾಗವಾಗಿ, ಗರ್ಭೋದಕದ ಮೇಲೆ ನರಕಗಳು ಇವೆ. ಅದರ ಮೇಲ್ಭಾಗದ ದಕ್ಷಿಣ ಪಾರ್ಶ್ವದಲ್ಲಿ ಅಗ್ನಿಷ್ವಾತ್ತಾದಿ ಪಿತೃದೇವತೆಗಳು ಸ್ವಕೀಯವಾದಂಥಾ ಗೋತ್ರನಾಮಗಳುಳ್ಳವರಾಗಿ, ಪರಮ ಸಮಾಧಿಯಿಂದ, ತಮ್ಮ ತಮ್ಮ ವಂಶವನ್ನು ಆಶೀರ್ವದಿಸಿಕೊಂಡಿದ್ದಾರೆ. ಅಲ್ಲಿ ಸ್ವೋಚಿತ ಷಡ್ಗುಣ್ಯೈಶ್ವರ್ಯ ಸಂಪನ್ನರಾದ ಪಿತೃರಾಜರಾದ ವೈವಸ್ವತ ಎಂಬ ಯಮದೇವರು ಸ್ವಕೀಯರಾದ ಪುರುಷರಿಂದ ಯಥಾಕ್ರಮವಾಗಿ ಜಂತುಗಳನ್ನು ಹೊಂದಿಸುತ್ತಾ ಅನುಲಂಘಿತ ಭಗವಚ್ಛಾಸನರಾಗಿದ್ದಾರೆ. ಅಲ್ಲಿನ ನರಕ ವಿವರ – ೧. ತಾಮಿಸ್ರ, ೨. ಅಂಧತಾಮಿಸ್ರ ೩. ರೌರವ, ೪. ಮಹಾರೌರವ, ೫. ಕುಂಭೀಪಾಕ, ೬.ಕಾಲಸೂತ್ರ, ೭.ಅಸೀಪತ್ರವನ, ೮.ಸೂಕರಮುಖಿ, ೯.ಅಂಧಕೂಪ, ೧೦.ಕ್ರಿಮಿಭೋಜನ, ೧೧.ಸಂದಂಶತಪ್ತ, ೧೨. ವಜ್ರಕಂಟಕಶಾಲ್ಮಲೀ, ೧೩. ವೈತರಣಿ, ೧೪. ಪೂಯೋದ, ೧೫. ಪ್ರಾಣರೋದನ, ೧೬. ವಿಶಸನ, ೧೭. ಲಾಲಾಭಕ್ಷಣ, ೧೮. ಸಾರಮೇಯಾದನ, ೧೯. ರೇತಃಪಾನ ಮೊದಲಾದ ೨೮ ಮಹಾ ನರಕಗಳೂ, ಇದಲ್ಲದೆ ಸಹಸ್ರಶಃನರಕಗಳೂ ಇವೆ. ಅಧರ್ಮವರ್ತಿಗಳಾದವರು ಅದರಲ್ಲಿ ಬೀಳುವರು. ಇಲ್ಲಿಯೂ ಅಷ್ಟದಿಕ್ಪಾಲಕರಿಗೆ ಪ್ರತ್ಯೇಕ ಅರಮನೆಗಳಿರುತ್ತವೆ. ಇದರ ಮೇಲಿನ ಅತಳಾದಿ ಸಪ್ತಲೋಕಗಳ ವಿವರ:–

೪. ಅತಳಾದಿ ಸಪ್ತಲೋಕಗಳು ಯಾವುದೆಂದರೆ :– ೧. ಅತಳ, ೨. ವಿತಳ, ೩. ಸುತಳ, ೪. ತಳಾತಳ, ೫. ಮಹಾತಳ, ೬. ರಸಾತಳ, ೭. ಪಾತಾಳ ಇವು ೭ ಲೋಕವೂ ದಿವ್ಯರತ್ನ ಸಮಾಕೀರ್ಣವಾಗಿರುವುವು. ಶೇಷದೇವರಿಂದಲೂ ಬಲಿಯಿಂದಲೂ ಸಮಾಧಿಷ್ಠಿತವಾಗಿದೆ.

ವ್ಯಾಪ್ತತ್ವ ಪ್ರಕರಣ ಸಂಪೂರ್ಣಂ

೧೨. ಭೂವಲಯ ವರ್ಣನೆ (ಭರತಖಂಡ ವರ್ಣನೆ)

ಸಂಪುಟ ೬ ಸಂಚಿಕೆ ೨ ಶ್ರೀಮುಖ, ವೈಶಾಖ ಮೇ ೧೯೩೩

ಖರ್ಪರಾಂತಮಂಡಲವಾಗಿರುವ ಈ ಭೂಲೋಕವು ೫೦ ಕೋಟಿ ಯೋಜನ ವಿಸ್ತಾರವು. ಮಂಡಲಾಕಾರವಾಗಿರುವ ಘನೋದಕವು ದ್ವಿಗುಣ ಸಹಸ್ರ ಯೋಜನ ಗಂಭೀರವು. ಇದಕ್ಕೆ ಮಂಡಲಾಕಾರವಾಗಿ ತಮಸ್ಸು ಭೂಮಿಯಿಂದ ದ್ವಿಗುಣವು. ಇದಕ್ಕೆ ಮಂಡಲಾಕಾರವಾಗಿ ಭೂಮಿಯು ಇದೆ. ಇದರ ಮಧ್ಯದಲ್ಲಿಯೇ ಮೇರುಪರ್ವತ ಇದೆ. ಇದಕ್ಕೆ ವರ್ತುಳಾಕಾರವಾಗಿ ಸಪ್ತದ್ವೀಪ–ಸಪ್ತಸಮುದ್ರ–ಸ್ವರ್ಣಭುಮಿ–ಲೋಕಾಲೋಕ ಪರ್ವತಗಳಿಂದ ಕೂಡಿಕೊಂಡಿವೆ. ಈ ಮೂರು ಖಂಡವೂ ೫೦ ಕೋಟಿ ಯೋಜನ ವಿಸ್ತಾರವು. (೧) ಜಂಬೂದ್ವೀಪವು ಲಕ್ಷ ಯೋಜನ ವಿಸ್ತಾರವು. ಇದರ ಮಧ್ಯದಲ್ಲಿ ಮೇರುಪರ್ವತವು ಇದೆ. ಇದರ ಸುತ್ತಲೂ ಲವಣಾರ್ಣವ ಸಮುದ್ರವಿದೆ. (೨) ಅದರಾಚೆಗೆ ಪ್ಲಕ್ಷ ದ್ವೀಪವು ಎರಡು ಯೋಜನ ವಿಸ್ತಾರವಾಗಿದೆ. ಈ ಪ್ರಕಾರ ಇಕ್ಷು ಸಮುದ್ರ, (೩) ಅದಕ್ಕೆ ಆಚೆಗೆ ಶಾಲ್ಮಲೀ ದ್ವೀಪವು ನಾಲ್ಕುಲಕ್ಷ ಯೋಜನ ವಿಸ್ತಾರವು. ಈ ಪ್ರಕಾರ ಸುರಾ ಸಮುದ್ರವು. (೪) ಆಮೇಲೆ ಕುಶದ್ವೀಪವು ಎಂಟುಲಕ್ಷ ಯೋಜನ ವಿಸ್ತಾರವು. ಈ ಪ್ರಕಾರ ಸರ್ಪಿ ಸಮುದ್ರವು. (೫) ಆಮೇಲೆ ಕ್ರೌಂಚ ದ್ವೀಪವು ೧೬ ಲಕ್ಷ ಯೋಜನ ವಿಸ್ತಾರವು. ಈ ಪ್ರಕಾರ ದಧಿ ಸಮುದ್ರವು. (೬) ಆಮೇಲೆ ಶಾಕ ದ್ವೀಪವು ೩೨ ಲಕ್ಷ ಯೋಜನ ವಿಸ್ತಾರವು. ಈ ಪ್ರಕಾರ ಕ್ಷೀರ ಸಮುದ್ರವು. (೭) ಕೊನೆಗೆ ಪುಷ್ಕರ ದ್ವೀಪವು ೬೪ ಲಕ್ಷ ಯೋಜನ ವಿಸ್ತಾರವು. ಈ ಪ್ರಕಾರ ಶುದ್ಧೋದಕ ಸಮುದ್ರವು.

ಈ ಸಪ್ತದ್ವೀಪಗಳು ಮೇರುನಾಭಿ ದೇಶಾರಭ್ಯ ೧ ಕೋಟಿ ೨೬ ಲಕ್ಷ ೫೦ ಸಾವಿರ ಯೋಜನ ವಿಸ್ತಾರವು. ಸಮುದ್ರಗಳ ವಿಸ್ತಾರ ಎಷ್ಟೋ ಅಷ್ಟೇ ಆಳವು. ಈ ಸಮುದ್ರಗಳ ಉಭಯಪಾರ್ಶ್ವವೂ ೫೦ ಕೋಟಿ ೮ ಲಕ್ಷ ಯೋಜನ ವಿಸ್ತಾರವು. ಆಮೇಲೆ ಸ್ವರ್ಣಭೂಮಿಯು. ಉಭಯಪಾರ್ಶ್ವವೂ ಕೂಡ ೧ ಕೋಟಿ ೬ ಲಕ್ಷ ೨೫ ಸಾವಿರ ೫೨೧ ಯೋಜನ ೧॥ ಕ್ರೋಶ ೨೧೪ ದಂಡ ೧ ಹಸ್ತ ೩ ಅಂಗುಲ ೧ ವ್ರೀಹಿ ೨ ಸಾಸಿವೆ ಕಾಳಿನ ವಿಸ್ತಾರವಿದೆ. ಆಚೆಗೆ ಲೋಕಾಲೋಕ ಪರ್ವತವು ಉಭಯ ಪಾರ್ಶ್ವವೂ ಕೂಡ ೧ ಕೋಟಿ ೧ ಲಕ್ಷ ಯೋಜನ ವಿಸ್ತಾರವು. ಲೋಕಾಲೋಕ ಪರ್ವತವು, ಕಾಂಚನ ಭೂಮಿಯೂ,

ಸಪ್ತಸಮುದ್ರವೂ ಸಪ್ತದ್ವೀಪಗಳೂ ಕೂಡ ೭ ಕೋಟಿ ೧೪ ಲಕ್ಷ ೨೮ ಸಾವಿರ ೫೨೮ ಯೋಜನ ೧. ಕ್ರೋಶ ೨೭೪ ದಂಡ ೧ ಹಸ್ತ ೩ ಅಂಗುಲ ೨ ಸಾಸಿವೆಕಾಳಿನ ವಿಸ್ತಾರವು. ಆಚೆಗೆ ದ್ವಿಗುಣ ತಮಸ್ಸು ೧೪ ಕೋಟಿ ೨೮ ಲಕ್ಷ ೫೭ ಸಾವಿರ ೧೪೨ ಯೋಜನ ೩ ಕ್ರೋಶ ೪೨೮ ದಂಡ ೨ ಹಸ್ತ ೬ ಅಂಗುಲ ೨ ನೆಲ್ಲು ೪ ಸಾಸುವೆ ಕಾಳಿನಷ್ಟು ವಿಸ್ತಾರವು. ಈ ತಮಸ್ಸಿನಲ್ಲಿಯೇ ಕಲ್ಯಾದಿಗಳು ಬಿದ್ದು ನಾನಾದುಃಖಗಳನ್ನು ಅನುಭವಿಸುತ್ತಿರುತ್ತಾರೆ. ಈ ತಮಸ್ಸಿನ ಆಚೆಗೆ ಘನೋದಕವು ೨೮ ಕೋಟಿ ೫೭ ಲಕ್ಷ ೧೪ ಸಾವಿರ ೨೮೪ ಯೋಜನ ೬ ಕ್ರೋಶ ೮೫೬ ದಂಡ ನಾಲ್ಕು ಹಸ್ತ ೧೩ ಅಂಗುಲ ೨ ಸಾಸಿವೆಕಾಳಿನ ವಿಸ್ತಾರವು. ಈ ಘನೋದಕದ ಆಳವು ೧ ಕೋಟಿ ಯೋಜನವು. ಈ ಸಮುದ್ರಗಳು ಚಂದ್ರೋದಯವಾಗಲು ೧೧೫ ಅಂಗುಲ ವೃದ್ಧಿಯಾಗಿ ಹ್ರಾಸವಾಗುವುದು.

ವಿಸ್ತಾರ ಕೋಷ್ಟಕ

೧ ಯೋಜನಕ್ಕೆ	– ೪ ಕ್ರೋಶ
೧ ಕ್ರೋಶಕ್ಕೆ	– ೧೦೦೦ ದಂಡ
೧ ದಂಡಕ್ಕೆ	– ೪ ಹಸ್ತ
೧ ಹಸ್ತಕ್ಕೆ	– ೨೮ ಅಂಗುಲ
೧ ಅಂಗುಲಕ್ಕೆ	– ೩ ನೆಲ್ಲುಕಾಳು
೧ ನೆಲ್ಲಿಗೆ	– ೭ ಸಾಸಿವೆಕಾಳು

ದ್ವೀಪವರ್ಣನೆ – ೧. ಜಂಬೂದ್ವೀಪ. ಈ ದ್ವೀಪದಲ್ಲಿ ಭೂಮಿಯು ೧ ಲಕ್ಷ ಗಾವುದವಿದೆ. ಈ ಭೂಮಿಯ ಮಧ್ಯದಲ್ಲಿ ಮೇರು ಪರ್ವತ ಉನ್ನತವು ೧ ಲಕ್ಷ ಗಾವುದ. ಬುಡಭಾಗ ಚಚ್ಚೌಕನಾಗಿ ೧೪ ಸಾವಿರ ಗಾವುದವಿದೆ. ಭೂಮಿಯೊಳಗೆ ನೆಟ್ಟಿಗಿದೆ. ಮೇಲೆ ಎತ್ತರ ೮೪ ಸಾವಿರ ಗಾವುದವಿದೆ. ತುದಿಯಲ್ಲಿ ೩೨ ಸಾವಿರ ಗಾವುದ ವಿಸ್ತಾರ ಅದರ ಮೇಲೆ ಮಧ್ಯದಲ್ಲಿ ಬ್ರಹ್ಮದೇವರ ಮನೆಯಿದೆ. ಇದಕ್ಕೆ ಶತಕೋಟಿ ಎಂದು ಹೆಸರು. ಇದು ೧೦ ಸಾವಿರ ಗಾವುದ ಅಗಲವಾಗಿದೆ. ಅಂಗಳವು ೪॥ ಸಾವಿರ ಗಾವುದವಿದೆ. ಹಿಂಭಾಗದ ಗೋಡೆಯು ೪॥ ಸಾವಿರ ಗಾವುದ – ಒಟ್ಟು ೯ ಸಾವಿರ ಗಾವುದ. ಸುತ್ತಲೂ ಬೀದಿಯು. ಪೂರ್ವಭಾಗದಲ್ಲಿ ಇಂದ್ರದೇವರ ಮನೆ ೪॥ ಸಾವಿರ ಗಾವುದ. ಇದಕ್ಕೆ ವಿವರ :– ಮನೆಯ ವಿಸ್ತಾರ ೨॥ ಸಾವಿರ– ಅಂಗಳದ ವಿಸ್ತಾರ ೧॥ ಸಾವಿರ. ಗೋಡೆಯ ವಿಸ್ತಾರ ॥ ಸಾವಿರ. ಇದೇ ಪ್ರಕಾರ ಅಷ್ಟದಿಕ್ಪಾಲಕರ ಮನೆಯ ವಿಸ್ತಾರ ಪ್ರಮಾಣವು. ಪೂರ್ವ– ಪಶ್ಚಿಮ–ಉತ್ತರ ದಕ್ಷಿಣ ಬ್ರಹ್ಮದೇವರ ಮನೆಸಹಿತ ೩೨ ಸಾವಿರ ಗಾವುದವಿದೆ. ಬ್ರಹ್ಮದೇವರು ಅಷ್ಟದಿಕ್ಪಾಲಕರು ಶ್ರೀಮನ್ನಾರಾಯಣನ ಆಜ್ಞೆಯಂತೆ ತಮ್ಮ ತಮ್ಮ ವ್ಯಾಪಾರಗಳನ್ನು ಮಾಡಿಕೊಂಡಿರುತ್ತಾರೆ.

ಆಕಾಶದಿಂದ ಹೊರಗಿರುವ ಆವರಣ – ಬ್ರಹ್ಮಾಂಡ ಖರ್ಪರ ಶೀಳಿ ಭಾಗೀರಥಿಯು ಶಿಂಶುಮಾರ ಮೂರ್ತಿಯ ಬಾಲವನ್ನು ಆಶ್ರಯಿಸಿಕೊಂಡು ಬ್ರಹ್ಮದೇವರ ಮನೆಯೊಳಗಿನ ಮಧ್ಯದಲ್ಲಿ ಬಿದ್ದು ಪೂರ್ವ–ಪಶ್ಚಿಮ, ದಕ್ಷಿಣೋತ್ತರ ನಾಲ್ಕು ಸರಳವಾಗಿ ಸಮುದ್ರವನ್ನು ಸೇರಿರುತ್ತಾಳೆ. ಹೇಗೆಂದರೆ – ಪೂರ್ವಕ್ಕೆ ಸೀತಾ ಎಂಬಾಕೆಯು ಬ್ರಹ್ಮ ಸದನದಿಂದ ಹೊರಟು ಕೇಸರಾಚಲವೇ ಮೊದಲಾದ ಬೆಟ್ಟಗಳ ಶಿಖರಗಳಲ್ಲಿ ಬಿದ್ದು, ಅಲ್ಲಿಂದ ಕೆಳಕೆಳಗೆ ಇಳಿಯುತ್ತಾ ಗಂಧಮಾಧನ ಶಿಖರದಲ್ಲಿ ಹರಿದು ಅಲ್ಲಿಂದ ಭದ್ರಾಶ್ವ ವರ್ಷದಲ್ಲಿ ಪ್ರವಹಿಸಿ ಪೂರ್ವದಲ್ಲಿರುವ ಲವಣ ಸಮುದ್ರವನ್ನು ಸೇರುವಳು.

ಹೀಗೆಯೇ ಅಳಕನಂದಾ ಎಂಬ ನದಿಯು ಬ್ರಹ್ಮಸದನದ ದಕ್ಷಿಣ ದಿಕ್ಕಿನಿಂದ ಹೊರಟು ಅನೇಕ ಪರ್ವತ ಶಿಖರಗಳನ್ನು ಅತಿಕ್ರಮಿಸಿ, ಹೇಮಕೂಟ, ಹಿಮಾಲಯಗಳನ್ನು ಅತ್ಯಂತ ವೇಗದಿಂದ (ರಭಸ) ಭೇದಿಸಿಕೊಂಡು ಹರಿದು, ಅಲ್ಲಿಂದ ಭರತವರ್ಷವನ್ನು ಹೊಕ್ಕು ದಕ್ಷಿಣ ದಿಕ್ಕಿನ ಸಮುದ್ರವನ್ನು ಸೇರಿರುವಳು. ಹೀಗೆಯೇ ಚಕ್ಷುಸ್ಸು ಎಂಬ ನದಿಯು ಬ್ರಹ್ಮ ಸದನದಿಂದ ಹೊರಟು ಮಾಲ್ಯವಂತವೆಂಬ ಬೆಟ್ಟದ ಶಿಖರದಲ್ಲಿ ಧುಮುಕಿ, ಅಲ್ಲಿಂದ ಅತಿವೇಗವಾಗಿ ಪ್ರವಹಿಸುತ್ತಾ ಕೇತುಮಾಲವರ್ಷದ ಮಧ್ಯದಲ್ಲಿ ಪ್ರವಹಿಸಿ ಪಶ್ಚಿಮ ಸಮುದ್ರವನ್ನು ಸೇರಿರುವಳು.

ನಂತರ ಭದ್ರೆ ಎಂಬ ನದಿಯು ಮೇರುಪರ್ವತದ ಉತ್ತರ ಶಿಖರದಿಂದಿಳಿದು, ಬೆಟ್ಟಗಳ ತುದಿಗಳಿಂದ ಬೆಟ್ಟಗಳ ತುದಿಗಳನ್ನು ದಾಟಿ, ಶೃಂಗವಂತವೆಂಬ ಬೆಟ್ಟದ ತುದಿಯಿಂದ ಧುಮುಕುತ್ತಾ, ಉತ್ತರ ಕುರುದೇಶಗಳನ್ನು ಬಳಸಿ ಉತ್ತರ ಸಮುದ್ರವನ್ನು ಸೇರಿರುವಳು. ಹೀಗೆ ನಾಲ್ಕು ಹೆಸರಿನಲ್ಲಿ ಕರೆಸಿಕೊಂಡು ದಕ್ಷಿಣದಿಕ್ಕಿಗೆ ಬಂದು ಭಾಗೀರಥಿಯೆನಿಸಿಕೊಂಡಿರುತ್ತಾಳೆ.

ಮೇರು ಪರ್ವತಕ್ಕೆ ಪೂರ್ವ–ಪಶ್ಚಿಮ–ದಕ್ಷಿಣೋತ್ತರ ಈ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಕೀಲಕ ಪರ್ವತಗಳು. ಈ ಮೇರುಪರ್ವತದ ಪೂರ್ವ ಭಾಗಕ್ಕೆ– ಮಂದರ ಪರ್ವತ. ಇದರ ಎತ್ತರ ೧೦ ಸಾವಿರ ಗಾವುದ. ಅಗಲ ೨ ಸಾವಿರ ಗಾವುದ. ಈ ಪರ್ವತದ ಮೇಲೆ ೧ ಮಾವಿನ ಮರವು ೧೧ ನೂರು ಗಾವುದ ಉನ್ನತವಿದೆ. ಅದರ ಹಣ್ಣು ಪರ್ವತದ ಕೋಡುಗಲ್ಲಿನಲ್ಲಿ ಬಿದ್ದು ಅದರ ರಸ ಅರುಣ ನದಿಯಾಗಿ ಹರಿದು ಪೂರ್ವಕ್ಕೆ ಇಳಾವೃತ ಖಂಡಕ್ಕೆ ಹೋಗಿದೆ. ಅಲ್ಲಿರುವ ದೇವತೆಗಳು ತಮ್ಮ ತಮ್ಮ ಸ್ತ್ರೀಯರ ಕೂಡ ರಸಪಾನ ಮಾಡಿ ಆನಂದಮಯರಾಗಿದ್ದಾರೆ. ಈ ರಸದ ಪರಿಮಳವು ೧೦೦ ಗಾವುದ ಪರ್ಯಂತ ಹೋಗುತ್ತದೆ.

ಈ ಮೇರು ಪರ್ವತದ ದಕ್ಷಿಣಕ್ಕೆ ಮೇರುಮಂದರ ಪರ್ವತವಿದೆ. ಇದರ ಎತ್ತರ ೧೦ ಸಾವಿರ ಗಾವುದ. ಅಗಲ ೨ ಸಾವಿರ ಗಾವುದ. ಈ ಪರ್ವತದ ಮೇಲೆ ಒಂದು ನೇರಳೇ (ಜಾಂಬು) ಮರವು ೧೧ ನೂರು ಗಾವುದ ಎತ್ತರವಿದೆ. ಅದರ ಹಣ್ಣು ಆನೆಯಗಾತ್ರವಿದೆ. ಈ ಹಣ್ಣು ಬಿದ್ದು ಒಡೆದು ಅದರ ರಸವು ಜಂಬೂ ನದಿಯಾಗಿ ಹರಿದು ದಕ್ಷಿಣ ಇಳಾವೃತ ಖಂಡಕ್ಕೆ ಹೋಗಿದೆ. ಈ ನದಿಯ ಎರಡು ದಡಗಳಲ್ಲಿಯೂ ಇರುವ ಮೃತ್ತಿಕೆಯೇ (ಮಣ್ಣು) ಬಿಸಿಲು, ಗಾಳಿಗಳ ಸಂಪರ್ಕದಿಂದ ಹದವನ್ನು ಹೊಂದಿ, ನಿರಂತರವೂ ದೇವಲೋಕಕ್ಕೆ ಆಭರಣವೆನಿಸಿರುವ ಜಾಂಬೂನದವೆಂಬ ಚಿನ್ನವಾಗಿರುವುದು. ದೇವಗಂಧರ್ವಾದಿ ದೇವಯೋನಿಗಳು ತಮ್ಮ ಮಡದಿಯರೊಡನೆ ಆ ಬಂಗಾರವನ್ನೇ ಒಡವೆಗಳಾಗಿ ಶೃಂಗಾರ ಮಾಡಿಕೊಳ್ಳುವರು.

ಈ ಮೇರುಪರ್ವತಕ್ಕೆ ಪಶ್ಚಿಮದಲ್ಲಿ ಸುಪಾರ್ಶ್ವ ಪರ್ವತವು ೧೦ ಸಾವಿರ ಗಾವುದ ಎತ್ತರವಾಗಿಯೂ ೨ ಸಾವಿರ ಗಾವುದ ಅಗಲವಾಗಿಯೂ ಇದೆ. ಈ ಪರ್ವತದಮೇಲೆ ಕದಂಬ (ಈಚಲ) ಮರವು ೧೧ ನೂರು ಗಾವುದ ಎತ್ತರವು. ಈ ಮರದ ಪೊಟ್ಟರೆಯಿಂದ ೫ ಮಾರು ಅಗಲದಿಂದ ಮದ್ಯರಸವಾಗಿ ನದಿ ಹರಿದು ಪಶ್ಚಿಮ ಇಳಾವೃತ ಖಂಡಕ್ಕೆ ಹೋಗುತ್ತದೆ. ಅಲ್ಲಿರುವ ದೇವತೆಗಳು ತಮ್ಮ ಸ್ತ್ರೀಯರೊಂದಿಗೆ ಪಾನಮಾಡಿ ಆನಂದಮಯರಾಗಿದ್ದಾರೆ. ಈ ರಸದ ಪರಿಮಳವು ೧೦ ಸಾವಿರ ಗಾವುದ ಇರುತ್ತದೆ.

ಈ ಮೇರುಪರ್ವತದ ಉತ್ತರಕ್ಕೆ ಕುಮುದ ಪರ್ವತವು ೧೦ ಸಾವಿರ ಗಾವುದ ಎತ್ತರವಾಗಿಯೂ ೨ ಸಾವಿರ ಗಾವುದ ಅಗಲವಾಗಿಯೂ ಇದೆ. ಈ ಪರ್ವತದಮೇಲೆ ಶತವಲ್ಕ ಎಂಬ ಹೆಸರುಳ್ಳ ವಟವೃಕ್ಷವು (ಆಲ) ೧೧ ನೂರು ಗಾವುದ ಎತ್ತರವಾಗಿದೆ. ಈ ವೃಕ್ಷದಿಂದ ಮನೋಭಿಷ್ಟವು ಕಾಮಧೇನುವಿನೋಪಾದಿಯಲ್ಲಿ ಬಯಸಿದಂಥ ಅನ್ನ, ಉದಕ, ಹಾಲು, ತುಪ್ಪ, ಜೇನುತುಪ್ಪ, ವಸ್ತ್ರ, ಅಲಂಕಾರ, ಆನೆ, ಕುದುರೆ, ಮಹರ್ಬಲ, ಉಪ್ಪರಿಗೆ, ರತ್ನ ಸುವರ್ಣ ಮೊದಲಾದುವುಗಳನ್ನು ಕೊಡುತ್ತದೆ. ಇಲ್ಲಿರುವ ದೇವತೆಗಳು ತಮ್ಮ ಸ್ತ್ರೀಯರೊಂದಿಗೆ ಅವರವರ ಮನೋಭೀಷ್ಟವನ್ನು ಪಡೆದು ಆನಂದಮಯರಾಗಿದ್ದಾರೆ.

ಈ ಮೇರುವಿನ ಪೂರ್ವಕ್ಕಿರುವ ಮಂದರ ಪರ್ವತವು ನಂದನವೆಂಬ ಉದ್ಯಾನವನವೂ, ಚೈತ್ರರಥವೆಂಬ ಉದ್ಯಾನವನವು ದಕ್ಷಿಣದಲ್ಲಿಯೂ, ವೈಭ್ರಾಜಕವೆಂಬ ಉದ್ಯಾನವನವು ಪಶ್ಚಿಮದಲ್ಲಿಯೂ, ಸರ್ವತೋಭದ್ರವೆಂಬ ಉದ್ಯಾನವನವು ಉತ್ತರದಲ್ಲಿಯೂ ಇರುವುದು. ಹೀಗೆಯೇ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಸರೋವರಗಳಿರುವವು. ಪೂರ್ವದಲ್ಲಿ ಹಾಲಿನ ಸರೋವರವೂ, ದಕ್ಷಿಣದಲ್ಲಿ ಮಧು ಸರೋವರವೂ, ಪಶ್ಚಿಮದಲ್ಲಿ ಇಕ್ಷು(ಕಬ್ಬಿನರಸ) ಸರೋವರವೂ ಉತ್ತರದಲ್ಲಿ ಶುದ್ಧೋದಕ (ಸಿಹಿನೀರು) ಸರೋವರವೂ ಇರುವುದು.

ಈ ಮೇರುವಿನ ಆಗ್ನೇಯ ದಿಕ್ಕಿನಲ್ಲಿ ೧. ಕುರಂಗ, ೨. ಕುರರ ೩. ಕಂಕ ೪.ಕುಸುಂಭ ೫. ಚಿತ್ರಕೂಟ ಎಂಬುದಾಗಿ ೫ ಬೆಟ್ಟಗಳೂ ; ನೈರುತ್ಯದಲ್ಲಿ ೧. ಶಿಶಿರ ೨. ಪತಂಗ ೩.ನಿಷಧ ೪. ರುಚಕ ೫. ಶಿತಿವಾಸ ಎಂಬುದಾಗಿ ೫ ಬೆಟ್ಟಗಳೂ; ವಾಯುವ್ಯದಲ್ಲಿ ೧. ಕಪಿಲ ೨.ಶಂಖ ೩. ಚಾರುಧಿ ೪. ವೈಡೂರ್ಯ ೫. ಹಂಸ ಎಂಬುದಾಗಿ ೫ ಬೆಟ್ಟಗಳೂ; ಈಶಾನ್ಯದಲ್ಲಿ ೧. ಋಷಭ, ೨. ನಾಗ, ೩. ಕಾಲಂಜರ, ೪. ನಾರದ, ೫. ವೈಕಂತಕ ಎಂಬುದಾಗಿ ೫ ಬೆಟ್ಟಗಳೂ ಇರುವವು.

ನಂತರ ಜಠರ ಪರ್ವತವು ೨ ಸಾವಿರ ಗಾವುದ ಅಗಲವಾಗಿಯೂ ೧೮ ಸಾವಿರ ಗಾವುದ ಎತ್ತರವಾಗಿಯೂ ಈ ಮೇರುಪರ್ವತದ ಪೂರ್ವಕ್ಕೆ ಪರಿಸ್ತರಣವಾಗಿರುವುದು. ದಕ್ಷಿಣಕ್ಕೆ ರುದ್ರದೇವರ ಗೃಹವಾದ ಕೈಲಾಸ ಪರ್ವತವು ೨ ಸಾವಿರ ಗಾವುದ ಅಗಲವಾಗಿಯೂ ೧೮ ಸಾವಿರ ಗಾವುದ ಎತ್ತರವಾಗಿಯೂ ಇರುವುದು. ಪಶ್ಚಿಮಕ್ಕೆ ಕರವೀರ ಪರ್ವತವು ೨ ಸಾವಿರ ಗಾವುದ ಅಗಲವಾಗಿಯೂ ೧೮ ಸಾವಿರ ಗಾವುದ ಎತ್ತರವಾಗಿಯೂ ಇರುವುದು. ಪಶ್ಚಿಮಕ್ಕೆ ಪಾರಿಯಾತ್ರ ಪರ್ವತವು ೨ ಸಾವಿರ ಗಾವುದ ಅಗಲವಾಗಿಯೂ ೧೮ ಸಾವಿರ ಗಾವುದ ಎತ್ತರವಾಗಿಯೂ ಇರುವುದು. ನಂತರ ಈ ಮೇರುವಿನ ಸುತ್ತಲೂ ಮೂರು ಸಾವಿರ ಗಾವುದ ಪ್ರಮಾಣವುಳ್ಳ ಇಳಾವೃತಖಂಡವಿರುವುದು.

೧. ಇಳಾವೃತಖಂಡದಲ್ಲಿ ಭಗವಂತನಾದ ಶ್ರೀರುದ್ರಮೂರ್ತಿಯೊಬ್ಬನೇ ಪುರುಷನಲ್ಲದೆ ಮತ್ತ್ಯಾವ ಪುರುಷನೂ ಇರುವುದಿಲ್ಲ. ಅಲ್ಲಿ ಪ್ರವೇಶಿಸುವ ಪುರುಷರೆಲ್ಲರೂ ತಕ್ಷಣವೇ ಸ್ತ್ರೀಯಾಗುವರು. ಇಲ್ಲಿ ಭಗವಂತನಾದ ರುದ್ರಮೂರ್ತಿಯು ಭವಾನೀದೇವಿಗೆ ಕಿಂಕರಿಯರಾದ ಅನೇಕ ಕೋಟಿ ಸ್ತ್ರೀಯರಿಂದ ಸೇವಿತನಾಗಿ ಸಂಕರ್ಷಣನೆಂಬ ಮೂರ್ತಿಯನ್ನು ಧ್ಯೇಯ ರೂಪದಿಂದ ತನ್ನ ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡು "ಓಂ ನಮೋ ಭಗವತೇ ಮಹಪುರುಷಾಯ ಸರ್ವಗುಣ ಸಂಖ್ಯಾನಾಯಽನಂತಾಯಾಽ ವ್ಯಕ್ತಾಯಾನಮಃ" ಎಂಬ ಮಂತ್ರದಿಂದ ಜಪಿಸುತ್ತಾ ಉಪಾಸನೆ ಮಾಡುತ್ತಿರುವನು, ಅಂದರೆ – ನಿರತಿಶಯಮಹಿಮನೂ ಸಕಲಗುಣಪ್ರಕಾಶನೂ, ಪುರುಷೋತ್ತಮನೂ, ನಾಶರಹಿತನೂ, ಅಪರಿಚ್ಛಿನ್ನನೂ ಆದ ಹೇ! ಭಗವಂತನೇ ! ನಿನಗೆ ನಮಸ್ಕಾರವು. ಮತ್ತೂ ಪರಮಾತ್ಮನನ್ನು ಹೇಗೆ ಕೊಂಡಾಡುವನೆಂದರೆ – ಭಜೇಭಜನ್ಯಾಽರಣ ಪಾದಪಂಕಜಂಭಗಸ್ಯಕೃತ್ಸ್ನಸ್ಯ ಪರಂಪರಾಯಣಂ। ಭಕ್ತೇಷ್ವಲಂಭಾವಿತ ಭೂತಭಾವನಂ ಭವಾಽಪಹಂತ್ವಾಭವಭಾವಮೀಶ್ವರಂ ॥

ಅಯ್ಯಾ, ಭಜನೀಯನಾದ ಹೇ ! ಸಂಕರ್ಷಣ ಮೂರ್ತಿಯೇ ! ಲೋಕರಕ್ಷಕಗಳಾದ ಪಾದಕಮಲಗಳುಳ್ಳವನೂ, ಸಮಸ್ತ ಸಂಪತ್ತಿಗೂ, ಕೀರ್ತಿಗೂ, ಜ್ಞಾನ ವೈರಾಗ್ಯಗಳಿಗೂ ಸಹ

ಮುಖ್ಯಾಶ್ರಯನೂ, ವಿವಿಧ ರೂಪಗಳಿಂದ ಭಕ್ತರಿಗೆ ದರ್ಶನವನ್ನಿತ್ತು ಉದ್ಧರಿಸುವವನೂ, ಭಕ್ತರ ಸಂಸಾರಬಂಧನವನ್ನು ಕಳೆಯುವನೂ, ಭಕ್ತರಲ್ಲದವರಿಗೆ ಸಂಸಾರವನ್ನು ಬೆಳೆಯಿಸುವವನೂ, ಲೋಕೇಶ್ವರನೂ ಆದ ಹೇ ಪರಮಾತ್ಮನೇ ! ನಿನಗೆ ನಮಸ್ಕಾರವು ಎಂಬುದಾಗಿ ಸ್ತೋತ್ರ ಮಾಡುತ್ತಿರುವನು.

೨. **ಭದ್ರಾಶ್ವಖಂಡ** – ಈ ಖಂಡವು ೩೧ ಸಾವಿರ ಗಾವುದ ಅಗಲವಿದೆ. ಈ ವರ್ಷಕ್ಕೆ ಒಡೆಯನೂ, ಧರ್ಮಪುತ್ರನೂ, ಆದ ಭದ್ರಾಶ್ವವನೆಂಬ ರಾಜನು ಸಾಕ್ಷಾದ್ಭಗವಂತನಾದ ವಾಸುದೇವಮೂರ್ತಿಗೆ ಅತ್ಯಂತ ಪ್ರೀಯನಾಗಿಯೂ, ಧರ್ಮಸ್ವರೂಪನಾಗಿಯೂ ಇರುವ ಹಯಗ್ರೀವಮೂರ್ತಿಯನ್ನು "ಓಂ ನಮೋಭಗವತೇ ಧರ್ಮಾಯಾತ್ಮವಿಶೋಧನಾಯ ನಮಃ" ಈ ಮಂತ್ರದಿಂದ ಜಪಿಸುತ್ತಾ ಉಪಾಸನೇ ಮಾಡುತ್ತಿರುವನು. ಧರ್ಮಸ್ವರೂಪನೂ, ಅಂತಃಕರಣಶೋಧಕನೂ ಆದ ಹೇ ! ಭಗವಂತನೇ ! ನಿನಗೆ ನಮಸ್ಕಾರವು ಎಂಬುವುದೇ ಈ ಮಂತ್ರಾರ್ಥವು ॥

೩. **ಹರಿವರ್ಷಖಂಡ** – ಈ ಖಂಡವು ೯ ಸಾವಿರ ಗಾವುದ ಅಗಲವಾಗಿರುವುದು. ಈ ಖಂಡದಲ್ಲಿ ಪರಮಭಾಗವತನೂ, ಮಹಾ ಪುರುಷ ಗುಣಗಳಿಗೆ ಪಾತ್ರನೂ, ದಾನವಕುಲವನ್ನು ಪಾವನಗೊಳಿಸುವ ಸಚ್ಚೀಲವಂತನೂ ಆದ ಪ್ರಹ್ಲಾದನು ನಿರಂತರವೂ ಅನನ್ಯವಾದ ಭಕ್ತಿಯಿಂದ ಅಲ್ಲಿರುವ ಭಕ್ತರೊಡನೆ ಭಗವಂತನ ಅವತಾರವಾದ ನರಹರಿ ರೂಪವನ್ನು ಉಪಾಸನೆ ಮಾಡುತ್ತಾ ಈ ಕೆಳಗೆ ಕಂಡ ಮಂತ್ರವನ್ನು ಜಪಿಸುತ್ತಿರುವನು.

"ಓಂ ನಮೋಭಗವತೇ ನಾರಸಿಂಹಾಯ ನಮಸ್ತೇಜಸ್ತೇಜಸೇ ಆವಿರಾವಿರ್ಭಾವ ವಜ್ರನಖ ! ವಜ್ರದಂಷ್ಟ್ರ ! ಕರ್ಮಾಶಯಾನ್ ರಂಧಯ ರಂಧಯ ತಮೋಗ್ರಸಗ್ರಸ, ಓಂ ಸ್ವಾಹಾ ಅಭಯಮಭಯಮಾತ್ಮನಿಭೂಯಿಷ್ಠಾ " ಅಂದರೆ – ಸೂರ್ಯ, ಚಂದ್ರ, ಅಗ್ನಿಗಳೆಂಬ ಮೂರು ತೇಜಸ್ಸಿಗೂ ತೇಜಸ್ಸನ್ನು ಕೊಡುವ ತೇಜೋರಾಶಿಯಾದ ಭಗವಂತನಾದ ನರಸಿಂಹಮೂರ್ತಿಗೆ ಅನೇಕ ನಮಸ್ಕಾರಗಳು. ವಜ್ರಗಳಂತೆ ಕಠಿಣಗಳಾದ ಉಗುರುಗಳೂ, ಕೋರೆದಾಡಿಗಳೂ ಉಳ್ಳ ಹೇ ! ಭಗವಂತನೇ ! ನಮ್ಮ ಮನಸ್ಸಿನಲ್ಲಿರುವ ಕರ್ಮವಾಸನೆಗಳೆಲ್ಲವನ್ನೂ ದಹಿಸು. ಅಜ್ಞಾನವನ್ನು ನಾಶಗೊಳಿಸು. ನಮಗೆ ಅಭಯವನ್ನು ಕೊಡು, ಮತ್ತು :–

ಶ್ಲೋ॥ ಮಾಽಗಾರದಾರಾತ್ಮಜವಿತ್ತ ಬಂಧುಷು ಸಂಗೋಯದಿಸ್ಯಾ ದ್ಭಗವತ್ಪ್ರಿಯೇಷುನಃ।
ಯಃಪ್ರಾಣವೃತ್ತ್ಯಾಪರಿತುಷ್ಟ ಆತ್ಮವಾನ್‌ಸಿದ್ಧ್ಯತ್ಯ ದೂರಾನ್ನ ತಥೇಂದ್ರಿಯಪ್ರಿಯಃ ॥ ೧ ॥
ಯತ್ಸಂಗಲಬ್ಧಂ ನಿಜವೀರ್ಯ ವೈಭವಂತೀರ್ಥಂ ಮುಹುಸ್ಸಂಸ್ಪೃಶತಾಂಹಿಮಾನಸಂ ।
ಹರತ್ಯಜೋಂತಃ ಶ್ರುತಿಭಿರ್ಗತೋಂಗಜಂ ಕೋವೈನಸೇವೇತ ಮುಕುಂದವಿಕ್ರಮಂ ॥ ೨ ॥

ಮನೆ, ಮಡದಿ, ಮಕ್ಕಳು ಮೊದಲಾದವುಗಳಲ್ಲಿ ನಮಗೆ ಸಂಗವುಂಟಾಗದಿರಲಿ, ಒಂದು ವೇಳೆ ಹಾಗಾದರೂ ಆ ಸಂಗವು ಭಗವದ್ಭಕ್ತರಲ್ಲಿ ಮಾತ್ರ ಇರಲಿ. ಈ ಭಕ್ತರ ಸಂಗವೆಂಬುವುದು ಸಾಧಾರಣವಾದದ್ದಲ್ಲ, ಈ ಸಂಗವನ್ನು ಮಾಡಿದ ಪುರುಷನು ಮನಶ್ಶುದ್ಧಿಯನ್ನು ಪಡೆದು ಪ್ರಾಣಧಾರಣೆಗೆ ತಕ್ಕಷ್ಟು ಮಾತ್ರ ಭೋಗಗೊಳ್ಳುತ್ತಾ ಅತ್ಯಲ್ಪ ಕಾಲದಲ್ಲಿಯೇ ಮುಕ್ತನಾಗುವನು. ಹೀಗಿಲ್ಲದಿದ್ದರೆ ಸಂಸಾರಿಯು ಎಂದಿಗೂ ಮುಕ್ತನಾಗಲಾರನು. ಮತ್ತು ಭಕ್ತರ ಸಂಗದಿಂದ ಲಭಿಸಿದ ನಿರತಿಶಯ ಮಹಿಮೆಯುಳ್ಳ ಭಗವತ್ಕಥಾಮೃತವನ್ನು ಯಾರು ಪಾನಮಾಡುವರೋ ಭಗವಂತನು ಅವರ ಹೃದಯಲ್ಲಿ ನೆಲೆಸಿ ಅವರ ಮನಸ್ಸಿನಲ್ಲಿರುವ ಕರ್ಮವಾಸನೆಗಳೆಲ್ಲವನ್ನೂ ಕಳೆಯುವನು. ಗಂಗಾದಿ ಪುಣ್ಯ ತೀರ್ಥಗಳಲ್ಲಿ ಸ್ನಾನ ಮಾಡೋಣದರಿಂದ ಶರೀರದ ಕೊಳೆಯನ್ನು ಮಾತ್ರ ಕಳೆಯಬಲ್ಲವೇ ಹೊರ್ತು ಮನೋದೋಷಗಳನ್ನು ತೊಲಗಿಸಲಾರವು. ಭಗವತ್ಕಥಾಮೃತ ಪಾನಮಾಡುವುದರಿಂದ ಮನೋದೋಷಗಳು ತೊಲಗುವುವು. ಆದುದರಿಂದ ದುರಾಶೆ, ಅಭಿನಿವೇಶ, ದುಃಖ, ಕ್ರೋಧ, ಮಾನ, ಭಯ, ದೈನ್ಯ ಮೊದಲಾದುವುಗಳಿಗೆ ಮೂಲಕಾರಣವೆನಿಸಿ ತೆರವಿಲ್ಲದೆ ಹುಟ್ಟು ಸಾವುಗಳನ್ನುಂಟು ಮಾಡುವ ಸಂಸಾರವನ್ನು ತೊರೆದು ಹೇಗಾದರೂ ನಿರ್ಭಯವಾದ ನರಸಿಂಹಮೂರ್ತಿಯ ಪಾದಗಳನ್ನು ಧ್ಯಾನಿಸಿ ಧನ್ಯರಾಗಿರಿ ಎಂಬುದಾಗಿ ಸರ್ವದಾ ಪ್ರಹ್ಲಾದರಾಯನು ತನ್ನ ಭಕ್ತರಿಗೆ ಉಪದೇಶಿಸುತ್ತಾ ಉಪಾಸಿಸುತ್ತಿರುವನು.

೪. ಕಿಂಪುರುಷ ಖಂಡ – ಈ ಖಂಡವು ೯ ಸಾವಿರ ಗಾವುದ ಅಗಲವು. ಈ ಖಂಡದಲ್ಲಿ ಭಾಗವತೋತ್ತಮನಾದ ಹನುಮಂತನು, ಲಕ್ಷ್ಮಣನಿಗೆ ಅಣ್ಣನಾಗಿಯೂ, ಸೀತಾದೇವಿಗೆ ಅನುರೂಪನಾಗಿಯೂ ಜಗತ್ಕಾರಣನಾಗಿಯೂ ಇರುವ ಶ್ರೀರಾಮಚಂದ್ರಮೂರ್ತಿಯನ್ನು ನಿರತಂತರವಾದ ಭಕ್ತಿಯಿಂದ ಉಪಾಸನೆ ಮಾಡುತ್ತಿರುವನು, ಹೇಗೆಂದರೆ:– "ಓಂ ನಮೋ ಭಗವತೇ, ಉತ್ತಮಶ್ಲೋಕಾಯನಮಃ, ಆರ್ಯಲಕ್ಷಣಶೀಲವ್ರತಾಯನಮಃ, ಉಪಶಿಕ್ಷಿತಾತ್ಮನೇ ಉಪಾಸಿತಲೋಕಾಯನಮಃ, ಸಾಧುವಾದನಿಕಷಣಾಯನಮಃ ಬ್ರಾಹ್ಮಣ್ಯದೇವಾಯ, ಮಹಾಪುರುಷಾಯ ಮಹಾರಾಜಾಯನಮಃ ಅಂದರೆ, ಬ್ರಹ್ಮಾದಿ ದೇವತೆಗಳಿಂದ ಸ್ತುತ್ಯನಾಗಿಯೂ, ಸಜ್ಜನ ಲಕ್ಷಣಗಳಿಂದಲೂ, ನಡವಳಿಯಿಂದಲೂ, ನಿಯಮಗಳಿಂದಲೂ ಕೂಡಿದವನಾಗಿಯೂ, ಮನಸ್ಸನ್ನು ನಿಗ್ರಹಿಸಿದವನಾಗಿಯೂ, ಸಕಲ ಲೋಕಾಶ್ರಯನಾಗಿಯೂ, ಸಾಧುತ್ವಕ್ಕೆ ಓರೆಗಲ್ಲಿನಂತೆ ನಿರ್ಣಯಸ್ಥಾನವಾಗಿಯೂ, ಬ್ರಾಹ್ಮಣ ಪ್ರಿಯನಾಗಿಯೂ ಇರುವ ಪುರುಷೋತ್ತಮನಾದ ಮಹಾರಾಜನೇ ನಿನಗೆ ನಮಸ್ಕಾರವು. ಎಂಬೀ ಮಂತ್ರಾರ್ಥದಿಂದ ಶ್ರೀರಾಮ ದೇವರನ್ನು ಜಪಿಸುತ್ತಾ ಕೊಂಡಾಡುತ್ತಿರುವನು.

೫. ಭರತಖಂಡ – ಈ ಖಂಡವು ೯ ಸಾವಿರ ಗಾವುದ ಅಗಲವಾಗಿಯೂ ೯ ಸಾವಿರ ಗಾವುದ ಉದ್ದವಾಗಿಯೂ ಇರುವುದು. ಭಾರತೇಪಿವರ್ಷೇಭಗವಾನ್ ನರನಾರಾಯಣಾಖ್ಯ

ಆಕಲ್ಪಾಂತಮುಪಚಿತಧರ್ಮ ಜ್ಞಾನವೈರಾಗ್ಯೈಶ್ವರ್ಯೋಪಶಮೋ ಪರಮಾತ್ಮೋಪಲಂಭನಮನುಗ್ರಹಾಯಾತ್ಮವತಾಮನುಕಂಪಯಾತಪೋಽವ್ಯಕ್ತಗತಿಶ್ಚರತಿ ॥

ಈ ಭರತಖಂಡದಲ್ಲಿ ಶ್ರೀಭಗವಂತನು ನರನಾರಾಯಣಾವತಾರವನ್ನು ಮಾಡಿ ಪ್ರಾಣಿಗಳನ್ನು ಕನಿಕರಿಸುವುದಕ್ಕಾಗಿ, ದಯೆಯಿಂದ ಕಲ್ಪಾಂತರದವರೆಗೂ, ಸಂಪೂರ್ಣವಾದ, ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಇಂದ್ರಿಯಜಯ, ನಿರಹಂಕಾರ, ಆತ್ಮಸಾಕ್ಷಾತ್ಕಾರ ಮೊದಲಾದವುಗಳನ್ನುಂಟು ಮಾಡುವ ತಪಸ್ಸನ್ನು ಮಾಡುತ್ತಿರುವನು.

ತಂಭಗವಾನ್‌ನಾರದೋ ವರ್ಣಾಶ್ರಮವತೀಭಿರ್ಭಾರತೀಭಿಃ ಪ್ರಜಾಭಿಃ ಭಗವತ್ಪ್ರೋಕ್ತಾಭ್ಯಾಂ ಸಾಂಖ್ಯಯೋಗಾಭ್ಯಾಂ ಭಗವದನುಭಾವೋಪವರ್ಣನಂ ಸಾವರ್ಣೇರುಪದೇಕ್ಷ್ಯಮಾಣಃ ಪರಮಭಕ್ತಿ ಭಾವೇನೋಪಸರತಿ ಇದಂಚಾಽಭಿಗೃಣಾತಿ ॥ ಓಂ ನಮೋಭಗವತೇ ಉಪಶಮ ಶೀಲಾಯೋ ಪರತಾಽನಾತ್ಮ್ಯಾಯನಮೋಽಕಿಂಚನವಿತ್ತಾಯ ಋಷಿಋಷಭಾಯ ನರನಾರಾಯಣಾಯ ಪರಮಹಂಸಪರಮಗುರುವೇ ಆತ್ಮಾರಾಮಾಧಿಪತಯೇ ನಮೋನಮ ಇತಿ ॥

ಮಹಾಮಹಿಮನಾದ ನಾರದಮುನಿಯು ವರ್ಣಾಶ್ರಮ ಧರ್ಮಗಳಿಂದದೊಡಗೂಡಿದ ಈ ಭರತಖಂಡದ ಪ್ರಜೆಗಳಿಂದೊಡಗೂಡಿ, ಮೊದಲು ತನಗೆ ಭಗವಂತನು ಉಪದೇಶಿಸಿದ ಜ್ಞಾನಯೋಗ ಕರ್ಮಯೋಗ ಸಹಿತವಾದ ಪಾಂಚರಾತ್ರಾಗಮವನ್ನು ಸಾವರ್ಣಿ ಮನುವಿಗೆ ಉಪದೇಶಿಸುತ್ತಾ ಷಾಡ್ಗುಣ್ಯಪೂರ್ಣನೂ, ಶಾಂತಮೂರ್ತಿಯೂ, ಅಹಂಕಾರರಹಿತನೂ, ಮುಮುಕ್ಷುಗಳಿಗೆ ನಿಧಿಪ್ರಾಯನೂ, ಋಷಿಪುಂಗವನೂ, ಪರಮಹಂಸರಿಗೆ ಗುರುವೂ, ಜ್ಞಾನಿಗಳಿಗೆ ಒಡೆಯನೂ ಆದ ನರನಾರಾಯಣ ಮುನೀಂದ್ರನಿಗೆ ಅನೇಕ ನಮಸ್ಕಾರಗಳು ಎಂಬ ಮಂತ್ರವನ್ನು ಜಪಿಸುತ್ತಿರುವನು, ಮತ್ತು:-

ಇದಂಹಿಯೋಗೇಶ್ವರ ! ಯೋಗನೈಪುಣಂಹಿರಣ್ಯಗರ್ಭೋ ಭಗವಾನ್ ಜಗದಯತ್! ಯದಂತಕಾಲೇತ್ವಯಿ ನಿರ್ಗುಣೇಮನೋಭಕ್ತ್ಯಾದಧೀ ತೋಙ್ಝಿ ತದುಷ್ಕಳೇಬರಃ ॥೧॥ ಯಥೈಹಿಕಾಮುಷ್ಮಿಕಕಾಮಲಂ ಪಟಃಸುತೇಷುದಾರೇಷು ಧನೇಷುಚಿಂತರ್ಯ । ಶಂಕೇತವಿದ್ವಾನ್ ಕುಕಳೇಬರಾಽತ್ಯಯಾದ್ಯಸ್ತ ಸ್ಯಯತ್ನಃಶ್ರಮ ಏವಕೇವಲಂ॥೨॥ ತನ್ನಃಪ್ರಭೋ! ತ್ವಂಕುಕಳೇಬರಾಽರ್ಪಿತಾಂತ್ವನ್ಮಾಯಯಾಽ ಹಂಮಮತಾ ಮಧೋಕ್ಷಜ!! ಭಿಂದ್ಯಾಮಯೇನಾಶು ವಯಂಸುದುರ್ಭಿದಾಂವಿಧೇಹಿಯೋಗಂ ತ್ವಯಿನಃಸ್ವಭಾವಂ ॥೩॥

ಎಲೈ! ಯೋಗೀಶ್ವರನಾದ ನಾರಾಯಣಮೂರ್ತಿಯೇ ! ಮನುಷ್ಯನು ಹುಟ್ಟಿದ ಮೊದಲುಗೊಂಡು ಸರ್ವದಾ ಭಕ್ತಿಯುಕ್ತನಾಗಿ, ದೇಹಾವಸಾನ ಕಾಲದಲ್ಲಿ ಈ ತುಚ್ಛವಾದ ದೇಹದಲ್ಲಿನ ಅಭಿಮಾನವನ್ನು ತೊರೆದು ನಿರ್ಗುಣನಾದ ನಿನ್ನಲ್ಲಿ ದೃಢವಾದ ಮನಸ್ಸನ್ನು ನೆಲೆಗೊಳಿಸಲು ಯಾವುದುಂಟೋ ಆ ಮನೋಧಾರಣೆಯನ್ನೇ ಯೋಗದಲ್ಲಿ ಜಾಣತನವೆಂದು ಹೇಳುವರು. ಇಹಪರ ಸುಖದಲ್ಲಿ ಆತ್ಯಾಸಕ್ತನಾದ ಪಾಮರನು ತನ್ನ ಪುತ್ರ,ಕಳತ್ರ, ಧನಾದಿಗಳನ್ನು ಚಿಂತಿಸುತ್ತಾ ಶರೀರವನ್ನು ಬಿಡುವಾಗ ಹೇಗೆ ಮೃತ್ಯುವಿಗೆ ಹೆದರುವನೋ ಹಾಗೆಯೇ ವಿದ್ವಾಂಸನೂ ಕೂಡ ವಿಷಯ ಲಂಪಟನಾಗಿ ಸಂಸಾರದಲ್ಲಿ ಸಿಕ್ಕಿ ಮೃತ್ಯುವಿಗೆ ಹೆದರುವುದಾದರೆ, ಅವನು ಮಾಡಿದ ಸಕಲ ಶಾಸ್ತ್ರಾಭ್ಯಾಸಾದಿಗಳೆಲ್ಲವೂ ಪ್ರಯಾಸ ಮಾತ್ರವೇ ಹೊರತು ಮತ್ಯಾವ ಪ್ರಯೋಜನವೂ ಆಗಲಾರದು. ಆದ್ದರಿಂದ ಎಲೈ! ಜಗದೀಶ್ವರನೇ ! ಯಾವ ಯೋಗದಿಂದ ತುಚ್ಛವಾದ ದೇಹಾದಿಗಳಲ್ಲಿ ನಿನ್ನ ಮಾಯೆಯಿಂದ ಕಲ್ಪಿತವಾಗಿರುವ ಕಾರಣಗಳಿಂದ ಕಳೆಯಲು ಸಾಧ್ಯವಾಗಿರುವ ಅಹಂಕಾರ ಮಮಕಾರಗಳನ್ನು ಶೀಘ್ರವಾಗಿ ಬಿಡುವೆವೋ ಅಂತಹ ರಾಜಯೋಗವನ್ನು ನೀನು ನಮಗೆ ಅನುಗ್ರಹಿಸು ಎಂಬುದಾಗಿ ನಾರದ ಮುನಿಯು ಸರ್ವದಾ ನರನಾರಾಯಣ ದೇವರನ್ನು ಸ್ತುತಿಸುತ್ತಿರುವನು.

ಈ ಭರತಖಂಡದಲ್ಲಿರುವ ನದಿಗಳು ಮತ್ತು ಬೆಟ್ಟಗಳು ಯಾವುದೆಂದರೆ – ಮಲಯ, ಮಂಗಳಪ್ರಸ್ಥ, ಮೈನಾಕ, ತ್ರಿಕೂಟ, ಋಷಭ, ಕೂಟಕ, ಕೋಲ್ಲಕ, ಸಹ್ಯ, ದೇವಗಿರಿ, ಋಷ್ಯಮೂಕ, ಶ್ರೀಶೈಲ, ವೆಂಕಟಾಚಲ, ಮಹೇಂದ್ರ, ದ್ರೋಣ, ವಾರಿಧಾರ, ವಿಂಧ್ಯ, ಶುಕ್ತಿಮಂತ, ಋಕ್ಷಗಿರಿ, ಪಾರಿಯಾತ್ರ, ಚಿತ್ರಕೂಟ, ಗೋವರ್ಧನ, ರೈವತಕ, ಕಕುಭ, ನೀಲ, ಗೋಕಾಮುಖ, ಇಂದ್ರಕೀಲ, ಕಾಮಗಿರಿ ಇವೆ ಮೊದಲಾದ ಮುಖ್ಯ ಪರ್ವತಗಳೂ, ಸಾಧಾರಣ ಪರ್ವತಗಳು ಸಾವಿರಾರು ಇರುವುವು: ಮತ್ತು ಚಂದ್ರವಶೆ, ತಾಮ್ರಪರ್ಣಿ, ಅವಟೋದೆ, ಕೃತಮಾಲೆ, ವೈಹಾಯಸಿ, ಕಾವೇರಿ, ವೇಣಿ, ಪಯಸ್ವಿನಿ, ಶರ್ಕರಾವರ್ತೆ, ತುಂಗಭದ್ರೆ, ಕೃಷ್ಣೆ, ವೇಣ್ಯಾ, ಭೀಮರಥಿ, ಗೋದಾವರಿ, ನಿರ್ವಿಂಧ್ಯೆ, ಪಯೋಷ್ಣಿ, ತಾಪಿನಿ, ರೇವಾ, ಸುರಸಾ, ನರ್ಮದೆ, ಚರ್ಮಣ್ವತಿ, ದೃಷದ್ವತಿ, ಗೋಮತಿ, ಸರಯೂ ರೋಧಸ್ವತೀ, ಸಪ್ತವತಿ, ಸುಷೋಮ, ಶತದ್ರೂ, ಚಂದ್ರಪ್ರಭಾಗಾ, ಮರುದ್ವೃಧಾ, ವಿತಸ್ತಾ, ಅಸಿಕ್ನಿ, ವಿಶ್ವಾ ಮೊದಲಾದ ಮಹಾನದಿಗಳೂ ಇರುವುವು.

ಈ ಭರತಖಂಡದಲ್ಲಿ ಜನ್ಮವನ್ನು ಪಡೆದ ಪುರುಷರು ತಾವು ಮಾಡಿದ ಸಾತ್ವಿಕ, ರಾಜಸ, ತಾಮಸ ಸಕರ್ಮಗಳಿಗನುಸಾರವಾಗಿ ಹಲವು ಬಗೆಗಳಾದ ದೇವ, ಮಾನವ, ಪಶ್ವಾದಿ ಜನ್ಮಗಳನ್ನು ಪಡೆಯುವರು.

ಊರ್ಧ್ವಂಗಚ್ಛಂತಿಸತ್ವಸ್ಥಾಃ ಮಧ್ಯೇತಿಷ್ಠಂತಿರಾಜಸಾಃ । ಜಘನ್ಯ ಗುಣವೃತ್ತಸ್ಥಾಃ ಅಧೋಗಚ್ಛಂತಿತಾಮಸಾಃ॥ ಕೇವಲ ಪುಣ್ಯಜನ್ಮದಿಂದ ದೇವಜನ್ಮವನ್ನೂ, ಮಿಶ್ರಕರ್ಮದಿಂದ ಮನುಷ್ಯ ಜನ್ಮವನ್ನೂ, ಕೇವಲ ಪಾಪದಿಂದ ತಿರ್ಯಗ್ಜನ್ಮವನ್ನೂ ಪಡೆಯುವರು.

ಅಹೋ ! ಅಮಾಷಾಂಕಿಮಕರಾರಿಶೋಭನಂ ಪ್ರಸನ್ನ ಏಷಾಂಸ್ವಿದು ತಸ್ವಯಂಹರಿಃ। ಯೇರ್ಜನ್ಮಲಬ್ಧಂನ್ನೃಷು ಭಾರತಾऽಜಿರೇ ಮುಕುಂದಸೇವೌಪಯಿಕಂಸ್ಪೃಹಾಹಿನಃ॥೧॥ ಕಿಂದುಷ್ಕರೈರ್ನಃ ಕ್ರತುಭಿಸ್ತುಪೋವ್ರತೈರ್ದಾನಾದಿಭಿರ್ವಾದ್ಯು ಜಯೇನಫಲ್ಗುನಾ । ನಯತ್ರ ನಾರಾಯಣಪಾದಪಂಕಜ ಸ್ಮೃತಿಃಪ್ರಮೃಷ್ಟಾತಿಶಯೇಂದ್ರಿಯೋತ್ಸವಾತ್॥೨॥

ಈ ಭರತಖಂಡದಲ್ಲಿ ಮನುಷ್ಯ ಜನ್ಮವನ್ನು ಪಡೆವುದೇ ಸಕಲ ಪುರುಷಾರ್ಥ ಸಾಧನವೆಂದು ಕೊಂಡಾಡುತ್ತಿರುವರು ಹೇಗೆಂದರೆ – ದಿವ್ಯ ಭೋಗಗಳನ್ನು ಅನುಭವಿಸುತ್ತಿರುವ ನಾವುಕೂಡ ಯಾವ ಸ್ಥಳದಲ್ಲಿ ಜನಿಸಿದರೆ ಸಾಕೆಂದು ಬಯಸುತ್ತಿರುವೆವೋ, ಅಂತಹ ಪರಮಪವಿತ್ರವಾದ ಈ ಭರತಖಂಡದಲ್ಲಿ ಭಗವಂತನನ್ನು ಆರಾಧಿಸುವುದಕ್ಕೆ ಯೋಗ್ಯವಾದ ಮನುಷ್ಯ ಜನ್ಮವನ್ನು ಪಡೆದ ಪುರುಷರು ಎಷ್ಟು ಸುಕೃತಶಾಲಿಗಳೋ; ಅಥವಾ ಭಗವಂತನು ತಾನಾಗಿಯೇ ಇಲ್ಲಿರುವವರಿಗೆ ಪ್ರಸನ್ನನಾಗುವನೋ; ಯಾವ ಸ್ವರ್ಗದಲ್ಲಿ ನೆಲೆಸಿರುವ ನಮಗೆ ಸ್ರಕ್ಚಂದನ ವನಿತಾದಿ ವಿಷಯ ಭೋಗಗಳು ಅಧಿಕವಾಗಿ ಭಗವನ್ನಾಮ ಸ್ಮರಣೆಗೆ ಅವಕಾಶವೇ ಇಲ್ಲದೇ ಇರುವುದೋ, ಅಂತಹ ತುಚ್ಛವಾದ ಈ ಸ್ವರ್ಗವೇಕೆ? ಆ ಸ್ವರ್ಗವನ್ನು ಸಂಪಾದಿಸುವುದಕ್ಕಾಗಿ ಮಾಡಿದ ದುಷ್ಕರ್ಮಗಳಾದ ಯಜ್ಞಗಳಿಂದಾಗಲೀ, ತಪಸ್ಸಿನಿಂದಾಗಲಿ, ವ್ರತಗಳಿಂದಾಗಲಿ, ದಾನಾದಿಗಳಿಂದಾಗಲಿ ನಮಗೇನು ಪ್ರಯೋಜನ?

ಕಲ್ಪಾಂಯುಷಾಂ ಸ್ಥಾ ನಜಯುತ್ಪುನರ್ಭವಾತ್ ಕ್ಷಣಾಂಯುಷಾಂ ಭಾರತಭೂಜಯೋವರಂ। ಕ್ಷಣೇನಮರ್ತ್ಯೆನಕೃತಂಮನಸ್ವಿನಃ ಸನ್ನ್ಯಸ್ಯ ಸಂಯಾಂತ್ಯ ಭಯಂಪದಂಹರೇಃ॥೧॥ ನಯತ್ರವೈಕುಂಠ ಕಥಾಸುಧಾಪಗಾನಸಾಧವೋಭಾಗವತಾಸ್ತದಾಶ್ರಯಾಃ। ನಯತ್ರಯಜ್ಞೇಶಮಖಾ ಮಹೋತ್ಸವಾಃ ಸುರೇಶಲೋಕೋऽಪಿನವೈಸಸೇವ್ಯತಾಂ॥೨॥ ಪ್ರಾಪ್ತನೃಜಾಂತಿಂತ್ವಿಹಯೇಚಜಂತವೋ ಜ್ಞಾನಕ್ರಿಯಾದ್ರವ್ಯಕಲಾಪಸಂಭೃತಾಂ । ನವ್ಯೆಯತೇರನ್ನ ಪುನರ್ಭವಾಯತೇ ಭೂಯೋವನೌಕಾ ಇವಯಾಂತಿ ಬಂಧನಂ॥೩ ॥

ಈ ಭರತಖಂಡದಲ್ಲಿ ಹುಟ್ಟಿದ ಧೀರರು ಮರಣಶೀಲವಾದ ತಮ್ಮ ದೇಹದಿಂದ ಸ್ವಲ್ಪಕಾಲದಲ್ಲಿಯೇ ತಾವು ಮಾಡಿ ಕರ್ಮಫಲಗಳನ್ನು ಭಗವಂತನಿಗೆ ಅರ್ಪಣೆಮಾಡಿ ನಿಷ್ಕಾಮರಾಗಿ ನಿರ್ಭಯವಾದ ಭಗವತ್ಪದವನ್ನು ಪಡೆಯುವರು. ಈ ಕಾರಣದಿಂದ ಕಲ್ಪಾಂತವಾದ ಆಯಸ್ಸುಳ್ಳ ಇಂದ್ರಾದಿ ಲೋಕಗಳಲ್ಲಿ ಭೋಗಗಳನ್ನನಭವಿಸಿ ಪುನರ್ಜನ್ಮಗಳನ್ನು ಪಡೆಯುವುದಕ್ಕಿಂತಲೂ, ಅಲ್ಪಾಯುವುಳ್ಳ ಈ ಭರತಖಂಡದಲ್ಲಿ ಜನಿಸುವುದೇ ಪರಮ ಶ್ರೇಯಸ್ಕರವು. ಹೀಗಿರಲು ಯಾವ ಸ್ಥಳದಲ್ಲಿ ಭಗವಂತನ ಸಚ್ಚರಿತ್ರೆಗಳೆಂಬ ದಿವ್ಯ ನದಿಗಳು ಪ್ರವಹಿಸುವುದಿಲ್ಲವೋ ಆ ನದಿಗಳಿಗೆ ಜನ್ಮಸ್ಥಾನಗಳೆನಿಸಿದ ಪರಮಭಾಗವತರಾದ

ಸಾಧುಗಳಿರುವುದಿಲ್ಲವೋ, ನೃತ್ಯಗೀತಾದಿ ಮಹೋತ್ಸವಗಳಿಂದ ಕೂಡಿದ ಭಗವದಾರಾಧನೆಗಳು ನಡೆಯುವುದಿಲ್ಲವೋ, ಆ ಸ್ಥಳವು ಬ್ರಹ್ಮನ ಆವಾಸಸ್ಥಾನವಾದ ಸತ್ಯಲೋಕವಾದರೂ ಅದು ಸೇವ್ಯವಲ್ಲವು. ಹೀಗಿರಲು ಸಕಲ ಭೂಭಾಗಗಳಿಗಿಂತಲೂ ಉತ್ತಮವೆನಿಸಿರುವ ಈ ಭರತಖಂಡದಲ್ಲಿಯೂ, ಭಗವದಾರಾಧನೆಗೆ ಉಪಯುಕ್ತಗಳಾದ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳೆಂಬ ಪೂರ್ಣವಾದ ಮಾನುಷ ಜನ್ಮವನ್ನು ಪಡೆದು, ಯಾವ ಪುರುಷನು ಜನ್ಮಾಂತರವಿಲ್ಲದ ಮೋಕ್ಷವನ್ನು ಸಂಪಾದಿಸುವುದಕ್ಕಾಗಿ ಪ್ರಯತ್ನಸುವುದಿಲ್ಲವೋ, ಅಂಥವರು ಒಂದಾವರ್ತಿ ಬೇಡನ ಬಲೆಯಿಂದ ಬಿಡುಗಡೆ ಪಡೆದರೂ, ಮೈಮರೆತು ಅದೇ ಗಿಡದಲ್ಲಿ ನೆಲೆಸುತ್ತಾ ಪುನಃ ಅವನ ಬಲೆಗೆ ಸಿಕ್ಕುವ ಕಾಡುಪಕ್ಷಿಗಳಂತೆ ಪುನಃ ಸಂಸಾರ ಬಂಧನಕ್ಕೆ ಸಿಕ್ಕಿಬೀಳುವುದೇ ನಿಶ್ಚಯವು.

ಭಗವಂತನು ತನ್ನನ್ನು ಬೇಡಿಕೊಂಡವರಿಗೆ ಇಷ್ಟಾರ್ಥಗಳನ್ನು ಕೊಡುವುದೇನೋ ದಿಟವು. ಆದರೆ ಈ ಇಷ್ಟಾರ್ಥಗಳನ್ನು ಪಡೆದವರು ಪುನಃ ಬೇರೆಬೇರೆ ಕಾಮುಗಳನ್ನು ಬಯಸುವವರಾದುದರಿಂದ ಅವರಿಗೆ ಶ್ರೀಹರಿಯು ಮನಃಪೂರ್ವಕವಾದ ಇಷ್ಟಾರ್ಥಗಳನ್ನು ಕೊಡಲಿಲ್ಲವು. ಅವು ಪರಮಾರ್ಥಗಳಲ್ಲವು. ಆದ್ದರಿಂದ ಯಾವ ಮನುಷ್ಯನು ನಿಷ್ಕಾಮನಾಗಿ ಪರಮಾತ್ಮನನ್ನು ಸೇವಿಸುವನೋ ಅಂಥವನು ನಿರಪೇಕ್ಷೆಯಾದರೂ ಸಹ ಭಗವಂತನು ಅವರಿಗೆ ಸಕಲ ಇಷ್ಟಾರ್ಥಗಳನ್ನೂ ಸಲ್ಲಿಸುವನು. ಆದ್ದರಿಂದ ನಿಷ್ಕಾಮರಾದವರೇ ಧನ್ಯರು. ಮತ್ತು ಈ ಭರತಖಂಡದಲ್ಲಿ ಪರಮಾತ್ಮನನ್ನು ಜಪಿಸುವ ಜನರಿಗೆ ಸಕಲೇಷ್ಟಗಳನ್ನೂ, ಕೊನೆಗೆ ನಿರತಿಶಯ ಸುಖವನ್ನೂ ಪಾಲಿಸುವುದರಿಂದ ನಾವು ಮಾಡಿರುವ ಯಜ್ಞಯಾಗಾದಿ ಕರ್ಮಗಳಾವುವುಂಟೋ ಇವುಗಳ ಫಲವು ಸ್ವರ್ಗದಲ್ಲಿ ಅನುಭವಿಸಿ ಮಿಕ್ಕಿರುವುದೇನಾದರೂ ಇದ್ದರೆ ಆ ಫಲದಿಂದ ನಮಗೆ ಈ ಭರತಖಂಡದಲ್ಲಿ ಭಗವಂತನ ನಾಮಸ್ಮರಣೆಮಾಡುವ ಮಾನುಷಜನ್ಮ ಉಂಟಾಗಲಿ ಎಂದು ದೇವತೆಗಳು ಭರತಖಂಡವನ್ನು ಹೊಗಳುತಿರುತ್ತಾರೆ. ಹೀಗಿರುವುದರಿಂದ ಇಂಥಾ ಭರತ ಖಂಡದಲ್ಲಿ ಜನಸಿರುವ ನಾವುಗಳೂಸಹ ಸರ್ವದಾ ಹರಿನಾಮಸಂಕೀರ್ತನಾದಿಗಳಲ್ಲಿ ಆಸಕ್ತರಾಗಿ ಸರ್ವದಾ ಆ ಪರಮಾತ್ಮನನ್ನು ಸ್ಮರಿಸುತ್ತಿದ್ದು ಈ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂಬುವುದನ್ನು ಚಿಂತಿಸಬೇಕು.

ಭರತಖಂಡ ವರ್ಣನೆ ಸಂಪೂರ್ಣವು

೧೩. ಖಗೋಳ ಪ್ರಕರಣ

ಸಂಪುಟ ೬, ಸಂಚಿಕೆ ೩ ಶ್ರೀಮುಖ ಜ್ಯೇಷ್ಠ ಜೂನ್ ೧೯೩೩

೧. ಭೂಮಂಡಲದ ಪರಿಮಾಣವನ್ನು ಹೇಗೆ ತಿಳಿದೆವೋ ಹಾಗೆಯೇ ಖಗೋಳದ ಪರಿಮಾಣವನ್ನೂ ತಿಳಿಯಬೇಕು. ಈ ಭೂಗೋಳಕ್ಕೂ ಖಗೋಳಕ್ಕೂ ಮಧ್ಯೆ ಇರುವ ಬಯಲಿಗೆ ಅಂತರಿಕ್ಷವೆಂದು ಹೆಸರು. ಸಕಲ ಗ್ರಹಗಳಿಗೂ ಒಡೆಯನಾದಂಥ ಸೂರ್ಯನು ಈ ಅಂತರಿಕ್ಷದ ಮಧ್ಯದಲ್ಲಿ ನೆಲಸಿರುತ್ತಾನೆ. ಈ ಸೂರ್ಯನು ಉತ್ತರಾಯಣ, ದಕ್ಷಿಣಾಯನ, ವೈಷುವತಗಳೆಂಬ ಆರೋಹಣ, ಅವರೋಹಣ ಸಮಸ್ಥಾನಗಳನ್ನು ಸಮಗತಿಗಳಿಂದ ಕಾಲಾನುಸಾರವಾಗಿ ಹೊಂದುತ್ತಾ, ಮಕರರಾಶಿಗಳಲ್ಲಿ ಹಗಲಿರುಳುಗಳನ್ನು ದೀರ್ಘ, ಹ್ರಸ್ವ ಸಮಾನಗಳನ್ನಾಗಿ ಮಾಡುವನು. ಸೂರ್ಯನು ಮೇಷ, ತುಲಾರಾಶಿಗಳಲ್ಲಿ ಸಂಚರಿಸುವಾಗ ಹಗಲಿರುಳುಗಳ ಪ್ರಮಾಣವು ಸಮನಾಗಿರುವುದು. ವೃಷಭ, ಮಿಥುನ, ಕರ್ಕಾಟಕ, ಸಿಂಹ, ಕನ್ಯಾ ರಾಶಿಗಳಲ್ಲಿ ಸಂಚರಿಸುವಾಗ ಹಗಲುಗಳು ಮಾತ್ರವೇ ಬೆಳೆದು, ಪ್ರತಿ ತಿಂಗಳಲ್ಲಿಯೂ ರಾತ್ರಿಯಲ್ಲಿ ಒಂದೊಂದು ಗಳಿಗೆಯು ಕಡಿಮೆಯಾಗುವುದು. ವೃಶ್ಚಿಕ, ಧನಸ್ಸು, ಮಕರ, ಕುಂಭ ಮೀನಗಳೆಂಬ ರಾಶಿಯಲ್ಲಿ ಸುತ್ತುವಾಗ ಹಗಲಿರುಳುಗಳು ವ್ಯತ್ಯಾಸವಾಗುವುವು. ದಕ್ಷಿಣಾಯನದಲ್ಲಿ ಹಗಲು ಹೆಚ್ಚು, ರಾತ್ರಿ ಕಮ್ಮಿ. ಉತ್ತರಾಯಣದಲ್ಲಿ ರಾತ್ರಿ ಹೆಚ್ಚು ಹಗಲು ಕಮ್ಮಿ. ಹೀಗೆ ಸೂರ್ಯನು ಮಾನಸೋತ್ತರ ಪರ್ವತವನ್ನು ಸುತ್ತಲು ೯ ಕೋಟಿ ೫೧ ಲಕ್ಷ ಗಾವುದವಾಗುವುದು. ಇದನ್ನು ಸುತ್ತುವ ಕಾಲಕ್ಕೆ ಒಂದು ದಿನವು.

ಸೂರ್ಯನು ಎಲ್ಲಿ ಉದಯಿಸುವನೋ ಆ ಸ್ಥಳದ ಸಮರೇಖಾ ಸ್ಥಾನದಲ್ಲಿ ಮುಳುಗುವನು.

ಯೈರ್ಯತ್ರದೃಶ್ಯತೇ ಭಾಸ್ವಾನ್ ಸತೇಷಾ ಮುದಯಸ್ಮೃತಃ ॥ ಸೂರ್ಯನನ್ನು ಯಾರು ಎಲ್ಲಿ ಮೊದಲು ಕಾಣುವರೋ ಅವರಿಗೆ ಅಲ್ಲಿ ಸೂರ್ಯೋದಯವಾಯಿತೆಂದು ತಿಳಿಯಬೇಕು.

ನೈವಾಸ್ತಮನಮರ್ಕಸ್ಯ ನೋದಯಸ್ಸರ್ವದಾಸತಃ ॥ ಉದಯಾಽಸ್ತಮನಾಖ್ಯಂ ಹಿದರ್ಶಿನಾಽದರ್ಶನಂರವೇಃ ॥ ಸರ್ವದಾ ಪ್ರಕಾಶಿಸುತ್ತಿರುವ ಸೂರ್ಯನಿಗೆ ಉದಯಾಸ್ತ

ಮಾನಗಳಿಲ್ಲ. ಮೊದಲು ಸೂರ್ಯನನ್ನು ನೋಡುವುದು ಉದಯವೆಂತಲೂ, ಕಾಣದಿರುವಾಗ ಅಸ್ತವೆಂತಲೂ ತಿಳಿಯುವರು. ಹೀಗೆ ವೇದಮಯವಾದಂಥ ಸೂರ್ಯರಥವು ಒಂದು ಮುಹೂರ್ತಕ್ಕೆ ೩೬ ಲಕ್ಷ ೮ ನೂರು ಗಾವುದ ದೂರವುಳ್ಳ ಇಂದ್ರಾದಿ ನಾಲ್ಕು ಪಟ್ಟಣಗಳಲ್ಲಿಯೂ ಸಂಚರಿಸುತ್ತಿರುವುದು.

ಸೂರ್ಯರಥವರ್ಣನೆ :– ಶ್ಲೋ॥ ಯಸ್ಯಕಂಚಕ್ರಂ ದ್ವಾದಶಾರಂ ಷಣ್ಣೇಮಿ ತ್ರಿಣಾಭಿ ಸಂವತ್ಸರಾತ್ಮಕಂ ಸಮಾಮನಂತಿತಸ್ಯಾ ಕ್ಷೋಮೇರೋ ಮೂರ್ಧನಿಕೃತೋಮಾನಸೋತ್ತರೇ ಕೃತೇತರ ಭಾಗೋಯತ್ರ ಪ್ರೋತಂ ರವಿರಥಚಕ್ರಂ ತೈಲಯಂತ್ರ ಚಕ್ರವದ್ಭ್ರಮನ್ ಮಾನಸೋತ್ತರಗಿರೌ ಪರಿಭ್ರಮತಿ ॥

ಈ ಸೂರ್ಯ ರಥದ ಚಕ್ರಕ್ಕೆ ಚೈತ್ರಮಾಸಾದಿ ಹನ್ನೆರಡು ತಿಂಗಳು ಆರೇ ಕಾಲುಗಳು ವಸಂತಾದಿ ಆರು ಋತು ಆರು ಅಂಚುಗಳು. ಚಾತುರ್ಮಾಸ್ಯ (ಅಷಾಢಶುದ್ಧ ಏಕಾದಶಿಲಾಗಾಯ್ತು ಕಾರ್ತೀಕಶುದ್ಧ ಏಕಾದಶಿವರೆವಿಗೂ) ನಾಲ್ಕು ತಿಂಗಳುಗಳು ಮೂರು ಹೊಟ್ಟೆಗಳು. ಈ ಚಕ್ರಕ್ಕೆ ಸಂವತ್ಸರ ರೂಪವೆಂದು ಹೇಳುವರು. ಈ ಅಚ್ಚಿನ ಒಂದು ಭಾಗವು ಮಾನಸೋತ್ತರ ಪರ್ವತದ ಶಿಖರದಲ್ಲಿ ನೆಲಸಿರುವುದು. ಈ ಸೂರ್ಯ ರಥದ ಅಚ್ಚು ೨ ಕೋಟಿ ೫೭ ಲಕ್ಷ ಗಾವುದ ಉದ್ದವಿರುವುದು. ಪ್ರ॥ ಸಾರ್ಧಂಕೋಟಿದ್ವಯಂ ಪ್ರೋಕ್ತಂ ಸಪ್ತಲಕ್ಷಾಧಿಕಂತಥಾ। ರಥಾಕ್ಷರಸ್ಯರವೇರ್ಮೇ ರೋರ್ಮಾನಸೋತ್ತರವರ್ತಿನಃ ॥ ಈ ಅಚ್ಚಿನಲ್ಲಿ ಸೇರಿಸಲ್ಪಟ್ಟ ಒಂದು ಚಕ್ರವು ಗಾಣದ ಅಡ್ಡ ಮರದಂತೆ ಮಾನಸೋತ್ತರ ಪರ್ವತದ ಮೇಲೆ ಲಕ್ಷ ಯೋಜನ ಎತ್ತರದಲ್ಲಿ ತಿರುಗುತ್ತಿರುವುದು. ಇದು ಮೇರುವಿಗೆ ಸಮಾನವಾಗಿ ಉತ್ತರ ಭಾಗದಲ್ಲಿ ೧ ಕೋಟಿ ೫೭ ಲಕ್ಷ ೫೦ ಸಾವಿರ ಗಾವುದ ಉದ್ದವಾಗಿರುವುದು. ಈ ಚಕ್ರದ ತುದಿಗೆ ಪೂರ್ವ ಭಾಗಕ್ಕೆ ಸೇರಿಸಲ್ಪಟ್ಟ ಮತ್ತೊಂದು ಅಚ್ಚು ೩೯ ಲಕ್ಷ ೩೭ ಸಾವಿರ ೫ ನೂರು ಗಾವುದ ಉದ್ದವಾಗಿ ಗಾಣದ ಅಚ್ಚಿನಂತೆ ತುದಿಯ ಭಾಗವು ಧೃವಮಂಡಲದಲ್ಲಿ ತಗುಲಿಸಲ್ಪಟ್ಟಿದ್ದಾಗಿ ಸುತ್ತುತ್ತಿರುವುದು. ಈ ರಥದಲ್ಲಿ ಸೂರ್ಯನು ಕುಳಿತುಕೊಳ್ಳುವ ಸ್ಥಳವು ೩೬ ಲಕ್ಷ ಗಾವುದ ಎತ್ತರವಾಗಿಯೂ ೯ ಲಕ್ಷ ಗಾವುದ ವಿಸ್ತಾರವಾಗಿಯೂ ಇರುವುದು. ಈ ರಥಕ್ಕೆ ಬಿಗಿದಿರುವ ನೊಗವು ಕೂಡ ಅಷ್ಟೇ ಪ್ರಮಾಣವು. ಈ ನೊಗಕ್ಕೆ ವೇದದ ಹೆಸರುಗಳುಳ್ಳ ಏಳು ಕುದುರೆಗಳು ಕಟ್ಟಿರುವವು.

ಶ್ಲೋ॥ ಹಯಾಶ್ಚಸಪ್ತಛಂದಾಂಸಿತೇಷಾಂನಾಮಾನಿಮೇಶೃಣು । ಗಾಯತ್ರೀ ಚಬೃಹತ್ಯುಷ್ಣಿಕ್ ಜಗತೀ ತ್ರಿಷ್ಟುಪೇವಚ । ಅನುಷ್ಟುಪ್ಪಜ್ತ ರಿತ್ಯುಕ್ತಃ ಛಂದಾಂಸಿಹರಯೋರವೇಃ॥ ಏಳು ವೇದಗಳು ಯಾವುವೆಂದರೆ– ೧. ಗಾಯತ್ರೀ ೨. ಬೃಹಸ್ಪತಿ ೩. ಉಷ್ಣಿಕ್ ೪. ಜಗತಿ ೫. ತ್ರಿಷ್ಟುಪ್ ೬. ಅನುಷ್ಟುಪ್ ೭ ಪಜ್ತ ಈ ಏಳು ವೇದಗಳೇ ಸೂರ್ಯನ ಕುದುರೆಗಳು, ಈ ರಥವನ್ನು ಅರುಣನೇ ಸಾರಥಿಯಾಗಿ ನಡಿಸುವನು. ವಾಲಿಖಿಲ್ಯಾದಿ ೬೦ ಸಾವಿರ

ಮಂದಿ ಮಹಋಷಿಗಳು ಸೂರ್ಯನಮುಂದೆ ರಥದಲ್ಲಿ ಕುಳಿತುಕೊಂಡು ವೇದಗಳಿಂದ ಆತನನ್ನು ಹೊಗಳುತ್ತಿರುವರು. ಹೀಗೆ ಸೂರ್ಯನು ಒಂದು ಕ್ಷಣಕ್ಕೆ ೨ ಸಾವಿರ ೨೦೦ ಗಾವುದ ಸಂಚರಿಸುತ್ತಾ ಒಂದು ದಿನಕ್ಕೆ ಅಂದರೆ ೬೦ ಘಳಿಗೆಗೆ ೯ ಕೋಟಿ ೫೧ ಲಕ್ಷ ಗಾವುದ ವಿಸ್ತಾರವಾದ ಈ ಭೂಮಂಡಲವನ್ನು ಸುತ್ತುವನು.

ಸುಏಷಭಗವಾನಾದಿ ಪುರುಷ ಏವಸಾಕ್ಷಾನ್ನಾರಾಯಣೋ ಲೋಕಾನಾಂ ಸ್ವಸ್ತಯೇ ಆತ್ಮಾನಂತ್ರಯೀಮಯಂ ಕರ್ಮವಿಶುದ್ಧಿ ನಿಮಿತ್ತಂಕವಿಭಿರ ಪಿಚವೇದೇನವಿಜಜ್ಞಾಸ್ಯ ಮಾನೋದ್ವಾ ದಶಧಾವಿಭಜ್ಯಷಟ್ಸು ವಸಂತಾದಿಷು ಋತುಷುಯಥೋಪಜೋಷಮೃತುಗುಣಾನ್ ವಿದಧಾತಿ॥

ಹೀಗೆ ಜಗತ್ಕಾರಣನಾಗಿಯೂ ಸಾಕ್ಷಾನ್ನಾರಾಯಣ ಸ್ವರೂಪನಾಗಿಯೂ ಇರುವ ಈ ಸೂರ್ಯ ಭಗವಂತನು ವೇದಗಳಿಂದಲೂ ಮಂತ್ರದ್ರಷ್ಟೃಗಳಾದ ಮಹರ್ಷಿಗಳಿಂದಲೂ ತಿಳಿಯಲ್ಪಡತಕ್ಕವನಾದರೂ, ಲೋಕಾನುಗ್ರಹಕ್ಕಾಗಿ, ವೇದಸ್ವರೂಪನಾದ ತಾನು ಹನ್ನೆರಡು ಬಗೆಯಾಗಿ ವಿಭಾಗವಾಗಿ ಚೈತ್ರ ಮೊದಲಾದ ಹನ್ನೆರಡು ತಿಂಗಳಿಂದೊಡಗೂಡಿ ಆಯಾಯ ಕರ್ಮಫಲಭೋಗ್ಯಕ್ಕನುಸಾರವಾಗಿ, ಶೀತ, ವಾತ, ಆತಪಾದಿ ಋತು ಧರ್ಮಗಳನ್ನು ಆರು ಋತುಗಳಲ್ಲಿಯೂ, ಉಂಟುಮಾಡುವನು. ಈತನಿಗೆ ತ್ರಯಿಮಯನೆಂದು ಹೇಳುವರು. ಪ್ರ॥ ಋಚಃಸ್ತುವಂತಿ ಪೂರ್ವಾಹ್ನೇಮಧ್ಯಾಹ್ನೇಚಯಜೂಂಷಿಚ । ಬೃಹದ್ರಥಂತರಾದೀನಿ ಸಾಮಾನ್ಯಹುಃಕ್ಷಯೇರವೇಃ ॥ ಈ ಸೂರ್ಯನನ್ನು ಪ್ರಾತಃಕಾಲದಲ್ಲಿ ಋಗ್ವೇದವೂ, ಮಧ್ಯಾಹ್ನದಲ್ಲಿ ಯಜುರ್ವೇದವೂ, ಸಾಯಂಕಾಲದಲ್ಲಿ ಸಾಮವೇದವೂ, ಸ್ತೋತ್ರ ಮಾಡುವುದರಿಂದ ಈತನಿಗೆ ತ್ರಯಿಮಯನೆಂದು ಹೆಸರಾಯಿತು.

೨. ಚಂದ್ರಮಂಡಲ – ಸೂರ್ಯಕಿರಣ ಮಂಡಲಕ್ಕೆ ಲಕ್ಷ ಯೋಜನ ಎತ್ತರದಲ್ಲಿ ಚಂದ್ರನು ಸಂಚರಿಸುತ್ತಾನೆ. ಸೂರ್ಯನು ಒಂದು ಸಂವತ್ಸರದಲ್ಲಿ ಸಂಚರಿಸುವಷ್ಟು ದಾರಿಯನ್ನು ಚಂದ್ರನು ತಿಂಗಳಲ್ಲಿಯೂ, ತಿಂಗಳಲ್ಲಿ ಸಂಚರಿಸುವಷ್ಟು ದಾರಿಯನ್ನು ಎರಡೂಕಾಲು ನಕ್ಷತ್ರಗಳು ಸಂಚರಿಸುಷ್ಟು ಕಾಲದಲ್ಲಿಯೂ ಒಂದು ಪಕ್ಷದಲ್ಲಿ ಸಂಚರಿಸುವಷ್ಟು ಕಾಲವನ್ನು ಒಂದು ದಿನದಲ್ಲಿಯೂ ಸಂಚರಿಸುವನು.

ಸಕಲ ಜೀವರಾಶಿಗಳಿಗೆ ಅನ್ನರೂಪನಾಗಿಯೂ, ಅಮೃತರೂಪನಾಗಿಯೂ ಇರುವ ಚಂದ್ರನು ವೃದ್ಧಿಯನ್ನು ಪಡೆಯುವ ತನ್ನ ಕಳೆಗಳಿಂದ ಶುಕ್ಲಪಕ್ಷದಲ್ಲಿ ದೇವತೆಗಳಿಗೆ ಹಗಲಿರುಳನ್ನು, ಕುಂದುವ ತನ್ನ ಕಳೆಗಳಿಂದ ಪಿತೃದೇವತೆಗಳಿಗೆ ಹಗಲಿರುಳನ್ನು ಮಾಡುತ್ತಾ ೩೦ ಮೂಹೂರ್ತಗಳ ಕಾಲದಿಂದ ಒಂದೊಂದು ನಕ್ಷತ್ರವನ್ನು ಸಂಚರಿಸುವನು.

ಯಏಷಷೋಡಶಕಲಃ ಪುರುಷೋಭಗವಾನ್ ಮನೋಮಯೋऽನ್ನ ಮಯೋऽಮೃತಮಯೋದೇವಪಿತೃ ಮನುಷ್ಯ ಭೂತಪಶುಪಕ್ಷಿಸರೀಸೃಪವೀರುಧಾಂ ಪ್ರಾಣಾಪ್ಯಾಯನ ಶೀಲತ್ವಾತ್ಸರ್ವಮಯಇತಿ ॥ ಹೀಗೆ ಷೋಡಶ ಕಲೆಗಳಿಂದ ಕೂಡಿದ ಭಗವಂತ ಸ್ವರೂಪನಾದ ಚಂದ್ರನು ಮನೋಭಿಮಾನಿಯೂ, ಅನ್ನಸ್ವರೂಪನೂ, ಅಮೃತಸ್ವರೂಪನೂ, ದೇವ, ಪಿತೃ, ಮನುಷ್ಯ, ಭೂತ, ಪಶು, ಪಕ್ಷಿ,ಸರ್ಪ ವೃಕ್ಷಲತೆಗಳಿಗೆ ಪ್ರಾಣಗಳನ್ನು ಕೊಟ್ಟು ಅಪ್ಯಾಯನಗೊಳಿಸುವವನಾದ್ದರಿಂದ ಈತನಿಗೆ ಸರ್ವಾತ್ಮಕನೆಂದು ಹೇಳುವರು.

೩. **ನಕ್ಷತ್ರಮಂಡಲ** – ಚಂದ್ರಮಂಡಲದಲ್ಲಿ ೩ ಲಕ್ಷ ಯೋಜನಗಳ ಮೇಲ್ಗಡೆ ಇರುತ್ತದೆ.

೪. **ಶುಕ್ರಗ್ರಹಮಂಡಲ** – ಇದು ನಕ್ಷತ್ರಮಂಡಲಕ್ಕೆ ೨ ಲಕ್ಷ ಯೋಜನಗಳ ಎತ್ತರದಲ್ಲಿರುತ್ತದೆ. ಇದು ಸೂರ್ಯನ ಸಂಗಡಲೇ ಸಂಚರಿಸುವುದು. ಈ ಗ್ರಹವು ಲೋಕಕ್ಕೆ ಶುಭ ಫಲಗಳನ್ನೇ ಕೊಡುತ್ತದೆ.

೫. **ಬುಧಗ್ರಹಮಂಡಲ** – ಈ ಬುಧನು ಶುಕ್ರಗ್ರಹನ ಮಂಡಲಕ್ಕೆ ೨ ಲಕ್ಷ ಯೋಜನ ಎತ್ತರದಲ್ಲಿ ಸಂಚರಿಸುವನು. ಬುಧನು ಸೂರ್ಯನಿಗಿಂತ ದೂರ ಯಾವಾಗ ಸಂಚರಿಸುತ್ತಾನೋ ಆಗ ಲೋಕದಲ್ಲಿ ಬಹಳ ಬಿರುಗಾಳಿಯೂ, ಒಣಮೋಡವೋ ಅನಾವೃಷ್ಟಿಯೂ ಉಂಟಾಗುವುವು.

೬. **ಅಂಗಾರಕ ಗ್ರಹಮಂಡಲ** – ಈ ಅಂಗಾರಕನು ಬುಧಗ್ರಹ ಮಂಡಲಕ್ಕೆ ಎರಡುಲಕ್ಷ ಗಾವುದ ಎತ್ತರದಲ್ಲಿ ೪೦ ದಿನಕ್ಕೆ ಒಂದು ರಾಶಿಯಂತೆ ೧೨ ರಾಶಿಗಳನ್ನೂ ಸಂಚರಿಸುವನು. ಈ ಗ್ರಹವು ಬಹಳವಾಗಿ ಅಶುಭಕರವು. ಇದು ವಕ್ರಗತಿಯನ್ನು ಹೊಂದಿದಾಗ ಲೋಕಕ್ಕೆ ಕಷ್ಟವೂ ಅರಿಷ್ಟವೂ ಖಂಡಿತ.

೭. **ಬೃಹಸ್ಪತಿ ಗ್ರಹಮಂಡಲ** – ಈ ಬೃಹಸ್ಪತಿಯು ಅಂಗಾರಕ ಗ್ರಹಮಂಡಲಕ್ಕೆ ೨ ಲಕ್ಷ ಗಾವುದ ಎತ್ತರದಲ್ಲಿ ೧ ಸಂವತ್ಸರಕ್ಕೆ ಒಂದು ರಾಶಿಯಂತೆ ೧೨ ರಾಶಿಗಳನ್ನು ಸುತ್ತುವನು. ಈತನು ವಕ್ರಗತಿಯನ್ನು ಪಡೆಯದಿದ್ದರೆ ಬ್ರಾಹ್ಮಣರಿಗೆ ಶುಭವು.

೮. **ಶನೈಶ್ಚರ ಗ್ರಹಮಂಡಲ** – ಶನೈಶ್ಚರನು ಬೃಹಸ್ಪತಿ ಗ್ರಹಮಂಡಲಕ್ಕೆ ೨ ಲಕ್ಷ ಯೋಜನ ಎತ್ತರದಲ್ಲಿ ೩೦ ತಿಂಗಳಿಗೆ ಒಂದು ರಾಶಿಯಂತೆ ೧೨ ರಾಶಿಗಳನ್ನು ೩೦ ವರ್ಷಗಳಿಗೊಂದು ಸಲ ಸುತ್ತುವನು. ಈ ಗ್ರಹವು ಸಾಮಾನ್ಯವಾಗಿ ಸರ್ವರಿಗೂ ಅಶುಭಪ್ರದವು.

೯. ಸಪ್ತರ್ಷಿ ಮಂಡಲ – ಈ ಸಪ್ತಋಷಿಮಂಡಲವು ಶನೈಶ್ಚರ ಗ್ರಹಮಂಡಲಕ್ಕೆ ೧೧ ಲಕ್ಷ ಗಾವುದ ಎತ್ತರದಲ್ಲಿರುವುದು. ಇಲ್ಲಿ ಈ ಮಹಋಷಿಗಳು ಸಕಲ ಲೋಕಗಳಿಗೂ ಕ್ಷೇಮವನ್ನು ಬಯಸುವವರಾಗಿ ಭಗವಂತನಾದ ಶ್ರೀ ಮಹಾವಿಷ್ಣುವಿನ ಪರಮಪದವನ್ನು ಪ್ರದಕ್ಷಿಣವಾಗಿ ಸುತ್ತುತ್ತಿರುವರು.

೧೦. ಧೃವಮಂಡಲ – ಈ ಮಂಡಲವು ಸಪ್ತಋಷಿಮಂಡಲಕ್ಕಿಂತ ೧೩ ಲಕ್ಷ ಗಾವುದ ಮೇಲ್ಗಡೆ ಇರುತ್ತದೆ. ಇಲ್ಲಿ ಭಾವತೋತ್ತಮನಾದ ಉತ್ತಾನಪಾದರಾಯನ ಮಗನಾದ ಧೃವರಾಯನು, ಬಹು ಕಲ್ಪಗಳವರೆಗೂ ಜೀವಿಸುವ ಚಿರಂಜೀವಿಗಳಿಗೆ ಆಶ್ರಯವೆನಿಸಿ ಇವತ್ತಿಗೂ ಸಹ ಸರ್ವೋತ್ತಮನಾಗಿ ಪ್ರಕಾಶಿಸುತ್ತಿರುವನು. ಸೂರ್ಯಾದಿಗ್ರಹಗಳೂ, ನಕ್ಷತ್ರಮಂಡಲಗಳೂ ಸಹ ಈ ಕಾಲಚಕ್ರದ ಒಳಗೂ ಹೊರಗೂ ಭಗವಂತನಿಂದ ತಗುಲಿಸಲ್ಪಟ್ಟವುಗಳಾಗಿ ಗಗನ ಮಧ್ಯದಲ್ಲಿರುವ ಈ ಧೃವನನ್ನು ಅವಲಂಬಿಸಿ, ವಾಯುಪಾಶದಿಂದ ಸೆಳೆಯಲ್ಪಟ್ಟವುಗಳಾಗಿ, ಕಲ್ಪಾಂತರದ ವರೆವಿಗೂ ಅವನ್ನು ಸುತ್ತುತ್ತಿರುವುವು.

೧೧. ಶಿಂಶುಮಾರ ಚಕ್ರ – ಈ ಚಕ್ರದಲ್ಲಿಯೇ ಗ್ರಹನಕ್ಷತ್ರಾದಿ ಸಮಸ್ತ ಮಂಡಲವೂ ನಿಂತಿರುವುದು. ಚಕ್ರಸ್ವರೂಪನಾದ ಭಗವಂತನ ಯೋಗಶಕ್ತಿಯೇ ಇದಕ್ಕೆ ಕಾರಣವು. ಈ ಚಕ್ರಸ್ವರೂಪನಾದ ಭಗವಂತನನ್ನು ಯಾವ ಪುರುಷನು ಪ್ರತಿ ದಿನವೂ ತ್ರಿಕಾಲದಲ್ಲಿಯೂ ಮೌನವನ್ನು ಧರಿಸಿ ನಿಯಮಯುಕ್ತನಾಗಿ ಉಪಾಸನೆ ಮಾಡುತ್ತಾ ಅಂದರೆ- ಸಕಲ ಗ್ರಹಮಂಡಲಗಳಿಗೂ ಆಶ್ರಯನಾಗಿಯೂ, ಕಾಲಚಕ್ರಸ್ವರೂಪನಾಗಿಯೂ, ದೇವತೆಗಳಿಗೆ ಒಡೆಯನಾಗಿಯೂ ಇರುವ ಪರಮಪುರುಷನಿಗೆ ನಮಸ್ಕಾರ ಎಂಬುದಾಗಿ ಜಪಿಸುವನೋ ಅಂಥವನಿಗೆ ಆಯಾಯ ದಿನದ ಪಾಪವು ಕಳೆದು ಹೋಗುವುದು.
ಪ್ರ ॥ ಗ್ರಹರ್ಕ್ಷತಾರಾಮಯಮಾಧಿದೈವಿಕಂಪಾಪಾಽಪಹಂಮಂತ್ರಕೃತಾಂತ್ರಿಕಾಲಂ ॥ ನಮಸ್ಯತಃಸ್ಮರತೋರಾತ್ರಿಕಾಲಂನಶ್ಯೇತತತ್ಕಾಲಜಮಾಶುಪಾಪಂ ॥

೧೨. ರಾಹುಗ್ರಹಮಂಡಲ – ಈ ರಾಹುಗ್ರಹಮಂಡಲವು ಸೂರ್ಯಗ್ರಹಮಂಡಲಕ್ಕಿಂತ ೧೦ ಸಾವಿರ ಗಾವುದ ಕೆಳಗಿರುವುದು.ಈ ರಾಹುವು ಸಿಂಹಿಕೆ ಪುತ್ರನಾಗಿಯೂ, ರಾಕ್ಷಸಾಧಮನಾಗಿಯೂ, ದೇವಭಾವಕ್ಕೆ ಅಯೋಗ್ಯನಾಗಿದ್ದರೂ, ಭಗವದನುಗ್ರಹದಿಂದ ದೇವತ್ವವನ್ನೂ ಗ್ರಹಭಾವವನ್ನೂ ಸಹ ಪಡೆದಿರುವನು. ಈ ಮಂಡಲವು ೧೩ ಸಾವಿರ ಗಾವುದ ವಿಸ್ತಾರವು. ರಾಹು–ಕೇತುಗಳು ಯಾರೆಂದರೆ–ವಿಷ್ಣುವು ಮೋಹಿನೀ ರೂಪದಿಂದ ರಾಕ್ಷಸರನ್ನೂ, ದೇವತೆಗಳನ್ನೂ ಸಾಲಾಗಿ ಕೂಡಿಸಿ ಅಮೃತವನ್ನು ಬಡಿಸುತ್ತಿರುವಾಗ ಸೂರ್ಯ-ಚಂದ್ರರು ಸಿಂಹಕೇಯನು(ರಾಹುವು) ರಾಕ್ಷಸನೆಂದು ಸನ್ನೆಯಿಂದ ಹೇಳಲು ವಿಷ್ಣು ಅದೇ

ಸೌಟಿನಿಂದ ಕಂಠವನ್ನು ಕತ್ತರಿಸಿದನು. ಅಷ್ಟರಲ್ಲಿ ಆತನು ಅಮೃತವನ್ನು ಪಾನಮಾಡಿದ್ದುದರಿಂದ ಮುಂಡರುಂಡಗಳು ಬೇರೆಬೇರೆಯಾಗಿಯೇ ಬದುಕಿಕೊಂಡವು. ಆ ಮುಂಡರಂಡಗಳೇ ರಾಹು ಕೇತುಗಳು. ಈ ದ್ವೇಷದಿಂದ ಸೂರ್ಯ ಚಂದ್ರರನ್ನು ಪರ್ವಕಾಲದಲ್ಲಿ ಅಗಲಿಸಲು ಎದುರುಗಟ್ಟಿ ಹೋಗುವನು. ಈ ರಾಹುವಿನಿಂದ ಸೂರ್ಯ ಚಂದ್ರರಿಗೆ ಉಂಟಾಗುವ ಬಾಧೆಯನ್ನು ತಡೆಯಲು ಭಗವಂತನಾದ ಶ್ರೀಹರಿಯು ತನ್ನ ಸುದರ್ಶನಾಸ್ತ್ರದಿಂದ ಪ್ರಯೋಗಿಸುವನು. ಈ ಚಕ್ರಾಯುಧದ ಎದುರಿಗೆ ಸ್ವಲ್ಪಹೊತ್ತು ನಿಂತು ತಡೆಯಲಾರದೆ ಮನಗುಂದಿ ಮರಣ ಭಯದಿಂದ ದೂರವಾಗಿ ಓಡಿಹೋಗುವನು. ಹೀಗೆ ಸೂರ್ಯ ಚಂದ್ರರನ್ನು ಮರೆಗೊಳಿಸುವುದಕ್ಕೆ ಗ್ರಹಣವೆಂದು ಹೆಸರು. ಈ ಗ್ರಹದ ಗತಿಭೇದದಿಂದ ಪೂರ್ಣಗ್ರಾಸ-ಅರ್ಧಗ್ರಾಸ ಮೊದಲಾದ ಭೇದಗಳಾಗುವುವು.

ಈ ರಾಹು ಮಂಡಲಕ್ಕಿಂತ ೧೦ ಸಾವಿರ ಗಾವುದ ಕೆಳಗೆ ಸಿದ್ಧ, ಚಾರಣ, ವಿದ್ಯಾಧರರ ಸ್ಥಾನಗಳೂ ಅದರ ಕೆಳಗೆ ಯಕ್ಷ, ರಾಕ್ಷಸ, ಪಿಶಾಚ ಪ್ರೇತ ಭೂತಗಣಗಳ ವಿಹಾರಸ್ಥಾನವಾದ ಅಂತರಿಕ್ಷವಿರುವುದು. ಎಲ್ಲಿಯವರೆಗೆ ಗಾಳಿಬೀಸುವುದೋ, ಎಲ್ಲಿಯವರೆಗೆ ಮೋಡಗಳು ಕಾಣುವವೋ, ಅಲ್ಲಿಯವರೆಗೆ ಅಂತರಿಕ್ಷವೆಂದು ಹೆಸರು. ಈ ಅಂತರಿಕ್ಷಕ್ಕೆ ೧೦೦ ಗಾವುದ ಕೆಳಗೆ ಭೂಮಿ ಇರುವುದು. ಹಂಸಗಳು, ಹದ್ದು, ಗರುಡ ಮೊದಲಾದ ಪಕ್ಷಿಗಳು ಎಲ್ಲಿಯವರಿಗೆ ಹಾರಬಲ್ಲವೋ, ಅಲ್ಲಿಯವರಿವಿಗೂ ಭೂಮಿಯೆಂದೇ ತಿಳಿಯಬೇಕು.

ಖಗೋಳ ಪ್ರಕರಣ ಸಂಪೂರ್ಣವು.

೧೪. ದ್ವೀಪ ಪ್ರಕರಣ (ಭೂವಲಯ ವರ್ಣನೆ)

ಸಂಪುಟ ೬, ಸಂಚಿಕೆ ೩ ಶ್ರೀಮುಖ ಜ್ಯೇಷ್ಠ ಜೂನ್ ೧೯೩೩

ಪೃಥಿವ್ಯಾದಿ ಪಂಚಭೂತಗಳಿಗೂ ನಿಯಾಮಕನಾದವನೇ ! ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಶಬ್ದಾದಿ ಪಂಚವಿಷಯ, ಮನಸ್ಸೆಂಬ ಹದಿನಾರು ಅಂಗಗಳುಳ್ಳವನೇ! ವೇದೋಕ್ತ ಕರ್ಮಗಳಿಂದ ಪ್ರಾಪ್ಯನಾದವನೇ ! ಮನಶ್ಯಕ್ತಿರೂಪನೇ ಇಂದ್ರಿಯಶಕ್ತಿ, ಶರೀರ ಶಕ್ತಿರೂಪನೇ! ಪರಮಪ್ರಿಯನೇ ! ಭಕ್ತರಲ್ಲಿ ಪೂರ್ಣಪ್ರೀತಿಯುಳ್ಳವನೇ ! ಭಗವಂತನೇ ! ಸರ್ವ ಕಡೆಗಳಲ್ಲಿಯೂ ನಿನಗೆ ನಮಸ್ಕಾರವು.

ಎಲೈ ! ಭಗವಂತನೇ ! ಲೋಕದಲ್ಲಿ ಸ್ತ್ರೀಯರು ಸಹಜವಾಗಿಯೂ ಸಕಲೇಂದ್ರಿಯಗಳಿಗೂ ಒಡೆಯನಾಗಿ ಕಾಮಸ್ವರೂಪನಾಗಿರುವ ನಿನ್ನನ್ನು ವ್ರತಗಳಿಂದ ಆರಾಧಿಸಿ ಬೇರೆ ಪತಿಯನ್ನು ಬೇಡಿಕೊಳ್ಳುವರು. ಆ ಪತಿಯಾದರೂ ಪರತಂತ್ರನಾದುದರಿಂದ ಆ ಸ್ತ್ರೀಯರಿಗೆ ಇಷ್ಟಗಳಾದ ಧನ, ಆಯುಷ್ಯಗಳನ್ನಾಗಲೀ, ಪುತ್ರ ಸಂತಾನಾದಿಗಳನ್ನಾಗಲೀ ಕೊಟ್ಟು ಸಲಹಲಾರನು. ಆದ್ದರಿಂದ ನಿನ್ನನ್ನು ಯಾರು ನಿಷ್ಕಾಮದಿಂದ ಭಜಿಸುವರೋ ಅವರೇ ಧನ್ಯರೇ ಹೊರತು ಫಲಾಪೇಕ್ಷೆಯಿಂದ ಭಜಿಸುವರು ಎಂದಿಗೂ ಪೂರ್ಣ ಮನೋರಥವನ್ನು ಪಡೆಯಲಾರರು. ಯಾವ ಪುರುಷನು ಯಾರಿಂದಲೂ ಭಯವಿಲ್ಲದಂತೆ ಭಯಗ್ರಸ್ತರನ್ನು ನಿರುಪದ್ರವವಾಗಿ ರಕ್ಷಿಸಬಲ್ಲನೊ ಆತನೇ ಪತಿಯೇ ಹೊರತು ಮತ್ತೊಬ್ಬನಲ್ಲ. ನೀನಾದರು ಆತ್ಮಲಾಭಕ್ಕಿಂತಲೂ ಮತ್ತಾವುದನ್ನೂ ಅಧಿಕವೆಂದು ತಿಳಿಯದೆ ಸ್ವತಂತ್ರನಾಗಿರುವುದರಿಂದ ಅಂತಹ ಗುಣಯುಕ್ತನಾದ ಪತಿಯು ನೀನೊಬ್ಬನೇ ಸರಿ ಎಂಬುದಾಗಿ ಲಕ್ಷ್ಮೀದೇವಿಯು ಭಗವಂತನನ್ನು ಸ್ತುತಿಸುತ್ತಿರುವಳು.

೭. ರಮ್ಯಕಖಂಡ :– ಈ ಖಂಡದಲ್ಲಿ ಇದಕ್ಕೆ ಅಧಿಪತಿಯಾದ ಮನುಸಾರ್ವಭೌಮನು ತನಗೆ ಭಗವಂತನು ಯಾವ ಮತ್ಸ್ಯಾವತಾರದಿಂದ ದರ್ಶನವನ್ನು ಕೊಟ್ಟನೋ ಅಂಥಾ ಪ್ರಿಯತಮವಾದ ಮತ್ಸ್ಯರೂಪವನ್ನು ಅತ್ಯಂತ ಭಕ್ತಿಯಿಂದ ಆರಾಧಿಸುತ್ತಾ ಈ ಕೆಳಗೆ ಕಂಡ ಮಂತ್ರವನ್ನು ಜಪಿಸುತ್ತಿರುವನು.

"ಓಂ ನಮೋಭಗವತೇ ಮುಖ್ಯತಮಾಯನಮಃ ಸತ್ತ್ವಾಯಪ್ರಾಣಾ ಯೌಜಸೇಸಹಸೇ ಬಲಾಯಮಹಾಮತ್ಸ್ಯಾಯನಮ ಇತಿ!!" ಅಂದರೆ :- ಷಡ್ಗುಣೈಶ್ವರ್ಯ ಸಂಪನ್ನನೂ, ಸತ್ವಗುಣಪ್ರಧಾನನೂ, ಇಂದ್ರಿಯಶ್ಯಕ್ತಿ, ಮನಶ್ಯಕ್ತಿ, ದೇಹಶಕ್ತಿರೂಪನೂ, ಅತಿ ಪ್ರಮಾಣವಾದ ಶರೀರವುಳ್ಳವನೂ, ಪ್ರಥಮಾವತಾರರೂಪನೂ, ಆದ ನಿನಗೆ ನಮಸ್ಕಾರಗಳು. ಎಲೈ! ಭಗವಂತನೇ! ನೀನು ಇಂದ್ರಾದಿ ಸರ್ವಲೋಕಪಾಲಕರಿಗೂ ಅದೃಶ್ಯನೆನಿಸಿ, ಸರ್ವಾಂತರ್ಯಾಮಿಯಾಗಿದ್ದರೂ, ವೇದರೂಪನಾದ ಶಬ್ದವುಳ್ಳವನಾಗಿ ಮತ್ಸ್ಯರೂಪದಿಂದ ಸಂಚರಿಸುವೆ. ನೀನು ಲೋಕೇಶ್ವರನಾಗಿರುವೆ. ಈ ಜಗತ್ತಿಗೆ ಪಾಲಕನಾಗಿರುವೆ. ಮತ್ತು :- ಭವಾನ್‌ಯುಗಾಂತಾऽರ್ಣವ ಊರ್ಮಿಮಾಲಿನಿಕ್ಷೋಣೀ ಮಿಮಾಮೋಷಧಿ ವೀರುಧಾಂನಿಧಿಂ। ಮಯಾಸಹೋರುಕ್ರಮತೇऽಜ ಓಜಸಾತಸ್ಮೈ ಜಗತ್ಪ್ರಾಣಗಣಾತ್ಮನೇ ನಮಃ॥

ಎಲೈ ಜನ್ಮಾದಿರಹಿತನೇ ! ಸಕಲೌಷಧಿಗಳಿಗೂ ಆಶ್ರಯವೆನಿಸಿರುವ ಭೂಮಿಯು ಪಾತಾಳದಲ್ಲಿ ಮುಳುಗಿ ಹೋಗಲು ಅದನ್ನು ಉದ್ಧರಿಸುವುದಕ್ಕಾಗಿ ನೀನು ನನ್ನೊಡನೆ ಯಾವ ಉಲ್ಲೋಲಕಲ್ಲೋಲವಾದ ಪ್ರಳಯ ಜಲರಾಶಿಯಲ್ಲಿ ನಿನ್ನ ನಿಜ ಮಹಿಮೆಯಿಂದ ಸಂಚರಿಸುತ್ತಿರುವೆಯೋ ಅಂತಹ ಸಕಲ ಜಗನ್ನಿಯಾಮಕನಾದ ನಿನಗೆ ನಮಸ್ಕಾರವು ಎಂಬುದಾಗಿ ಭಗವಂತನನ್ನು ಕೊಂಡಾಡುತ್ತಿರುವನು.

೮. ಹಿರಣ್ಮಯಖಂಡ – ಈ ಖಂಡದಲ್ಲಿ ಭಗವಂತನು ಮಹಾ ಕೂರ್ಮರೂಪವನ್ನು ಧರಿಸಿ ನೆಲಸಿರುವನು. ಅಲ್ಲಿರುವ ಪಿತೃಗಣಗಳಿಗೆ ಅಧಿಪತಿಯಾದ ಆರ್ಯಮನು ಆ ಪುರುಷರೊಡನೆ ಭಗವಂತನಿಗೆ ಅತ್ಯಂತ ಪ್ರಿಯವಾದ ಆ ಕೂರ್ಮರೂಪವನ್ನು ಆರಾಧಿಸುತ್ತಿರುವನು. ಪ್ರ॥ಹಿರಣ್ಮಯೇಪಿಭಗವಾನ್‌ನಿವಸತಿ ಕೂರ್ಮತನುಂ ಬಿಭ್ರಾಣಸ್ತಸ್ಯತತ್ಪ್ರಿಯತಮಾಂತ ನುಮರ್ಯಮಾಸಹವರ್ಷಪುರಷೈಃ ಪಿತೃಗಣಾಧಿಪತಿರು ಪಧಾವತಿಮಂತ್ರ ಮಿಮಾಂಚಾऽನುಜಪತಿ ॥ ಮತ್ತು ಈ ಕೆಳಗೆ ಕಂಡ ಮಂತ್ರವನ್ನು ಜಪಿಸುತ್ತಿರುವನು. "ಓಂ ನಮೋಭಗವತೇ ಆಕೂಪಾರಾಯ ಸರ್ವಸತ್ವಗುಣ ವಿಶೇಷಣಾಯऽನುಪಲಕ್ಷಿತಸ್ಥಾ ನಾಯನಮೋವರ್ಷ್ಮಣೇ ನಮೋಭೂಮ್ನೇ ನಮೋನಮೋऽವಸ್ಥಾನಾಯನಮಸ್ತೇ" ಅಂದರೆ– ಸಕಲ ಸತ್ವಗುಣಗಳಿಗೂ ಆಶ್ರಯನಾಗಿಯೂ, ಇತರರಿಂದ ತಿಳಿಯಲ್ಪಡದ ಸ್ಥಾನವುಳ್ಳವನಾಗಿಯು ಸರ್ವಶ್ರೇಷ್ಠನೂ, ಆದಿಮಧ್ಯಾಂತರಹಿತನೂ, ಸರ್ವಾಶ್ರಯನೂ, ಭಗವಂತನೂ ಆದ ಕೂರ್ಮಮೂರ್ತಿಯೇ ! ನಿನಗೆ ನಮಸ್ಕಾರವು ಎಂಬುದಾಗಿ ಸರ್ವದಾ ಜಪಿಸುತ್ತಿರುವನು.

೯. ಕುರುಖಂಡ – ಈ ಖಂಡದಲ್ಲಿ ಯಜ್ಞಪುರುಷನಾದ ಭಗವಂತನು ವರಾಹ ರೂಪದಿಂದಿರುವನು. ಇಲ್ಲಿ ಭೂದೇವಿಯು ಈ ದೇಶದವರೊಡನೆ ಕೂಡಿ ಅಚಂಚಲವಾದ

ಭಕ್ತಿಯೋಗದಿಂದ ಈ ವರಾಹಮೂರ್ತಿಯನ್ನು ಉಪಾಸನೆಗೈಯುತ್ತಾ ಈ ಕೆಳಗೆ ಕಂಡ ಮಂತ್ರವನ್ನು ಜಪಿಸುತ್ತಿರುವಳು. "ಓಂ ನಮೋಭಗವತೇ ಮಂತ್ರತತ್ವಲಿಂಗಾಯ ಯಜ್ಞಕ್ರತವೇ ಮಹಾಽಧ್ವರಾಽದಯ ವಾಯಮಹಾಪುರುಷಾಯ ನಮಃ ಕರ್ಮಶುಕ್ಲಾ ಯತ್ರಿಯುಗಾಯ ನಮಸ್ತೇ॥" ಅಂದರೆ :- ಮಂತ್ರಗಳಿಂದ ತತ್ವಸ್ವರೂಪನಾಗಿ ಹುಡುಕಲ್ಪಡುವ ಯಜ್ಞ, ಕ್ರತುಗಳ ಸ್ವರೂಪನೆನಿಸಿದ ಅವುಗಳೇ ಅವಯವಗಳಾಗಿವುಳ್ಳ ಯಜ್ಞಾನುಷ್ಠಾತೃವಾದ, ಯುಗತ್ರಯ ಸ್ವರೂಪನಾದ ಮಹಾ ಪುರುಷನಾದ ನಿನಗೆ ನಮಸ್ಕಾರವು ಮತ್ತು -

ಪ್ರಮಥ್ಯದೈತ್ಯಂಪ್ರತಿವಾರಣಂ ಮೃಧೇಯೋಮಾಂರಸಾಯಾಜಗದಾದಿಸೂಕರಃ। ಕೃತ್ವಾಗ್ರದಂಷ್ಟ್ರೇನಿರಗಾದುದನ್ವತಃ ಕ್ರೀಡನ್ನಿವೇಭಃಪ್ರಣತಾಸ್ಮಿತಂವಿಭುಂ॥ ಜಗತ್ಕಾರಣಭೂತನಾದ ಯಾವ ವರಾಹಮೂರ್ತಿಯು ನನ್ನನ್ನು ಕೋರೆದಾಡೆಯ ತುದಿಯಲ್ಲೆತ್ತಿಕೊಂಡು ಪಾತಾಳದಿಂದ ಹೊರಟು, ಪ್ರಳಯಪಯೋಧಿಯಿಂದ ಮದಗಜದಂತೆ ಯುದ್ಧಕ್ಕಾಗಿ ನುಗ್ಗಿ ಹಿರಾಣ್ಯಾಕ್ಷನೆಂಬ ದೈತ್ಯನನ್ನು ಕೊಂದು ನನ್ನನ್ನು ಉದ್ಧರಿಸಿದನೋ ಅಂತಹ ವರಾಹಮೂರ್ತಿಯಾದ ನಿನಗೆ ನಮಸ್ಕಾರವು ಎಂಬುದಾಗಿ ಪರಮಾತ್ಮನನ್ನು ಕೊಂಡಾಡುತ್ತಿರುವಳು.

ಈ ಜಂಬೂದ್ವೀಪದಲ್ಲಿ ೮ ಉಪದ್ವೀಪಗಳಿರುವುವು ಯಾವುದೆಂದರೆ:- ೧.ಸುವರ್ಣಪ್ರಸ್ಥ, ೨. ಚಂದ್ರಶುಕ್ಲ ೩. ಆವರ್ತಕ ೪. ರಮಣಕ ೫. ಮಂದರಹರಿಣ ೬. ಪಾಂಚಜನ್ಯ ೭.ಸಿಂಹಳ ೮. ಲಂಕಾ.

೨. ಪ್ಲಕ್ಷ ದ್ವೀಪ:- ಈ ದ್ವೀಪದಲ್ಲಿ ಬಂಗಾರದ ಬಸರೀಗಿಡವು ಇರುವುದರಿಂದ ಇದಕ್ಕೆ ಪ್ಲಕ್ಷದ್ವೀಪವೆಂದು ಹೆಸರಾಯಿತು. ಈ ಗಿಡವು ೧ ಸಾವಿರ ೧೦೦ ಗಾವುದ ಪ್ರಮಾಣವು. ಈ ಗಿಡದ ಬುಡದಲ್ಲಿ ಏಳು ನಾಲಗೆಗಳುಳ್ಳ ಅಗ್ನಿಯು ಇರುವನು. ಈ ದ್ವೀಪಕ್ಕೆ ಪ್ರಿಯ ವ್ರತರಾಜನ ಮಗನಾದ ಇಧ್ಮಜಿಹ್ವನು ಒಡೆಯನು. ಈತನು ತನ್ನ ಪಾಲಿಗೆ ಬಂದ ಏಳು ಖಂಡಗಳನ್ನು ತನ್ನ ಏಳು ಮಂದಿ ಮಕ್ಕಳಿಗೂ ಹಂಚಿಕೊಟ್ಟು ತಾನು ಪರಮಾತ್ಮನ ಉಪಾಸನೆ ಮಾಡುತ್ತಾ ಮುಕ್ತನಾದನು.

ಇಧ್ಮಜಿಹ್ವನ ಮಕ್ಕಳು ಯಾರೆಂದರೆ:- ೧.ಶಿವ ೨. ಯಶಸ್ಯ ೩. ಸುಭದ್ರ ೪.ಶಾಂತ ೫. ಕ್ಷೇಮ ೬. ಅಮೃತ ೭. ಅಭಯ ಈ ಹೆಸರಿನ ಖಂಡಗಳನ್ನೇ ಇವರುಗಳು ಈ ಹೆಸರಿನಿಂದ ಒಡೆಯರಾಗಿ ಆಳಿದರು. ಈ ಏಳು ವರ್ಷಗಳಲ್ಲಿಯೂ ಏಳು ಪರ್ವಗಳೂ, ಏಳು ನದಿಗಳೂ ಪ್ರಸಿದ್ಧವಾಗಿರುವುವು. ಯಾವುದೆಂದರೆ:-

ಖಂಡದ ಹೆಸರು	ಪರ್ವತ	ನದಿ
೧. ಶಿವ	ಮಣಿಕೂಟ	ಅರುಣಾ
೨. ಯಶಸ್ಯ	ವಜ್ರಕೂಟ	ನೃಮ್ಣಾ
೩. ಸುಭದ್ರ	ಇಂದ್ರಸೇನ	ಆಂಗೀರಸೀ
೪. ಶಾಂತ	ಜ್ಯೋತಿಷ್ಮಂತ	ಸಾವಿತ್ರೀ
೫. ಕ್ಷೇಮ	ಸುಪರ್ಣ	ಸುಪ್ರಭಾತಾ
೬. ಅಮೃತ	ಹಿರಣ್ಯಷ್ಠೀವ	ಋತುಂಭರಾ
೭. ಅಭಯ	ಮೇಘಮಾಲ	ಸತ್ಯಂಭರಾ

ಇದಲ್ಲದೆ ಇನ್ನೂ ಸಹಸ್ರಾರು ಪರ್ವಗಳೂ, ನದಿಗಳೂ ಇರುವುವು. ಇಲ್ಲಿ ಹಂಸ, ಪತಂಗ, ಊರ್ಧ್ವಾಯನ ಸತ್ಯಾಂಗರೆಂಬ ಚತುರ್ವಣದವರೂ ಇರುವರು. ಇವರು ೧ ಸಾವಿರ ವರ್ಷ ಬದುಕುವರು ಇವರುಗಳು ಇಲ್ಲಿ ಮಹಾ ನದಿಗಳಲ್ಲಿನ ಜಲವನ್ನು ಸ್ನಾನಪಾನಾದಿಗಳಿಂದ ಸೇವಿಸುತ್ತಾ ಕಾಮಕ್ರೋಧಾದಿ ಮನೋದೋಷಗಳನ್ನು ಕಳೆದುಕೊಂಡು ವೇದೋಕ್ತ ಕರ್ಮಾನುಷ್ಠಾನದಿಂದ, ವೇದಸ್ವರೂಪನಾದ ಸೂರ್ಯಭಗವಂತನನ್ನು ಆರಾಧಿಸುತ್ತಿರುವರು.

೩. **ಶಾಲ್ಮಲೀದ್ವೀಪ** – ಈ ದ್ವೀಪವು ನಾಲ್ಕು ಲಕ್ಷ ಯೋಜನ ವಿಸ್ತಾರವು. ಈ ದ್ವೀಪದಲ್ಲಿ ೧ ಸಾವಿರ ೧೦೦ ಯೋಜನೆಗಳ ಎತ್ತರವುಳ್ಳ ಒಂದು ಬೂರುಗದ ಮರವಿರುವುದು. ಇದರಿಂದಲೇ ಈ ದ್ವೀಪಕ್ಕೆ ಶಾಲ್ಮಲೀ ಎಂದು ಹೆಸರಾಯಿತು. ಪ್ರಿಯವ್ರತರಾಜನ ಮಗನಾದ ಯಜ್ಞಬಾಹುವು ತನ್ನ ೭ ಜನ ಮಕ್ಕಳಿಗೂ ಏಳು ಖಂಡಗಳನ್ನೂ ವಿಂಗಡಿಸಿ ಕೊಟ್ಟಿರುವನು. ಇವರ ಹೆಸರುಗಳೇ ಆ ಖಂಡಗಳ ಹೆಸರು. ಮಕ್ಕಳುಗಳು ಯಾರೆಂದರೆ– ೧. ಸುರೋಚನ ೨. ಸೌಮನಸ್ಯ ೩. ರಮಣಕ ೪. ದೇವವರ್ಷ ೫. ಪಾರಿಭದ್ರ ೬. ಅಪ್ಯಾಯನ ೭.ಅವಿಜ್ಞಾತ ಈ ಖಂಡದಲ್ಲಿನ ೭ ಮಹಾ ಪರ್ವತಗಳೂ ಮತ್ತ ೭ ಮಹಾ ನದಿಗಳು ಯಾವುದೆಂದರೆ:–

ಖಂಡಗಳು	ಪರ್ವತಗಳು	ನದಿಗಳು
೧. ಸುರೋಚನ	ಸ್ವರಸ	ಅನುಮತೀ
೨. ಸೌಮನಸ್ಯ	ಶತಶೃಂಗ	ಸಿನೀವಾಲೀ
೩. ರಮಣಕ	ವಾಮದೇವ	ಸರಸ್ವತೀ
೪. ದೇವವರ್ಷ	ಕುಂದ	ಕುಹೂ
೫. ಪಾರಿಭದ್ರ	ಮುಕುಂದ	ರಜನೀ

೬. ಆಪ್ಯಾಯನ	ಪುಷ್ಪವರ್ಷ	ನಂದಾ
೭. ಅವಿಜ್ಞಾತ	ಸಹಸ್ರಶ್ರುತಿ	ರಾಕಾ

ಇಲ್ಲಿನ ಜನರು ಚಂದ್ರನನ್ನು ಆರಾಧಿಸುತ್ತಿರುವರು

೪. ಕುಶದ್ವೀಪ – ಈ ದ್ವೀಪದಲ್ಲಿ ಬ್ರಹ್ಮನಿಂದ ನಿರ್ಮಿತವಾದ ಒಂದು ದರ್ಬೆಯ ತಂಡೆಯಿರುವುದು. ಇದರಿಂದಲೇ ಇದಕ್ಕೆ ಕುಶದ್ವೀಪವೆಂದು ಹೆಸರಾಯಿತು. ಈ ತಂಡೆಯು ಅಗ್ನಿಯಂತೆ ಪ್ರಕಾಶಿಸುತ್ತಾ ಎಂಟು ದಿಕ್ಕುಗಳನ್ನೂ ಬೆಳಗುತ್ತಿರುವುದು. ಪ್ರಿಯವ್ರತರಾಜನ ಮಗನಾದ ಹಿರಣ್ಯಕನೆಂಬ ರಾಜನು ಈ ದ್ವೀಪಕ್ಕೆ ಒಡೆಯನಾಗಿ ತನ್ನ ಏಳು ಮಂದಿ ಮಕ್ಕಳಿಗೂ ಏಳು ಭಾಗಗಳನ್ನು ವಿಂಗಡಿಸಿ ಅವರ ಹೆಸರನ್ನೇ ಆ ಖಂಡಗಳಿಗೂ ಕೊಟ್ಟನು. ಮಕ್ಕಳುಗಳ ಹೆಸರು ೧. ವಸು ೨. ವಸುದಾನ ೩. ದೃಢರುಚಿ ೪. ನಾಭಿಗುಪ್ತ ೫. ಸತ್ಯವ್ರತ ೬. ವಿವಿಕ್ತ ೭. ವಾಮದೇವ. ಈ ಪ್ರಕಾರ ತನ್ನ ಮಕ್ಕಳಿಗೆ ಹಂಚಿಕೊಟ್ಟು ತಾನು ತಪಸ್ಸಿನಲ್ಲಿ ನಿರತನಾದನು. ಇಲ್ಲಿನ ಏಳು ಪರ್ವತಗಳೂ, ಏಳು ಮುಖ್ಯ ನದಿಗಳೂ ಯಾವುದೆಂದರೆ:-

ಖಂಡಗಳು	**ಪರ್ವತಗಳು**	**ನದಿಗಳು**
೧. ವಸು	ಚಕ್ರ	ರಸಕುಲ್ಯಾ
೨. ವಸುದಾನ	ಚತುಶ್ಶೃಂಗ	ಮಧುಕುಲ್ಯಾ
೩. ದೃಢರುಚಿ	ಕಪಿಲ	ಮಿತ್ರವಿಂದಾ
೪. ನಾಭಿಗುಪ್ತ	ಚಿತ್ರಕೂಟ	ಶೃತವಿಂದಾ
೫. ಸತ್ಯವ್ರತ	ದೇವಾನೀಕ	ದೇವಗರ್ಭಾ
೬. ವಿವಿಕ್ತ	ಊರ್ಧ್ವರೋಮ	ಘೃತಚ್ಯುತಾ
೭. ವಾಮದೇವ	ದ್ರವಿಣ	ಮಂತ್ರಮಾಲಾ

ಇಲ್ಲಿನ ಜನರು ಅಗ್ನಿಪುರುಷನನ್ನು ಕರ್ಮವಿಧಾನದಿಂದ ಆರಾಧಿಸುತ್ತಿರುವರು.

೫. ಕ್ರೌಂಚದ್ವೀಪವು – ಈ ದ್ವೀಪದಲ್ಲಿ ಕ್ರೌಂಚವೆಂಬ ಮಹಾ ಪರ್ವತವಿರುವುದರಿಂದ ಇದಕ್ಕೆ ಈ ಹೆಸರು ಬಂತು. ಈ ದ್ವೀಪಕ್ಕೆ ಒಡೆಯನಾದ ಪ್ರಿಯವ್ರತರಾಜನ ಮಗನಾದ ಘೃತಪೃಷ್ಠನು ಈ ದ್ವೀಪವನ್ನು ತನ್ನ ಏಳು ಮಕ್ಕಳಿಗೂ ಏಳು ಭಾಗವಾಗಿ ವಿಂಗಡಿಸಿ ಅವರ ಹೆಸರನ್ನೇ ಆ ಖಂಡಗಳಿಗೆ ಕೊಟ್ಟನು. ಮಕ್ಕಳುಗಳ ಹೆಸರು – ೧. ಆಮ, ೨. ಓದ, ೩. ಮೇಘಪೃಷ್ಠ, ೪.ಸುಧಾಮ, ೫. ಭ್ರಾಜಿಷ್ಠ, ೬. ಲೋಹಿತಾರ್ಣ, ೭. ವನಸ್ಪತಿ. ಈ ಪ್ರಕಾರವಾಗಿ ವಿಂಗಡಿಸಿ ತಾನು ಪರಮಾತ್ಮನನ್ನು ಧ್ಯಾನಿಸುತ್ತಾ ಮುಕ್ತನಾದನು. ಇಲ್ಲಿನ ಮುಖ್ಯ ಪರ್ವತಗಳು ಮುಖ್ಯ ನದಿಗಳು ಯಾವುದೆಂದರೆ:-

ಖಂಡಗಳು	ಪರ್ವತಗಳು	ನದಿಗಳು
೧. ಆಮ	ಶುಕ್ಲ	ಅಭಯಾ
೨. ಓದ	ವರ್ಧಮಾನ	ಅಮೃತೌಘಾ
೩. ಮೇಘಪೃಷ್ಠ	ಭೋಜನ	ಆರ್ಯಕಾ
೪. ಸುಧಾಮ	ಉಪಬರ್ಹಣ	ತೀರ್ಥಪತೀ
೫. ಭ್ರಾಜಿಷ್ಠ	ನಂದ	ತೃಪ್ತೀ
೬.. ಲೋಹಿತಾರ್ಣ	ನಂದನ	ರೂಪವತೀ
೭. ವನಸ್ಪತಿ	ಸರ್ವತೋಭದ್ರ	ಶುಕ್ಲಾ

ಇಲ್ಲಿನ ಪ್ರಜೆಗಳು ಜಲರೂಪನಾದ ಭಗವಂತನನ್ನು ಆರಾಧಿಸುತ್ತಿರುವರು.

೬. ಶಾಕದ್ವೀಪ – ಈ ದ್ವೀಪದಲ್ಲಿ ಶಾಕವೆಂಬ ಮಹಾ ವೃಕ್ಷವಿರುವುದರಿಂದ ಈ ದ್ವೀಪಕ್ಕೆ ಶಾಕದ್ವೀಪವೆಂದು ಹೆಸರಾಯಿತು. ಪ್ರಿಯವ್ರತನ ಮಗನಾದ ಮೇಧಾತಿಥಿಯೇ ಈ ದ್ವೀಪಕ್ಕೆ ಅಧಿಪನು. ಈತನೂ ಸಹ ತನ್ನ ಏಳುಮಂದಿ ಮಕ್ಕಳಿಗೂ ಈ ದ್ವೀಪವನ್ನು ಏಳು ಭಾಗವನ್ನಾಗಿ ಮಾಡಿ ಕೊಟ್ಟನು. ಅವರುಗಳ ಹೆಸರೇ ಖಂಡಗಳಿಗೂ ಹೆಸರು. ಅವರು ಯಾರೆಂದರೆ – ೧. ಪುರೋವನ ೨. ಮನೋವನ ೩. ಪಮಮಾನ ೪. ಧೂಮ್ರಾನೀಕ ೫. ಚಿತ್ರರೇಪ ೬.ಬಹುರೂಪ ೭. ವಿಶ್ವಧಾರ. ಈ ರೀತಿಯಾಗಿ ಹಂಚಿಕೊಟ್ಟು ತಾನು ತಪೋವನವನ್ನು ಸೇರಿದನು. ಇಲ್ಲಿನ ಮುಖ್ಯವಾದ ಏಳು ಪರ್ವತಗಳೂ ಏಳು ನದಿಗಳು ಯಾವುದೆಂದರೆ:–

ಖಂಡಗಳು	ಪರ್ವತಗಳು	ನದಿಗಳು
೧. ಪುರೋವನ	ಈಶಾನ	ಅನಘಾ
೨. ಮನೋವನ	ಉರುಶೃಂಗ	ಆಯುರ್ದಾ
೩. ಪಮಮಾನ	ಬಲಭದ್ರ	ಉಭಯಸೃಷ್ಟೀ
೪. ಧೂಮ್ರಾನೀಕ	ಶತಕೇಸರ	ಅಪರಾಜಿತಾ
೫. ಚಿತ್ರರೇಪ	ಸಹಸ್ರಸ್ರೋತ	ಪಂಚಪದೀ
೬. ಬಹುರೂಪ	ದೇವಪಾಲ	ಸಹಶ್ರುತೀ
೭. ವಿಶ್ವಧಾರ	ಮಹಾನಸ	ನಿಜಧೃತೀ

ಇಲ್ಲಿನ ಜನರು ವಾಯುರೂಪನಾದ ಭಗವಂತನನ್ನು ಆರಾಧಿಸುತ್ತಿರುವರು.

೭. ಪುಷ್ಕರದ್ವೀಪ – ಈ ದ್ವೀಪದಲ್ಲಿ ಅಗ್ನಿಜ್ವಾಲೆಗಳಂತೆ ಅತಿ ಪ್ರಕಾಶವಾದ ಅನೇಕ ಕೋಟಿ ಚಿನ್ನದ ಎಸಲುಗಳುಳ್ಳ ಸುವರ್ಣ ಕಮಲವಿರುವುದರಿಂದ ಈ ದ್ವೀಪಕ್ಕೆ ಪುಷ್ಕರವೆಂದು

ಹೆಸರಾಯಿತು. ಈ ಕಮಲವೇ ಬ್ರಹ್ಮದೇವರಿಗೆ ಪೀಠವಾಗಿರುವುದು. ಈ ದ್ವೀಪದ ಮಧ್ಯದಲ್ಲಿ ಮಾನಸೋತ್ತರವೆಂಬ ಪರ್ವತವಿದೆ. ಇದು ೧೦ ಸಾವಿರ ಗಾವುದ ಎತ್ತರವಾಗಿ ಅಷ್ಟೇ ವಿಶಾಲವಾಗಿರುವುದು. ಈ ಪರ್ವತದ ನಾಲ್ಕು ದಿಕ್ಕುಗಳಲ್ಲಿಯೂ ಕ್ರಮವಾಗಿ ಇಂದ್ರ, ಯಮ, ವರುಣ, ಕುಬೇರರೆಂಬ ನಾಲ್ವರು ದಿಕ್ಪತಿಗಳಿಗೂ ನಾಲ್ಕು ರಾಜಧಾನಿಗಳಾದ ಪಟ್ಟಣಗಳಿರುವುವು. ಈ ದ್ವೀಪಕ್ಕೆ ಪ್ರಿಯವ್ರತನ ಮಗನಾದ ವೀತಿಹೋತ್ರನೇ ಅಧಿಪತಿಯು. ಈತನು ತನ್ನ ಇಬ್ಬರು ಮಕ್ಕಳಿಗೂ ಈ ದ್ವೀಪವನ್ನು ವಿಭಾಗಿಸಿ ಕೊಟ್ಟು ತಾನು ಭಗವದಾರಾಧನೆಯಲ್ಲಿ ನಿರತನಾದನು. ಇಲ್ಲಿನ ಜನರು ಬ್ರಹ್ಮದೇವರನ್ನು ಆರಾಧಿಸುತ್ತಿರುವರು.

ದ್ವೀಪ ಪ್ರಕರಣವು ಸಂಪೂರ್ಣವು.

೧೫. ಅಧೋಲೋಕ ವರ್ಣನೆ

ಸಂಪುಟ 6 ಸಂಚಿಕೆ 4 ಶ್ರೀಮುಖ ಆಷಾಢ ಜುಲೈ 1933

ಈ ಭೂಮಿಯ ಕೆಳಭಾಗದಲ್ಲಿ ಒಂದೊಂದು ಲೋಕವು ೧೦ ಸಾವಿರ ಯೋಜನ ಎತ್ತರವುಳ್ಳವುಗಳಾಗಿ ೭ ಲೋಕಗಳಿರುವುವು. ಯಾವುವೆಂದರೆ, ೧. ಅತಲ, ೨. ವಿತಲ, ೩. ಸುತಲ, ೪, ತಲಾತಲ, ೫. ಮಹಾತಲ, ೬. ರಸಾತಲ, ೭. ಪಾತಾಳ. ಇವಕ್ಕೆ ಬಿಲಸ್ವರ್ಗಗಳೆಂದು ಹೆಸರು. ಇಲ್ಲಿ ಸ್ವರ್ಗಕ್ಕಿಂತ ಅಧಿಕವಾದ ಕಾಮಭೋಗವೂ, ನಿರತಿಶಯ ವಿಷಯಾನಂದವೂ, ಐಶ್ವರ್ಯವೂ, ಕಾಂತಿಯೂ, ಸಮೃದ್ಧಿಯೂ ಇವುಗಳಿಂದ ಪೂರ್ಣವಾದ ಮನೆಗಳೂ, ಉದ್ಯಾನವನಗಳೂ ಇರುವುವು. ಈ ಲೋಕದಲ್ಲಿರುವ ದೈತ್ಯರು, ದಾನವರು, ಉರುಗರು ತಮ್ಮ ತಮ್ಮ ಪತ್ನೀಪುತ್ರ ಬಾಂಧವಾದಿಗಳಿಂದ ಅತ್ಯಂತ ಸಂತೋಷದಿಂದಲೂ, ಪ್ರೀತಿಯಿಂದಲೂ ಕೂಡಿದವರಾಗಿ, ತಡೆಯಲಶಕ್ಯವಾದ ಇಚ್ಛೆಯುಳ್ಳವರಾಗಿ, ವಿಚಿತ್ರ ಭೋಗಗಳನ್ನು ಅನುಭವಿಸುತ್ತಿರುವುರು. ಈ ಏಳು ಲೋಕಗಳಲ್ಲೂ ಮಾಯಾವಿಶಾರದನಾದ ಮಯಾಸುರನು ಅನೇಕ ಪಟ್ಟಣಗಳನ್ನು ನಿರ್ಮಿಸಿರುವನು. ಅವುಗಳೆಲ್ಲವೂ ನವರತ್ನ ಖಚಿತವಾಗಿರುವವು. ಅಲ್ಲಿರುವ ಕೋಟೆಗಳು, ಹೆಬ್ಬಾಗಿಲುಗಳು, ಸಭಾಮಂಟಪಗಳು, ಅರಮನೆಗಳು ಅಂಗಳಗಳೂ ಸಹ ಮಣಿಮಯವಾಗಿಯೇ ಇರುವುವು. ಉದ್ಯಾನಗಳಂತೂ ಬಣ್ಣಿಸಲಶಕ್ಯವು. ಈ ಲೋಕಧಲ್ಲಿ ಸೂರ್ಯ ಸಂಚಾರವಿರುವುದಿಲ್ಲವಾದ್ದರಿಂದ ಹಗಲಿರುಳುಗಳೆಂಬ ಕಾಲವಿಭಾಗವಿಲ್ಲವು. ಸರ್ಪರಾಜರ ಹೆಡೆಗಳಲ್ಲಿರುವ ಜೀವರತ್ನದ ಬೆಳಕೇ ಬೆಳಕು. ಇಲ್ಲಿನ ಜನರು ದಿವ್ಯೌಷಧಿ ರಸಗಳಿಂದ ಕೂಡಿದ ಆಹಾರವನ್ನು ತಿನ್ನುವುದರಿಂದ ಇವರಿಗೆ ಆಧಿವ್ಯಾಧಿಗಳಿಲ್ಲ. ಭಗವಂತನ ತೇಜೋರೂಪವಾದ ಸುದರ್ಶನ ಚಕ್ರವೇ ಮೃತ್ಯುವು.

೧. ಅತಲಲೋಕ – ಈ ಲೋಕದಲ್ಲಿ ಮಯಾಸುರನ ಮಗನಾದ ಬಲಾಸುರನು ವಾಸಿಸುವನು. ಈತನು ೯೬ ಮಾಯೆಗಳನ್ನು ಸೃಷ್ಟಿಸಿದವನು. ಈತನು ಆಕಳಿಸುವಾಗ ಇವನ ಮುಖದಿಂದ ೧. ಸ್ವೈರಿಣಿ ೨. ಕಾಮಿನಿ, ೩. ಪುಂಶ್ಚಲಿ ಎಂಬ ಮೂರು ಪಂಗಡದ ಸ್ತ್ರೀಯರು ಜನಿಸಿದರು. ಇವರು ಈ ಲೋಕಕ್ಕೆ ಬಂದ ಪುರುಷರಿಗೆ ಹಾಟಕವೆಂಬ ರಸವನ್ನು ಕುಡಿಸಿ ಅವರನ್ನು ವಶಪಡಿಸಿಕೊಂಡು ಸರಸಸಲ್ಲಾಪಗಳಿಂದ ಭೋಗಗೊಳ್ಳುವರು. ಈ

ರಸವನ್ನು ಕುಡಿದ ಕೂಡಲೇ ಪುರುಷನು ೧೦ ಸಾವಿರ ಆನೆಗಳ ಬಲವುಳ್ಳವನಾಗಿ ಮದೋನ್ಮತ್ತನಾಗಿ ತಾನೇ ಈಶ್ವರನೆಂದು ಹೊಗಳಿಕೊಳ್ಳುವನು.

೨. **ವಿತಲಲೋಕ** – ಇದು ಅತಲ ಲೋಕಕ್ಕೆ ಕೆಳಭಾಗದಲ್ಲಿದೆ. ಇಲ್ಲಿ ಹಾಟಕೇಶ್ವರನೆಂಬ ಭಗವಂತನಾದ ರುದ್ರಮೂರ್ತಿಯು ತನ್ನ ಪರಿವಾರವಾದ ಭೂತಗಳಿಂದ ಪರಿವೃತನಾಗಿ ಪ್ರಜಾಸೃಷ್ಟಿಯನ್ನು ಬೆಳೆಯಿಸಲು ಪಾರ್ವತಿಯಿಂದೊಡಗೂಡಿ ಕ್ರೀಡಿಸುತ್ತಿರುವನು. ಇವರ ವೀರ್ಯದಿಂದುಟಾದ ನದಿಯೇ ಹಾಟಕಿಯಾಗಿ ಅಲ್ಲಿ ಪ್ರವಹಿಸುತ್ತಿರುವುದು. ಇದನ್ನು ಅಗ್ನಿಯು ವಾಯುವಿನಿಂದ ಪ್ರೇರಿತನಾಗಿ ಪಾನಮಾಡುವನು. ಈತನಿಂದ ಉಗುಳಲ್ಪಟ್ಟ ಈ ವೀರ್ಯಕ್ಕೆ ಚಿನ್ನವೆಂದು ಹೆಸರು.

೩. **ಸುತಲಲೋಕ** – ಇದು ವಿತಲಲೋಕಕ್ಕೆ ಕೆಳಭಾಗದಲ್ಲಿದೆ. ಇಲ್ಲಿ ಮಹಾ ಕೀರ್ತಿಶಾಲಿಯೂ, ಪುಣ್ಯಶ್ಲೋಕನೂ, ವಿರೋಚನ ಪುತ್ರನೂ ಆತ ಬಲಿ ಚಕ್ರೇಶ್ವರನು. ಇಂದ್ರನಿಗೆ ಪ್ರಿಯವನ್ನುಂಟುಮಾಡಲು, ವಾಮನರೂಪದಿಂದ ಅದಿತಿದೇವಿಯ ಗರ್ಭದಲ್ಲಿ ಜನಿಸಿ ವಟು ವೇಷಧಾರಿಯಾದ ಭಗವಂತನಾದ ಶ್ರೀಮಹಾವಿಷ್ಣುವಿನಿಂದ ಯಾಚ್ಞಾಮುಖವಾಗಿ ಅಪಹರಿಸಲ್ಪಟ್ಟ ತ್ರೈಲೋಕ್ಯ ಸಾಮ್ರಾಜ್ಯವುಳ್ಳವನಾದರೂ, ಆ ಭಗವಂತನ ಕೃಪೆಯಿಂದಲೇ ಪುನಃ ಅಲ್ಲಿಯೇ ನೆಲೆಯಾಗಿ, ಇಂದ್ರಾದಿ ದೇವತೆಗಳಿಗೂ ಇಲ್ಲಿಯೇ ನೆಲೆಯಾಗಿ, ಇಂದ್ರಾದಿ ದೇವತೆಗಳಿಗೂ ದುರ್ಲಭವಾದ ಮಹದೈಶ್ವರ್ಯದಿಂದ ಪೂರ್ಣನಾಗಿ ಇಲ್ಲಿ ನೆಲೆಸಿ, ವಾಸುದೇವಮೂರ್ತಿಯನ್ನು ಆರಾಧಿಸುತ್ತಾ ವಾಸಿಸುತ್ತಿರುವನು. ಈತನು ಅನುಭವಿಸುತ್ತಿರುವ ಪಾತಾಳಾಧಿಪತ್ಯವು ಭಗವಂತನ ಅನುಗ್ರಹಕ್ಕೆ ಫಲವಲ್ಲ. ಈ ರಾಜ್ಯೈಶ್ವರ್ಯಾದಿಗಳು ಭಗವಧ್ಯಾನಾದಿಗಳನ್ನು ಮರೆಯಿಸತಕ್ಕವುಗಳಾದ್ದರಿಂದ ಇವು ಪರಮಾತ್ಮನ ಭಕ್ತರಾದವರಿಗೆ ವಿಘ್ನಗಳೇ ಹೊರ್ತು ಭಗವದನುಗ್ರಹವಲ್ಲ. ಪ್ರ॥ ವಾಸುದೇವೇ ಮನೋಯಸ್ಯ ಜಪಹೋಮಾಽರ್ಚನಾದಿಷು । ತಸ್ಯಾಂ ತರಾಯೋ ಮೈತ್ರೇಯ! ದೇವೇಂದ್ರತ್ವಾದಿಕಂಫಲಂ॥ ಯಾವನ ಮನಸ್ಸು ಶ್ರೀಹರಿಯ ಜಪ, ಹೋಮ, ಪೂಜೆ ಮೊದಲಾದುವುಗಳಲ್ಲಿ ನೆಲೆಗೊಳ್ಳುವುದೋ, ಅವನು ಇಂದ್ರಾದಿ ಪಟ್ಟಣಗಳನ್ನೂ ಸಹ ವಿಘ್ನವೆಂದೇ ತಿಳಿಯುವನು.

೪. **ತಲಾತಲಲೋಕ** – ಇದು ಸುತಲಲೊಕಕ್ಕಿಂತ ಕೆಳಗಿರುವುದು. ಇಲ್ಲಿ ತ್ರಿಪುರಗಳಿಗೊಡೆಯನೂ ಮಾಯಾವಿಗಳಿಗೆ ಪರಮ ಗುರುವೂ ಆದ ಮಯನೆಂಬ ರಾಕ್ಷಸೇಂದ್ರನಿರುವನು.

೫. ಮಹಾತಲಲೋಕ – ಇದು ತಲಾತಲ ಲೋಕದ ಕೆಳಕ್ಕಿರುವುದು. ಇಲ್ಲಿ ಅನೇಕ ಹೆಡೆಗಳುಳ್ಳ ಮಹಾ ಕೋಪದಿಂದ ಕೂಡಿದ ಸರ್ಪ ಸಮೂಹವಿರುವುದು. ಇಲ್ಲಿ ಕದ್ರೂದೇವಿಯ ವಂಶದವರಾದ ಕುಹಕ, ತಕ್ಷಕ, ಕಾಳಿಯ, ಸುಶೇಷಣರೇ ಮೊದಲಾದ ಮಹಾ ಬಲಿಷ್ಠರಾದ ಸರ್ಪರಾಜರು. ವಿಷ್ಣುವಾಹನನಾದ ಗರುಡನಿಗೆ ಸರ್ವದಾ ಹೆದರುತ್ತಾ ತಮ್ಮ ಮಡದಿ ಮಕ್ಕಳೊಂದಿಗೆ ಸಂತುಷ್ಟರಾಗಿ ವಿಹರಿಸುವರು.

೬. ರಸಾತಲಲೋಕ – ಇದು ಮಹಾತಲ ಲೋಕಕ್ಕೆ ಕೆಳಗಿರುವುದು. ಇಲ್ಲಿ ಫಣಿಗಳೆಂಬ ದೈತ್ಯರೂ ದಾನವರೂ ಸಹ ಇರುವರು. ಇವರಲ್ಲಿ ನಿವಾತಕವಚರು, ಕಾಲೇಯರು, ಹಿರಣ್ಯಾಪುರವಾಸಿಗಳು ಎಂದು ಮೂರು ಪಂಗಡವುಂಟು. ಇವರು ಮಹಾಶೂರರು ಮತ್ತು ದೇವಶತೃಗಳು, ಪರಮಾತ್ಮನ ಸುದರ್ಶನಾಸ್ತ್ರದಿಂದ ಹೆದರಿ ಬಲಗುಂದಿ ಶೌರ್ಯವಡಗಿ ಸರ್ಪಗಳಾಗಿ ಅವಿತುಕೊಂಡಿರುವರು.

೭. ಪಾತಾಳಲೋಕ – ಇದು ರಸಾತಲಕ್ಕಿಂತ ಕೆಳಭಾಗದಲ್ಲಿರುವುದು. ಇಲ್ಲಿ ನಾಗಲೋಕಕ್ಕೆ ಒಡೆಯರಾದ ವಾಸುಕಿ, ಶಂಖ, ಕುಲಿಕ, ಮಹಾಶಂಖ, ಶ್ವೇತ, ಧನಂಜಯ, ಧೃತರಾಷ್ಟ್ರ, ಶಂಖಚೂಡ, ದೇವದತ್ತ ಮೊದಲಾದ ೫,೧೦,೧೦೦,೧೦೦೦ ಹೆಡೆಗಳುಳ್ಳವರಾಗಿರುವರು.

ಈ ಪಾತಾಳ ಲೋಕಕ್ಕೆ ೩೦ ಸಾವಿರ ಗಾವುದ ಕೆಳಭಾಗದಲ್ಲಿ ಭಗವಂತನಾದ ಶ್ರೀನಾರಾಯಣಮೂರ್ತಿಯು ಕಲಾರೂಪನಾಗಿಯೂ ತಾಮಸಾಹಂಕಾರಕ್ಕೆ ಅಧಿಷ್ಠಾನವಾಗಿಯೂ ಇರುವ ಆದಿಶೇಷನಿರುವನು. ಈತನು ಲೋಕಕ್ಷೇಮಕ್ಕಾಗಿ ಈ ಭೂಮಂಡಲವನ್ನು ಹೊತ್ತಿರುವನು.

ಅಧೋಲೋಕವರ್ಣನೆ ಸಂಪೂರ್ಣವು.

೧೬. ಭಗವನ್ನಾಮಸ್ಮರಣೆ ಪ್ರಕರಣ

ಸಂಪುಟ 6 ಸಂಚಿಕೆ 4 ಶ್ರೀಮುಖ ಆಷಾಢ ಜುಲೈ 1933

ವಾಚಕರಿರಾ! ಇದುವರಿವಿಗೂ ಭೂಗೋಳಸೃಷ್ಟಿಯನ್ನು ಓದಿದ್ದಾಯಿತು. ನರಕಲೋಕ ಪ್ರಕರಣವನ್ನು ತಿಳಿದುಕೊಳ್ಳಬೇಕಾಗಿರುವುದು. ಅದನ್ನು ಓದುವುದಕ್ಕೆ ಪೂರ್ವ ಭಗವನ್ನಾಮ ಸ್ಮರಣೆಯನ್ನೂ ಪುಣ್ಯ ಪಾಪ ವಿಚಾರಗಳನ್ನೂ ತಿಳಿದುಕೊಂಡು ಮುಂದುವರಿಯೋಣ. ಏಕೆಂದರೆ ಭಗವನ್ನಾಮಸ್ಮರಣೆ ಮಾಡತಕ್ಕವರು ಯಮದೂತರಿಗೆ ಸಿಕ್ಕುವುದಿಲ್ಲವು.

ಶ್ಲೋ ॥ ನಾಮ್ನೋಸ್ತಿ ಯಾವತೀಶಕ್ತಿಃ ಪಾಪನಿರ್ಹರಣೇಹರೇಃ ॥
ತಾವತ್ಕರ್ತುಂ ನಶಕ್ನೋತಿ ಪಾತಕಂ ಪಾತಕೀಜನಃ ॥

ಈ ಕಲಿಯುಗದಲ್ಲಿ ಎಲ್ಲಾ ಸಾಧನಕ್ಕಿಂತಲೂ ಭಗವನ್ನಾಮೋಚ್ಚಾರಣೇಯೇ ಶ್ರೇಷ್ಠವಾದದ್ದು. ಇದಕ್ಕೆ ಸಮನಾದುದು ಯಾವುದೂ ಇಲ್ಲವು. ಪರಮಾತ್ಮನ ನಾಮವನ್ನು ಭಕ್ತಿಯಿಂದ ಉಚ್ಚರಿಸಿದರೆ ಅದು ಎಷ್ಟು ಪಾಪಗಳನ್ನು ಪರಿಹಾರ ಮಾಡುವುದೋ ಅಷ್ಟು ಪಾಪಗಳನ್ನು ಮಹಾ ಪಾಪಿಯು ಅವನ ಆಯುಷ್ಯದಲ್ಲಿಯೇ ಮಾಡಲಾರನು ಎಂಬುದಾಗಿ ದೊಡ್ಡವರು ಹೇಳುವರು.

ಶ್ರೀಪರಮಾತ್ಮನ ನಾಮಸ್ಮರಣೆ ಮಾಡಲು ಸ್ನಾನಜಪಾದಿಗಳನ್ನೇ ಮಾಡಬೇಕು, ಇಂಥಾ ಕಾಲಗಳಲ್ಲೇ ಮಾಡಬೇಕೆಂಬ ನೇಮವಿರುವುದಿಲ್ಲ. ಸರ್ವಕಾಲದಲ್ಲಿಯೂ ಸಹ ಆಯಾಯ ಕಾರ್ಯದಲ್ಲಿ ಪರಮಾತ್ಮನನ್ನು ಚಿಂತಿಸುತ್ತಾ ಮಾಡುತ್ತಿರಬೇಕು. ಪ್ರ ॥ ಪುತ್ರಾದೀನಾಂಚುಂಬನೇ ಚೈವಕಾಲೇ ಸವೇಣುಹಸ್ತಂ ಸಸ್ಮರೇತ್ಕೃಷ್ಣಮೇವ । ಸುಸಂಗಕಾಲೇ ಸ್ವಸ್ತಿಯಶ್ಚೈವ ನಿತ್ಯಂಗೋಪಸ್ತ್ರೀಣಾಂ ಪೀನಪಯೋಧರಂಧೃತಂ ॥ ಮಕ್ಕಳನ್ನು ಮುದ್ದಾಡುವಾಗ ಶ್ರೀವೇಣುಗೋಪಾಲನನ್ನೂ, ತನ್ನ ಭಾರ್ಯಳಲ್ಲಿ ರಮಿಸುವಾಗ ಶ್ರೀಕೃಷ್ಣನನ್ನು ಸ್ಮರಿಸಬೇಕು. ಅಂದರೆ ದಂಪತಿರೂಪಿಯಾಗಿಯೂ ಶಿಶುರೂಪಿಯಾಗಿಯೂ ಪರಮಾತ್ಮನು ಇದ್ದಾನೆಂಬುದಾಗಿ ಚಿಂತಿಸಬೇಕು. ಮತ್ತು

ಶ್ಲೋ ॥ ಆಸೀನಃಸಂವಿಶಂಸ್ತಿಷ್ಟನ್ ಭುಂಜಾನಃಪರ್ಯಟ್‌ಪಿಬನ್ ॥ ಚಿಂತಯಾನೋ ಹೃಷಿಕೇಶ ಮಪಶ್ಯತ್ತನ್ಮಯಂಜಗತ್ ॥ ಕೂಡುವಾಗ, ಮಲಗುವಾಗ, ನಿಂತುಕೊಳ್ಳುವಾಗ, ಊಟಮಾಡುವಾಗ, ಸಂಚಾರ ಮಾಡುವಾಗ, ಪಾನಮಾಡುವಾಗ ಪರಮಾತ್ಮನನ್ನು ಚಿಂತಿಸಬೇಕು.

ಪ್ರ ॥ ಪತಿತಃಸ್ಖಲಿತೋಭಗ್ನಃ ಸಂದಷ್ಟಸ್ತಪ್ತಆಹತಃ । ಹರಿರಿತ್ಯವಶೇನಾಹ ಪುಮಾನ್ನಾರ್ಹತಿಯಾತನಾಂ ॥ ಮತ್ತು ಬೀಳುವಾಗ, ಎಡವುವಾಗ, ಗಾಯಕ್ಕೆ ಏಟು ತಗಲಿದಾಗ, ತುಟಿಯನ್ನು ಕಚ್ಚಿಕೊಂಡಾಗ, ಏಟುಬಿದ್ದಾಗಲೂ ಸಹ ಅಯ್ಯೋ! ಅಪ್ಪ! ಎಂದುಕೊಳ್ಳದೆ ಹರಿ! ನಾರಾಯಣ! ಎಂದು ಉಚ್ಚಾರಣೆ ಮಾಡುತ್ತಾ ಬಂದರೆ ಯಾವ ಯಾತನೆಯೂ ಉಂಟಾಗಲಾರದು. ಮತ್ತು ಆನೆ, ಕುದುರೆ ಮೊದಲಾದ ವಾಹನಾರೂಢನಾಗಿರುವಾಗಲೂ ಸಹ ಅಹಂಕಾರದಿಂದ ಮರೆಯದೆ ಭಕ್ತಿಯಿಂದ ಭಗವನ್ನಾಮೋಚ್ಚಾರಣೆಯನ್ನು ಮಾಡುವುದರಿಂದ ಇಂಥವನು ಎಂದಿಗೂ ಯಮದೂತರಿಗೆ ಸಿಕ್ಕಲಾರನು. ನಮ್ಮ ಹಿರಿಯರು ನಮ್ಮಗಳಿಗೆ ಇಟ್ಟಿರುವ ರಾಮ! ಕೃಷ್ಣ ಎಂಬ ಹೆಸರುಗಳನ್ನೇ ಪ್ರತಿದಿನವೂ ಉಚ್ಚರಿಸುತ್ತಿರುವುದರಿಂದ ನಮ್ಮ ಪಾಪವು ಸುಟ್ಟು ಹೋಗುವವು. ಆದರೆ ಉಚ್ಚಾರಣೆಯು ಪರಮಾತ್ಮನ ಚಿಂತನೆಯಿಂದ ಆಗುತ್ತಿರಬೇಕು. ಇಲ್ಲವಾದಲ್ಲಿ ಪ್ರಯೋಜನವಿಲ್ಲವು.

"ಶ್ರೀವಿಜಯರಾಯರ ಹರಿನಾಮ ಸುಳಾದಿ"

ಹರಿನಾಮ ಲಕ್ಷ್ಮೀಕಾಣೋ ದಾರಿದ್ರಜನರಿಗೆ ।
ಹರಿನಾಮ ಬ್ರಹ್ಮಕಾಣೋ ಅಲ್ಪಾಯುವುಳ್ಳಜನಕೆ ।
ಹರಿಪಾದ ಪಾಶಕಾಣೋ ದುರಿತಘನಾವಳಿಗೆ ।
ಹರಿಗರುಡಕಾಣೋ ಕಾಲಾಖ್ಯಸರ್ಪಗಳಿಗೆ ।
ಹರಿಶೇಷಕಾಣೋ ಜ್ಞಾನಧನಪಾಲಿಪುದಕೆ ।
ಹರಿರುದ್ರಕಾಣೋ ಭವವೆಂಬೋ ಮೃತ್ಯುವಿಗೆ ।
ಹರಿಇಂದ್ರಕಾಣೋ ದುಷ್ಕರ್ಮ ಪರ್ವತಕ್ಕೆ ।
ಹರಿಸೂರ್ಯಕಾಣೋ ಅಜ್ಞಾನ ಕತ್ತಲಿಗೆ ।
ಹರಿಚಂದ್ರಕಾಣೋ ಹೃತ್ತಾಪ ನಿರ್ಮೂಲಕ್ಕೆ ।
ಹರಿವರುಣಕಾಣೋ ತುಷ್ಟಿಯ ಕೊಡುವುದಕ್ಕೆ ।
ಹರಿಅಗ್ನಿಕಾಣೋ ದುರಿತ ಕಾನನಕ್ಕೆ ।
ಹರಿಬಡಬಾನಲವೋ ಬಹುದುಃಖ ಸಾಗರಕ್ಕೆ ।
ಹರಿಸಂಜೀವನವೋ ಮೃತಪಾಯ ಜೀವಿಗಳಿಗೆ ।
ಹರಿವೈದ್ಯಕಾಣೋ ಭವರೋಗ ಕಳಿಯೋದಕ್ಕೆ ।
ಹರಿಗಂಗೆಕಾಣೋ ಮನಮಲವ ತೊಳಿಯೋದಕ್ಕೆ ।
ಹರಿಕಲಿಯೇಕಾಣೋ ಅನಾಚಾರ ಬಿಡಿಸೋದಕ್ಕೆ ।
ಹರಿಪ್ರಾಣಾಕಾಣೋ ಇಂದ್ರಿಯಂಗಳ ಬಲಕ್ಕೆ ।

ಹರಿವ್ಯಾಪ್ತಕಾಣೋ ಆಪತ್ತು ಮೃಗಂಗಳಿಗೆ ।
ಹರಿಸಿಂಹಕಾಣೋ ಕೋಪವೆಂಬೋ ಗಜಕ್ಕೆ ।
ಹರಿಗಜಕಾಣೋ ಆನೆಯೆಂಬೋ ಕದಳಿಗೆ ।
ಹರಿಶಸ್ತ್ರಾಕಾಣೋ ಕಾಮಬಲ ಖಂಡ್ರೀಪೋದಕ್ಕೆ ।
ಹರಿವಿತ್ತಾಕಾಣೋ ಸತ್ಕರ್ಮ ಕೊಂಬುವೋದಕ್ಕೆ ।
ಹರಿಆಭರಣಕಾಣೋ ಶರೀರಾಲಂಕಾರಕ್ಕೆ ।
ಹರಿಅಂಬರಕಾಣೋ ಭಯವೆಂಬೋ ಶೀತಕ್ಕೆ ।
ಹರಿವಜ್ರಪಂಜರ ಶರಣಾರ ಕುಲಕೋಟಿಗೆ ।
ಹರಿನೆನೆದವರ ಅಶುಭವ ಓಡಿಸುವದು ।
ಹರಿನಂಬಿದರೆ ಸರ್ವಾದೃಷ್ಟಿಗೋಚರ ।
ಹರಿಆವಾವಪೇಕ್ಷಿತ ಕೊಡುವೋದು ।
ಹರಿಮೂರುತಿ ನಮ್ಮ ವಿಜಯವಿಠಲರೇಯ ।
ಹರಿಯಂದವ ಮನುಜಗೆ ಹರುಷಪ್ರವಹವೆನ್ನೋ ॥

ಪರಮಾತ್ಮನನ್ನು ಸದಾ ಸ್ಮರಿಸುತ್ತಿರುವವನು ಸಂಸಾರ ಸಮುದ್ರವನ್ನು ದಾಟುವನು. ದುರ್ವಿಷಯಾಸಕ್ತನು ಸರ್ವದಾ ಸಂಸಾರದಲ್ಲಿಯೇ ಕ್ಲೇಶವನ್ನನುಭವಿಸುತ್ತಿರುವನು. ತಾನು ಮಾಡತಕ್ಕಂಥ ಕರ್ಮಗಳೆಲ್ಲವೂ ಭಗವತ್ಸೇವೆಯೆಂದೇ ಭಾವಿಸಬೇಕು. ಹಾಗಿಲ್ಲದಿದ್ದಲ್ಲಿ ತಾನು ಮಾಡುವ ಸತ್ಕರ್ಮಗಳೂ ಸಹ ನಿರರ್ಥಕವಾಗುವುದು. ಸರ್ವಕರ್ತನು ಪರಮಾತ್ಮನೇ ಎಂದರಿತು ಕರ್ಮಗಳನ್ನಾಚರಿಸುವವನು ಆಕಸ್ಮಾತ್ತಾಗಿ ಪಾಪ ಮಾಡಿದರೂ ಸಹ ಆ ಪಾಪವು ಅವನನ್ನು ಬಾಧಿಸುವುದಿಲ್ಲವು. ಸರ್ವಕರ್ತನೂ ಪರಮಾತ್ಮನೆಂದೇ ಉಪಾಸನೆ ಮಾಡತಕ್ಕಂಥ ಸಜ್ಜನರನ್ನು ಈ ಭೂಲೋಕದಲ್ಲಿ ದೇವತೆಗಳೆಂಬುದಾಗಿ ತಿಳಿದು ಅಂಥವರ ಪೂಜೆಯನ್ನು ಮಾಡಿದರೆ ಸಾಕ್ಷಾತ್ ಪರಮಾತ್ಮನ ಪೂಜೆ ಮಾಡಿದಂತಾಗುವುದು. ಹೀಗಿಲ್ಲದೆ ಅವರನ್ನು ಸಾಮಾನ್ಯ ಪುರುಷರೆಂದು ಭಾವಿಸಿ–ಪ್ರತಿಮೆಗಳೇ ದೇವರೆಂತಲೂ, ಗಂಗಾದಿ ನದಿಗಳೇ ತೀರ್ಥಗಳೆಂತಲೂ ತಿಳಿಯುವವನು ಕತ್ತೆಯೆಂದೇ ಹೇಳಬೇಕು.

ಹರಿಭಕುತಿ ಉಳ್ಳವರ ಶರೀರವೇ ಕುರುಕ್ಷೇತ್ರ ॥ಪ॥ ಅವರು ನರರೆಂದು ಎಣಿಸುವರೇ ನರಕವಾಸಿಗಳು ॥ಅ॥ ಎಂಬುದಾಗಿ ದಾಸರಾಯರು ಹೇಳಿರುವುದರಿಂದ ಹಾಗೆ ಸಾಮಾನ್ಯ ಪುರುಷರೆಂದು ಹೇಳಿದಲ್ಲಿ ನಮಗೆ ನರಕವೇ ಪ್ರಾಪ್ತಿಯು. ಸತ್ಯಸಂಕಲ್ಪನಾದ ಪರಮಾತ್ಮನು ನಮ್ಮ ಯೋಗ್ಯತಾನುಸಾರವಾಗಿ ಕೊಟ್ಟಿರುವುದರಿಂದಲೇ ತೃಪ್ತಿಯನ್ನು ಹೊಂದಿ ಆ ಪರಮಾತ್ಮನನ್ನು ಭಜಿಸುತ್ತಿದ್ದರೆ ಪರಮಸ್ನೇಹಿತನಾದ ಶ್ರೀಹರಿಯು ನಮ್ಮನು ಸಂಸಾರದಿಂದ

ಮುಕ್ತರನ್ನಾಗಿ ಮಾಡಿ ಮೋಕ್ಷವನ್ನು ದಯಪಾಲಿಸುವನು. ರಾಗದ್ವೇಷರಹಿತನಾದ, ಸರ್ವಜ್ಞನಾದ ಶ್ರೀನಾರಾಯಣಮೂರ್ತಿಯನ್ನು ಯಾರು ಸರ್ವದಾ ಭಕ್ತಿಯಿಂದ ಧ್ಯಾನಿಸುವರೋ, ಅಂಥವರು ಆ ಧ್ಯಾನ ಬಲದಿಂದ ಶುದ್ಧಚಿತ್ತರಾಗಿ ಸಮಸ್ತ ಪಾಪಗಳನ್ನೂ ಪರಿಹಾರಮಾಡಿಕೊಂಡು ಪುನರ್ಜನ್ಮರಹಿತರಾಗಿ ಮುಕ್ತರಾಗುವರು.

ಶ್ಲೋ ॥ ಆರ್ತಾವಿಷಣ್ಣಾ ಶಿಥಿಲಾಶ್ಚಭೀತಾ ಘೋರೇಷುಚವ್ಯಾಧಿಷುವರ್ತಮಾನಾಃ। ಸಂಕೀರ್ತ್ಯನಾರಾಯಣಶಬ್ದಮಾತ್ರಂ ವಿಮುಕ್ತದುಃಖಾಸ್ಸುಖಿನೋಭವಂತಿ ॥ ಅನೇಕ ಕಷ್ಟಗಳಿಂದ ಬಾಧೆಪಡುತ್ತಿರುವವನೂ, ಭಯಗ್ರಸ್ತನೂ, ಕ್ಷಯರೋಗಪೀಡಿತನೂ, ಮನೋರೋಗಗ್ರಸ್ತನೂ, ನಾನಾ ಬಗೆಯ ದುಃಖಗಳನ್ನನುಭವಿಸುವವನೂ ಸಹ ಒಂದು ಸಾರಿ ಶ್ರೀಗೋವಿಂದನ ಸ್ಮರಣೆಯನ್ನು ಮಾಡಿದ್ದೇ ಆದರೆ ಸಕಲ ದುಃಖಗಳನ್ನೂ ಹೋಗಲಾಡಿಸಿಕ್ಕೊಂಡು ಸೌಖ್ಯವನ್ನು ಹೊಂದುವನು.

ಪರಮಾತ್ಮನು ಮರೆಬಿದ್ದವರನ್ನು ಬಹಳ ಪ್ರೇಮದಿಂದ ಸಲಹದೆ ಎಂದಿಗೂ ಬಿಡಲಾರನು. ಇಂಥ ಪರಮೋತ್ಕೃಷ್ಟನಾದ ಪರಮಾತ್ಮನ ಪಾದಸೇವೆಯನ್ನು ಬಿಟ್ಟು ಇತರ ದೈವಮಹಿಮೆಯನ್ನಾಗಲೀ ಚರಿತ್ರೆಯನ್ನೇ ಆಗಲಿ ಕೇಳಬಾರದು. ಶ್ಲೋ॥ ವಿಪ್ರಾರ್ಥೇಷುಧನಂದತ್ತಂ ಸ್ವದಾರೇಷುಚಯೌವನಂ । ಸ್ವಾಮಿಕಾರ್ಯೇಹತಃಪ್ರಾಣಃ ಅಂತೇ ಪಶ್ಯತಿಮಾಧವಂ ॥ ಯಾವನು ತನ್ನ ದ್ರವ್ಯವನ್ನು ಬ್ರಾಹ್ಮಣರಲ್ಲಿಯೂ, ತನ್ನ ಯೌವನವನ್ನು ತನ್ನ ಧರ್ಮಪತ್ನಿಯಲ್ಲಿಯೂ, ತನ್ನ ಪ್ರಾಣಗಳನ್ನು ಸ್ವಾಮಿಕಾರ್ಯದಲ್ಲಿಯೂ ವಿನಿಯೋಗಿಸುವನೋ ಅವನೇ ಧಾರ್ಮಿಕನೆಂದೆನಿಸಿಕೊಂಡು ಈ ಧರ್ಮದಿಂದಲೇ ದೇಹಾಂತದಲ್ಲಿ ವಿಷ್ಣು ಸಾಕ್ಷಾತ್ಕಾರವನ್ನು ಪಡೆಯುವನು.

ದೇಹೀತಿವಚನಂಕಷ್ಟಂ ನಾಸ್ತೀತಿವಚನಂತಥಾ । ನಾಸ್ತಿದೇಹೀತಿಯದ್ವಾಕ್ಯಂ ಮಾಭೂಜ್ಜನ್ಮನಿಜನ್ಮನಿ ॥ ತನ್ನ ದಾರಿದ್ರ್ಯದ ದೆಶೆಯಿಂದ ಮತ್ತೊಬ್ಬರನ್ನು ಯಾಚಿಸುವುದು ಕಷ್ಟವು. ಅಂಥ ಕಷ್ಟದಿಂದ ಕೇಳಿ ಕೊಂಡವನಿಗೆ ಇಲ್ಲವೆಂದು ಹೇಳುವುದು ಮತ್ತೂ ಕಷ್ಟವು. ಆದ್ದರಿಂದ ಹೇ! ಪರಮಾತ್ಮ! ನನಗೆ ಯಾವ ಜನ್ಮದಲ್ಲಿಯೂ ಈ ಮಾತುಗಳಾಡುವ ಸಂಭವವು ಬಾರದಂತೆ ಮಾಡೆಂಬುದಾಗಿ ಪ್ರಾರ್ಥಿಸಬೇಕು.

ಸಂಸಾರೇಸ್ಮಿನ್‌ಮಹಾಘೋರೇ ಜನ್ಮರೋಗಭಯಾಕುಲೇ । ಅಯಮೇಕೋ ಮಹಾಭಾಗಃ ಪೂಜ್ಯತೇಯದಧೋಕ್ಷಜಃ ॥ ಜನನ–ಮರಣ ಆಧಿವ್ಯಾಧಿಗಳಿಂದ ಪೀಡಿತವಾದ ಈ ಮಹಾ ಭಯಂಕರವಾದ ಸಂಸಾರದಲ್ಲಿ ಶ್ರೀಅಧೋಕ್ಷಜನನ್ನು ಪೂಜಿಸುವುದೇ ಮುಖ್ಯ ಲಾಭವು. ಹೀಗೆ ಪೂಜಿಸಿ ಕೊಳ್ಳುವನು, ಮುಖ್ಯನೂ ಮಹಾ ಭಾಗ್ಯಯುಕ್ತನೂ ಆಗಿರುತ್ತಾನೆ.

ಪ್ರಾಪ್ತೇಕಲಿಯುಗೇಘೋರೆ ಧರ್ಮಜ್ಞಾನವಿವರ್ಜಿತೇ । ನಕಶ್ಚಿತ್ ಸ್ಮರತೇದೇವಂ ಕೃಷ್ಣಂ ಕಲಿಮಲಾಪಹಂ ॥

ಭಯಂಕರವಾಗಿಯೂ, ಧರ್ಮಜ್ಞಾನಗಳಿಂದ ವಿರಹಿತವಾಗಿಯೂ ಇರುವ ಕಲಿಯುಗವು ಬಂದಿರುವಾಗ ಯಾರೊಬ್ಬನೂ ಕಲಿಕೃತರಾಗಾದಿಗಳನ್ನು ಪರಿಹಾರ ಮಾಡತಕ್ಕಂಥ ಶ್ರೀಕೃಷ್ಣನನ್ನು ಸ್ಮರಿಸಲಾರನು.

ಶ್ಲೋ ॥ ಯಮಮಾರ್ಗಂ ಮಹಾಘೋರಂ ನರಕಾಣಿಯಮಂತಥಾ। ಸ್ವಪ್ನೇಪಿನೈವಪಶ್ಯೇತ ಯಃಸ್ಮರೇದ್ಗರುಡಧ್ವಜಂ ॥ ಯಾವ ಮನುಷ್ಯನು ಗರುಡಧ್ವಜನಾದ ಶ್ರೀವಾಸುದೇವನನ್ನು ಸ್ಮರಿಸುವನೋ, ಅವನು ಮಹಾ ಭಯಂಕರವಾದ ಯಮಮಾರ್ಗವನ್ನೂ, ಘೋರರೂಪಗಳಾದ ನರಕಗಳನ್ನೂ, ಹಾಗೆಯೇ ಪ್ರಾಣಿಗಳಿಗೆ ಭಯಂಕರನಾದ ಯಮನನ್ನೂ ಸಹ ನೋಡಲಾರನು. ಆದ್ದರಿಂದ ಸರ್ವದುಃಖಗಳನ್ನೂ ನಾಶಗೊಳಿಸುವುದರಿಂದ ಭಗವಂತನ ಸ್ಮರಣೆಯನ್ನು ಸರ್ವದಾ ಮಾಡಬೇಕು.

ಹೃದಿರೂಪಂ ಮುಖೇನಾಮ ನೈವೇದ್ಯ ಮುದರೇಹರೇಃ॥ ಪಾದೋದಕಂಚ ನಿರ್ಮಾಲ್ಯಂ ಮಸ್ತಕೇಯಸ್ಯ ಸೋಽಚ್ಯುತಃ ॥ ಯಾವ ಭಕ್ತನ ಹೃದಯದಲ್ಲಿ ಧ್ಯೇಯವಾದ ಭಗವದ್ರೂಪವಿದೆಯೋ (ಅಂದರೆ ಸರ್ವದಾ ಭಗವತ್ಸ್ಮರಣಾಸಕ್ತರೋ), ಯಾರ ವದನದಲ್ಲಿ ರಾಮಕೃಷ್ಣಾದಿ ದಿವ್ಯ ನಾಮೋಚ್ಚಾರಣೆ ಇದೆಯೋ, ಯಾರ ಉದರದಲ್ಲಿ ಹರಿಗರ್ಪಿತವಾದ ನೈವೇದ್ಯವಿರುವುದೋ, ತೀರ್ಥವೂ, ನಿರ್ಮಾಲ್ಯವೂ ಯಾರ ಶಿರಸ್ಸಿನಲ್ಲಿದೆಯೋ, ನಿತ್ಯದಲ್ಲಿಯೂ ಆ ಭಕ್ತನು ಚ್ಯುತಿರಹಿತನಾಗಿ ಸಂಸಾರ ದುಃಖಗಳಿಂದ ವಿರಹಿತನಾಗಿ ಮುಕ್ತನಾಗುವನು.

ಗೋವಿಂದಸ್ಮರಣಂ ಪುಂಸಾಂ ಪಾಪರಾಶಿ ಮಹಾಚಲಂ । ಅಸಂಶಯಂ ದಹತ್ಯಾಶು ತೂಲಾರಾಶಿ ಮಿವಾನಲಃ ॥ ಶ್ರೀಗೋವಿಂದನ ಸ್ಮರಣೆಯು, ಬೆಂಕಿಯು ಹತ್ತಿಯ ರಾಶಿಯನ್ನು ಹೇಗೆ ನಿರ್ಮೂಲವಾಗಿ ದಹಿಸಿ ಬಿಡುತ್ತದೆಯೋ ಹಾಗೆಯೇ, ಭಕ್ತರ ಮಹಾ ಪರ್ವತದ ರಾಶಿಯಂತಿರುವ ಪಾಪವನ್ನು ನಿಸ್ಸಂಶಯವಾಗಿ ಸುಡುವದು.

ಸಾಹಾನಿಸ್ತನ್ಮಹಚ್ಛಿದ್ರಂ ಸಾಚಾಂಧಜಡಮೂಕತಾ । ಯನ್ಮುಹೂರ್ತಂಕ್ಷಣಂವಾಪಿ ವಾಸುದೇವೋನಚಿಂತ್ಯತೇ ॥ ಯಾವನು ಒಂದು ಮೂಹೂರ್ತವಾಗಲಿ, ಕ್ಷಣವಾಗಲಿ ಶ್ರೀಪರಮಾತ್ಮನನ್ನು ಸ್ಮರಿಸುವುದಿಲ್ಲವೋ ಅವ್ವನ ಆಯುಷ್ಯವು ನಾಶವಾಗಿ ದೋಷವನ್ನೂ, ಅಂಧತ್ವವನ್ನೂ, ಜಡತ್ವವನ್ನೂ ಸಹ ಕೊಡುವವು.

ನಾರಾಯಣೇತಿಮಂತ್ರೋಽಸ್ತಿ ವಾಗಸ್ತಿವಶವರ್ತಿನೀ । ತಥಾಪಿ ನರಕೇಘೋರೇ ಪತಂತೀತ್ಯೇ ತದದ್ಭುತಂ ॥ ವಾಗೀಂದ್ರಿಯವು ತನ್ನ ಅಧೀನವಾಗಿದ್ದರೂ, ಅತಿ ದುಸ್ಸಹಗಳಾದ ನಾನಾವಿಧ ನರಕಗಳಲ್ಲಿ ನಾರಾಯಣ ಮಂತ್ರೋಚ್ಚಾರಣೆಯಿಂದ ಪರಿಹಾರವನ್ನು ತಿಳಿಯದೆ ನರಕದಲ್ಲಿ ಬೀಳುತ್ತಾ ಇದ್ದೇವೆ. ಇದಲ್ಲವೇ ಅತ್ಯಾಶ್ಚರ್ಯವು । ಆದ್ದರಿಂದ ಅತ್ಯಂತ ಸುಲಭವಾದ ಭಗವನ್ನಾಮವನ್ನು ಮೋಕ್ಷ ಬಯಸುವ ಭಕ್ತನು ಸ್ಮರಿಸಲು ಪ್ರಯತ್ನಿಸಬೇಕು. ಹೇ ಜಿಹ್ವೇ ! ಮಮನಿಸ್ನೇಹೇ !! ಹರಿಂಕಿಂನುನಭಾಷಸೇ? ॥ ಹರಿಂವದಸ್ವಕಲ್ಯಾಣಿ ! ಸಂಸಾರೋದಧಿ ನೌರ್ಹರಿಃ॥ ಎಲ್ಲೈ ! ಸ್ನೇಹರಹಿತವಾದ ನಾಲಿಗೆಯೇ ! ಶ್ರೀಹರಿನಾಮವನ್ನು ಏನು ಕಾರಣದಿಂದ ಉಚ್ಚರಿಸುವುದಿಲ್ಲ !! ಪುರುಷಾರ್ಥವನ್ನು ಕೊಡುವ ಪರಮಾತ್ಮನ ನಾಮೋಚ್ಚಾರಣೆಯು ಮಾಡುವುದಿಲ್ಲವಾದ್ದರಿಂದ ನಿನ್ನಲ್ಲಿ ಸ್ನೇಹವೇನಿರುವುದು? ನಿನ್ನಿಂದ ಪ್ರಯೋಜನ ತಾನೇ ಏನು? ಸಂಕೀರ್ತನದಿಂದ ಮಂಗಳರೂಪಳೇ ! ಸರ್ವದುರಿತಗಳನ್ನು ಪರಿಹರಿಸುವ ಶ್ರೀಹರಿನಾಮವನ್ನು ಹೇಳು. ಆ ಹರಿಯು ಅಪಾರವಾದ ಸಂಸಾರಸಾಗರವನ್ನು ದಾಟಿಸಲು ನಾವಿಯಾಗುವನು.

ಕುರುಕ್ಷೇತ್ರೇಣಕಿಂತಸ್ಯ ಕಾಶ್ಯಾಪುಷ್ಕರಣೇನಕಿಂ?॥ ಜಿಹ್ವಾಗ್ರೇವರ್ತತೇಯಸ್ಯ ಹರಿರಿತ್ಯಕ್ಷರದ್ವಯಂ॥ ಯಾವನ ನಾಲಿಗೆಯ ತುದಿಯಲ್ಲಿ "ಹರಿ" ಎಂಬ ಎರಡು ಅಕ್ಷರವು ಇರುವುದೋ (ಉಚ್ಚರಿಸುತ್ತಾನೋ) ಅವನಿಗೆ ಕುರುಕ್ಷೇತ್ರಾದಿಗಳಿಂದ ಏನು ಪ್ರಯೋಜನವು? ಅಂಥಾ ಕ್ಷೇತ್ರಗಳಿಗೆ ಹೋಗಿ ಸ್ನಾನಾದಿಗಳನ್ನು ಮಾಡಿದ ಫಲವೆಲ್ಲವೂ "ಹರಿ" ಎಂಬ ನಾಮೋಚ್ಚಾರಣೆಯಿಂದಲೇ ಹೆಚ್ಚು ಫಲ ಬರುವುದರಿಂದ ಹರಿನಾಮ ಸಂಕೀರ್ತನೆಯನ್ನು ಮಾಡಬೇಕು.

ಸಾಜಿಹ್ವಾಯಾಹರಿಂಸ್ತೌತಿ ತಚ್ಚಿತ್ತಂಯತ್ ತದರ್ಪಣಂ । ತಾವೇವ ಕೇವಲೌಶ್ಲಾಘ್ಯೌ ಯೌತತ್ಪೂ ಜಾಕರೌಕರೌ ॥

ಯಾವ ನಾಲಿಗೆಯು ಶ್ರೀಹರಿಯನ್ನು ಸ್ತುತಿಸುವುದೋ ಅದೇ ನಾಲಿಗೆಯು (ಸಾರ್ಥಕವು), ಯಾವ ಮನಸ್ಸು ಭಗವಂತನಲ್ಲೇ ಅರ್ಪಿತವಾಗಿರುವುದೋ ಅದೇ ಮನಸ್ಸು (ಸಾರ್ಥಕವು), ಯಾವ ಕೈಗಳು ಭಗವತ್ಪೂಜೆಯನ್ನು ಮಾಡುವವೋ ಅದೇ ಶ್ಲಾಘ್ಯವಾದ ಕೈಗಳು.

ನಿಮಿಷಂನಿಮಿಷಾರ್ಧಂವಾ ಮುಹೂರ್ತಮಪಿಭಾರ್ಗವ ! । ನಾದಗ್ಧಾಶೇಷ ಪಾಪಾನಾಂ ಭಕ್ತಿರ್ಭವತಿಕೇಶವೇ ॥

ಎಲ್ಲೈ! ಭಾರ್ಗವನೇ!! ತೀರ್ಥಸ್ನಾನ ಪ್ರಾಯಶ್ಚಿತ್ತಾದಿಗಳಿಂದ ಪಾಪವನ್ನು ಪರಿಹರಿಸಿಕೊಳ್ಳದೇ ಇದ್ದ ಮನುಷ್ಯನಿಗೆ ನಿಮಿಷವಾಗಲೀ, ಅರ್ಧನಿಮಿಷವಾಗಲೀ,

ಮುಹೂರ್ತವಾಗಲೀ ಶ್ರೀಹರಿಯಲ್ಲಿ ಭಕ್ತಿ ಹುಟ್ಟುವುದಿಲ್ಲ. ಪಾಪವನ್ನು ಪರಿಹರಿಸಿಕೊಂಡವರಿಗೆ ಮಾತ್ರ ಭಕ್ತಿ ಹುಟ್ಟುವುದು. ಆದಕಾರಣ ಭಕ್ತಿಯು ಅತಿ ದುರ್ಲಭವಾದದ್ದು; ಪಾಪ ಪರಿಹಾರ ಮಾಡಿಕೊಂಡು ಸರ್ವದಾ ಆತನಲ್ಲಿ ಭಕ್ತಿ ನಿರತವಾಗಬೇಕು.

ಕ್ಷಣಚಿತ್ತಂ ಕ್ಷಣಂವಿತ್ತಂ ಕ್ಷಣಂಜೀವಿತಮಾವಯೋಃ । ಯಮಸ್ಯಕರುಣಂ ನಾಸ್ತಿ ಧರ್ಮಸ್ಯತ್ವರಿತಾಗತಿಃ ॥ ಸ್ಥಿರಮನಸ್ಸು ಅತ್ಯಲ್ಪಕಾಲವಿದ್ದು ಚಪಲತೆಯಿಂದ ಬದಲಾಯಿಸುವುದು. ದ್ರವ್ಯವು ಶಾಶ್ವತವಾದದ್ದಲ್ಲವು. ಹಾಗೆಯೇ ಬದುಕಿರುವುದೂ ಕೂಡ ಕ್ಷಣಭಂಗುರವಾದದ್ದು. ಯಮನಾದರೋ ಜೀವಗೆ ಕರ್ತವ್ಯಗಳಿದ್ದರೂ, ಇಲ್ಲದಿದ್ದರೂ ಸಾವಕಾಶ ಮಾಡದೆ ನಿರ್ದಯತ್ವದಿಂದ ಸೆಳೆದುಕೊಂಡು ಹೋಗದೇ ಬಿಡನು. ಹೀಗಿರುವಲ್ಲಿ ವಿಳಂಬಕ್ಕೆ ಅವಕಾಶವಿಲ್ಲದಿರುವುದರಿಂದ ಜೀವನು ಧರ್ಮದಿಂದ ಪುಣ್ಯ ಸಂಪಾದನೆ ಮಾಡಿಕೊಳ್ಳಬೇಕು.

ಅನಾಯಾಸೇನಮರಣಂ ವಿನಾದೈನ್ಯೇನಜೀವನಂ । ಅನಾರಾಧಿತ ಗೋವಿಂದಚರಣಸ್ಯ ಕುತೋಭವೇತ್? ॥

ಶ್ರೀಪರಮಾತ್ಮನ ಸೇವೆಯನ್ನು ಮಾಡದವನಿಗೆ ಮತ್ತಾರಿಂದಲೂ ನಿರಾಯಾಸವಾದ ಸಾವೂ, ಅನ್ಯರಲ್ಲಿ ದೈನ್ಯವನ್ನು ತೋರಿಸದಿರುವ ಜೀವನವೂ ಸಹ ಎಂದಿಗೂ ಲಭಿಸಲಾರದು.

ಯಂತ್ರಸ್ಯಗುಣದೋಷೌನಯಂತ್ರಿಣಃ ಪುರುಷೋತ್ತಮ! । ಅಹಂಯಂತ್ರಂ ಭವಾನ್ ಯಂತ್ರೀ ಮಮದೋಷೋನವಿದ್ಯತೇ॥ ಎಲೈ! ಪುರುಷೋತ್ತಮನೇ! ಯಂತ್ರದಿಂದ ಕೆಲಸಮಾಡಿಸುವನಿಂದಲೇ ಗುಣವಾಗಲಿ, ದೋಷವಾಗಲಿ ಉಂಟಾಗುವುದಲ್ಲದೆ ಅಚೇತನವಾದ ಯಂತ್ರದಿಂದ ಏನಾಗುವುದು? ಹೀಗೇಯೇ ನಾನು ಯಂತ್ರದೋಪಾದಿ ಅಚೇತನನು. ನೀನು ಯಂತ್ರವನ್ನು ಹಿಡಿದಿರುವವನಂತೆ ನನ್ನಿಂದ ಕೆಲಸಮಾಡಿಸುವೆ, ನೀನು ಪ್ರೇರಿಸಿದಂತೆ ನಾನು ಮಾಡುವೆನು. ಅವುಗಳ ಗುಣದೋಷಕ್ಕೆ ನಾನು ಪಾತ್ರನಲ್ಲವು ಎಂಬುದಾಗಿ ಪರಮಾತ್ಮನನ್ನು ಬೇಡಿಕೊಳ್ಳಬೇಕು.

ಸಕೃನ್ನಾರಾಯಣೇತ್ಯುಕ್ತ್ವಾ ಪುಮಾನ್‌ಕಲ್ಪಶತತ್ರಯಂ । ಗಂಗಾದಿ ಸರ್ವತೀರ್ಥೇಷು ಸ್ನಾತೋಭವತಿಪುತ್ರಕ ! ॥ ಯಾವನು ಒಂದಾವರ್ತಿ ಶ್ರೀನಾರಾಯಣ ಶಬ್ದವನ್ನು ಉಚ್ಚಾರಣೆ ಮಾಡುವನೋ ಅವನಿಗೆ ಮುನ್ನೂರು ಕಲ್ಪಗಳಲ್ಲಿ ಗಂಗಾದಿ ಪುಣ್ಯನದಿಗಳಲ್ಲಿ ಸ್ನಾನ ಮಾಡಿದರೆ ಎಷ್ಟು ಫಲ ಬರುವುದೋ ಅಷ್ಟು ಫಲವುಂಟಾಗುವುದು.

ಗೋಕೋಟಿದಾನಂ ಗ್ರಹಣಾದಿಕಾಲೇ । ಪ್ರಯಾಗಗಂಗಾ ಯುತ ಕಲ್ಪವಾಸಃ ॥ ಯಜ್ಞಾಯುತಂಮೇರು ಸುವರ್ಣದಾನಂ । ಗೋವಿಂದ ಕೀರ್ತ್ಯಾನಸಮಂಶತಾಂಶೆ ॥ ಕೋಟಿ ಗೋದಾನ ಮಾಡಿದರೂ, ಪುಣ್ಯಕಾಲಗಳಲ್ಲಿ ತೀರ್ಥಕ್ಷೇತ್ರಗಳ ಸಮೀಪದಲ್ಲಿ ಹತ್ತು ಸಾವಿರ

ಕಲ್ಪ ವಾಸಮಾಡಿದರೂ ಹತ್ತು ಸಾವಿರ ಯಜ್ಞಗಳನ್ನು ಮಾಡಿದಾಗ್ಯೂ ಮೇರುಪರ್ವತದಷ್ಟು ಚಿನ್ನವನ್ನು ದಾನಮಾಡಿದರೂ, ಒಂದು ಸಾರಿ ಶ್ರೀಗೋವಿಂದನಾಮ ಸ್ಮರಣೆಯಿಂದ ಬರುವ ಪುಣ್ಯದ ನೂರರಲ್ಲೊಂದು ಭಾಗವು ಲಭಿಸಲಾರದು.

ಹರಿರ್ಹರತಿಪಾಪಾನಿ ದುಷ್ಟಚಿತ್ತೈರಪಿಸ್ಮೃತಃ ಅನಿಚ್ಛಯಾಪಿ ಸಂಸ್ಪೃಷ್ಟೋದಹತ್ಯೇವಹಿಪಾವಕಃ ॥ ಭಕ್ತಿಯಿಂದ ಮನಃಪೂರ್ವಕವಾಗಲೀ ಇಲ್ಲದೆ ಮಲಿನವಾದ ಮನಸ್ಸುಳ್ಳವನೇ ಆಗಿ ಶ್ರೀಹರಿಯನ್ನು ಸ್ಮರಣೆ ಮಾಡಿದರೂ, ಬೆಂಕಿಯನ್ನು ತಿಳಿಯದೇ ಮುಟ್ಟಿದರೂ ಸಹ ಅದು ಹೇಗೆ ಅವನನ್ನು ಸುಡದೇ ಬಿಡುವುದಿಲ್ಲವೋ ಹಾಗೆಯೇ ತಿಳಿಯದೆ ಏನೋ ಕಾರಣದಿಂದ ಹರಿಸ್ಮರಣೆ ಮಾಡಿದರೂ ಮನುಷ್ಯನು ಮುಕ್ತನೇ ಆಗುವನು.

ಇದಂಶರೀರಂ ಶತಸಂಧಿ ಜರ್ಝರಂ । ಪತತ್ಯವಶ್ಯಂ ಪರಿಣಾಮ ದುರ್ಲಭಂ ॥ ಕಿಮೌಷಧಂ ಪಶ್ಯಸಿಮೂಢದುರ್ಮತೇ । ನಿರಾಮಯಂ ಕೃಷ್ಣ ರಸಾಯನಂಪಿಬ ॥

ಎಲೈ ! ಅವಿವೇಕಿಯಾದ ಮೂಢ ಜೀವಿಯೇ ! ಈ ದೇಹವು, ನಿನ್ನ ಸ್ವಾಧೀನದಲ್ಲಿ ನಿಲ್ಲದೆ ಕೀಲುಗಳೆಲ್ಲಾ ಮುರಿದು ಕೊನೆಗೆ ನಾಶವಾಗುತ್ತದೆಯಲ್ಲಾ ! ನೀನು ದಿವ್ಯ ಸುಖವನ್ನು ಪಡೆಯುವವರಿಗೂ ಅದು ಶಾಶ್ವತವಾಗಿರುವುದೇ? ಇದಕ್ಕಾಗಿ ಯಾವ ಔಷಧವನ್ನು ಹುಡುಕಿಕೊಂಡಿರುವೆ? ಯಾವ ಔಷಧಿಯನ್ನೂ ಅಪೇಕ್ಷಿಸದೆ ಕೃಷ್ಣನಾಮವೆಂಬ ರಸಾಯನವನ್ನು ಕುಡಿದರೆ ಕೃತಕೃತ್ಯನಾಗುವೆ.

ಭಗವನ್ನಾಮಸ್ಮರಣೆ ಪ್ರಕರಣ ಸಂಪೂರ್ಣಂ

೧೭. ನರಕಲೋಕ ಪ್ರಕರಣ

(ಸಂಪುಟ ೬ ಸಂಚಿಕೆ ೫-ಶ್ರೀಮುಖ ಶ್ರಾವಣ-ಆಗಸ್ಟ್ ೧೯೩೩) ಇರಬಹುದು

ಲೋಕದಲ್ಲಿ ಸಕಲ ಭೂತಗಳೂ ಗುಣಪರಿಣಾಮದಿಂದಲೇ ಉಂಟಾಗುವುದಾದಕಾರಣ ಪ್ರಾಚೀನಕರ್ಮದ ಸಂಸ್ಕಾರಕ್ಕನುಗುಣವಾಗಿ ಸತ್ವಾದಿ ಗುಣಗಳು ಬದಲಾಯಿಸುವುದರಿಂದಲೂ, ಕರ್ಮವನ್ನಾಚರಿಸುವ ಪುರುಷರ ಶ್ರದ್ಧಾಬುದ್ಧಿಗಳ ಬದಲಾವಣೆಯಿಂದಲೂ, ಕರ್ಮಫಲಗಳು ಮೂರುವಿಧವಾಗಿರುವುವು.

೧. ಮುಕ್ತಸಂಗೋಽನಹಂಕಾರೀ ಧೃತ್ಯುತ್ಸಾಹಸಮನ್ವಿತಃ । ಸಿದ್ಧ್ಯಸಿದ್ಧ್ಯೋರ್ನಿರ್ವಿಕಾರಃ ಕರ್ತಾಸಾತ್ವಿಕ ಉಚ್ಯತೆ ॥೧॥ ಪ್ರವೃತ್ತಿಂನಿವೃತ್ತಿಂಚ ಕಾರ್ಯಕಾರ್ಯೇ ಶುಭಾಶುಭೇ । ಬಂಧಂಮೋಕ್ಷಂಚಯಾವೇತ್ತಿ ಬುದ್ಧಿಸ್ಸಾಪಾರ್ಥ! ಸಾತ್ವಕಿ ॥೨॥

ಸಂಗರಹಿತನಾಗಿ ಅಹಂಕಾರವಿಲ್ಲದೆ, ಲಾಭನಷ್ಟಗಳಲ್ಲಿ ಹಿಗ್ಗಿ ತಗ್ಗದೆ ಸಮನಾಗಿರುವವನು ಸಾತ್ವಿಕನು. ಪ್ರವೃತ್ತಿ ನಿವೃತ್ತಿಗಳನ್ನೂ, ಕಾರ್ಯಅಕಾರ್ಯಗಳನ್ನೂ, ಬಂಧಮೋಕ್ಷಗಳನ್ನೂ ಸರಿಯಾಗಿ ತಿಳಿಯುವ ಬುದ್ಧಿಯೇ ಸಾತ್ವಿಕ ಬುದ್ಧಿಯು.

೨. ರಾಗೀಕರ್ಮಫಲಪ್ರೇಪ್ಸುರ್ಲುಬ್ಧೋಹಿಂಸಾತ್ಮಕೋಽಶುಚಿಃ। ಹರ್ಷಶೋಕಾನ್ವಿತಃಕರ್ತಾ ರಾಜಸಃಪರಿಕೀರ್ತಿತಃ ॥೧॥ ಯಯಾಧರ್ಮಮಧರ್ಮಂಚ ಕಾರ್ಯಾಂಚ ಕಾರ್ಯಮೇವಚ। ಅಯಥಾವತ್ಪ್ರಜಾನಾತಿ ಬುದ್ಧಿಸಾಪಾರ್ಥ! ರಾಜಸೀ ॥೨॥

ಕರ್ಮಫಲವನ್ನಪೇಕ್ಷಿಸಿ, ಲುಬ್ಧನಾಗಿ, ಹಿಂಸೆಯನ್ನು ಮಾಡುತ್ತಾ ಅಶುಚಿಯಾಗಿ ಮೆರೆಯುವವನು ರಾಜಸನು. ಧರ್ಮಾಽಧರ್ಮಗಳನ್ನೂ, ಕಾರ್ಯಾಽಕಾರ್ಯಗಳನ್ನು ಬೇರೆ ವಿಧವಾಗಿ ತಿಳಿದುಕೊಳ್ಳುವ ಬುದ್ಧಿಯು ರಾಜಸಬುದ್ಧಿಯು.

೩. ಅಯುಕ್ತಃಪ್ರಾಕೃತಃಸ್ತಬ್ಧಶ್ಶಠೋನೈಷ್ಕೃತಿಕೋಽಲಸಃ । ವಿಷಾದೀದೀರ್ಘಸೂತ್ರೀಚ ಕರ್ತಾತಾಮಸ ಉಚ್ಯತೆ ॥೧॥ ಅಧರ್ಮಂಧರ್ಮಮಿತಯಾ ಮನ್ಯತೇತಮಸಾವೃತಾ । ಸರ್ವಾರ್ಥಾನ್ವಿಪರೀತಾಂಶ್ಚ ಬುದ್ಧಿಸಾಪಾರ್ಥ! ತಾಮಸೀ ॥೨॥

ಅಯೋಗ್ಯನಾಗಿಯೂ, ಸೋಮಾರಿಯಾಗಿಯೂ, ಅಳುಮೋರೆಯಾಗಿಯೂ, ವಕ್ರನಾಗಿಯೂ ಇರುವವನು ತಾಮಸನು. ಅಜ್ಞಾನಕ್ಕೊಳಗಾಗಿ ಅಧರ್ಮವನ್ನು ಧರ್ಮವನ್ನಾಗಿಯೂ, ಕೆಟ್ಟದ್ದನ್ನು ಒಳ್ಳೇದನ್ನಾಗಿಯೂ ಅಂದರೆ ಎಲ್ಲವನ್ನೂ ತಲೆಕೆಳಗಾಗಿ ತಿಳಿದುಕೊಳ್ಳುವುದು ತಾಮಸಬುದ್ಧಿಯು.

ಹೀಗೆ ಆಯಾಯಾ ಗುಣದವರಿಗೆ ಆಯಾಯ ಬುದ್ಧಿಯೇ ಪರಿಣಮಿಸುವುದು.

ಯಜಂತೇಸಾತ್ವಿಕಾದೇವಾನ್ ಯಕ್ಷರಕ್ಷಾಂಸಿರಾಜಸಾಃ । ಪ್ರೇತಾನ್ ಭೂತಗಣಶ್ಚಾನ್ಯೇ ಯಜಂತೇತಾಮಸಾಜನಾಃ ॥

ಸಾತ್ವಿಕರು ದೇವತೆಗಳನ್ನೂ, ರಾಜಸರು ಯಕ್ಷರಾಕ್ಷಸಾದಿಗಳನ್ನೂ, ತಾಮಸರು ಭೂತಪ್ರೇತ ಪಿಶಾಚಿಗಳನ್ನೂ ಪೂಜಿಸುವರು.

ಲೋಕದಲ್ಲಿ ಒಂದೇವಿಧವಾಗಿ ಆಚರಿಸಲ್ಪಟ್ಟ ಧರ್ಮದಿಂದ ಭೂಲೋಕಾದಿಗಳಲ್ಲಿ ಹುಟ್ಟಿದಂಥ ಜೀವರಿಗೆ ಕೆಲವರಿಗೆ ಅತ್ಯಂತ ಸುಖವೂ, ಕೆಲವರಿಗೆ ಅತ್ಯಂತ ದುಃಖವೂ, ಮತ್ತೆ ಕೆಲವರಿಗೆ ಸುಖದುಃಖಗಳೆರಡೂ ಉಂಟಾಗುವುವು. ಕಾರಣವೇನೆಂದರೆ? ಕರ್ಮಗಳು ಒಂದೇರೂಪವಾದಾಗ್ಯೂ, ಆ ಕರ್ಮಗಳನ್ನಾಚರಿಸುವ ಕರ್ತೃಗಳ ಭಾವನಾಭೇದವೂ, ಶ್ರದ್ಧಾಭೇದವೂ ಕಾರಣಗಳಾಗಿ ಕರ್ಮಫಲಗಳು ಹಲವುತೆರನಾಗಿ ಪರಿಣಮಿಸುವುವು; ಅಂದರೆ ಸಾತ್ವಿಕ ಶ್ರದ್ಧೆಯಿಂದ ಅತ್ಯಂತ ಸುಖವೂ, ರಾಜಸ ಶ್ರದ್ಧೆಯಿಂದ ಸುಖದುಃಖಗಳೂ, ತಾಮಸ ಶ್ರದ್ಧೆಯಿಂದ ಅತ್ಯಂತ ದುಃಖವೂ ಉಂಟಾಗುವುವು.

ಈ ಪಾಪಕರ್ಮಗಳಿಗೆ ಫಲಭೋಗಸ್ಥಾನಗಳಾಗಿಯೂ, ಆ ಪಾಪಕರ್ಮ ಪರಿಣಾಮರೂಪಗಳಾಗಿಯೂ ಇರುವ ಹಲವುಬಗೆ ನರಕಗಳುಂಟು. ಈ ನರಕವು ಬ್ರಹ್ಮಾಂಡದಲ್ಲಿ ಎಲ್ಲಿರುವುದೆಂದರೆ? ಇದು ದಕ್ಷಿಣದಿಕ್ಕಿನಲ್ಲಿ ಬ್ರಹ್ಮಾಂಡದ ನಡುವೆ ಭೂಮಿಗಿಂತ ಕೆಳಗೂ, ಜಲರಾಶಿಗಿಂತ ಮೇಲ್ಭಾಗಕ್ಕೂ ಇರುವ ಮಧ್ಯಪ್ರದೇಶದಲ್ಲಿರುವುದು.

ಇಲ್ಲಿ ಮಹಾತ್ಮನೂ, ಪಿತೃದೇವತೆಗಳಿಗೊಡೆಯನೂ ಆದ ಯಮರಾಜನು ಭೂಲೋಕದಲ್ಲಿ ಮೃತರಾದ ಪ್ರಾಣಿಗಳನ್ನು ತನ್ನ ದೂತರಿಂದ ತನ್ನ ಪಟ್ಟಣಕ್ಕೆ ಕರಸಿಕೊಂಡವನಾಗಿ, ಅವರವರ ಪಾಪಗಳಿಗನುಸಾರವಾಗಿ ಶ್ರೀಪರಮಾತ್ಮನ ಕಟ್ಟಳೆಯನ್ನು ಉಲ್ಲಂಘಿಸದೆ ತನ್ನ ಪರಿವಾರದೊಡನೆ ಕೂಡಿ ಅಂಥಾ ಪ್ರಾಣಿಗಳಿಗೆ ಆಯಾಯ ಪಾಪಕ್ಕನುಸಾರವಾದ ಆಯಾಯ ನರಕಗಳಲ್ಲಿ ಹಾಕಿ, ಪರಿಪರಿ ಶಿಕ್ಷೆಗಳಿಂದ ದಂಡಿಸುತ್ತಿರುವನು.

ಮಹಾ ನರಕಗಳು ೨೮

ಪ್ರಾ। ತಾಮಿಸ್ರೋಂಧತಾಮಿಸ್ರೋರೌರವೋ ಮಹಾರೌರವಃ ಕುಂಭೀಪಾಕಃ ಕಾಲಸೂತ್ರಮಸಿಪತ್ರವನಂ ಸೂಕರಮುಖ ಮಂಧಕೂಪಃ ಕ್ರಿಮಿಭೋಜನಃಸಂದಂಶಸ್ತಪ್ತ ಸೂರ್ಮಿ ವಜ್ರಕಂಟಕ ಶಾಲ್ಮಲೀ ವೈತರಣೀ ಪೂಯೋದಃ ಪ್ರಾಣರೋಧೋ ವಿಶಸನಂ ಲಾಲಾಭಕ್ಷಃ ಸಾರಮೇಯಾದನಮವೀಚಿರಯೋರೇತಃ ಪಾನಮಿತಿ, ಕಿಂಚ – ಕ್ಷಾರಕರ್ದಮೋರಕ್ಷೋಗಣ ಭೋಜನಃ ಶೂಲಪ್ರೋತೋ ದಂದಶೂಕೋऽವಟನಿರೋಧನೋऽಪರ್ಯಾವರ್ತನಃ ಸೂಚೀಮುಖಮಿತ್ಯಷ್ಟಾವಿಂಶತಿರ್ನರಕಾ ವಿವಿಧಯಾತನಾಭೂಮಯಃ ಪಾಪಕರ್ಮಿಣಾಂ॥

ವಿವರ:– ೧.ತಾಮಿಸ್ರ, ೨. ಅಂಧತಾಮಿಸ್ರ, ೩.ರೌರವ, ೪.ಮಹಾರೌರವ, ೫.ಕುಂಭೀಪಾಕ, ೬.ಕಾಲಸೂತ್ರ, ೭.ಅಸಿಪತ್ರವನ, ೮.ಸೂಕರಮುಖ, ೯.ಅಂಧಕೂಪ, ೧೦.ಕ್ರಿಮಿಭೋಜನ, ೧೧.ಸಂದಂಶ, ೧೨.ತಪ್ತಸೂರ್ಮಿ, ೧೩.ವಜ್ರಕಂಟಕ ಶಾಲ್ಮಲಿ, ೧೪.ವೈತರಣಿ, ೧೫.ಪೂಯೋದ, ೧೬.ಪ್ರಾಣರೋಧ, ೧೭, ವಿಶಸನ, ೧೮.ಲಾಲಾಭಕ್ಷ, ೧೯.ಸಾರಮೇಯಾದನ, ೨೦.ಅವೀಚಿರಯ, ೨೧.ರೇತಃಪಾನ, ೨೨.ಕ್ಷಾರಕರ್ದಮ, ೨೩.ರಕ್ಷೋಗಣಭೋಜನ, ೨೪.ಶೂಲಪ್ರೋತ, ೨೫.ದಂದಶೂಕ, ೨೬.ಅವಟ ನಿರೋಧನ, ೨೭.ಅಪರ್ಯಾವರ್ತನ, ೨೮.ಸೂಚೀಮುಖ. ಈ ಪ್ರಕಾರ ೨೮ ಮಹಾ ನರಕಗಳಾಗಿ ಯಾತನಾ ಸ್ಥಾನಗಳಾಗಿರುವವು. ಇನ್ನು ಈ ನರಕಗಳಲ್ಲಿ ಯಾವಯಾವ ಪಾಪ ಮಾಡಿದವರಿಗೆ ಯಾವಯಾವ ಶಿಕ್ಷೆಗಳನ್ನು ಕೊಡುತ್ತಾನೆಂಬುವುದನ್ನು ತಿಳಿಯೋಣ.

೧. ತಾಮಿಸ್ರ:– ಕಂಡವರ ಹೆಂಡತಿ ಮಕ್ಕಳನ್ನು ಅಪಹಾರ ಮಾಡುವನನ್ನು, ಅತಿ ಭಯಂಕರರೂಪರಾದ ಯಮಭಟರು ಅಂಥವನನ್ನು ಕಾಲಪಾಶದಿಂದ ಬಿಗಿದು ಬಲಾತ್ಕಾರದಿಂದ ಈ ತಾಮಿಸ್ರವೆಂಬ ಮಹಾನರಕದಲ್ಲಿ ಹಾಕುವರು. ಸರ್ವದಾ ಕಗ್ಗತ್ತಲೆಯಾಗಿರುವ ಈ ತಾಮಿಸ್ರ ನರಕದಲ್ಲಿ ಈ ಪುರುಷನು ಅನ್ನ ನೀರಿಲ್ಲದೆ, ಯಮಭಟರ ದೊಣ್ಣೆಯ ಪೆಟ್ಟುಗಳಿಗೂ, ಕೈಗುದ್ದುಗಳಿಗೂ ಯಮಭಟರ ಗರ್ಜನೆಗಳಿಗೂ ಗುರಿಯಾಗಿ ಬಗೆಬಗೆಯಾದ ಯಾತನೆಯನ್ನನುಭವಿಸುವನು.

೨. ಅಂಧತಾಮಿಸ್ರ:– ಯಾವ ಪುರುಷನು ಪತಿಯನ್ನು ಮೋಸಗೊಳಿಸಿ ಆತನ ಪತ್ನಿಯನ್ನು ವಶಗೊಳಿಸಿಕೊಂಡು ಆಕೆಯೊಡನೆ ವಿಹರಿಸುವನೋ,.ಅವನು ಸತ್ತ ಬಳಿಕ ಈ ಅಂಧತಾಮಿಸ್ರವೆಂಬ ಮಹಾ ನರಕದಲ್ಲಿ ಬಿದ್ದು ಇಲ್ಲಿ ನಾನಾ ಯಾತನೆಗಳನ್ನನುಭವಿಸುವನು.

೩. **ರೌರವ:**– ಈ ನರಕದಲ್ಲಿ ಯಾವ ಪುರುಷನು ಶರೀರಾಭಿಮಾನದಿಂದ ಈ ಶರೀರವು ತನ್ನದೆಂತಲೂ, ಧನಕನಕಾದಿ ವಸ್ತುಗಳು ತನ್ನದೆಂತಲೂ ತಿಳಿದು ಪ್ರತಿದಿನವೂ ಭೂತದ್ರೋಹವನ್ನು ಮಾಡುತ್ತಾ ತನ್ನ ಕುಟುಂಬವನ್ನು ಮಾತ್ರ ಪೋಷಿಸುವನೋ, ಅಂಥವನು ತನ್ನ ದೇಹಾನಂತರದಲ್ಲಿ ತನ್ನ ಕುಟುಂಬವನ್ನೆಲ್ಲಾ ಇಲ್ಲಿಯೇ ಬಿಟ್ಟು ತಾನು ಮಾತ್ರವೇ ಭೂತ ದ್ರೋಹ ಪಾಪದಿಂದ ಈ ನರಕವನ್ನು ಸೇರುವನು. ಇವನು ಭೂಲೋಕದಲ್ಲಿ ಯಾವ ರೀತಿಯಾಗಿ ಇತರ ಪ್ರಾಣಿಗಳನ್ನು ಹಿಂಸಿಸಿರುವನೋ ಆ ಪಾಪದಿಂದ ಸರ್ಪಗಳಿಗಿಂತ ಅತಿ ಕ್ರೂರವಾದ ರುರುಗಳೆಂಬ ಘಾತುಕ ಪ್ರಾಣಿಗಳು ಆ ಯಾತನಾಪುರುಷನನ್ನು ಹಿಂಸಿಸುವುವು.

೪. **ಮಹಾರೌರವ:**– ಯಾವ ಪುರುಷನು ಪ್ರಾಣಿಹಿಂಸೆ ಮಾಡುತ್ತಾ ತನ್ನ ಶರೀರವನ್ನು ಪೋಷಿಸಿಕೊಳ್ಳುವನೋ ಅವನು ಈ ಮಹಾರೌರವ ನರಕಕ್ಕೆ ಬಂದು ಮಾಂಸಭಕ್ಷಕಗಳಾದ ರುರುಗಳೆಂಬ ಕ್ರೂರ ಜಂತುಗಳಿಂದ ಕೀಳಿಸಿಕೊಳ್ಳುತ್ತಿರುವನು.

೫. **ಕುಂಭೀಪಾಕ:**– ಯಾವ ಪುರುಷನು ನಿರ್ದಯನಾಗಿ ತನ್ನ ಆಹಾರಕ್ಕಾಗಿ ಪಶುಪಕ್ಷಿಗಳನ್ನು ಜೀವಸಹಿತ ಇರುವಾಗ ಅವನ್ನು ಬೇಯಿಸಿ ತಿನ್ನುವನೋ ಅಂಥವನನ್ನು ಈ ನರಕದಲ್ಲಿ ಕಾಯಿದ ಎಣ್ಣೆಯಿಂದ ತುಂಬಿರುವ ಕಡಾಯಿನಲ್ಲಿ ಹಾಕಿ ಬೇಯಿಸುವರು.

೬. **ಕಾಲಸೂತ್ರ :**– ಯಾವ ಪುರುಷನು ತಂದೆಗೂ, ಬ್ರಾಹ್ಮಣರಿಗೂ, ಜ್ಞಾನಿಗಳಿಗೂ ದ್ರೋಹವನ್ನೆಣಿಸುವನೋ ಅವನನ್ನು ಹತ್ತುಸಾವಿರ ಗಾವುದ ವಿಸ್ತಾರವುಳ್ಳ ಈ ನರಕದಲ್ಲಿ ಸೂರ್ಯಾಗ್ನಿಗಳಿಂದ ಕೆಳಗೂ ಮೇಲೂ ಸುಡುತ್ತಿರುವ ತಾಮ್ರಮಯವಾದ ಕಾವಲಿಯಲ್ಲಿ ಕುಳ್ಳಿರಿಸುವರು. ಅಲ್ಲಿ ಹಸಿವು ಬಾಯಾರಿಕೆಗಳಿಂದ ಒಳಗೂ ಹೊರಗೂ ಕೂಡಾ ಸುಡುತ್ತಾ ಅತ್ಯಂತ ಯಾತನೆಯಿಂದ ಆಕಳಿಗೆ ಎಷ್ಟು ರೋಮಗಳಿರುವುವೋ ಅಷ್ಟು ವರ್ಷ ಪರ್ಯಂತರ ಈ ಯಾತನೆಯನ್ನು ಅನುಭವಿಸುವನು.

೭. **ಅಸಿಪತ್ರವನ:**– ಯಾವ ಪುರುಷನು ಯಾವ ವಿಧವಾದ ಅಪತ್ತಿಲ್ಲದಿದ್ದರೂ ವೇದೋಕ್ತವಾದ ಸ್ವಧರ್ಮವನ್ನು ಬಿಟ್ಟು ದುಷ್ಟವಾದ ಪಾಷಂಡ ಮಾರ್ಗವನ್ನನುಸರಿಸುವನೋ ಅವನು ಈ ನರಕಕ್ಕೆ ಬಂದು ಯಮಭಟರಿಂದ ಚಾಟಿಯಿಂದ ಹೊಡೆಸಿಕೊಳ್ಳುತ್ತಾ ಅಲ್ಲಿಗಿಲ್ಲಿಗೆ ಓಡಾಡುವಾಗ ಒರೆಗಳುಳ್ಳ ತಾಳಪತ್ರಗಳೆಂಬ ಕತ್ತಿಗಳಿಂದ ಕತ್ತರಿಸಲ್ಪಟ್ಟವನಾಗಿ ಅಯ್ಯೋ! ಸತ್ತೆ ! ಸತ್ತೆ! ಎಂಬುದಾಗಿ ಅರಚಿಕೊಳ್ಳುತ್ತ ಮೂರ್ಛೆ ಬೀಳುತ್ತಾ ಯಾತನೆಯನ್ನನುಭವಿಸುವನು.

೮. **ಸೂಕರಮುಖ:**– ಈ ಲೋಕದಲ್ಲಿ ರಾಜನಾಗಲಿ, ರಾಜನ ಕಡೆಯ ಅಧಿಕಾರಿಯಾಗಲಿ ತಪ್ಪಿಲ್ಲದವನನ್ನು ದಂಡಿಸುವನೋ, ಬ್ರಾಹ್ಮಣನಿಗೆ ದೇಹದಂಡವನ್ನು

ವಿಧಿಸುವನೋ ಅವನು ಈ ನರಕದಲ್ಲಿ ಬಿದ್ದು ಬಲಶಾಲಿಗಳಾದ ಯಮಕಿಂಕರರಿಂದ ಗಾಣಕ್ಕೆ ಸಿಕ್ಕಿದ ಕಬ್ಬಿನ ತುಂಡಿನಂತೆ ಮೈಯೆಲ್ಲಾ ಜಜ್ಜಲ್ಪಟ್ಟವನಾಗಿ ದೀನಧ್ವನಿಯಿಂದ ಅಳುತ್ತಾ ಶಿಕ್ಷಿಸಲ್ಪಡುವನು.

೯. **ಅಂಧಕೂಪ:–** ಯಾವನು ಭಗವಂತನಿಂದ ಬ್ರಾಹ್ಮಣಾದಿ ವರ್ಣವಿಭಾಗಾನುಸಾರವಾಗಿ ವಿಧಿನಿಷೇಧಗಳನ್ನನುಸರಿಸಿ ಕಲ್ಪಿತವಾಗಿರುವ ಜೀವನೋಪಾಯವನ್ನು ಹೊಂದಿ ತನ್ನಿಂದ ಅನ್ಯರಿಗಾಗುವ ಬಾಧೆಯನ್ನು ತಿಳಿಯುವವನಾಗಿದ್ದರೂ, ಈಶ್ವರನಿಂದ ಕಲ್ಪಿತವಾದ ಮನುಷ್ಯರ ರಕ್ತಪಾನವೇ ಜೀವನವಾಗಿರುವ, ಅನ್ಯರಿಗಾಗುವ ಬಾಧೆಯನ್ನು ತಿಳಿಯದೆ ಇರುವ ಸೊಳ್ಳೆ, ಹೇನು, ನೊಣ, ತಿಗಣೆ ಮೊದಲಾದ ಪ್ರಾಣಿಗಳನ್ನು ಬಾಧಿಸಿದರೆ ಅವನು ಈ ಭೂತಹಿಂಸಾ ಪಾಪದಿಂದ ಈ ಅಂಧಕೂಪವೆಂಬ ನರಕದಲ್ಲಿ ಬಿದ್ದು ಯಾವ ಪ್ರಾಣಿಗಳಿಗೆ ಹಿಂಸೆ ಮಾಡಿದ್ದನೋ ಆ ಪ್ರಾಣಿಗಳಿಂದಲೇ ಪೀಡಿತನಾಗಿ ಕೊಂಚವಾದರೂ ನಿದ್ರೆಯಿಲ್ಲದೆ, ನಿಂತಕಡೆಯಲ್ಲಿ ನಿಲ್ಲದೆ, ವ್ಯಾಘ್ರಾದಿಗಳಿಂದ ಕಚ್ಚಲ್ಪಟ್ಟ ಶರೀರಯಾತನೆಯಂತೆ ಅನುಭವಿಸುತ್ತಾ ಕಗ್ಗತ್ತಲೆಯ ಗುಂಡಿಯಲ್ಲಿ ಅಲೆಯುವನು.

೧೦. **ಕ್ರಿಮಿಭೋಜನ:–** ಯಾವ ಪುರುಷನು ಭಗವತ್ಪ್ರೇರಣೆಯಿಂದ ಸಿಕ್ಕಿದಂಥ ಭಕ್ಷ್ಯಭೋಜ್ಯಾದಿಗಳನ್ನಾಗಲೀ, ಅನ್ನಾದಿಗಳನ್ನಾಗಲೀ ಕೊಂಚವಾದರೂ ಅತಿಥಿಗಳಿಗೆ ಕೊಡದೆಯೂ, ಪರಮಾತ್ಮನಿಗೆ ನಿವೇದನ ಮಾಡದೆಯೂ, ಪಂಚಮಹಾಯಜ್ಞಗಳನ್ನಾಚರಿಸದೆಯೂ, ಊಟಮಾಡುವನೋ ಅವನು ಅತಿ ನೀಚವಾದ ಕ್ರಿಮಿಭೋಜನವೆಂಬ ಈ ಮಹಾ ನರಕದಲ್ಲಿ ಬಿದ್ದು ಕಾಗೆಗಳಿಂದ ಕೀಳಿಸಿಕೊಳ್ಳಲ್ಪಟ್ಟವನಾಗಿ ಒಂದು ಲಕ್ಷ ಯೋಜನ ವಿಸ್ತಾರವುಳ್ಳ ಈ ಕ್ರಿಮಿಕುಂಡಲದಲ್ಲಿ ಹುಳವಾಗಿ ಹೊರಳುತ್ತಾ, ಇತರ ಹುಳಗಳಿಂದ ಕೀಳಿಸಿಕೊಳ್ಳುತ್ತಾ, ತಾನೂ ಅದೇ ಹುಳಗಳನ್ನು ತಿಂದು ಜೀವಿಸುತ್ತಾ ಪ್ರಾಯಶ್ಚಿತ್ತವಿಲ್ಲದ ತನ್ನ ಪಾಪದ ಫಲವನ್ನು ಈ ರೀತಿಯಾಗಿ ಒಂದು ಲಕ್ಷ ವರ್ಷಗಳವರೆಗೂ ಈ ಕ್ರಿಮಿಕುಂಡದಲ್ಲಿ ಹಲವು ಯಾತನೆಗಳನ್ನನುಭವಿಸುವನು.

೧೧. **ಸಂದಂಶ:–** ಯಾವ ಪುರುಷನು ಅಪತ್ಕಾಲವಲ್ಲದಿದ್ದರೂ, ಕಳುವಿನಿಂದಾಗಲಿ, ಬಲೋದ್ಬಂಧನದಿಂದಾಗಲಿ, ಬ್ರಾಹ್ಮಣರ ಮತ್ತು ಇತರರ ಧನಕನಕಾದಿ ವಸ್ತುಗಳನ್ನು ಅಪಹಾರ ಮಾಡುವನೋ ಆ ಪುರುಷನು ಈ ಸಂದಂಶ ನರಕದಲ್ಲಿ ಬಿದ್ದು ಬೆಂಕಿಯಂತೆ ಕೆಂಪಗೆ ಕಾದ ಕಬ್ಬಿಣದ ಹರಿತಗಳಾದ ಸಂದಂಶಗಳೆಂಬ ಮುಳ್ಳುಗಳಿಂದ ಚುಚ್ಚಿಸಿಕೊಂಡು ನರಳುವನು.

೧೨. **ತಪ್ತಸೂರ್ಮಿ:**– ಯಾವ ಮನುಷ್ಯನು ಪಾಪಿವರಸೆಯಿಲ್ಲದೆ ರಮಿಸಬಾರದ ಹೆಂಗಸಿನೊಡನೆ ರಮಿಸುವನೋ, ಯಾವ ಹೆಂಗಸೂ ಸಹ ರಮಿಸಬಾರದ ಪುರುಷನೊಡನೆ ರಮಿಸುವಳೋ ಅವರಿಬ್ಬರನ್ನೂ ಯಮ ಕಿಂಕರರು ಈ ನರಕದಲ್ಲಿ ಕೆಡಹಿ ಚಾಟಿಗಳಿಂದ ಹೊಡೆಯುತ್ತಾ ಬೆಂಕಿಯಿಂದ ಧಗಧಗನೆ ಉರಿಯುತ್ತಿರುವ ಲೋಹಮಯವಾದ ಸೂರ್ಮಿಯೆಂಬ ಹೆಣ್ಣು ಬೊಂಬೆಯೊಡನೆ ಆ ಗಂಡಸನ್ನೂ, ಗಂಡು ಬೊಂಬೆಯೊಡನೆ ಆ ಹೆಂಗಸನ್ನೂ ಸಹ ಆಲಿಂಗನ ಮಾಡಿಸುವರು.

೧೩. **ವಜ್ರಕಂಟಕಶಾಲ್ಮಲಿ:**– ಯಾವ ಮನುಷ್ಯನು ಕಾಮಾತುರನಾಗಿ ಪಶ್ವಾದಿ ಸ್ತ್ರೀ ವ್ಯಕ್ತಿಗಳಲ್ಲಿ ರಮಿಸುವನೋ ಅವನು ಈ ನರಕದಲ್ಲಿ ಬಿದ್ದು, ವಜ್ರದಂತೆ ಗಟ್ಟಿಯಾಗಿಯೂ, ಹರಿತವಾಗಿಯೂ ಇರುವ ಮುಳ್ಳುಗಳಿಂದ ತುಂಬಿರುವ ಬೂರುಗದ ಮರವನ್ನು ಹತ್ತಿಸಿ ಅಲ್ಲಿಂದ ಕೆಳಕ್ಕೆ ಸೆಳೆಯುವರು.

೧೪. **ವೈತರಣಿ:**– ರಾಜನಾಗಲಿ ಅಥವಾ ಕಡೆಯ ಅಧಿಕಾರಿಯಾಗಲಿ ಸತ್ಕುಲದಲ್ಲಿ ಹುಟ್ಟಿದ್ದರೂ, ನಾಸ್ತಿಕರಾಗಿ ಧರ್ಮಮರ್ಯಾದೆಗಳನ್ನು ನಾಶಗೊಳಿಸುವರೋ ಅವರು ಈ ವೈತರಣಿಯೆಂಬ ನದಿಯಲ್ಲಿ ಬಿದ್ದು ಅದರಲ್ಲಿರುವ ಜಲಚರಗಳಿಂದ ಕಚ್ಚಿಸಿಕೊಳ್ಳುತ್ತಾ, ಪಾಪಗಳನ್ನು ನೆನೆಸಿಕೊಂಡು ಸಂಕಟಪಡುತ್ತಾ ಮಲ, ಮೂತ್ರ, ರಕ್ತ, ಕೂದಲು, ಉಗುರು, ಮೂಳೆ, ಮಾಂಸ, ಕೊಬ್ಬು ಮೊದಲಾದ ಅಮೇಧ್ಯ ವಸ್ತುಗಳಿಂದ ಬರುವ ದುರ್ಗಂಧವನ್ನು ಅಘ್ರಾಣಿಸುತ್ತಾ ಹೀಗೆ ಹರಿಯುವ ನದಿಯಲ್ಲಿ ಬಿದ್ದು ಗೋಳಾಡುತ್ತಿರುವರು.

೧೫. **ಪೂಯೋದ:**– ಉತ್ತಮ ಪುರುಷನು ನೀಚ ಸ್ತ್ರೀಯಲ್ಲಿ ರಮಿಸಿ, ಶೌಚ, ಆಚಾರ, ನೇಮಗಳನ್ನು ಬಿಟ್ಟು, ಯಾವುದರಲ್ಲೂ ನಂಬಿಕೆ ಇಲ್ಲದೆ ಪಶುಗಳಂತೆ ಸ್ವೇಚ್ಛೆಯಾಗಿರುವನೋ ಅವನು ಈ ನರಕದಲ್ಲಿ ಬಿದ್ದು ಕೀವು, ಮಲ, ಮೂತ್ರ, ಶ್ಲೇಷ್ಮಗಳಿಂದ ತುಂಬಿದ ಈ ನದಿಯಲ್ಲಿ ತೇಲುತ್ತಾ ಈ ಮಲಮೂತ್ರಾದಿಗಳನ್ನೇ ತಿಂದು ಜೀವಿಸುವನು.

೧೬. **ಪ್ರಾಣರೋಧ:**– ಯಾವ ಮನುಷ್ಯನು ಬ್ರಾಹ್ಮಣನಾಗಿ ಹುಟ್ಟಿದಾಗ್ಯೂ ನಾಯಿ, ಕತ್ತೆ, ಮೊದಲಾದುವನ್ನು ಸಾಕುತ್ತಾ, ಬೇಟೆಯಲ್ಲಿ ಅಸಕ್ತನಾಗಿ, ಪ್ರಾಣಿಹಿಂಸೆಯನ್ನು ಮಾಡುತ್ತಾ, ಸ್ವೇಚ್ಛೆಯಾಗಿ ಮೃಗಗಳನ್ನು ಕೊಲ್ಲುವನೋ ಅವನು ಈ ನರಕದಲ್ಲಿ ಬಿದ್ದು ಯಮಭಟರಿಂದ ಬಾಣಗಳಿಂದ ಗುರಿಯಿಟ್ಟಲ್ಪಟ್ಟವನಾಗಿ ಭೇದಿಸಿಕ್ಕೊಳ್ಳುವನು.

೧೭. ವಿಶಸನ:- ಯಾವ ಮನುಷ್ಯನು ಡಾಂಭೀಕನಾಗಿ ಬೂಟಾಟಿಕೆಯಿಂದ ಯಜ್ಞಯಾಗಾದಿಗಳನ್ನು ಮಾಡಿ ಪಶುಗಳನ್ನು ಹಿಂಸಿಸುವನೋ ಅವನು ಈ ವಿಶಸನ ನರಕದಲ್ಲಿ ಬಿದ್ದು ಯಾತನೆಪಡುವನು.

೧೮. ಲಾಲಾಭಕ್ಷ:- ಯಾವ ಮನುಷ್ಯನು ತನ್ನ ಪತ್ನಿಗೆ ಕಾಮಪರವಶನಾಗಿ ರೇತಸ್ಸನ್ನು ಪಾನಮಾಡಿಸುವನೋ ಅವನನ್ನು ರೇತಸ್ಸಿನಿಂದ ತುಂಬಿದ ಈ ನರಕದಲ್ಲಿ ಕೆಡಹಿ ಯಮಭಟರು ಅವನಿಗೆ ರೇತಸ್ಸನ್ನೇ ಕುಡಿಸುವನು.

೧೯. ಸಾರಮೇಯಾದನ:- ರಾಜನಾಗಲಿ, ರಾಜರಕಡೆಯ ಅಧಿಕಾರಿಯಾಗಲಿ ಕಳ್ಳತನದಿಂದಲೂ, ದ್ವೇಷಾದಿಗಳಿಂದಲೂ ಗ್ರಾಮಗಳನ್ನೂ, ಜನರ ಗುಂಪುಗಳನ್ನೂ ಬೆಂಕಿಯನ್ನಿಟ್ಟು ಸುಡುತ್ತಾ ವಿಷವನ್ನು ಕುಡಿಸುತ್ತಾ ಕೊಳ್ಳೆಹೊಡೆಯುವರೋ ಅಂಥವರು ಈ ನರಕದಲ್ಲಿ ಬಂದು ಯಮನನ್ನು ಹಿಂಬಾಲಿಸಿರುವ ವಜ್ರಾಯುಧಗಳಂತೆ ಕೋರೆದಾಡೆಗಳುಳ್ಳ ೭೨೦ ಸೀಳುನಾಯಿಗಳು ಅಂಥವರನ್ನು ಬಾರಿಬಾರಿಗೂ ಕಿತ್ತು ತಿನ್ನುವುವು.

೨೦. ಅವೀಚಿರಯ:- ಯಾವ ಮನುಷ್ಯನು ಸಾಕ್ಷಿಯಾಗಿ ಬಂದು ವ್ಯಾಪಾರದಲ್ಲಾಗಲೀ, ದಾನವಿಷಯದಲ್ಲಾಗಲೀ, ಸುಳ್ಳು ಹೇಳುವನೋ ಆ ಪುರುಷನು ಈ ನರಕದಲ್ಲಿ ೧೦೦ ಗಾವುದ ಎತ್ತರವಾದ ಬೆಟ್ಟದ ತುದಿಯಿಂದ ನಿರಾಧಾರವಾದ ನೆಲದಲ್ಲಿ ತಲೆಕೆಳಗಾಗಿ ಕೆಡುಹುವರು. ಅಷ್ಟು ಎತ್ತರದಿಂದ ಬಂಡೆಯಂತಿರುವ ನೆಲದ ಮೇಲೆ ಬಿದ್ದರೂ ಎಳ್ಳುಕಾಳಿನಷ್ಟು ಚೂರುಚೂರಾಗುವಂತೆ ಮೈಯ್ಯನ್ನೆಲ್ಲಾ ಕತ್ತರಿಸಿದರೂ, ಪಾಪಶೇಷದಿಂದ ಸಾಯದೆ ಪುನಃ ಬೆಟ್ಟವನ್ನು ಹತ್ತಿಸಿ ಕೆಳಕ್ಕೆ ತಳ್ಳುವರು.

೨೧. ರೇತಃಪಾನ:- ಯಾವ ಬ್ರಾಹ್ಮಣನಾಗಲಿ ಅವನ ಹೆಂಡತಿಯಾಗಲಿ ನೇಮವಂತನಾದ ಇತರವನಾಗಲಿ ಮದ್ಯಪಾನ ಮಾಡುವನೋ; ವೈಶ್ಯನಾಗಲಿ, ಕ್ಷತ್ರಿಯನಾಗಲಿ ವೇದ ನಿಷೇಧವಾದ ಸೋಮಪಾನ ಮಾಡುವನೋ ಅವನು ಈ ನರಕದಲ್ಲಿ ಬಂದು ಯಮಭಟರಿಂದ ಎದೆಯನ್ನು ಕಾಲಿನಿಂದ ಮೆಟ್ಟಿಸಿಕೊಂಡು ಬೆಂಕಿಯಿಂದ ಕಾಯಿದ ಕಬ್ಬಿಣದ ನೀರನ್ನು ಬಾಯ್ಯಲ್ಲಿ ಹೊಯ್ಸಿಕೊಳ್ಳುವನು.

೨೨. ಕ್ಷಾರಕರ್ದಮ :- ಯಾವನು ನೀಚ ಕುಲದಲ್ಲಿ ಹುಟ್ಟಿದ್ದಾಗ್ಯೂ ಅಹಂಕಾರದಿಂದ ತಾನೇ ಸರ್ವಶ್ರೇಷ್ಠನೆಂದೂ, ತಪಸ್ಸು, ಆಚಾರ, ವಿದ್ಯೆ, ಜಾತಿ, ಆಶ್ರಮ ಮೊದಲಾದವುಗಳಿಂದ

ಶ್ರೇಷ್ಠರಾದ ಸಾಧುಗಳನ್ನು ಗೌರವಿಸದೆ ಹೀಯ್ಯಾಳಿಸುವನೋ ಅವನು ಈ ನರಕಕ್ಕೆ ತಲೆಕೆಳಗಾಗಿ ಬಂದು ಬಿದ್ದು ನಾನಾ ಹಿಂಸೆಗಳನ್ನನುಭವಿಸುವನು.

೨೩. ರಕ್ಷೋಗಣ ಭೋಜನ:– ಯಾವ ಪುರುಷನೇ ಆಗಲಿ ಸ್ತ್ರೀಯೇ ಆಗಲಿ ತಮ್ಮ ಇಷ್ಟಾರ್ಥಕ್ಕಾಗಿ ಭೈರವ, ಮಾರಿಕಾದಿ ದೇವತೆಗಳನ್ನು ಆರಾಧಿಸಲು ನರಬಲಿಯನ್ನೀಯುವನೋ, ಯಾರು ಈ ನರಮಾಂಸವನ್ನು ಭುಂಜಿಸುವರೋ ಅವರು ಈ ನರಕಕ್ಕೆ ಬಂದು ಯಾವ ಪ್ರಾಣಿಗೆ ಯಾವ ಆಯುಧದಿಂದ ಹಿಂಸಿಸಿದ್ದನೋ ಅದೇ ಪ್ರಾಣಿಯು ಅದೇ ಆಯುಧದಿಂದ ಇವನನ್ನು ಸೀಳಿ ರಕ್ತವನ್ನು ಕುಡಿದು ಸಂತೋಷ ಚಿತ್ತರಾಗಿ ಇವನನ್ನು ಹೀಯಾಳಿಸುತ್ತಾ ಕುಣಿಯುವರು.

೨೪. ಶೂಲಪ್ರೋತ:– ಯಾವ ಮನುಷ್ಯನು ನಿರಪರಾಧಿಗಳಾದ ಜನರನ್ನು ಗ್ರಾಮದಲ್ಲಾಗಲೀ, ಅರಣ್ಯದಲ್ಲಾಗಲೀ ವಂಚಿಸಿ ಅವರನ್ನು ವಶಪಡಿಸಿಕೊಂಡು ಅವರನ್ನು ಹಿಂಸಿಸುವನು. ಈ ನರಕದಲ್ಲಿ ಬಂದು ಯಮಭಟರಿಂದ ಶೂಲಕ್ಕೆ ಏರಿಸಿಕೊಂಡು ಹದ್ದು ಮೊದಲಾದ ಮಾಂಸಾಹಾರಿ ಪಕ್ಷಿಗಳ ವಜ್ರದಂತಿರುವ ಕೊಕ್ಕುಗಳಿಂದ ಕೀಳಿಸಿಕೊಳ್ಳಲ್ಪಡುವನು.

೨೫. ದಂದಶೂಕ:– ಯಾವ ಮನುಷ್ಯನು ಈ ಲೋಕದಲ್ಲಿ ಸರ್ಪಗಳಂತೆ ಕ್ರೂರ ಸ್ವಭಾವವುಳ್ಳವನಾಗಿ ಜನರನ್ನು ಸಂಕಟಪಡಿಸುವನೋ ಅವನು ಈ ನರಕಕ್ಕೆ ಬಂದ ಐದು ಹೆಡೆಗಳುಳ್ಳ ಸರ್ಪಗಳಿಂದ ನುಂಗಿಸಿಕೊಳ್ಳುವನು.

೨೬. ಅವಟನಿರೋಧನ:– ಯಾವ ಮನುಷ್ಯನು ವಿನೋದಕ್ಕಾಗಿ ಮಕ್ಕಳನ್ನಾಗಲೀ, ಮುದುಕರನ್ನಾಗಲೀ, ಇತರ ದುರ್ಬಲರಾದ ಪ್ರಾಣಿಗಳನ್ನಾಗಲೀ, ಹಿಂಸಿಸುವನೋ ಅವನು ಈ ನರಕಕ್ಕೆ ಬಂದು ವಿಷದ ಹೊಗೆಯಿಂದ ಪೀಡಿಸಿಕೊಳ್ಳುವನು.

೨೭. ಅಪರ್ಯಾವರ್ತನ:– ಯಾವ ಮನುಷ್ಯನು ಅತಿಥಿಗಳಿಗಾಗಲೀ, ಅಭ್ಯಾಗತರಿಗಾಗಲೀ, ಮನೆಗೆ ಬಂದಾಗ ಕೋಪಗೊಂಡು ಅವರನ್ನು ಕ್ರೂರ ದೃಷ್ಟಿಯಿಂದ ನೋಡುವನೋ ಅವನು ಈ ನರಕಕ್ಕೆ ಬಂದು ವಜ್ರದಂತೆ ಗಟ್ಟಿಯಾದ ಕೊಕ್ಕುಗಳುಳ್ಳ ಬಲಿಷ್ಠಗಳಾದ ಹದ್ದು, ರಣಹದ್ದು ಮೊದಲಾದ ಕ್ರೂರಪಕ್ಷಿಗಳಿಂದ ಕಣ್ಣುಗುಡ್ಡೆಗಳನ್ನು ಕೀಳಿಸಿ ಕೊಳ್ಳಲ್ಪಡುವನು.

೨೮. ಸೂಚೀಮುಖ:– ಯಾವ ಮನುಷ್ಯನು ಧನದಿಂದ ಕೊಬ್ಬಿ ತಾನೇ ಶ್ರೇಷ್ಠನೆಂದು ಹೆಮ್ಮೆಗೊಳ್ಳುತ್ತಾ ಗುರುಹಿರಿಯರಲ್ಲೂ ಸಹ ಅವರು ತನ್ನ ಹಣವನ್ನು ಅಪಹರಿಸುವರೇನೋ

ಎಂದು ಶಂಕೆಪಡುತ್ತಾ, ಆ ಹಣವು ಎಲ್ಲಿ ಖರ್ಚಾಗುವದೋ, ಎಲ್ಲಿ ನಷ್ಟವಾಗುವುದೋ ಎಂದು ಹಗಲಿರುಳು ಚಿಂತಿಸುತ್ತಾ, ಹಣವನ್ನು ಸಂಪಾದಿಸಿ ಅದನ್ನು ಅಭಿವೃದ್ಧಿಪಡಿಸುತ್ತಾ, ಖರ್ಚಾಗದಂತೆ ಕಾಪಾಡಿಕೊಂಡು ಬರುತ್ತಾ, ಸುಖವು ಲೇಶವೂ ಇಲ್ಲದಂತೆ ಆ ಪಿಶಾಚದಂತಹ ಹಣವನ್ನು ಸರ್ವದಾ ಕಾಯುತ್ತಿರುವನೋ ಅವನು ಈ ನರಕಕ್ಕೆ ಬಂದು ಯಮಭಟರಿಂದ ತನ್ನ ಸರ್ವಾಂಗಗಳಲ್ಲಿಯೂ ನೇಯ್ಗೆಯವರು ದಾರವನ್ನು ಪೋಣಿಸಿ ಹೊಲಿಯುವಂತೆ ಇವನ ಅಂಗಕ್ಕೆಲ್ಲಾ ಸೂಜಿಯಿಂದ ಚುಚ್ಚಿ ದಾರಗಳನ್ನು ಪೋಣಿಸಿ ಹೊಲಿಯುವರು.

ಹೀಗೆ ನರಕಗಳು ನೂರಾರು ಪ್ರಕಾರವಿರುವುದು. ಧರ್ಮಿಷ್ಠರಾದ ಜನರು ಯಾವ ಪ್ರಕಾರವಾಗಿ ಸ್ವರ್ಗಾದಿ ಲೋಕಗಳನ್ನು ಹೊಂದಿ ಸುಖಿಸುವರೋ ಹಾಗೆಯೇ ಪಾಪಿಗಳೂ ಸಹ ಅವರ ಪಾಪಕ್ಕನುಸಾರವಾಗಿ ನರಕವನ್ನು ಸೇರಿ ನರಕಯಾತನೆಯನ್ನನುಭವಿಸುವರು.

ಶ್ಲೋ॥ ತಸ್ಮಾತ್ಪುರೈವಾಶ್ವಿಹಪಾಪನಿಷ್ಕೃತೌಯತೇತಮೃತ್ಯೋರಪವಿದ್ಯತಾತ್ಮನಾ। ದೋಷಸ್ಯ ದೃಷ್ಟ್ವಾಗುರುಲಾಘವಂಯಥಾಭಿಷಕ್ಚಿಕಿತ್ಸೇ ತರುಜಾಂನಿದಾನವಿತ್॥

ಆದುದರಿಂದ ವಿವೇಕಿಯಾದವನು ಮೃತ್ಯುವಿನ ಬಾಯಿಗೆ ತುತ್ತಾಗುವುದಕ್ಕಿಂತ ಮೊದಲೇ, ಆರೋಗ್ಯ ಧೃಢಗಾತ್ರನಾಗಿರುವಾಗಲೇ, ಉದಾಸೀನಮಾಡದೆ, ಹೇಗೆಂದರೆ:– ರೋಗವನ್ನರಿತ ವೈದ್ಯನು ವ್ಯಾಧಿಗನುಸಾರವಾಗಿ ಹೇಗೆ ಔಷಧವನ್ನು ಪ್ರಯೋಗಿಸುವನೋ ಹಾಗೆಯೇ ತಾನು ಮಾಡಿದ ಪಾಪಗಳ ಗೌರವ ಲಾಘವಗಳನ್ನು ತಿಳಿದು ಅದಕ್ಕನುಗುಣವಾದಂಥ ಪ್ರಾಯಶ್ಚಿತ್ತಗಳನ್ನು ಮಾಡಿಕೊಳ್ಳಲು ಪ್ರತಿಯೊಬ್ಬನೂ ಯತ್ನಿಸಬೇಕು. ದೀರ್ಘಕಾಲ ಕಳದಲ್ಲಿ ಪಾಪಕ್ಕೆ ದ್ವಿಗುಣ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುವುದು. (ಪ್ರ॥ ಅತೀವಚಿರಕಾಲೇತು ದ್ವಿಗುಣಂ ವ್ರತಮರ್ಹತಿ॥)

ನಾವುಗಳು ಪ್ರತಿದಿನವೂ ಪ್ರತ್ಯಕ್ಷವಾಗಿ ರಾಜದಂಡನೆಗಳನ್ನು ಕಣ್ಣಾರೆ ನೋಡುತ್ತಿದ್ದರೂ, ಹಾಗೆಯೇ ಪಾಪಕೃತ್ಯಗಳೂ ಸಹ ಅಹಿತವಾದದ್ದೆಂದು ಚೆನ್ನಾಗಿ ತಿಳಿದಿದ್ದರೂ ಆ ಪಾಪ ಕೃತ್ಯಗಳನ್ನೇ ಮಾಡುತ್ತಿರುವ ನಮ್ಮಂಥ ಪಾಪಿಗಳಿಗೆ ಪ್ರಾಯಶ್ಚಿತ್ತ ತಾನೇ ಏನಿರುವುದು? ಒಂದು ವೇಳೆ ಹಾಗೆ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೂ ಪುನಃ ಅದೇ ಪಾಪವನ್ನು ಮಾಡುತ್ತಲೇ ಇರುವೆವು. ಹೇಗೆಂದರೆ :– ಆನೆಯು ನಿರ್ಮಲವಾದ ಜಲದಲ್ಲಿ ಮುಳುಗಿ ಚೊಕ್ಕಟವಾಗಿ ಹೊರಗೆ ಬಂದು ಪುನಃ ತನ್ನ ತಲೆಯಮೇಲೆ ಹೇಗೆ ಮಣ್ಣನ್ನು ಸುರಿದುಕೊಳ್ಳುವುದೋ ಹಾಗೆಯೇ ನಾವೂ ಸಹ ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದಾಗಿರುತ್ತದೆ. ಆದರೆ ಪಾಪವು ಕೇವಲ ಪ್ರಾಯಶ್ಚಿತ್ತ ಮಾತ್ರದಿಂದಲೇ ನಿಶ್ಶೇಷವಾಗಿ ಹೋಗಲಾರದು. ಹಾಗೆ ನಿಶ್ಶೇಷವಾಗಿ ಕಳೆದುಕೊಳ್ಳಬೇಕಾಗಿದ್ದಲ್ಲಿ ತತ್ವ ಜ್ಞಾನವನ್ನು ಪಡೆಯಬೇಕು. ಯಾಕೆಂದರೆ – ನಿತ್ಯವೂ ಮಿತಾಹಾರವನ್ನು ಊಟಮಾಡುವನಿಗೆ ಹೇಗೆ ರೋಗವು

ಪೀಡಿಸುವುದಿಲ್ಲವೋ ಹಾಗೆಯೇ ತತ್ವಜ್ಞಾನವನ್ನು ಪಡೆದವನಿಗೆ ಪಾಪವು ಬಾಧಿಸಲಾರದು. ಇಂಥಾ ತತ್ವಜ್ಞಾನವನ್ನು ಪಡೆಯಲು ಅರ್ಹನಾಗುವ ಬಗೆ ಹೇಗೆಂದರೆ :- ಪ್ರ ॥ ತಪಸಾ ಬ್ರಹ್ಮಚರ್ಯೇಣ ಶಮೇನಚದಮೇ ನಚ । ತ್ಯಾಗೇನ ಸತ್ಯಶೌಚಾಭ್ಯಾಂ ಯಮೇನ ನಿಯಮೇನಚ ॥೧॥ ದೇಹ ವಾಗ್ಬುದ್ಧಿಜಂಧೀರಾ ಧರ್ಮಜ್ಞಾಶ್ರದ್ಧ ಯಾನ್ವಿತಾಃ ॥ ಕ್ಷಪಂತ್ಯಘಂಮಹದಪಿ ವೇಣುಗುಲ್ಮಮಿವಾಽನಲಾಃ॥೨॥

ಏಕಾಗ್ರಚಿತ್ತದಿಂದಲೂ, ಬ್ರಹ್ಮಚರ್ಯದಿಂದಲೂ, ಮನೋನಿಗ್ರಹ, ಇಂದ್ರಿಯನಿಗ್ರಹ, ದಾನ, ಸತ್ಯ, ಶೌಚ, ಅಹಿಂಸ, ಜಪ, ನಿಯಮ ಇವುಗಳಿಂದ ಕೂಡಿದವರಾಗಿ ಧರ್ಮಸೂಕ್ಷ್ಮವನ್ನು ತಿಳಿದು ಧೀರರು ಶ್ರದ್ಧಾಯುಕ್ತರಾಗಿ ಬಿದುರು ಮೆಳೆಯನ್ನು ಕಾಡುಗಿಚ್ಚು ಹೇಗೆ ಸುಡುವುದೋ ಅದರಂತೆ ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದುಟಾದ ಪಾಪಗಳನ್ನು ದಹಿಸಿ ಬಿಡುವರು. ಇವುಗಳೇ ಜ್ಞಾನೋತ್ಪತ್ತಿಗೆ ಸಾಧನವಾದ ನಿಯಮಗಳು. ಇಷ್ಟು ನಿಯಮಗಳಿಂದ ಹೊಂದಬೇಕಾದ ಜ್ಞಾನವೆಂಬ ಪ್ರಾಯಶ್ಚಿತ್ತವು ಬಹಳ ಕಷ್ಟವಾಗಿರುವುದಲ್ಲವೆ? ಇದಕ್ಕಿಂತಲೂ ಸುಲಭೋಪಾಯ ಪ್ರಾಯಶ್ಚಿತ್ತವು ಮತ್ತೊಂದಿರುವುದು. ಯಾವುದೆಂದರೆ – ಮೇಲ್ಕಂಡ ನಿಯಮಾದಿಗಳ ಸಹಾಯವಿಲ್ಲದ ಭಕ್ತಿಯೊಂದರಿಂದಲೇ ಶ್ರೀಪರಮಾತ್ಮನನ್ನು ಸರ್ವಭಾವದಿಂದಲೂ ನಂಬಿದ್ದೇ ಆದರೆ ನಮ್ಮ ಪಾಪಗಳು ನಾಶವಾಗುವವು.

ಶ್ಲೋ ॥ ಸಧ್ರೀಚೀನೋಽಹ್ಯಯಂಲೋಕೇಪಂಥಾಃ ಕ್ಷೇಮೋಽಕುತೋಭಯಃ ।
ಸುಶೀಲಾಸ್ಸಾಧವೋಯತ್ರ ನಾರಾಯಣಪರಾಯಣಾ ಃ ॥

ನಾರಾಯಣನನ್ನೇ ಮುಖ್ಯವಾಗಿ ನಂಬಿರತಕ್ಕಂಥ ಸುಶೀಲರಾದ ಸಾಧುಗಳು ಯಾವ ಮಾರ್ಗದಲ್ಲಿರುವರೋ, ಅದೇ ಮಾರ್ಗವು ಲೋಕದಲ್ಲಿ ಭಯರಹಿತವಾದದ್ದಾಗಿಯೂ, ಕ್ಷೇಮಕರವಾದದ್ದಾಗಿಯೂ, ಯೋಗ್ಯವಾದದ್ದಾಗಿಯೂ ಇರುವುದು. ಗಂಗಾದಿ ಮಹಾ ತೀರ್ಥಗಳು ಹೆಂಡದ ಗಡಿಗೆಯನ್ನು ಹೇಗೆ ಪಾವನ ಮಾಡಲಾರವೋ ಹಾಗೆಯೇ ಭಗವಂತನಲ್ಲಿ ಭಕ್ತಿ ಇಲ್ಲದೆ ನಡೆಸಿದ ಯಾವ ಪ್ರಾಯಶ್ಚಿತ್ತವೂ ಪುರುಷನನ್ನು ಪಾವನ ಮಾಡಲಾರವು. ಸಕಲ ಪ್ರಾಯಶ್ಚಿತ್ತಗಳಿಗಿಂತಲೂ ಭಗವದ್ಭಕ್ತಿಯೇ ಸರ್ವೋತ್ತಮವು. ಈ ಭಕ್ತಿಯೆಂಬುವುದು ಅಲ್ಪವಾದರೂ ಮಹಾಫಲವನ್ನು ಕೊಡುವುದು. ಒಳ್ಳೆಯದನ್ನು ಮಾಡಿದವನಿಗೆ ಎಂದೂ ಕೇಡಾಗುವುದಿಲ್ಲ.

ನರಕಲೋಕ ಪ್ರಕರಣ ಸಂಪೂರ್ಣವು.

೧೮. ಗರ್ಭೋತ್ಪತ್ತಿ ಪ್ರಕರಣ

ಸಂಪುಟ ೬, ಸಂಚಿಕೆ ೬ ಶ್ರೀಮುಖ ಭಾದ್ರಪದ ಸೆಪ್ಟೆಂಬರ್ ೧೯೩೩

ಪ್ರಿಯ ವಾಚಕರಿರಾ । ನಾವು ಹಿಂದಿನ ಸಂಚಿಕೆಯಲ್ಲಿ ನರಕಲೋಕ ಪ್ರಕರಣವನ್ನು ಓದಿದ್ದಾಯಿತು. ಇನ್ನು ಈ ನರಕಲೋಕವನ್ನು ಪಡೆಯಲು ಕಾರಣವಾವುದು? ಯಾವುದರಿಂದ ಈ ಅಧೋಗತಿ ಪ್ರಾಪ್ತಿಯಾಗುತ್ತೆ? ಎಂಬುದನ್ನು ತಿಳಿದು, ಮುಂದೆ ಗರ್ಭೋತ್ಪತ್ತಿಯನ್ನು ತಿಳಿದುಕೊಳ್ಳೋಣ.

ಈ ಲೋಕ ಪರಲೋಕಗಳಲ್ಲಿ ಸಂಚಾರ ಮಾಡುವ ಜೀವರಿಗೆ ಗರ್ಭ, ಜನ್ಮ, ಬಾಲ್ಯ, ಕೌಮಾರ, ಪೌಗಂಡ, ಯೌವನ, ಜರಾ, ಮರಣ, ಜಾಗ್ರತ, ಸ್ವಪ್ನ ಸುಷುಪ್ತಿ ಮೊದಲಾದುವುಗಳಲ್ಲಿ ಉಂಟಾಗುವ ದುಃಖಗಳನ್ನು ತಿಳಿದುಕೊಳ್ಳೋಣ.

ಈ ಜಗತ್ತಿನಲ್ಲಿ ಜೀವರು ಮೂರು ವಿಧವಾಗಿರುವರು. ೧. ಬ್ರಹ್ಮಜ್ಞಾನಿಗಳಾಗಿರುವರು ಉತ್ತಮರು. ೨. ಇಷ್ಟಾಪೂರ್ತಾದಿ ಪುಣ್ಯ ಕರ್ಮಗಳನ್ನು ಮಾಡುವರು ಮಧ್ಯಮರು. ೩. ಯಾವ ಸತ್ಕರ್ಮಗಳನ್ನೂ ಮಾಡದೆ ಕೇವಲ ಪಾಪವನ್ನು ಮಾಡಿದವರು ಅಧಮರು.

ಯದ ಧೃವಸ್ಯ ದೇಹಸ್ಯ ಸಾಽನುಬಂಧಸ್ಯ ದುರ್ಮತಿಃ ॥ ಧೃವಾಣಿಮನ್ಯತೇಮೋಹಾ ದ್ಗೃಹಕ್ಷೇತ್ರವಸೂನಿಚ ॥ ಜಂತುರ್ವೈಭವ ಏತಸ್ಮಿನ್‌ಯಾಂಯಾಂಯೋನಿಮನುವ್ರಜೇತ್ । ತಸ್ಯಾಂ ತಸ್ಯಾಂ ಸಲಭತೇ ನಿರ್ವೃತಿಂ ನವಿರಜ್ಯತೇ ॥

ಮೂಢನಾದ ಪುರುಷನು ಅತಿ ಪ್ರಯಾಸಪಟ್ಟು ತನ್ನ ಸುಖಕ್ಕಾಗಿ ಯಾವಯಾವ ಪ್ರಿಯ ವಸ್ತುಗಳನ್ನು ಸಂಪಾದಿಸುವನೋ ಆ ವಸ್ತುಗಳೆಲ್ಲವನ್ನೂ ಭಗವತ್ಸ್ವರೂಪವಾದ ಕಾಲವೇ ನಾಶಗೊಳಿಸುವುದು. ಅಜ್ಞಾನಿಯಾದ ಪುರುಷನು ದೇಹ, ಪತ್ನಿ, ಪುತ್ರ, ಧನ ಮೊದಲಾದ ಅನಿತ್ಯ ವಸ್ತುಗಳನ್ನು ನಿತ್ಯವೆಂದು ನಂಬಿರುವನೋ ಅವು ನಾಶವಾದಾಗ ಅವನು ಗೋಳಾಡುವನು. ಇವನು ಮೂಢನಾದುದರಿಂದ ಸಂಸಾರದಲ್ಲಿ ಯಾವ ಯಾವ ಜನ್ಮಗಳನ್ನು ಪಡೆಯುವನೋ ಆ ಜನ್ಮಗಳಲ್ಲಿ ಸುಖ ಭ್ರಾಂತಿಯಿಂದ ಹಿಗ್ಗುವನೇ ಹೊರತು

ವಿರಕ್ತನಾಗುವುದಿಲ್ಲ. ನರಕದಲ್ಲಿದ್ದು ಅಲ್ಲಿರುವ ಆಹಾರಾದಿಗಳ ಅನುಭವದಲ್ಲಿಯೇ ಸುಖಭ್ರಾಂತಿಯನ್ನು ಪಡೆದು ಭಗವನ್ಮಾಯೆಯಿಂದ ಮರುಳಾದ ಮನುಜನು ಆಗಲೂ ಸಹ ದೇಹವನ್ನು ತೊರೆಯುವುದಕ್ಕೆ ಅಪೇಕ್ಷಿಸುವುದಿಲ್ಲ.

ಆತ್ಮಜಾಯಾಸುತಾಽಗಾರ ಪಶುದ್ರವಿಣ ಬಂಧುಷು । ನಿರೂಢ ಮೂಲಹೃದಯ ಆತ್ಮಾನಂ ಬಹು ಮಾನ್ಯತೇ ॥

ನಿರಂತರವೂ ದೇಹ, ಹೆಂಡಿರು, ಮಕ್ಕಳು, ಮನೆ, ಪಶುಗಳು, ನೆಂಟರು ಮೊದಲಾದವರಲ್ಲಿ ಮನಸ್ಸನ್ನು ನೆಲೆಗೊಳಿಸಿ "ತನಗೆ ಸಮಾನನಾದ ಸುಖಿಯು ಯಾವನೂ ಇಲ್ಲ" ಎಂದು ಅಹಂಕಾರ ಪಡುವನು. ಈ ಪತ್ನೀ ಪುತ್ರಾದಿಗಳನ್ನು ಸಲಹುವ ಚಿಂತೆಯಿಂದ ಪಾಪಕರ್ಮಗಳನ್ನು ಮಾತ್ರ ಮಾಡದೇ ಇರನು. ಅಕ್ಷಿಪ್ತಾತ್ಮೇಂದ್ರಿಯಃ ಸ್ತ್ರೀಣಾಮಸತೀನಾಂಚ ಮಾಯಯಾ।ರಹೋವಿರಚಿತಾಲಾಪ್ಯೈಶ್ಶಿಶೂನಾಂ ಕಲಭಾಷಿಣಾಂ॥

ಜಾರೆಯರಾದ ನಾರಿಯರು ಏಕಾಂತದಲ್ಲಿ ತೋರುವ ಮಾರಕ್ರೀಡಾದಿ ಮಾಯಾವಿಲಾಸಗಳಿಂದಲೂ ಸಂಭೋಗಾದಿ ರೂಪವಾದ ಮಾಯೆಯಿಂದಲೂ, ಇಂಪಾದ ನುಡಿಗಳುಳ್ಳ ಮಕ್ಕಳ ಸವಿನುಡಿಗಳಿಂದಲೂ ಮನಸೋತು ಮೈಮರೆಯುವನು.

ಸಂಸಾರಿಯಾದವನು ಡಂಭಕ್ಕಾಗಿ ಧರ್ಮಗಳನ್ನು ಪ್ರಕಾಶಗೊಳಿಸಿಕೊಂಡು, ಸಂಸಾರವೆಂಬುದು ದುಃಖಮಯವಾಗಿದ್ದರೂ ದುಃಖಕ್ಕೆ ಪ್ರತೀಕಾರವಾಗಿ ಕರ್ಮಗಳನ್ನು ಮಾಡುತ್ತಾ ತಾನು ಸುಖಿಯೆಂದು ತಿಳಿದು ಕೊಳ್ಳುವನು. ಯಾವನು ಯಾರನ್ನು ಸಲಹಿ, ಸಂರಕ್ಷಿಸಿ, ಅವರು ತಿಂದು ಮಿಕ್ಕ ಉಚ್ಛಿಷ್ಟವನ್ನು ತಿಂದು ಜೀವಿಸುತ್ತಾ ಕಡೆಗೆ ತಾನು ನರಕವನ್ನು ಪಡೆಯುವನೋ ಅಂತಹ ಪತ್ನೀಪುತ್ರಾದಿಗಳ ಸಂರಕ್ಷಣೆಗಾಗಿ ನಿರಂತರವೂ ಅಧಿಕವಾದ ಹಿಂಸೆಯಿಂದ ಧನಾರ್ಜನೆಯನ್ನು ಮಾಡಿ ಅಂತಹವರನ್ನು ಸಲಹುತ್ತಿರುವನು! ಒಂದುವೇಳೆ ತನ್ನ ಜೀವನೋಪಾಯವು ಕೆಟ್ಟುಹೋದಲ್ಲಿ ಆಶಾಭಂಗದಿಂದ ಪರಸ್ವತ್ತಿಗೆ ಆಶಿಸಲು ಉಪಕ್ರಮಿಸುವನು. ಇದೂ ಕೈಲಾಗದೆ ಮನಕೆಟ್ಟು ಚಿಂತಿಸಲು ಪರಿಕ್ರಮಿಸುವನು.

ಯೌವನಕಾಲದಲ್ಲಿ ಎಂತಹ ಪಾಪಕಾರ್ಯಗಳಿಗೂ ಹಿಂಜರಿಯದೇ, ಧನಾರ್ಜನೆಮಾಡಿ ಕುಟುಂಬ ಭರಣಮಾಡಿದ ಪುರುಷನು, ತೀರ ವಯಸ್ಕನಾಗಿ, ಕುಟುಂಬಭರಣವನ್ನು ಮಾಡುವುದಕ್ಕೆ ಅಸಮರ್ಥನಾದ ಕೂಡಲೇ, ಅವನ

ಪತ್ನಿಪುತ್ರರಾದಿಗಳೆಲ್ಲರೂ, ಬೇಸಾಯದಿಂದ ಮುದಿಯಾದ ಎತ್ತನ್ನು ಬೇಸಾಯಗಾರನು ಹೇಗೆ ಅಸಡ್ಡೆ ಮಾಡುವನೋ, ಹಾಗೆ ಅಂಥವನನ್ನು, ಕಸಕ್ಕೆ ಬಿದ್ದ ಕಡ್ಡಿಯಂತೆ ಕಾಣುವರು. ಹೀಗೆ ಮನೆಯವರೆಲ್ಲರೂ ಅಸಡ್ಡೆ ಮಾಡಿದರೂ, ತಾನು ಪರಿತಾಪಗೊಳ್ಳದೆ, ಅವರಿಂದಲೇ ಪೋಷಣೆಯನ್ನು ಹೊಂದುತ್ತಾ, ಮುಪ್ಪಿನಿಂದ ಬಲಗುಂದಿ, ಮನೆಯಲ್ಲಿಯೇ ಸಾವಿಗೆ ಸಿದ್ಧನಾಗುವನು. ಕೂಡಲೇ ಆ ಅವಸ್ಥೆಗನುಗುಣವಾಗಿ, ರೋಗಗಳಡರಿ ಜೀರ್ಣಶಕ್ತಿಯಿಲ್ಲದೆ. ಆಹಾರ ಕಡಿಮೆಯಾಗುವುದರಿಂದ, ಶರೀರ ವ್ಯಾಪಾರಗಳನ್ನು ಕೂಡ ನಡೆಯಿಸಲಾರದೆ, ಅಸಡ್ಡೆಯಿಂದ ಮನೆಯವರು ನಾಯಿಗೆ ಬಿಸಾಡುವಂತೆ ತಂದು ಬಿಸಾಡುವ ಅನ್ನವನ್ನು ನಾಚಿಕೆಯಿಲ್ಲದೆ ತಿಂದು ಬಿದ್ದಿರುವನು. ಹೀಗೆ ನರಳುತ್ತಾ ಅವಸಾನಕಾಲವು ಪ್ರಾಪ್ತವಾದ ಕೂಡಲೇ ಶ್ಲೇಷ್ಮವು ಹೆಚ್ಚಿ, ನರಗಳನ್ನು ಬಿಗಿದು, ಗಂಟಲಿಗೇರಲು, ಪ್ರಾಣವಾಯುಗಳು ಹೊರಗೆ ಹೊರಡುವುದಕ್ಕೆ ದಾರಿಯಿಲ್ಲದೆ, ಉಬ್ಬಸ ಕೆಮ್ಮುಗಳಿಂದ ಆಯಾಸಪಡುತ್ತಾ ಗಂಟಲಲ್ಲಿಯೇ ಗುರುಗುಟ್ಟುವನು. ಆಗ ತನ್ನ ಆಪ್ತೇಷ್ಟರು ಸುತ್ತಲೂ ಬಂದು ಕುಳಿತುಕೊಂಡು ಮೃತ್ಯುಪಾಶಬದ್ಧನಾದ ಇವನು ಏನೂ ಉತ್ತರವನ್ನು ಕೊಡಲಾರದವನಾಗುವನು. ಹೀಗೆ ಹುಟ್ಟಿದ ಮೊದಲುಗೊಂಡು ಸಂಸಾರದಲ್ಲಿಯೇ ಆಸಕ್ತನಾಗಿ ಜಿತೇಂದ್ರಿಯನಾಗದೆ ದುರ್ಬುದ್ಧಿಯಿಂದ ಕೊನೆಗೆ ತನ್ನವರು ಅಳುತ್ತಿರುವಾಗ, ತಾನು ಭಯಂಕರವಾದ ಪ್ರಾಣ ಸಂಕಟದಿಂದ ಸಾಯುವನು. ಹೀಗೆ ಸಾಯುವಾಗ ಭಯಂಕರ ರೂಪರಾದ ಯಮಭಟರನ್ನು ನೋಡಿ ಹೆದರಿ ಮಲಮೂತ್ರಗಳನ್ನು ಬಿಡುವನು.

ನಂತರ ಆ ಯಮದೂತರು ಎಷ್ಟು ಕಷ್ಟಕೊಟ್ಟರೂ ಸೈರಿಸಿಕೊಂಡು ಯಾತನೆಯನ್ನು ತೋರುವ ಈತನ ದೇಹದಲ್ಲಿ ಆ ಪಾಪಿ ಜೀವವನ್ನು ಅಡಗಿಸಿ, ಅಪರಾಧಿಯನ್ನು ರಾಜಭಟರು ಕರೆದೊಯ್ಯುವಂತೆ, ಕೊರಳಿಗೆ ಹಗ್ಗವನ್ನು ಬಿಗಿದು ಬಹಳ ದೂರವಾದ ದಾರಿಯಲ್ಲಿ ಸೆಳೆದುಕೊಂಡು ಹೋಗುವರು. ಈ ಜೀವನು ಆ ಯಮಭಟರ ಆರ್ಭಟಗಳಿಂದ ಎದೆ ಒಡೆದು ಗಡಗಡನೆ ನಡುಗುತ್ತಾ, ದಾರಿಯುದ್ದಕ್ಕೂ ನಾಯಿಗಳಿಂದ ಕಿತ್ತು ತಿನ್ನಲ್ಪಡುತ್ತಾ, ಬಳಲಿ, ಬೆಂಡಾಗಿ, ಹಿಂದೆ ತಾನು ಮಾಡಿದ ಪಾಪಕರ್ಮಗಳನ್ನು ಸ್ಮರಿಸಿಕೊಳ್ಳುತ್ತಾ, ಹಸಿವು ನೀರಡಿಕೆಗಳಿಂದ ಬಳಲಿ, ಕಾದ ಮರಳಿನಿಂದ ತುಂಬಿ, ಬಿಸಿಲಿನಿಂದಲೂ, ಕಾಳ್ಗಿಚ್ಚಿನಿಂದಲೂ, ಬಿರುಗಾಳಿಯಿಂದಲೂ, ಭಯಂಕರವಾಗಿ ಕುಡಿಯುವುದಕ್ಕೆ ನೀರಿಲ್ಲದೆ, ನಿಲ್ಲುವುದಕ್ಕೆ ನೆರಳಿಲ್ಲದೆ ದುರ್ಗಮವಾದ ದಾರಿಯಲ್ಲಿ ನಡೆಯುತ್ತಾ, ಯಮಭಟರಿಂದ ಅಡಿಗಡಿಗೂ ಚಾಟಿಗಳಿಂದ ಬೆನ್ನಿನಮೇಲೆ ಹೊಡೆಸಿಕೊಳ್ಳುತ್ತಾ, ಬಲಗುಂದಿ ನಡೆಯುವುದಕ್ಕೆ ಕೈಲಾಗದಿದ್ದರೂ, ಬಲಾತ್ಕಾರದಿಂದ ನಡೆಯುವನು. ದಾರಿಯಲ್ಲಿ ಬೀಳುತ್ತಾ, ಮೂರ್ಛಿತನಾಗುತ್ತಾ, ಚೇತರಿಸಿಕೊಳ್ಳುತ್ತಾ, ಕಗ್ಗತ್ತಲೆಯಿಂದ ತುಂಬಿದ ಪಾಪಿಷ್ಠವಾದ ದಾರಿಯಲ್ಲಿ ಯಮಪುರಿಗೆ ತೆರಳುವನು. ಹೀಗೆ ಪಾಪಿಯಾದವನು ೯೯ ಸಾವಿರ ಯೋಜನಗಳ ದೂರದಲ್ಲಿರುವ

ಯಮಪುರ ಮಾರ್ಗವನ್ನು ಆರು ಗಳಿಗೆಗಳಲ್ಲಿ ನಡೆಯುತ್ತಾ ಹಲವು ಯಾತನೆಗಳನ್ನು ಅನುಭವಿಸುವನು.

ಪ್ರಿಯ ವಾಚಕರಿರಾ! ನರಕಗಳಲ್ಲಿ ಅನುಭವಿಸಬೇಕಾದ ಯಾತನೆಗಳೆಲ್ಲವೂ ಇಲ್ಲಿಯೇ ಕಾಣಲ್ಪಡುತ್ತಿರುವುದರಿಂದ ಸ್ವರ್ಗವೂ. ನರಕವೂ ಸಹ ಇಲ್ಲಿಯೇ ಇರುವುದಲ್ಲವೇ? ಹೀಗೆ ಕುಟುಂಬವನ್ನು ಕಟ್ಟಿಕೊಂಡಿರುವ ಸಂಸಾರಿಯಾಗಲೀ, ತನ್ನ ದೇಹವನ್ನು ಮಾತ್ರ ಪೋಷಿಸಿಕೊಳ್ಳುವ ಹೊಟ್ಟೆಬಾಕನಾಗಲೀ ಇವೆರಡನ್ನೂ ಪರಿತ್ಯಾಗ ಮಾಡದೇ, ಕಡೆಗೆ ತನ್ನ ದುಷ್ಕರ್ಮಗಳಿಗನುಗುಣವಾದ ಪಾಪಕರ್ಮಗಳನ್ನೇ ಅನುಭವಿಸುವನು. ಇತರ ಪ್ರಾಣಿಗಳನ್ನು ಗೋಳಾಡಿಸಿ ಸಂಪಾದಿಸಿದ ದ್ರವ್ಯದಿಂದ ಯಾವ ದೇಹವು ಅತಿ ಪ್ರೀತಿಯಾಗಿ ಪೋಷಿಸಲ್ಪಟ್ಟಿತೋ, ಅಂತಹ ದೇಹವನ್ನು ಇಲ್ಲಿಯೇ ಬಿಟ್ಟು, ತಾನು ಮಾಡಿದ ಪಾಪದ ಬುತ್ತಿಯನ್ನು ಮಾತ್ರ ಕಟ್ಟಿಕೊಂಡು ಒಬ್ಬನೇ ಯಮಪುರದ ಮಾರ್ಗದಲ್ಲಿ ಪ್ರಯಾಣ ಮಾಡುವನಲ್ಲಾ!! ಹಣವನ್ನು ಕಳೆದುಕೊಂಡು, ಮನೋರೋಗದಿಂದ ನರಳುವವನಂತೆ ಇವನು ಯಾವ ಕುಟುಂಬ ಪೋಷಣೆಗಾಗಿ ಪಾಪಕೃತ್ಯಗಳನ್ನು ಮಾಡಿದನೋ, ಆ ಕುಟುಂಬವೂ ಸಹ ಇಲ್ಲದೆ, ತಾನೊಬ್ಬನೇ ದೈವದಿಂದೊಗಿರುವ ಪಾಪಫಲಗಳನ್ನು ನರಕದಲ್ಲಿ ಅನುಭವಿಸುವನು. ಹೀಗೆ ನರಕಲೋಕದಲ್ಲಿ ಅನೇಕ ಯಾತನೆಗಳನ್ನು ಅನುಭವಿಸಿ, ಪುನಃ ಈ ಮನುಷ್ಯ ಜನ್ಮಕ್ಕಿಂತ ಅತಿ ಕೀಳಾದ ನಾನಾ ಯೋನಿಗಳಲ್ಲಿ ಜನಿಸಿ, ಅಲ್ಲಲ್ಲಿ ಪಾಪಗಳೆನ್ನವನ್ನೂ ಕ್ರಮವಾಗಿ ಅನುಭವಿಸಿ, ಪರಿಶುದ್ಧನಾಗಿ, ಪುನಃ ಈ ಮನುಷ್ಯ ಜನ್ಮವನ್ನು ಪಡೆಯುವನು.

ಈಗ ಜೀವನು ಗರ್ಭಜನ್ಮಾದಿಗಳಲ್ಲಿ ಪಡೆಯುವ ದುಃಖವನ್ನು ತಿಳಿದುಕೊಳ್ಳೋಣ. ಜೀವನು ನರಕಾದ್ಯನುಭವವನ್ನು ಮಾಡಿದ ಬಳಿಕ, ದೈವಪ್ರೇರಿತವಾದ ತನ್ನ ಕರ್ಮಶೇಷದಿಂದ, ಪುನಃ ಜನ್ಮವನ್ನು ಪಡೆಯುವುದಕ್ಕಾಗಿ, ವೃಷ್ಟಿರೂಪದಿಂದ ಭೂಲೋಕಕ್ಕಿಳಿದು ಧಾನ್ಯಾದಿಗಳಲ್ಲಿ ಸೇರಿ ಅಲ್ಲಿಂದ ಅನ್ನರಸ ಪರಿಣಾಮರೂಪವಾದ ಪುರುಷ ರೇತಸ್ಸಿನಲ್ಲಿ ಅನುಪ್ರವೇಶಮಾಡಿ, ಋತುಕಾಲದಲ್ಲಿ ಯೋನಿದ್ವಾರದಿಂದ ಸ್ತ್ರೀಗರ್ಭವನ್ನು ಪ್ರವೇಶಿಸುವನು. ಆ ರೇತಸ್ಸೆಂಬುದು ಸ್ತ್ರೀಗರ್ಭದಲ್ಲಿ ನಿಂತು ಶೋಣಿತದೊಡನೆ ಸೇರಿ ಒಂದು ರಾತ್ರಿಯಲ್ಲಿ ದ್ರವರೂಪವಾಗುವುದು. ಇದಕ್ಕೆ ಕಲಿಲವೆಂದು ಹೆಸರು. ಈ ಕಲಿಲವು ಐದು ರಾತ್ರೆಗಳಲ್ಲಿ ನೀರುಗುಳ್ಳೆಯಂತೆ ಗುಂಡಾಗುವುದು. ಇದಕ್ಕೆ ಬುದ್ಬುದವೆಂದು ಹೆಸರು. ಈ ಬುದ್ಬುದವು ಹತ್ತು ರಾತ್ರೆಗಳಲ್ಲಿ ಬೋರೆಯ ಹಣ್ಣಿನಂತೆ ಕೊಂಚ ಗಟ್ಟಿಯಾಗುವುದು. ಇದಕ್ಕೆ ಕರ್ಕದಾವೆಂದು ಹೆಸರು. ತರುವಾಯ ಇದು ಗಟ್ಟಿಯಾದ ಮಾಂಸಪಿಂಡವಾಗಿ ಪರಿಣಮಿಸುವುದು. ಈ ಗರ್ಭಗಳು ತಮ್ಮ ತಮ್ಮ ಕರ್ಮಾನುಸಾರವಾಗಿ ನಾನಾವಿಧವಾಗಿ ಬೆಳೆಯುವವು. (ಪ್ರ ॥ ನಾನಾವಿಧಗರ್ಭವೃದ್ಧಿಃ

ಕರ್ಮಬೇಧಾದ್ಭವಿಷ್ಯತಿ ॥) ಬಳಿಕ ಈ ಪಿಂಡಕ್ಕೆ ಒಂದು ತಿಂಗಳಾದ ಮೇಲೆ ತಲೆಯೂ, ಎರಡನೆಯ ತಿಂಗಳಲ್ಲಿ ತೋಳುಗಳೂ, ಕಾಲುಗಳೂ ಮೊದಲಾದ ಅಂಗಗಳು ಉಂಟಾಗುವವು. ಮೂರನೆಯ ತಿಂಗಳಲ್ಲಿ ಉಗುರುಗಳೂ, ರೋಮಗಳೂ, ಮೂಳೆಗಳೂ, ಚರ್ಮವೂ, ಸ್ತ್ರೀಪುರುಷ ಚಿನ್ಹೆಗಳೂ ಕಾಣುವುವು. ನಾಲ್ಕನೆಯ ತಿಂಗಳಿನಲ್ಲಿ ರಕ್ತಮಾಂಸಾದಿ ಸಪ್ತಧಾತುಗಳು ಉಂಟಾಗುವವು. ಐದನೇ ತಿಂಗಳಿನಲ್ಲಿ ಹಸಿವು ನೀರಡಿಕೆಗಳು ಹುಟ್ಟುವವು. ಆರನೇ ತಿಂಗಳಲ್ಲಿ ಗರ್ಭಾವರಣ ರೂಪವಾದ ಜರಾಯುವೆಂಬ ಚೀಲದಿಂದ ಪರಿವೃತವಾಗಿ ಹೊಟ್ಟೆಯ ಬಲಭಾಗದಲ್ಲಿ ಹೊರಳಲು ತೊಡಗುವುದು. ಗರ್ಭವು ಗಂಡಾಗಿದ್ದಲ್ಲಿ ಹೊಟ್ಟೆ ಬಲಗಡೆಯಲ್ಲಿಯೂ, ಹೆಣ್ಣಾಗಿದ್ದಲ್ಲಿ ಎಡಗಡೆಯಲ್ಲಿಯೂ ಇರುವುದು. (ಪ್ರ॥ ಪುತ್ರೋ ದಕ್ಷಿಣಕುಕ್ಷೌಸ್ಯಾದ್ವಾಮೇ ಕನ್ಯಾ ಭವೇಧ್ರುವಂ ॥) ಏಳನೇ ತಿಂಳಗಳಲ್ಲಿ ಜೀವನು ಕಳೆದುಹೋದ ಜನ್ಮಕರ್ಮಾದಿಗಳನ್ನು ಸ್ಮರಿಸಿಕೊಳ್ಳುವನು.

ಹೀಗೆ ಗರ್ಭಸ್ಥನಾದ ಜೀವನು ಅಲ್ಲಿ ಹಸಿವುಗೊಂಡ ಕ್ರಿಮಿಗಳಿಂದ ಬಾರಿಬಾರಿಗೂ ಕಚ್ಚಿಸಿಕೊಳ್ಳುತ್ತಾ, ನೋವನ್ನು ತಡೆಯಲಾರದೆ, ವೇದನೆಯು ಹೆಚ್ಚಿ ಮೂರ್ಛಿತನಾಗುವನು. ತಾಯಿಯು ತಿಂದ ಉಪ್ಪು, ಕಾರ, ಒಗರು, ಕಹಿ ಮೊದಲಾದ ಅನ್ನರಸಗಳು ಒಳಕ್ಕೆ ಇಳಿದು, ಆ ಯಾತನೆಯಿಂದ ಸರ್ವಾಂಗಗಳಲ್ಲಿಯೂ ನಡುಕವುಂಟಾಗುವುದು. ಹೀಗಿರಲು ಜರಾಯುವೆಂಬ ಮಾಸಿನ ಚೀಲವು ಗರ್ಭವನ್ನು ಮುಚ್ಚಿಡುವುದು. ಹೊರಗಡೆ ಕರುಳುಗಳು ಪಂಜರದಂತೆ ಬಳಸುವವು. ಇಂತಹ ಇಕ್ಕಟ್ಟಿಗೆ ಸಿಕ್ಕಿ ಜೀವನು ತನ್ನ ಹೊಟ್ಟೆಯಲ್ಲಿ ತಲೆ ಅಡಗಿಸಿಕೊಂಡು, ಕತ್ತು ಬೆನ್ನುಗಳನ್ನು ಬಾಗಿಸಿಕೊಂಡು ಪಿಂಡಾಕಾರವಾಗಿರುವನು. ಪಂಜರದಲ್ಲಿ ಸಿಕ್ಕಿದ ಹಕ್ಕಿಯಂತೆ ಕೈಕಾಲುಗಳನ್ನು ಅಲ್ಲಾಡಿಸುವುದಕ್ಕೂ ಅವಕಾಶವಿಲ್ಲದೆ, ಉಸಿರಾಡುವುದಕ್ಕೂ ಸಹ ಇಲ್ಲದೆ, ಹಿಂದಿನ ಪಾಪಕರ್ಮಗಳನ್ನು ಸ್ಮರಿಸಿಕೊಂಡು, ದುಃಖಮಯನಾಗಿ, ಸ್ವಲ್ಪವೂ ಸುಖವನ್ನು ತಿಳಿಯುವುದಿಲ್ಲ. ಏಳನೆಯ ತಿಂಗಳು ಮೊದಲುಗೊಂಡು ಜೀವನಿಗೆ ಸುಖದುಃಖ ಜ್ಞಾನವುಂಟಾದರೂ, ಪ್ರಸೂತಿವಾತಗಳ ಹೊಡೆತದಿಂದ ಮಲದಲ್ಲಿ ಜನಿಸಿದ ಹುಳುವಿನಂತೆ ಒಂದುಕಡೆ ನಿಲ್ಲುವುದಕ್ಕೂ ಸಹಯತ್ನವಿಲ್ಲದೆ ಅಲೆದಾಡುವನು. ಹೀಗೆ ಜೀವನು ಗರ್ಭದಲ್ಲಿದ್ದು ಸಪ್ತಧಾತು ಶರೀರವೆಂಬ ಬಂಧನದಲ್ಲಿ ಸಿಕ್ಕಿ, ಆ ಗರ್ಭದುಃಖಗಳಿಂದ ಹೆದರುತ್ತಾ, ಪಶ್ಚಾತ್ತಪ್ತನಾದ ಜೀವನು ಪಾಪಿಯಾದ ತನಗೆ ಅನುಗುಣವಾಗಿ ಯಾರಿಂದ ನರಕಯಾತನ ಸದೃಶವಾದ ಈ ಗರ್ಭದುಃಖ ಉಂಟಾಗಿರುವುದೋ, ಅಂತಹ ಭಗವಂತನನ್ನು ಅಂಗಲಾಚಿ ಬೇಡುತ್ತಾ, ಕೈಜೋಡಿಸಿಕೊಂಡು ಹೊಗಳುವನು. ಯಾವ ಮಹಾತ್ಮನಿಂದ ದುರಾತ್ಮನಾದ ನನಗೆ ಅನುರೂಪವಾದ ಈ ಗರ್ಭವಾಸ ದುಃಖ ಪ್ರಾಪ್ತವಾಗಿರುವುದೋ, ಯಾವನು ಭೂಭಾರವನ್ನು ತಗ್ಗಿಸಿ ಜಗತ್ತನ್ನು ಸಲಹುವುದಕ್ಕಾಗಿ ನಾನಾವತಾರಗಳನ್ನು ಪಡೆಯುವನೋ, ಯಾವನ

ಪಾದ ಸಂಚಾರದಿಂದ ಈ ಭೂಮಿಯು ಪವಿತ್ರವೆನಿಸುವುದೋ, ಯಾವನ ಪಾದಾರವಿಂದವು ಸಕಲ ಭಯಗಳನ್ನೂ ತೊಲಗಿಸುವುದೋ, ಅಂತಹ ಪರಮಾತ್ಮನ ಪಾದಕಮಲಗಳನ್ನು ಮೊರೆಹೋಗುವೆನು.

ಹೇ! ಭಗವಂತನೇ! ಮಾತೃಗರ್ಭದಲ್ಲಿರುವ ರಕ್ತ, ಮಲ, ಮೂತ್ರಗಳ ಗುಂಡಿಯಲ್ಲಿ ಬಿದ್ದು, ಜಠರಾಗ್ನಿಯ ಬೇಗೆಯಿಂದ ಮೈಬೆಂದು, ಈ ನರಕದ ಗುಂಡಿಯಿಂದ ಹೊರಡಲು ಯತ್ನಿಸುತ್ತಾ ನಾನು ತಿಂಗಳುಗಳನ್ನು ಲೆಕ್ಕಿಸುತ್ತಿರುವೆನಾದ್ದರಿಂದ, ಮತಿಗೆಟ್ಟುಮುಂದೋರದಿರುವ ನನ್ನನ್ನು ಯಾವಾಗ ಪಾರುಗಾಣಿಸುವೆ? ಸಾಮ್ಯರಹಿತನಾಗಿಯೂ, ಅತ್ಯಂತ ದಯಾಳುವಾಗಿಯೂ ಇರುವ ನೀನು ಹತ್ತು ತಿಂಗಳು ವಯಸ್ಸುಳ್ಳ ನನಗೆ ಜನ್ಮಾಂತರ ಸ್ಮರಣರೂಪವಾದ ಈ ದಿವ್ಯಜ್ಞಾನವನ್ನು ಕೊಟ್ಟೆಯೋ, ಈ ನಿನ್ನ ಮಹದುಪಕಾರಕ್ಕೆ ಕೈಮುಗಿಯುವೆನು.

ಹೀಗೆ ಗರ್ಭಸ್ಥನಾದ ಜೀವನು ಏಳನೆಯ ತಿಂಗಳು ಮೊದಲುಗೊಂಡು ಹತ್ತುತಿಂಗಳು ತುಂಬಿ ಪ್ರಸವ ಸಮಯವು ಸಮೀಪಿಸುವವರೆವಿಗೂ ಪೂರ್ವ ಸ್ಮರಣೆಯಿಂದ ಭಗವಧ್ಯಾನಾತತ್ಪರನಾಗಿರುವನು. ಆ ಪ್ರಸವಕಾಲವು ಸನ್ನಿಹಿತವಾದ ಕೂಡಲೇ, ಪ್ರಸೂತಿವಾತವು ಪ್ರಸವಕ್ಕಾಗಿ ತಲೆಕೆಳಗಾಗಿ ಉರುಳಿಸುವುದು. ಆ ವಾಯುವು ತಳ್ಳಿದೊಡನೆಯೇ ಜೀವನು ತಟ್ಟನೆ ತಲೆಕೆಳಗಾಗಿ ಉರುಳಿ ದುಃಖಿಸುತ್ತಾ, ಪೂರ್ವಜ್ಞಾನವು ನಷ್ಟವಾಗಿ, ಉಸಿರು ಬಿಡುವುದಕ್ಕೂ ಸಹ ಆಗದೆ, ಅತಿ ಪ್ರಯಾಸದಿಂದ ಗರ್ಭದಿಂದ ಬರುವನು.

ಹೀಗೆ ರಕ್ತ ಮಲಮೂತ್ರಾದಿಗಳಿಂದ ಸಿಕ್ಕಿ ನೆಲಕ್ಕೆ ಬಿದ್ದಕೂಡಲೇ ಹೇಸಿಗೆಯ ಗುಂಡಿಯಲ್ಲಿ ಮಿಣುಗುಟ್ಟುವ ಹುಳುವಿನಂತೆ ಹೊರಳಾಡುತ್ತಾ ಗಟ್ಟಿಯಾಗಿ ಅಳತೊಡಗುವನು.

ಹೀಗೆ ತನ್ನ ಇಂಗಿತವನ್ನು ಅರಿಯಲಾರದ ಪೋಷಕರ ಕೈಗೆ ಸಿಕ್ಕಿ, ತನ್ನ ಸುಖದುಃಖಗಳನ್ನು ಹೇಳಿಕೊಳ್ಳುವುದಕ್ಕೆ ಬಾಯಿ ಇಲ್ಲದೆ, ಅವರಾಗಿ ಊಹಿಸಿಕೊಂಡು ಮಾಡುವ ಉಪಚಾರಗಳು ತನಗೆ ಅನಿಷ್ಟವಾಗಿದ್ದರೂ, ಇಷ್ಟವಿಲ್ಲವೆಂದು ಹೇಳುವುದಕ್ಕೆ ಶಕ್ತಿಯಿಲ್ಲದೆ, ಹೊಟ್ಟೆಯ ನೋವಿಗಾಗಿ ಅತ್ತಾಗ ಹಸಿವೆಂದು ಹಾಲು ಕುಡಿಸಿದರೂ, ಹಸಿವಿನಿಂದತ್ತಾಗ ಹೊಟ್ಟೆನೋವೆಂದು ಬೇವಿನ ರಸವನ್ನು ಕುಡಿಸಿದರೂ ಯತ್ನವಿಲ್ಲದೆ ಕುಡಿಯುವುದು. ಹೇಸಿಗೆಯಾದ ಹಾಸಿಗೆಯಲ್ಲಿ ಮಲಗಿಸಿದಾಗ ಸೊಳ್ಳೆ, ತಿಗಣೆ ಮೊದಲಾದುವುಗಳು ಕಚ್ಚಿದರೂ, ಕೆರೆದುಕೊಳ್ಳುವುದಕ್ಕಾಗಲೀ, ಹೊರಳುವುದಕ್ಕಾಗಲೀ ಶಕ್ತಿಯಿಲ್ಲದೆ ಅಳುವುದು. ಈ ಜಂತುಗಳು ನಿರಾತಂಕವಾಗಿ ಮತ್ತಷ್ಟು ಕಚ್ಚುತ್ತಲೇ ಇರುವುವು.

ಹೀಗೆ ಐದು ವರ್ಷಗಳವರೆವಿಗೂ ಬಾಲ್ಯಾವಸ್ಥೆಯಲ್ಲಿ ಅನೇಕ ದುಃಖಗಳನ್ನನುಭವಿಸಿ ಬಳಿಕ ತಿಳಿವಳಿಕೆಯಿಲ್ಲದೆ ಅಲಭ್ಯವಾದ ವಸ್ತುಗಳನ್ನು ಬಯಸುತ್ತಾ, ಅವು ದೊರಕದಿದ್ದಲ್ಲಿ ಕೋಪಿಸಿಕೊಳ್ಳುತ್ತಾ, ಆ ಕೋಪಕ್ಕೆ ಫಲವಿಲ್ಲದೆ ಅಳುತ್ತಾ ಪೌಂಗಡವೆಂಬ ಬಾಲ್ಯ, ಯೌವನ, ಮಧ್ಯಾವಸ್ಥೆಯ ದುಃಖಗಳನ್ನನುಭವಿಸುವನು. ಹೀಗೆ ಗರ್ಭೋತ್ಪತ್ತಿ ಮೊದಲುಗೊಂಡು ಬಾಲ್ಯ, ಪೌಂಗಡ ದುಃಖಗಳನ್ನು ವರ್ಣಿಸಿದ್ದಾಯಿತು. ವಾಚಕರಿರಾ! ಮುಂದಿನ ಸಂಚಿಕೆಯಲ್ಲಿ ಯೌವನಾವಸ್ಥೆಯಲ್ಲಿ ಏನೇನು ದುಃಖಗಳಿರುತ್ತೆಂಬುದನ್ನು ತಿಳಿಯಲು ಕಾತುರರಾಗಿರಿ.

ಗರ್ಭೋತ್ಪತ್ತಿ ಪ್ರಕರಣ ಸಂಪೂರ್ಣಂ

೧೯. ಯೌವನಾವಸ್ಥ ಪ್ರಕರಣ

ಸಂಪುಟ ೭ ಸಂಚಿಕೆ ೧ ಭಾವ, ಚೈತ್ರ ಏಪ್ರಿಲ್ ೧೯೩೪

ವಾಚಕರಿರಾ! ಹಿಂದಿನ ಸಂಚಿಕೆಯಲ್ಲಿ ಗರ್ಭೋತ್ಪತ್ತಿ ಪ್ರಕರಣದಲ್ಲಿ ಬಾಲ್ಯ, ಪೌಗಂಡಾದ್ಯವಸ್ಥೆಗಳನ್ನು ತಿಳಿದುಕೊಂಡೆವು. ಇನ್ನು ಯೌವನಾವಸ್ಥೆಯ ದುಃಖಗಳನ್ನು ತಿಳಿಯೋಣ.

ಈ ಯೌವನವು ತಲೆದೋರಿದ ಕೂಡಲೆ, ಕಾಮುಕನಾಗಿ ಶರೀರದೊಡನೆಯೇ ಬೆಳೆದ ಅಭಿಮಾನದಿಂದಲೂ, ಕೋಪ (ಗರ್ವ)ದಿಂದಲೂ, ತನ್ನ ನಾಶಕ್ಕಾಗಿ, ತನ್ನ ಕಾಮಕ್ಕೆ ವಿಘ್ನಕಾರಿಗಳಾದ ಇತರ ಕಾಮುಕರೊಡನೆ ಕಾದಾಡುವನು. ಹೀಗೆ ಕಾದಾಡುವಾಗ ಶರೀರದಲ್ಲಿ ದುರಾಗ್ರಹವುಳ್ಳವನಾಗಿ "ನಾನು, ನನ್ನದು" ಎಂಬ ಅಹಂಕಾರ, ಮಮಕಾರಗಳನ್ನು ಪಡೆಯುವನು. ಈ ಪ್ರಕಾರ ದೇಹ ರಕ್ಷಣಾರ್ಥವಾಗಿ ನಾನಾ ಕರ್ಮಗಳನ್ನು ಮಾಡುತ್ತಾ, ಆ ಕರ್ಮಗಳಿಗೆ ಬದ್ಧನಾಗಿ ಸಂಸಾರ ಪ್ರವಾಹದಲ್ಲಿ ಬಿದ್ದು ಬಲವಾದ ಬಲೆಗೆ ಸಿಕ್ಕಿ ಬಾರಿಬಾರಿಗೂ ದುಃಖಕರವಾದ ಶರೀರವನ್ನು ಪಡೆಯುವನು. ಈ ದೇಹವನ್ನು ಪಡೆದಮೇಲೆ, ಆಹಾರ, ಮೈಥುನಗಳಿಗಾಗಿ ತವಕಗೊಳ್ಳುವ ಅಸ್ಥಿರಗಳಾದ ಪುತ್ರ ಕಳತ್ರಾದಿಗಳ ಬೆಳವೆಗೆ ಬೆರಗಾಗಿ, ಅವರ ದಾರಿಯನ್ನೇ ಅನುಸರಿಸಿ, ಅವರೊಡನೆಯೇ ಕ್ರೀಡಿಸುತ್ತಿದ್ದರೆ, ಹಿಂದಿನಂತೆಯೇ ಪುನಃ ನರಕವನ್ನು ಹೊಂದುವುದೇ ದಿಟವು.

ಸತ್ಯಂ ಶೌಚಂ ದಯಾಮೌನಂ ಬುದ್ಧಿಶ್ರೀಃಹ್ರೀರ್ಯಶಃಕ್ಷಮಾ॥ ಶಮೋದಮೋ ಭಗಶ್ಚೇತಿ ಯತ್ಸಂಗಾ ದ್ಯಾತಿ ಸಂಕ್ಷಯಂ॥೧॥ ತೇಷ್ವ ಶಾಂತೇಷು ಮೂಢೇಷು ಖಂಡಿತಾತ್ಮ ಸ್ವಸಾಧುಷು॥ ಸಂಗಂ ನಕುರ್ಯಾಚ್ಛೋಚ್ಯೇಷು ಯೋಷಿತ್ಕ್ರೀಡಾ ಮೃಗೇಷುಚ॥೨॥

ಸತ್ಯ, ಸದಾಚಾರ, ದಯೆ, ಮಿತ ಭಾಷೆ, ಪುರುಷಾರ್ಥ ವಿಷಯಕವಾದ ಬುದ್ಧಿ, ಧನಧಾನ್ಯಾದಿ ಸಂಪತ್ತು, ದುಷ್ಕಾರ್ಯ ಮಾಡುವುದರಲ್ಲುಂಟಾಗ ಬೇಕಾದ ನಾಚಿಕೆ, ಕೀರ್ತಿ, ಶಾಂತಿ ಬಹಿರಿಂದ್ರಿಯಗಳನ್ನು ವಿಷಯಗಳಲ್ಲಿ ಬಿಡದೆ ತಡೆಯುವ ಶಕ್ತಿ, ಮನೋನಿಗ್ರಹ, ಅಭಿವೃದ್ಧಿ ಇವೆಲ್ಲವೂ ಯಾರ ಸಂಗವನ್ನು ಮಾಡಿದಲ್ಲಿ ನಾಶವಾಗುವದಿಲ್ಲವೋ, ಅಂತಹ

ಸಂಗವನ್ನೇ ಮಾಡಬೇಕು. ಅದಿಲ್ಲದೆ ಕ್ರೂರರೂ, ಬುದ್ಧಿಹೀನರೂ, ಆತ್ಮದ್ರೋಹಿಗಳೂ, ದುಷ್ಟರೂ, ಶೋಚನೀಯರೂ, ಸ್ತ್ರೀಯರಿಗೆ ಕ್ರೀಡಾಮೃಗಗಳಂತೆ ಕಿಂಕರರೂ ಆದ ದುರ್ಜನರ ಸಂಗವನ್ನು ಮಾತ್ರ ಮಾಡಬಾರದು.

ಪುರುಷರಿಗೆ ಸ್ತ್ರೀ ಸಹವಾಸದಿಂದಲ್ಲದೆ ಮತ್ತಾವ ಸಂಗದಿಂದಲೂ, ಮೋಹವಾಗಲೀ ಸಂಸಾರ ಬಂಧನವಾಗಲೀ ಉಂಟಾಗಲಾರದು. (ಪ್ರ॥ ನತಥಾऽಸ್ಯ ಭವೇನ್ಮೋಹೋ ಬಂಧಶ್ಚಾऽನ್ಯ ಪ್ರಸಂಗತಃ। ಯೋಷಿತ್ಸಂಗಾ ದ್ಯಥಾಪುಂಸೋ ಯಥಾ ತತ್ಸಂಗಿ ಸಂಗತಃ॥)

ಈ ಲಲನೆಯರ ಸಂಗವು ಹೇಗೆ ಅನರ್ಥವನ್ನುಂಟು ಮಾಡುವದೆಂಬುದನ್ನು ಇತಿಹಾಸ ನಿದರ್ಶನದಿಂದ ತಿಳಿದುಕೊಳ್ಳೋಣ.

ಪೂರ್ವದಲ್ಲಿ ಚತುರ್ಮುಖ ಬ್ರಹ್ಮನು ತನ್ನ ಮಗಳಾದ ಸರಸ್ವತೀದೇವಿಯನ್ನು ಕಂಡು, ಆಕೆಯ ಸೌಂದರ್ಯಕ್ಕೆ ಮರುಳಾಗಿ, ಹುಲ್ಲೆಯ ರೂಪದಿಂದೋಡುತ್ತಿದ್ದ ಆಕೆಯನ್ನು ಕಂಡು, ನಾಚಿಕೆಯಿಲ್ಲದೆ ತಾನೂ ಅದೇ ರೂಪದಿಂದ ಆಕೆಯನ್ನು ಬೆನ್ನಟ್ಟಿದನು. ಹೀಗಿರುವಾಗ ಪರಮಾತ್ಮನ ಹೊರತು ಯಾವನು ತಾನೇ ಸ್ತ್ರೀ ರೂಪವಾದ ಮಾಯೆಗೆ ಒಳಗಾಗದಿರುವನು? ಸ್ತ್ರೀರೂಪವಾದ ಮಾಯಾ ಶಕ್ತಿಯು ಒಂದಾವರ್ತಿ ತನ್ನ ಹುಬ್ಬನ್ನು ಹಾರಿಸಿದ ಮಾತ್ರದಿಂದಲೇ, ಸಕಲ ದಿಕ್ಕುಗಳನ್ನೂ ಗೆದ್ದ, ಮಹಾಶೂರನನ್ನೂ ಸಹ ನಿಮಿಷಮಾತ್ರದಲ್ಲಿ ಪಾದಾಕ್ರಾಂತನನ್ನಾಗಿ ಮಾಡಿಕೊಳ್ಳುವುದು. ಆದ್ದರಿಂದ ನರಕಕ್ಕೆ ದ್ವಾರಭೂತರಾದ ಸ್ತ್ರೀಯರಲ್ಲಿ ಮಾತ್ರ ಯಾವಗಲೂ ಸಂಗವನ್ನು ಮಾಡಬಾರದು.

ಅಂಗಾರ ಸದೃಶೀ ನಾರೀ ಘೃತಕುಂಭ ಸಮಃಪುಮಾನ್ । ತಸ್ಮಾನ್ನಾರೀಷು ಸಂಸರ್ಗಂ ದೂರತಃ ಪರಿವರ್ಜಯೇತ್॥ ಸ್ತ್ರೀಯನ್ನು ಅಗ್ನಿಗೆ ಹಾಗೂ ಪುರುಷನನ್ನು ತುಪ್ಪದ ಗಡಿಗೆಗೆ ಹೋಲಿಸಿರುವುದರಿಂದ ಸ್ತ್ರೀಯರ ಸಂಗವನ್ನು ದೂರಮಾಡಬೇಕು. ಮತ್ತು

ಗೌಡೀ ಮಾಧ್ವೀ ತಥಾ ಪೈಷ್ಟೀ ವಿಜ್ಞೇಯಾ ತ್ರಿವಿಧಾಸುರಾ। ಚತುರ್ಥೀ ಪ್ರಮದಾಜ್ಞೇಯಾ ಯಯೇದಂ ಮೋಹಿತಂಜಗತ್ ॥ ಗೌಡಿ, ಮಾಧ್ವಿ, ಪೈಷ್ಟಿ ಎಂಬುದಾಗಿ ಮದ್ಯವು ಮೂರು ವಿಧವು. ನಾಲ್ಕನೆಯ ಮದ್ಯವು ಸ್ತ್ರೀಯು– ಈ ನಾಲ್ಕನೆಯ ಮದ್ಯದಿಂದಲೇ ಪ್ರಪಂಚವೆಲ್ಲವೂ ಮೋಹಿಸಲ್ಪಟ್ಟಿರುವುದೆಂದು ತಿಳಿಯಬೇಕು.

ಮುಹ್ಯತಿ ಪ್ರಮದಾಂ ದೃಷ್ಟ್ವಾ ಸುರಾಂಪೀ ತ್ಯೈವ ಮುಹ್ಯತಿ। ತಸ್ಮಾದ್ದೃಷ್ಟಿ ಮದಾನಾರೀ ತಸ್ಮಾತ್ತಾಂ ನಾವ ಲೋಕಯೇತ್ ॥ ಮೊದಲನೆಯ ಮೂರು ಮದ್ಯಗಳು ಕುಡಿದ ಹೊರತೂ ಮದಗೊಳಿಸಲಾರವು. ಆದರೆ ಸ್ತ್ರೀ ಮದ್ಯವು ನೋಡಿದ ಮಾತ್ರದಿಂದಲೇ ಮದಗೊಳಿಸುವುದರಿಂದ ನೋಟದಲ್ಲಿಯೇ ಮದವುಳ್ಳ ಸ್ತ್ರೀಯರನ್ನು ನೋಡಬಾರದು. ಆದರೆ

ಯೋಪ ಯಾತಿ ಶನ್ಯೈರ್ಮಾಯಾ ಯೋಷಿದ್ದೇವ ವಿನಿರ್ಮಿತಾ। ತಾಮೀಕ್ಷೆ ತಾತ್ಮನೋಮೃತ್ಯುಂ ತೃಣೈಃ ಕೂಪಮಿವಾವೃತಂ॥

ಪತಿಯ ಸೇವೆಗೋಸ್ಕರವೆಂಬ ನೆಪದಿಂದ ಸ್ತ್ರೀರೂಪವಾಗಿ ಭಗವನ್ನಿರ್ಮಿತವಾದ ಯಾವ ಮಾಯೆಯು ತನ್ನನ್ನು ಮೆಲ್ಲಮೆಲ್ಲನೆ ತೊಡರತೊಡಗುವುದೋ, ಆಗ ಆ ಸ್ತ್ರೀ ವಿಗ್ರಹವನ್ನು ಹುಲ್ಲು ಮುಚ್ಚಿಕೊಂಡಿರುವ ಹಾಳುಭಾವಿಯಂತೆ ತನಗೆ ಮೃತ್ಯುರೋಪವೆಂದು ತಿಳಿದು ಜ್ಞಾನ ವೈರಾಗ್ಯಗಳಿಂದ ಕೂಡಿದ ವಿಚಾರಶಿಲವಾದ ಬುದ್ಧಿಯಿಂದ ಶರೀರ ಯಾತ್ರೆಯನ್ನು ಮಾಡುತ್ತಾ ನಿವೃತ್ತಿ ಧರ್ಮಪರನಾಗಿ ಸಂಚರಿಸಬೇಕು. ಇಲ್ಲವಾದಲ್ಲಿ ನಮ್ಮ ಕರ್ಮಗಳಿಗೆ ತಕ್ಕಂತೆ ತಿರ್ಯಜ್ಮನುಷ್ಯಾದಿ ಜನ್ಮಗಳನ್ನು ಪಡೆದು ಜನನ ಮರಣರೂಪವಾದ ಸಂಸಾರ ಪ್ರವಾಹದಲ್ಲಿ ಬಿದ್ದು ನರಳಬೇಕಾಗುವುದು. ನಿದ್ರಿಸುವವನಿಗೆ ಕನಸಿನಲ್ಲಿ ಉಂಟಾಗುವ ತಾಡನ, ಬಂಧನ ಮೊದಲಾದ ಕೆಡಕುಗಳು ಅನಿತ್ಯವಾಗಿದ್ದರೂ ಎಚ್ಚರವಾಗುವವರೆವಿಗೂ ಅದರ ಸಂಬಂಧವಾದ ದುಃಖವು ಹೇಗೆ ಹೋಗುವುದಿಲ್ಲವೋ ಹಾಗೆಯೇ ಈ ಸಂಸಾರವೆಂಬುದು ಅನಿತ್ಯವಾಗಿದ್ದರೂ ಪುರುಷನು ಶಬ್ದಾದಿ ವಿಷಯಚಿಂತನೆಯನ್ನು ಮಾಡುತ್ತಿರುವವರೆಗೂ ಅದು ತೊಲಗುವುದಿಲ್ಲವು. ಪ್ರಬುಧ್ಯ ಸ್ವಪ್ನಸುಪ್ತಿಭ್ಯಾಂ ಸಂಸ್ಮರನ್ನಾತ್ಮಕವೈಶಸಂ । ವೈತಥ್ಯಂ ವ್ಯಭಿಚಾರಂಚ ನಾಸೌಧ್ಯಾಯೇದ್ಯತೇ ಭಯಂ ॥

ಈ ಸಂಸಾರವು ಅಜ್ಞಾನದಿಂದಲೂ ವಿಪರೀತ ಜ್ಞಾನದಿಂದಲೂ, ವಿಷಯ ಚಿಂತನದಿಂದಲೂ ಉಂಟಾಗುವುದೆಂದು ತಿಳಿದು, ಅನಿತ್ಯತ್ವವನ್ನೂ ಪರ್ಯಾಲೋಚಿಸಿ, ಸಂಸಾರ ಭಯವನ್ನುಂಟುಮಾಡುವ ವಿಷಯಗಳನ್ನು ಧ್ಯಾನಿಸದೆ ಸಂಪೂರ್ಣವಾದ ಭಕ್ತಿಯಿಂದಲೂ, ನಿರತಿಶಯ ವೈರಾಗ್ಯದಿಂದಲೂ, ಯಮನಿಯಮಾದಿ ಯೋಗಮಾರ್ಗ ಗಳಿಂದಲೂ ಶ್ರದ್ಧಾಪೂರ್ವಕವಾಗಿ ಮನಸ್ಸನ್ನು ನಿಶ್ಚಲಗೊಳಿಸಿಕೊಂಡು ಪರಮಾತ್ಮನಲ್ಲಿ ನಿಷ್ಕಪಟವಾದ ಪ್ರೇಮವನ್ನಿಟ್ಟು, ಆತನ ಚರಿತ್ರೆಗಳನ್ನು ಶ್ರವಣಮಾಡುತ್ತಾ, ಸರ್ವಪ್ರಾಣಿಗಳಲ್ಲಿಯೂ ಸಮದರ್ಶಿಯಾಗಿ, ಸಂಗವನ್ನಾಗಲೀ–ದ್ವೇಷವನ್ನಾಗಲೀ ಮಾಡದೆ, ಇಂದ್ರಿಯಗಳನ್ನು ಜಯಿಸಿ, ಮೌನವ್ರತಗಳನ್ನು ಮಾಡುತ್ತಾ, ಮಿತಾಹಾರಿಯಾಗಿ ಸರ್ವದಾ ಭಗವಂತನನ್ನು ಮನನಮಾಡುತ್ತಾ, ಏಕಾಂತದಲ್ಲಿ ನೆಲೆಸಿ, ಉಪಶಾಂತನಾಗಿ, ಮನೋನಿಗ್ರಹ ಮಾಡಿ, ಪರಿವಾರದಿಂದೊಡಗುಡಿದ

ಈ ಶರೀರದಲ್ಲಿ ಅಹಂಕಾರ ಮಮಕಾರಗಳನ್ನು ತೊರೆದು ತತ್ವಜ್ಞಾನವನ್ನು ಪಡೆದು, ಜಾಗ್ರತ್ಸ್ವಪ್ನ ಸುಷುಪ್ತಿಗೊಳಗಾಗದೇ, ಅನಿತ್ಯಗಳಾದ ವಿಷಯಗಳನ್ನು ದೂರಮಾಡಿದಂಥ ಭಕ್ತಿಯುಕ್ತನಾದ ಜ್ಞಾನಿಯು ಪರಮಾತ್ಮನನ್ನು ಹೊಂದುವನು. ಇಂತಹ ಪರಮಾತ್ಮನನ್ನು ಹೊಂದಲು ಭಕ್ತಿಯೋಗ–ಧ್ಯಾನ ಕ್ರಮವನ್ನು ತಿಳಿದುಕೊಳ್ಳಬೇಕಲ್ಲವೇ?

ಈ ಜಗತ್ತಿಗೆ ಬೀಜವು ಶ್ರೀವಿಷ್ಣುವು. ಇತರ ದೇವತೆಗಳು ಶಾಖಾದಿರೂಪರಾಗಿರುವರು. ಆದ್ದರಿಂದ ವಿಷ್ಣುಧ್ಯಾನದಿಂದ ಕೂಡಿದ ವೈಷ್ಣವಯೋಗವು ಸಬೀಜವೆಂತಲೂ, ಇತರ ದೇವತಾಧ್ಯಾನದಿಂದ ಕೂಡಿದ ಯೋಗವು ನಿರ್ಬೀಜವೆಂತಲೂ ತಿಳಿಯಬೇಕು. (ಸಬೀಜೋ ವೈಷ್ಣವೋಯೋಗೋ ನಿರ್ಬೀಜಸ್ತ್ವನ್ಯ ದೈವತಃ । ಬೀಜಂ ವಿಷ್ಣುರ್ಹಿ ಜಗತಃ ಶಾಖಾದ್ಯಾ ಅನ್ಯದೇವತಾಃ ॥)

ವಿವೇಕಿಯಾದವನ್ನು ತಮ್ಮ ತಮ್ಮ ವರ್ಣಾಶ್ರಮಗಳಿಗನುಸಾರವಾಗಿ ನಿಷಿದ್ಧ, ಕಾಮ್ಯ, ಅವಿಹಿತ ಕರ್ಮಗಳನ್ನು ಬಿಟ್ಟು, ದೊರೆತದ್ದರಿಂದಲೇ ಸಂತುಷ್ಟನಾಗಿ, ಸಾಧುಪೂಜೆ ಮಾಡುತ್ತಾ, ಧರ್ಮಾರ್ಥಕಾಮಗಳಿಗೆ ಸಾಧನವಾದ ಧರ್ಮಗಳನ್ನು ಬಿಟ್ಟು, ಮೋಕ್ಷಸಾಧನವಾದ ಶಮದಮಾದಿಗಳಲ್ಲಿ ಆಸಕ್ತಿಯಿಟ್ಟು, ಜಾತಿ, ಆಶ್ರಮ, ನಿಮಿತ್ತಗಳಿಂದ ದುಷ್ಟವಾದ ಪರಿಶುದ್ಧವಾದ ಸಾತ್ವೀಕಾಹಾರವನ್ನು ಮಿತವಾಗಿ ಊಟಮಾಡಬೇಕು.

ಮಿತಾಹಾರವೆಂದರೆ:– ದ್ವೌಭಾಗೌ ಪೂರಯೇದನ್ನೈ ಸ್ತೋಯೇನೈಕಂ ಪ್ರಪೂರಯೇತ್। ಮಾರುತಸ್ಯ ಪ್ರಚಾರಾರ್ಥಂ ಚತುರ್ಥಮವಶೇಷಯೇತ್॥ ಎರಡು ಭಾಗ ಅನ್ನದಿಂದಲೂ, ಒಂದು ಭಾಗ ನೀರಿನಿಂದಲೂ ಹೊಟ್ಟೆಯನ್ನು ತುಂಬಿ ವಾಯು ಸಂಚಾರಕ್ಕಾಗಿ ನಾಲ್ಕನೆಯ ಭಾಗವನ್ನು ಬಿಡುವುದೇ ಮಿತಾಹಾರವು.

ಪರಿಶುದ್ಧಾಹಾರವೆಂದರೆ:– ಆಹಾರವು ಮೂರು ವಿಧವು. ೧. ಜಾತಿದುಷ್ಟ ೨. ಆಶ್ರಮದುಷ್ಟ, ೩. ನಿಮಿತ್ತ ದುಷ್ಟ.

೧.ಈರುಳ್ಳಿ ಮೊದಲಾದವುಗಳಿಂದ ಮಿಶ್ರವಾದ ಆಹಾರವೇ ಜಾತಿದುಷ್ಟ ಆಹಾರವು.

೨. ಚಂಡಾಲಾದಿಗಳು ತಿನ್ನುವ ಪದಾರ್ಥಗಳು ಸೇರಿದ್ದರೆ ಆಶ್ರಮ ದುಷ್ಟ ಆಹಾರವು.

೩. ಕೂದಲು, ಎಂಜಲು ಮೊದಲಾದುವು ಬೆರತಿದ್ದರೆ ನಿಮಿತ್ತ ದುಷ್ಟ ಆಹಾರವು. ಆದ್ದರಿಂದ ಯೋಗಿಯಾಗುವನು ಈ ದೋಷಗಳಿಲ್ಲದ ಪರಿಶುದ್ಧಾಹಾರವನ್ನು ಮಿತವಾಗಿ ಭುಜಿಸಬೇಕು.

ನಂತರ ಯಾವಾಗಲೂ ವಿಜನವಾದ ಸ್ಥಾನದಲ್ಲಿ ಏಕಾಂತವಾಗಿ ನೆಲಸಿ ೧. ಅಹಿಂಸೆ, ೨. ಸತ್ಯ, ೩. ಅಸ್ತೇಯ, ೪. ಅಪರಿಗ್ರಹ, ೫. ಅಷ್ಟಾಂಗ ಬ್ರಹ್ಮಚರ್ಯ, ೬. ಮೌನ, ೭. ತಪಸ್ಸು ೮. ಸದಾಚಾರ, ೯.ವೇದಾಧ್ಯಯನಾದಿಗಳು, ೧೦. ಭಗವದಾರಾಧನ ಇವುಗಳಲ್ಲಿ ಮೊದಲನೆಯ ಆರು ಯಮಗಳೆಂದೂ, ಉಳಿದ ಸ್ವಧರ್ಮಾಚರಣಾದಿಗಳು ನಿಯಮಗಳೆಂದೂ ತಿಳಿಯಬೇಕು.

ಅಷ್ಟಾಂಗ ಬ್ರಹ್ಮಚರ್ಯವೆಂದರೆ:– ಪ್ರ॥ ಸ್ಮರಣಂ ಕೀರ್ತನಂ ಕೇಳಿಃ ಪ್ರೇಕ್ಷಣಂ ಗುಹ್ಯ ಭಾಷಣಂ । ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾ ನಿರ್ವೃತಿರೇವಚ ॥ ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ। ವಿಪರೀತಂ ಬ್ರಹ್ಮಚರ್ಯ ಮೇತದಷ್ಟಾಂಗಲಕ್ಷಣಂ॥ ೧. ಸ್ತ್ರೀ ವಿಷಯಕವಾದ ಸ್ಮರಣೆಯು, ೨. ಸಂಭಾಷಣೆಯು ೩. ಅವರೊಡನಾಟವು, ೪. ನೋಟವು, ೫. ಏಕಾಂತ ಭಾಷಣವು ೬. ರತಿಸಂಕಲ್ಪವು ೭. ರತಿನಿಶ್ಚಯವು ೮. ರತಿಕ್ರೀಡೆಯು, ಎಂಬುದಾಗಿ ಮೈಥುನವು ಎಂಟು ವಿಧವು. ಇವುಗಳ ಸಂಬಂಧವಿಲ್ಲದಿರುವುದೇ ಬ್ರಹ್ಮಚರ್ಯೆಯು.

ಮೌನವ್ರತಾನಂತರ ಪರಿಶುದ್ಧವಾದ ಆಸನಜಯ, ಮನಸ್ಥೈರ್ಯಗಳನ್ನು ಪಡೆದು, ಪ್ರಾಣವಾಯುಗಳನ್ನು ವಶಗೊಳಿಸಿಕೊಂಡು ಮನಃಪೂರ್ವಕವಾಗಿ ಇಂದ್ರಿಯಗಳನ್ನು ವಿಷಯಗಳಿಂದ ತಿರುಗಿಸಿ ಹೃದಯದಲ್ಲಿ ನೆಲೆಗೊಳಿಸಿ ಪರಮಾತ್ಮನ ಲೀಲಾ ವಿಭೂತಿಗಳನ್ನು ಅಡಿಗಡಿಗೂ ಧ್ಯಾನಿಸುತ್ತಿರಬೇಕು.

ಧ್ಯಾನಕ್ರಮ:– ಪ್ರಸನ್ನವದನಾಂಽಭೋಜಂ ಪದ್ಮಗರ್ಭಾಽರುಣೇಕ್ಷಣಂ। ನೀಲೋತ್ಪಲದಳ ಶ್ಯಾಮಂ ಶಂಖಚಕ್ರಗದಾಧರಂ ॥೧॥

ಲಸತ್ಪಂಕಜ ಕಿಂಜಲ್ಕ ಪೀತಕೌಶೇಯವಾಸಸಂ। ಶ್ರೀವತ್ಸ ವಕ್ಷಸಂಭ್ರಾಜತ್ಕೌಸ್ತುಭಾ ಮುಕ್ತಕಂಧರಂ ॥೨॥

ಮತ್ತದ್ವಿರೇಫಕಲಯಾಪರೀತಂ ವನಮಾಲಯಾ । ಪರಾರ್ಥ್ಯಹಾರವಲಯ ಕಿರೀಟಾಂಗದನೂಪುರಂ ॥೩॥

ಕಾಂಚೀಗುಣೋಲ್ಲ ಸಚ್ಛ್ರೋಣಿಂ ಹೃದಯಾಂಽಭೋಜವಿಷ್ಟರಂ। ದರ್ಶನೀಯತಮಂ ಶಾಂತಂ ಮನೋನಯನವರ್ಧನಂ ॥೪॥

ಅಪೀಚ್ಯದರ್ಶನಂ ಶಶ್ವತ್ಸರ್ವಲೋಕನಮಸ್ಕೃತಂ । ಸಂತಂವಯಸಿಕೈಶೋರೇಭೃತ್ಯಾಽ ನುಗ್ರಹಕಾತರಂ ॥೫॥

ಅರಳಿದ ಕಮಲದಂತಿರುವ ನಗೆಮುಖದಿಂದ ಶೋಭಿಸುತ್ತಾ, ಕಮಲ ಗರ್ಭದಂತೆ ನಸುಗೆಂಪಾದ ಕಣ್ಣುಗಳಿಂದ ರಮಣೀಯನಾಗಿ, ನೈದಿಲೆ ಎಸಳಿನಂತೆ ಕರಿದಾದ ಮೈಯಿಂದ ಬೆಳಗುತ್ತಾ, ಶಂಖಚಕ್ರ ಗದಾಧಾರಿಯಾಗಿ, ಕಮಲಕೇಸರದಂತೆ ಹೊಂಬಣ್ಣದ ಪೀತಾಂಬರದಿಂದ ಹೊಳೆಯುತ್ತಾ ಹೃದಯದಲ್ಲಿ ಶ್ರೀವತ್ಸಲಾಂಛನವನ್ನು ಧರಿಸಿ, ಕಂಠದಲ್ಲಿ ಕೌಸ್ತುಭಮಣಿಯನ್ನು ಧರಿಸಿಕೊಂಡು, ವನಮಾಲೆಯನ್ನು ಧರಿಸಿ, ಅಮೌಲ್ಯವಾದ ಹಾರಕೇಯೂರನೂಪುರ ಕಿರೀಟಗಳಿಂದ ರಾರಾಜಮಾನನಾಗಿ ನಡುವಿನಲ್ಲಿ ಒಡ್ಯಾಣವನ್ನಿಟ್ಟು, ಭಕ್ತರ ಹೃದಯ ಕಮಲಪೀಠದಲ್ಲಿ ನೆಲಸಿ, ಕಣ್ಮನಗಳಿಗೆ ಆನಂದವನ್ನುಂಟು ಮಾಡುತ್ತಾ, ಭಕ್ತರಿಗೆ ಹೃದಯಂಗಮವಾದ ದರ್ಶನವನ್ನು ಕೊಡುತ್ತಾ, ಸರ್ವಲೋಕದಿಂದಲೂ ನಮಸ್ಕರಿಸಿ ಕೊಳ್ಳಲ್ಪಡುವನಾಗಿ, ಭಕ್ತರ ಅನುಗ್ರಹಾಕಾಂಕ್ಷಿಯಾಗಿ, ಕೀರ್ತನಾರ್ಹವಾದ ಪವಿತ್ರ ಕೀರ್ತಿಯನ್ನು ಪಡೆದು ಭಕ್ತರಿಗೆ ಶ್ರೇಯಸ್ಸನ್ನುಂಟು ಮಾಡುತ್ತಾ, ಸಕಲಾವಯವ ಸಂಪೂರ್ಣನಾಗಿರುವಂಥ ಭಗವಂತನನ್ನು ನಿಂತಿರುವಂತೆಯೂ, ನಡೆಯುವಂತೆಯೂ, ಕುಳಿತಿರುವಂತೆಯೂ, ಮಲಗಿರುವಂತೆಯೂ, ಮನೋಹರವಾದ ಲೀಲೆಗಳನ್ನು ನಡೆಯಿಸುತ್ತಿರುವಂತೆಯೂ, ಸರ್ವಾಂಗಗಳಲ್ಲಿಯೂ ನಲಿದಾಡುವ ತನ್ನ ಮನಸ್ಸನ್ನು ಕ್ರಮವಾಗಿ ಹೊರದೆಗೆದು ಒಂದೊಂದೇ ಅಂಗದಲ್ಲಿ ನಿಲ್ಲಿಸುತ್ತಾ ಪಾದಾದಿ ಕ್ರಮದಿಂದ ಧ್ಯಾನಿಸಬೇಕು.

ರಾಗ– **ತಾಳ:**

ಆಗಲೆಕಾಯಬೇಕು ಅಂಬುಜಾಕ್ಷಯನ್ನ। ಈಗ ನೀನು ಕಾಯದಿದ್ದರೇನು॥ಪ॥ ನೆಂಟರಿಷ್ಟರು ಉಂಟು। ನೆರೆಹೊರೆನಮಗುಂಟು। ಭಂಟರು ಭಾಗ್ಯಗಳುಂಟು। ಬಂಧುಬಳಗ ಉಂಟು। ಕಂಠಕ್ಕೆ ಬದ್ಧಳಾದ ಕಾಂತೆಯು ಎನಗುಂಟು। ಒಂಟಿಗನಾಗಿ ಪೋಗುವಾಗ ಸಂಗಡ ಒಬ್ಬರ ಕಾಣೆ॥೧॥ ಹೊನ್ನು, ಹಣ, ನಮಗುಂಟು। ಹಸನಾದ ಮನೆ ಉಂಟು। ಚಿನ್ನ, ಚೀನಾಂಬರ ಉಂಟು। ಚೆಲುವ ಉಪ್ಪರಿಗುಂಟು। ಮೊನ್ನೆ ಹುಟ್ಟಿದ ಗಂಡು ಮಕ್ಕಳು ನಮಗುಂಟು, ಸನ್ನೆ ಸಂಜ್ಞೆಗುಂದಿದಾಗ ಸಂಗಡ ಒಬ್ಬರ ಕಾಣೆ॥೨॥ ಒಂದು ಕ್ಷಣದಲಿ ವಾತ, ಧಾತು ಮೊದಲಾದ ಅಂದಿನ ವ್ಯಾಧಿಗಳಟ್ಟಿ ಬಾಧಿಸುತ್ತಿರಲು ಇಂದಿರೇಶ ನಿಮ್ಮ ವ್ಯಾಸಂಗವೆಲ್ಲವನು ಬಿಟ್ಟು ಬಂದೆನ್ನ ಕಾಯಬೇಕೊ ಪುರಂದರ ವಿಠಲ॥೩॥

ರಾಗ– ಶಂಕರಾಭರಣ **ಆದಿತಾಳ**

ಏನೇನು ದಾನವ ಮಾಡಲಿ। ಹರಿಧ್ಯಾನಕ್ಕೆ ಸಮವಾದ ದಾನಗಳುಂಟೆ॥ಪ॥ ದಿನಕ್ಕೊಂದು ಲಕ್ಷ ಗೋದಾನವ ಮಾಡಲು। ಅನುದಿನ ಉದಕ ದಾನವ ಮಾಡಲು। ಮನಶುದ್ಧವಾದ ಭೂದಾನವ ಮಾಡಲು। ವನಜನಾಭನ ಧ್ಯಾನಕ್ಕೆ ಸರಿಯುಂಟೆ॥೧॥ ಉತ್ತಮ ವಸ್ತು ದಾನವ

ಮಾಡಲಿ। ಮುತ್ತು ಮಾಣಿಕ್ಯ ದಾನವ ಮಾಡಲು। ಅತ್ಯಂತ ವಿದ್ಯಾದಾನವ ಮಾಡಲಿ। ನಮ್ಮ ಚಿತ್ತಜಪಿತನ ಧ್ಯಾನಕ್ಕೆ ಸರಿಯೆಂಟೆ॥೨॥ ಶತಕೋಟಿ ಕನ್ಯಾ ಪ್ರದಾನವ ಮಾಡಲಿ। ಸತತ ಸುವರ್ಣ ದಾನವ ಮಾಡಲಿ। ಮಿತಿ ಇಲ್ಲದ ಅನ್ನದಾನವ ಮಾಡಲಿ। ಲಕ್ಷ್ಮೀಪತಿ ನಾಮ ಸ್ಮರಣೆಗೆ ಅದುಸರಿಉಂಟೆ॥೩॥ ನಾನಾ ತೀರ್ಥಂಗಳಲಿ ಸ್ನಾನವ ಮಾಡಲಿ। ಕಾನನದೊಳಗೆ ತಪವ ಮಾಡಲಿ। ಮನಕೆ ಬಂದು ಕಾಶಿಯಾತ್ರೆಯ ಮಾಡಲಿ। ಜಾನಕಿ ಪತಿಯ ಧ್ಯಾನಕ್ಕೆ ಸರಿಯುಂಟೆ॥೪॥ ಧಾರುಣಿಯಲಿ ಭೀಷ್ಮಪಂಚಕ ಮಾಡಲಿ। ಹರುಷದಿ ಋಷಿಪಂಚಮಿ ಮಾಡಲಿ। ಪರಮ ಕಠಿಣ ಚಾಂದ್ರಾಯಣ ಮಾಡಲಿ। ಪುರಂದರ ವಿಠಲ ಧ್ಯಾನಕ್ಕೆ ಸರಿಯುಂಟೆ॥೫॥

ಸಕಲ ಭೂತಗಳಲ್ಲಿಯೂ ಆತ್ಮಭಾವನೆಯನ್ನಿಟ್ಟು (ಆತ್ಮೌಪಮ್ಯೇನ ಭೂತೇಷು) ವೈರಾಗ್ಯವನ್ನು ಪಡೆದ ಭಗವದ್ಭಕ್ತರನ್ನು ಬಹುಮಾನಿಸುತ್ತಾ ತನಗಿಂತ ಕಡಿಮೆಯಾದವರಲ್ಲಿ ಕನಿಕರ ತೋರುತ್ತಾ, ತನ್ನ ಸಮಾನರಲ್ಲಿ ಸ್ನೇಹವನ್ನು ಬೆಳೆಸುತ್ತಾ ಯಮನಿಯಮಾದ್ಯಷ್ಟಾಂಗಗಳನ್ನು ಆಚರಿಸಿ, ಭಗವನ್ನಾಮ ಸಂಕೀರ್ತನದಿಂದಲೂ, ಹೃದಯಗ್ರಂಥಿಯಾದ ಅಹಂಕಾರವನ್ನು ನೀಗಿ, ಸದ್ಗುಣಗಳಿಂದ ಮನಶುದ್ಧಿಯನ್ನು ಪಡೆದ ಭಕ್ತನ ಮನಸ್ಸು ಪರಮಾತ್ಮನ ಗುಣಗಳನ್ನು ಕೇಳುತ್ತಲೇ ಆತನಲ್ಲಿ ನೆಲೆಸುವುದು. ಗಂಧವು ಘ್ರಾಂಣೇಂದ್ರಿಯವನ್ನು ಹೇಗೆ ಆವರಿಸುವುದೋ ಹಾಗೆಯೇ ಯೋಗಾರೂಢವಾದ ಚಿತ್ತವು ಪರಮಾತ್ಮನನ್ನು ವಶಗೊಳಿಸಿಕೊಳ್ಳುವುದು. ಅಜ್ಞಾನದಿಂದ ಯಾವ ಪ್ರತಿಮೆಯನ್ನೂ ಪೂಜಿಸಬಾರದು. ಹಾಗೆ ಮಾಡಿದಲ್ಲಿ ಬೂದಿಯಲ್ಲಿ ಹೋಮಮಾಡಿದಂತಾಗುವುದು.

ಯೌವನಾವಸ್ಥ ಪ್ರಕರಣವು ಸಂಪೂರ್ಣವು.

೨೦. ನವವಿಧಭಕ್ತಿ ಪ್ರಕರಣ

ಸಂಪುಟ ೭ ಸಂಚಿಕೆ ೩ ಭಾವ, ಜ್ಯೇಷ್ಠ ಜೂನ್ ೧೯೩೪

ಶ್ಲೋ ॥ ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ॥
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ॥

ನಾವು ಮಾಡುವ ಎಲ್ಲಾ ಕ್ರಿಯೆಗಳೂ ಪರಮಾತ್ಮನು ಮಾಡಿಸಬೇಕಾಗಿರುವುದರಿಂದ ಅದು ಅಧಿಷ್ಠಾನ ವಿನಾ ಆಗುವುದಿಲ್ಲವು. ಅಂಥಾ ಅಧಿಸ್ಥಾನಕ್ಕೆ ಅಭಿಮಾನಿದೇವತೆಗಳನ್ನು ಮಾಡಿರುತ್ತಾನೆ. ಪರಮಾತ್ಮನು ವಾಯುವಿಗೆ ಮುಖ್ಯ ನಿಯಾಮಕನು. ಈ ವಾಯುದೇವರು ಸರ್ವರ ಕ್ರಿಯಕ್ಕೂ ಮುಖ್ಯ ನಿಯಾಮಕರು. ಗುಣಕ್ಕೆ ಭಾರತಿಯೂ, ಕಾಲಕ್ಕೆ ಗರುಡನೂ, ದೇಶಕ್ಕೆ ಗಣೇಶನೂ, ಕರ್ಮಕ್ಕೆ ಪುಷ್ಕರನೂ, ಕ್ರಿಯಕ್ಕೆ ಅಗ್ನಿಯೂ, ನಾಮಕ್ಕೆ ಉಷಾದೇವಿಯೂ, ತೀರ್ಥಕ್ಕೆ ಪುಷ್ಕರನೂ, ದೇಹಕ್ಕೆ ಕುಬೇರನೂ, ಬ್ರಾಹ್ಮಣನಿಗೆ ಸೂರ್ಯನೂ, ಕ್ಷತ್ರಿಯರಿಗೆ ಚಂದ್ರನೂ, ವೈಶ್ಯರಿಗೆ ಭೂಮಿಯೂ ಶೂದ್ರರಿಗೆ ಧರ್ಮರಾಯನೂ ಅಭಿಮಾನಿಯೆಂದು ತಿಳಿಯತಕ್ಕದ್ದು. ಸರ್ವದಾ ಪ್ರಾಣಿಗಳು ಸಕಲ ಪ್ರಯೋಜನವನ್ನು ಪಡೆಯಲು ಗುಣ–ಕಾಲ–ದೇಶ–ಕರ್ಮಾಧೀನವಾದ ಪ್ರಯುಕ್ತ ಆ ಗುಣಕಾಲದೇಶ ಕರ್ಮಗಳು ಅಭಿಮಾನಿ ದೇವತೆಗಳಾಧೀನವಾದ ಪ್ರಯುಕ್ತ ಎಲ್ಲಾ ಅಭಿಮಾನಿಗಳೂ ಸಹ ಭಾರತೀಪತಿಯಾದ ಮುಖ್ಯ ಪ್ರಾಣಾಧೀನರಾದ ಪ್ರಯುಕ್ತ ಅವರ ದ್ವಾರಾ ಪರಮಾತ್ಮನೇ ಸರ್ವಸ್ವತಂತ್ರನಾಗಿ ಸರ್ವಪ್ರಯೋಜನವನ್ನೂ ಕೊಡುವನಾದ ಪ್ರಯುಕ್ತ ಆತನೇ ಮುಖ್ಯಪ್ರಾಣನಿಂದ ಸಹಿತವಾಗಿ ಕಾರ್ಯಗಳನ್ನು ಮಾಡಿಸುತ್ತಾನೆ. ಇಂಥಾ ಪರಮಾತ್ಮನನ್ನು ಯಾವಯಾವ ಕಾಲದಲ್ಲಿ ಹೇಗೆ ಸ್ಮರಿಸಬೇಕೆಂದರೆ :– ನಾರಾಯಣ, ಶ್ರೀತುಳಸೀ, ಶ್ರೀವಿಷ್ಣುವನ್ನು ಸ್ಮರಣೆ ಮಾಡಿ, ಮೂತ್ರ ವಿಸರ್ಜನಕಾಲದಲ್ಲಿ ಕೇಶವನಾಮಕ ಪರಮಾತ್ಮನನ್ನೂ, ಮೃತ್ತಿಕಾಶೌಚ ಕಾಲದಲ್ಲಿ ತ್ರಿವಿಕ್ರಮನನ್ನೂ, ದಂತಧಾವನ ಕಾಲದಲ್ಲಿ ಹರಿಯನ್ನೂ, ಮುಖಪ್ರಕ್ಷಾಳನ ಮಾಡುವಾಗ ಮಾಧವನನ್ನೂ, ಗೋಸ್ಪರ್ಶಕಾಲದಲ್ಲಿ ಗೋವರ್ಧನನ್ನೂ, ನದ್ಯಾದಿಸ್ನಾನ ಸಮಯದಲ್ಲಿ ವರಾಹನನ್ನೂ, ಊರ್ಧ್ವಪುಂಡ್ರಾದಿಗಳನ್ನು ಧಾರಣಮಾಡುವಾಗ ಕೇಶವಾದಿ–ದಾಮೋದರನನ್ನೂ, ಮುದ್ರೆಗಳನ್ನು ಧರಿಸುವಾಗ ಕೃದ್ಧೋಲ್ಕಾದಿ ಭಗವದ್ರೂಪಗಳನ್ನೂ, ಸಂಧ್ಯಾಕಾಲದಲ್ಲಿ ರಾಮನನ್ನೂ, ಪ್ರಾಣಾಹುತಿಯ ಕಾಲದಲ್ಲಿ ಅನಿರುದ್ಧಾದಿ ಪಂಚಭಗವದ್ರೂಪಗಳನ್ನೂ, ಊಟಮಾಡುವಾಗ

ವಾಸುದೇವನನ್ನೂ, ಆಪೋಶನಗಳಲ್ಲಿ ಶ್ರೀಹರಿಯೂ, ವಸ್ತ್ರಗಳಲ್ಲಿ ಉಪೇಂದ್ರನೂ, ಉಪವೀತದಲ್ಲಿ ವಾಮನನೂ, ಮಂಗಳಾರ್ತಿಯನ್ನು ತೆಗೆದುಕೊಳ್ಳುವಾಗಲೂ, ವೈಶ್ವದೇವಾದಿಯಲ್ಲಿ ಭಾರ್ಗವನನ್ನು, ತೀರ್ಥತೆಗೆದುಕೊಳ್ಳುವಾಗ ರಾಮಕೃಷ್ಣ ವ್ಯಾಸರನ್ನೂ, ಶಂಖೋದಕದಲ್ಲಿ ಮುಕುಂದನನ್ನೂ, ತುತ್ತು ತುತ್ತಿಗೆ ಗೋವಿಂದನನ್ನೂ, ಭಕ್ಷ್ಯಗಳಿಗೆ ಅಚ್ಯುತನನ್ನೂ, ಶಾಖಾದಿಗಳಿಗೆ ಧನ್ವಂತರಿಯನ್ನೂ, ಪರಮಾನ್ನದಲ್ಲಿ ಪಾಂಡುರಂಗನನ್ನೂ, ನವನೀತದಲ್ಲಿ ತಾಂಡವಕೃಷ್ಣನನ್ನೂ, ದಧ್ಯಾನ್ನಕ್ಕೆ ಗೋಪಾಲನನ್ನೂ, ಕ್ಷೀರಾನ್ನಕ್ಕೆ ಶ್ರೀನಿವಾಸನನ್ನೂ, ಘೃತಪಕ್ವಾನ್ನಕ್ಕೆ ವೈಕುಂಠನಾಮಕ ಪರಮಾತ್ಮನನ್ನೂ, ಉತ್ತತ್ತಿ–ಕದಳೀ–ಜಂಬು–ದ್ರಾಕ್ಷಿ–ಚೂತ–ಮಧು–ಕಿತ್ತಳಿ–ದಾಳಿಂಬೆ ತೆಂಗಿನಕಾಯಿಗಳಲ್ಲಿ ಶ್ರೀರಂಗರೂಪನನ್ನೂ, ಇತರೆ ಫಲಗಳಲ್ಲಿ ಯದುಕುಲೋತ್ತಮ ಬಾಲಕೃಷ್ಣನನ್ನೂ, ಪಾನಕದಲ್ಲಿ ನರಸಿಂಹಮೂರ್ತಿಯನ್ನೂ, ನೀರುಕುಡಿಯುವಾಗ ವಿಷ್ಣು–ತ್ರಿವಿಕ್ರಮರನ್ನೂ, ನಡೆಯುವಾಗ ಗರುಡಧ್ವಜನನ್ನೂ, ಗಾನಮಾಡುವಾಗ ಯೋಗೇಶ್ವರನನ್ನೂ, ಕಥಾಕಾಲದಲ್ಲಿ ಹಯಾಸ್ಯ–ವ್ಯಾಸ–ಮತ್ಸ್ಯ–ತುಲಸೀ–ದುರ್ವಾಂಕುರರನ್ನೂ, ನಿರ್ಮಾಲ್ಯ ಧರಿಸುವಾಗ ಕಪಿಲನಾಮಕ ಪರಮಾತ್ಮನನ್ನೂ, ಪ್ರದಕ್ಷಿಣೆ ಪ್ರಣಾಮಗಳಲ್ಲಿ ಖಗಾಂತರ್ಗತ ಶೇಷಾಂತರ್ಗತ ಪರಮಾತ್ಮನನ್ನೂ, ದಾನ ಕೊಡುವಾಗ ರಾಮನನ್ನೂ, ದಾನ ತೆಗೆದುಕೊಳ್ಳುವಾಗ ವಾಮನನ್ನೂ, ಹಾಲು ಕರೆಯುವಾಗ ಗೋಪಾಲನನ್ನೂ, ಮೊಸರು ಕಡೆಯುವಾಗ ಹರಿಯನ್ನೂ, ಮಕ್ಕಳನ್ನು ಮುದ್ದಾಡುವಾಗ ವೇಣುಹಸ್ತ ಕೃಷ್ಣನನ್ನೂ, ತಾಂಬೂಲ ಸೇವನೆ ಮಾಡುವಾಗ ಪ್ರದ್ಯುಮ್ನನನ್ನೂ, ಚಿತ್ತಜನ ಕೇಳೀ ಕ್ರೀಡಾವಿಹಾರ ಸಮಯದಲ್ಲಿ ಕೃಷ್ಣ–ಗೋವಿಂದರನ್ನೂ, ಶಯನಕಾಲದಲ್ಲಿ ಸಂಕರ್ಷಣನನ್ನೂ, ನಿದ್ರಿಯಲ್ಲಿ ಪದ್ಮನಾಭನನ್ನೂ ಹೀಗೆ ಸರ್ವಸಮಯದಲ್ಲಿಯೂ ಕರ್ಮನಿಯಾಮಕ, ಕರಣ ನಿಯಾಮಕ, ಕ್ರಿಯಾನಿಯಾಮಕ, ಕರ್ತೃನಿಯಾಮಕ, ಕಾಲನಿಯಾಮಕ ಪರಮಾತ್ಮನೊಬ್ಬನೆಂದೇ ತಿಳಿದು ಮರೆಯದಲೆ ಸ್ಮರಣೆ ಮಾಡಿದಲ್ಲಿ ಪರಮಾತ್ಮನ ಕರುಣಾಕಟಾಕ್ಷವಾಗಿ ಈ ಸತ್ಕರ್ಮಾನುಷ್ಠಾನದಿಂದ ಸಂಸಾರಬಂಧನದಿಂದ ಕಡೆಬಿದ್ದವನಾಗಿ ವೈಕುಂಠನಗರಿಯನ್ನು ಪ್ರವೇಶಿಸುತ್ತಾನೆ. ಈ ಪ್ರಕಾರವಾಗಿ ಸ್ಮರಿಸುತ್ತಿದ್ದರೆ ನೂರಾರು ಯಾಗ ಮಾಡಿದ ಫಲವು, ಅನೇಕ ಜನ್ಮದ ಪಾಪಪರಿಹಾರವೂ ಅನಾಯಾಸ ಮೋಕ್ಷವೂ ಉಂಟಾಗುವುದರಲ್ಲಿ ಸಂಶಯವಿಲ್ಲವು.

ಪರಮಾತ್ಮನ ಗುಣಕಥನವು :– ಮೋಕ್ಷ, ಸುಖ, ಆನಂದ, ಹರ್ಷ, ಸಂತೋಷ, ಪ್ರಮೋದ, ಪಾರಾವಯ, ಪವನವಿತ್ರ, ಆಹ್ಲಾದ, ಜ್ಞಾನ, ವಿಜ್ಞಾನ, ಪ್ರಜ್ಞಾನ, ಸಂಮೋದ, ಸಂವಿಜ್ಞಾನ, ಅದ್ಭುತ–ಗಂಭೀರನಾದ ಧೀರಶೂರ, ಅತ್ಯಂತಾಸಕ್ತ, ವಿರೋಧವಿದೂರ, ಉದಾರ, ಅವ್ಯಕ್ತ, ಮೋದ, ಅತೀವ್ಯಕ್ತ, ವ್ಯಕ್ತ, ವೇದಮೂರ್ತಿ, ವ್ಯಾಪ್ತ, ಕರ್ತಾ, ಪ್ರೇರಕ, ಸಾಕ್ಷೀ, ಮಾಧುರ್ಯಗುಣಾಂಬುಧಿ, ಕ್ಷೇಮ, ಅಭಯ, ವಿನೋದ, ಅಂತರ್ಯಾಮಿ, ಮಹ, ಮಹತ್ತು, ಅಣು, ಆದಿಪರಬ್ರಹ್ಮಾ, ಸಂಭ್ರಾಂತೀ, ಸಾಧ್ಯಾ, ಅನಾದಿಬ್ರಹ್ಮಚಾರಿ, ಲೋಕವಿಲಕ್ಷಣ,

ಆಧಿವ್ಯಾಧಿಶೂನ್ಯ, ಲೋಕಸುಂದರ, ಸತ್ಯ, ಆದಿತ್ಯ, ಪ್ರಕಾಶ, ಶಾಂತಿಪೂರ್ಣ, ಕರುಣಾಂಬೋಧೀ ಪ್ರಣತಾರ್ತಿಹರ, ಶೋಕನಾಶನ, ಮಧುವೀರ್ಯ, ಭಾಮಾಧರ್ಮ, ದಿವ್ಯಭೂಷಣ, ಕಾಲ, ವಿಜಯವೀರ್ಯ, ಪೀತಾಂಬರಧಾರಿ, ವೈದಿಕ ಲಕ್ಷಣವಂತ, ಅವಿರುಹ, ಕ್ರೋಧರಹಿತ, ನಿತ್ಯತೃಪ್ತ, ಜನನವಿದೂರ, ದ್ವಿಧಾನ, ನಿಸ್ಸಂಗ, ನಿಷ್ಕಳಂಕ, ದಾತಾ, ಜಡಚೇತನಾತ್ಯಂತಭಿನ್ನ, ಬಹು ಕುಟುಂಬಿಪಾಲಕ, ಅಮೃತಭುಕ್, ನಾನಾರಾಧ್ಯ, ದುರಾರಾಧ್ಯ, ನಿತ್ಯಮುಕ್ತಾಶ್ರಯ, ಮದನೇಶ್ವರ, ಪೂರ್ಣೈಶ್ವರ್ಯ, ಸರ್ವಾಂತರ್ಯಾಮಿ, ತ್ರಿಗುಣಾತೀತ, ಫಲಪ್ರದ, ಮಾಧವ, ಸಾಕಾರ, ಅಪ್ರಾಕೃತ, ಶರಣಾಗತ ವತ್ಸಲ, ಲೋಕವಿಲಕ್ಷಣ, ಅಚಲ, ಅಚಂಚಲ, ಏಕಪತ್ನೀವ್ರತ, ಭಕ್ತಿಪ್ರದ, ಭುಕ್ತಿಪ್ರದ, ಮುಕ್ತಿಪ್ರದ, ಅನೇಕಮಹಿಮಾ, ಚಕ್ರವರ್ತೀ ಸಾರ್ವಭೌಮ, ವೇದಪ್ರತಿಪಾದ್ಯ, ವೇದರಕ್ಷಕ, ಸರ್ವವರ್ಣ, ಸರ್ವಾಶ್ರಮ, ದೇವತಾಪ್ರಿಯ, ಸರ್ವಾಧಿಪ, ಭೂಕಾಂತ, ಭವನಾಶಕ, ನೀಲವರ್ಣ, ಪುಣ್ಯಶ್ಲೋಕ, ಶತ್ರುಸಂಹಾರ, ನಿರ್ವಿಕಾರ, ಅಗಮ್ಯ, ತ್ರಿಗುಣಾತೀತ, ನಿತ್ಯತೃಪ್ತ, ಸರಸಿಜಾಕ್ಷ, ಪ್ರಕೃತಿ, ವೇದ, ಕಾಲ, ಜೀವ, ಆಕಾಶಾದಿಸರ್ವತ್ರವ್ಯಾಪ್ತ, ಸರ್ವತ್ರಗುಪ್ತಮಹಿಮಾ, ಅಂತರಾತ್ಮಾ, ಸುಗುಣ, ದೋಷನಿರ್ಲಿಪ್ತ, ಲಿಂಗಶೂನ್ಯ, ಸಾಕಾರಮೂರ್ತಿ, ಸರ್ವೋತ್ತಮ, ಭಕ್ತಾಧೀನ, ಅಗಣಿತಗುಣಧಾಮ, ಅತ್ಯದ್ಭುತಶಕ್ತಿ, ನಿಗಮಗೋಚರ, ನಿರ್ವಿಕಾರ, ನಿರ್ವಿಕಲ್ಪ, ಜಗದ್ವಲ್ಲಭ, ಜನನಮರಣಜರಾದಿವ್ಯಾಧಿದೋಷದೂರ, ಸದ್ಗುಣಸಾಂದ್ರ; ಜ್ಞಾನಾನಂದಪರಿಪೂರ್ಣ, ಅಖಿಲಬ್ರಹ್ಮಾಂಡಕರ್ತಾ, ನಿತ್ಯವಿದ್ಯಾವಂತ, ವಿಶ್ವಪರಿಪಾಲಕ, ಖದ್ಯೋತಲಾವಣ್ಯ, ಬಲುಪಾವನಧೈರ್ಯ, ಅಷ್ಟೈಶ್ವರ್ಯಯೋಗೇಶ್ವರ, ನಿದ್ರಾರಹಿತ, ಸರ್ವಸ್ವತಂತ್ರ, ಸಂಮೋದ, ಮುದ್ದುಮೋಹನ, ಶಿರಿವಂತ, ತೇಜೋಬುದ್ಧಿಃ, ವಿಸ್ತಾರತಂತ್ರ, ಜಗದಂತರ್ಯಾಮಿ, ಶುದ್ಧಲಕ್ಷಣವಂತ, ಗರುಡಗಮನ, ಭದ್ರಮೂರ್ತಿ, ಪ್ರಾಜ್ಞಸರ್ವೋತ್ತಮೈಶ್ವರ್ಯ, ಕೃದ್ಧಾದಿವಿದೂರ, ನಿರ್ದ್ವಂದ್ವ, ಭವರೋಗವೈದ್ಯ, ವೈಕುಂಠನಿವಾಸ, ದೈತ್ಯಮರ್ದನ, ತ್ರಿಜಗತ್ಪೂಜಿತ, ಸದ್ಧರ್ಮರಕ್ಷಕ ಎಂಬದಾಗಿ ಪರಮಾತ್ಮನ ಗುಣಕಥನೆಯನ್ನು ಮಾಡುತ್ತಾ ಬಂದಲ್ಲಿ ಪರಮಾತ್ಮನು ಸ್ವಯೋಗ್ಯವಾದ ಫಲವನ್ನೇ ಅಧಿಕಾರಿಗಳಿಗೂ ಸಹ ಕೊಡತಕ್ಕನಾಗುತ್ತಾನೆ.

ಪರಮಾತ್ಮನ ಅರ್ಚನೆಯು :– ಪೂಜಾಸಾಧನದ ದ್ರವ್ಯಕ್ಕೆ ಅಭಿಮಾನಿ ದೇವತೆಗಳು. ಪೂಜಾಸಾಧನ ದ್ರವ್ಯಗಳು ಅಲಭ್ಯವಾದಾಗ ಅಭಿಮಾನಿ ದೇವತೆಗಳನ್ನು ಸ್ಮರಣೆಮಾಡಿ ಬೇಡಿಕೊಂಡರೆ ಅವರೆ ಆ ದ್ರವ್ಯಗಳಾಗಿ ಸಾಧನೆಯನ್ನು ಮಾಡಿಸುತ್ತಾರೆ.

ಸಾಧನ ದ್ರವ್ಯಗಳು	**ಅಭಿಮಾನಿ ದೇವತೆಗಳು**
ಪರಮಾತ್ಮನ ಗೃಹ	ವಾಸ್ತು ದೇವತೆಗಳು
ಸಿಂಹಾಸನ	ಮೇರುಪರ್ವತ
ಮಂಟಪ	ಧರಣೀದೇವಿ
ಬೆಳ್ಳಿಪದಾರ್ಥ–ಸಮಸ್ತ ವಸ್ತುಗಳು	ಚಂದ್ರ

ಸಾಧನ ದ್ರವ್ಯಗಳು	ಅಭಿಮಾನಿ ದೇವತೆಗಳು
ನವರತ್ನ	ಹಿಮವತ್ಪರ್ವತ
ಮಕರತೋರಣಗಳು	ರಮಾದೇವಿ
ಹಾಸಿಕೆ	ಶೇಷದೇವರು
ದ್ವಾರಪಾಲಕರು	ಜಯವಿಜಯದೇವರು
ತುಳಸೀಗಂಧಾದಿ ಸರ್ವಪರಿಮಳವು	ರಮಾದೇವಿ
ಗೃಹಸ್ಥ ಅರ್ಚಕನಲ್ಲಿ	ಬ್ರಹ್ಮದೇವರು
ವಾನಪ್ರಸ್ಥ ಅರ್ಚಕನಲ್ಲಿ	ಸೌಭರಿ
ಬ್ರಹ್ಮಚಾರಿಯಲ್ಲಿ	ಅಗ್ನಿ
ಸನ್ಯಾಸಿಯಲ್ಲಿ	ಸನಕಾದಿಗಳು
ದೀಪಗಳು	ಸೂರ್ಯ-ಚಂದ್ರ-ಅಗ್ನಿ
ಘಂಟೆ	ಗರುಡದೇವರು
ಘಂಟೇನಾದ	ಶೇಷದೇವರು
ಸಮಗ್ರಉಪಕರಣೆ	ಭೂದೇವಿ
ಶಂಖ	ಉಭಯಾತ್ಮಕ ಅನಿರುದ್ಧ
ಅಗ್ರೋದಕ	ಭಾಗೀರಥಿ ಸಹಿತನಾದ ವರುಣ ದೇವರು
ಕಲಸಪಾತ್ರೆ	ರುದ್ರದೇವರು
ಪೀತಾಂಬರ	ಗರುಡದೇವರು
ಕೌಸ್ತುಭಮಣಿ	ಬ್ರಹ್ಮದೇವರು
ವನಮಾಲಾ	ಧರಣೀದೇವಿಯರು
ಕುಂಡಲ	ಶೇಷದೇವರು
ಮಕುಟ	ಲಕ್ಷ್ಮೀದೇವಿಯರು
ಪುಷ್ಪದ್ಯಲಂಕಾರ	ದೇವತೆಗಳು
ಚಕ್ರ	ಕಾಮದೇವರು
ಶಂಖಾಭಿಮಾನಿ	ಕಾಮಪುತ್ರ ಅನಿರುದ್ಧ
ಗದೆ	ವಾಯುದೇವರು
ಪದ್ಮ	ರಮಾದೇವಿಯರು
ಚೂಡಾರತ್ನ	ವಾಯುದೇವರು

ಸಾಧನ ದ್ರವ್ಯಗಳು	ಅಭಿಮಾನಿ ದೇವತೆಗಳು
ಗೋಪೀಚಂದನ	ಕಾಮದೇವರು
ಪಾದುಕೆ	ಗರುಡದೇವರು
ಶ್ರೀತುಳಸಿ	ಲಕ್ಷ್ಮೀದೇವಿಯರು
ಸರ್ವಗಂಧಾದಿಪರಿಮಳ	ಕಾಮದೇವರು
ಪುಷ್ಪ	ಬ್ರಹ್ಮದೇವರು
ಧೂಪಾರ್ತಿ	ನಿರ್‌ಋತಿ
ಏಕಾರ್ತಿ	ಅಗ್ನಿ
ಬತ್ತಿಗಳು	ಶೇಷದೇವರು
ಎಣ್ಣೆ	ವರುಣದೇವರು
ಅನ್ನ	ಚಂದ್ರದೇವರು
ಪರಮಾನ್ನ	ಭಾರತೀದೇವಿ
ಭಕ್ಷ್ಯ	ವಾಯುದೇವರು
ತುಪ್ಪ	ಲಕ್ಷ್ಮೀದೇವಿಯರು
ಹಾಲು	ಸರಸ್ವತೀದೇವಿ
ಮಂಡಿಗೆ	ಬ್ರಹ್ಮದೇವರು
ಬೆಣ್ಣೆ	ವಾಯುದೇವರು
ಮೊಸರು	ಚಂದ್ರನು
ತೊವ್ವೆ	ಗರುಡ
ಸೊಪ್ಪಿನಪಲ್ಯ	ಮಿತ್ರನಾಮಕ ಸೂರ್ಯ
ಕಾಯಿಪಲ್ಯ	ಶೇಷದೇವರು
ಹುಳೀಪದಾರ್ಥ	ಪಾರ್ವತೀದೇವಿಯರು
ಸಿಹಿಪದಾರ್ಥ	ರುದ್ರದೇವರು
ಸಕ್ಕರೆ–ಬೆಲ್ಲ	ಇಂದ್ರದೇವರು
ಸರ್ವಸೋಪಸ್ಕಾರ	ಬ್ರಹ್ಮದೇವರು
ಖಾರ	ಶನೈಶ್ಚರ
ಇಂಗು–ಯಾಲಕ್ಕಿ	ಕಾಮದೇವರು
ತೈಲ ಪಕ್ವಪದಾರ್ಥ	ಜಯಂತ
ಸೊಂಡಿಗೆ	ಸ್ವಾಯಂಭುವ ಮನು
ಉದ್ದಿನಭಕ್ಷ	ದಕ್ಷಪ್ರಜೇಶ್ವರ

ಸಾಧನ ದ್ರವ್ಯಗಳು	ಅಭಿಮಾನಿ ದೇವತೆಗಳು
ಉಪ್ಪು	ನಿರ್‌ಋತೀ
ಲವಣಶಾಖಾ	ಅಹಂಕಾರಪ್ರಾಣ
ತಾಂಬೂಲ	ಭಾಗೀರಥೀ
ಪರಿಮಳಗಂಗಾಮೃತ	ಬುಧ

ಮೇಲ್ಕಂಡ ದೇವತೆಗಳೇ ಸರ್ವತ್ರ ವ್ಯಾಪ್ತರಾಗಿ ಅನೇಕ ರೂಪಗಳನ್ನು ಧರಿಸಿ ವ್ಯಾಪ್ತನಾದ ಭಗವಂತನ ತಮ್ಮ ಸ್ವರೂಪ ಭಕ್ತಿಜ್ಞಾನಗಳಿಂದ ಸಂತೋಷಪಡಿಸುತ್ತಿರುವ ಕಾರಣ ಆಯಾಯ ಪದಾರ್ಥಗಳಲ್ಲಿ ಅಭಿಮಾನಿ ದೇವತೆಗಳನ್ನು ತಿಳಿದು ಸರ್ವ ಪದಾರ್ಥಗಳಿಗೆ ಸರ್ವಾಭಿಮಾನಿಗಳಿಗೆ ಜಾಗ್ರದವಸ್ಥೆಯಲ್ಲಿ ಸ್ಥೂಲ ಪದಾರ್ಥಗಳಲ್ಲಿ ವಿಶ್ವನೇ ನಿಯಾಮಕ, ವಿಶ್ವನೇ ಭೋಕ್ತೃ ಎಂದು ತಿಳಿದರೆ ಆ ದೇವತೆಗಳು ತಿಳಿದಂತವನ ಸ್ವರೂಪಜ್ಞಾನ ಪ್ರಕಟವಾಗುವ ಹಾಗೆ ಪರಮಾತ್ಮನಿಗೆ ವಿಜ್ಞಾಪನೆ ಮಾಡಿ ಆತನ ದಯೆಯನ್ನು ಉಂಟುಮಾಡಿಸಿ ಕೊಡುತ್ತಾರೆ.

ನವವಿಧ ಭಕ್ತಿಯ ಸ್ವರೂಪವೇನೆಂದರೆ :– ಪರಮಾತ್ಮನ ಮಹಾತ್ಮೆಯನ್ನು ಪುರಸ್ಸರ ಜ್ಞಾನ ತಿಳಿದು ಆತನಲ್ಲಿ ಒಂದು ಲವಕಾಲಬಿಡದೆ ನಿರಂತರ ಅಹೋರಾತ್ರಿಯೂ ಅತಿ ಸ್ನೇಹ ಮಾಡುವುದೇ ಭಕ್ತಿಸ್ವರೂಪವು. ಇಂಥಾ ಭಕ್ತಿಯನ್ನು ಒಂಭತ್ತು ವಿಧವಾಗಿ ಮಾಡಬಹುದು. ಅವು ಯಾವುದೆಂದರೆ :– ೧. ಶ್ರವಣ ೨. ಕೀರ್ತನ ೩. ಸ್ಮರಣ ೪. ಪಾದಸೇವನ, ೫.ಅರ್ಚನ ೬. ವಂದನ ೭. ದಾಸ್ಯ ೮. ಸಖ್ಯ ೯. ಆತ್ಮನಿವೇದನ.

೧. ಶ್ರವಣ – ಪರಮಾತ್ಮನ ಕಥೆಗಳನ್ನು ಕೇಳೋಣವೇ ಶ್ರವಣ ಭಕ್ತಿಯು.

೨. ಕೀರ್ತನ – ಪರಮಾತ್ಮನನ್ನು ಕೊಂಡಾಡುತ್ತಾ ಆತನ ಚರಿತ್ರೆಗಳನ್ನು ವರ್ಣನಾತೀತವಾಗಿ ಪಠನ ಮಾಡುವುದೇ ತೀರ್ತನಾ ಭಕ್ತಿಯು.

೩. ಸ್ಮರಣ – ಜಗತ್ತಿನ ಸಕಲ ಕ್ರಿಯೆಗಳೂ ಪರಮಾತ್ಮನ ಪ್ರೇರಣೆಯಿಂದಲೇ ಆಗುತ್ತದೆಂದು ತಿಳಿದು ಶೀತೋಷ್ಣ – ಲಾಭಾ ಲಾಭ ಜಯಾಪಜಯ ಪರಮಾತ್ಮನೇ ಕೊಡುತ್ತಾನೆಂದೂ, ಪರಮಾತ್ಮನಲ್ಲಿ ಅಧಿಕ ನಿಷ್ಠೆಯುಳ್ಳವನಾಗಿ ಫಲವನ್ನಪೇಕ್ಷಿಸದೆ, ದೃಢವಾಗಿ ಎಲ್ಲಾ ಕಾರ್ಯಗಳೂ ಪರಮಾತ್ಮನಿಂದಲೇ ಆಗುತ್ತದೆಂದು ತಿಳಿಯೋಣವೇ ಸ್ಮರಣಭಕ್ತಿಯು.

೪. ಪಾದಸೇವನ – ಪುಣ್ಯತೀರ್ಥ ಕ್ಷೇತ್ರಯಾತ್ರೆಗಳನ್ನು ಮಾಡೋಣವೇ ಪಾದಸೇವನೆಯ ಭಕ್ತಿಯು.

೫. ಅರ್ಚನ – ಅಶ್ವಮೇಧಾದಿ ಯಜ್ಞಗಳು ಮಾಡಿ ಪರಮಾತ್ಮನನ್ನು ಪ್ರೀತಿಸೋಣ, ಇಲ್ಲವಾದಲ್ಲಿ ತಂತ್ರಸಾರೋಕ್ತವಾಗಿ ಸಾಲಿಗ್ರಾಮಾದಿಗಳನ್ನು ಪೂಜೆಮಾಡಿ, ವೈಶ್ವದೇವಾದಿಗಳನ್ನು ಮಾಡಿ, ಪರಮಾತ್ಮನ ವಿಗ್ರಹವನ್ನು ಮನಸ್ಸಿನಲ್ಲಿ, ಕುಳಿತಾಗಲೂ, ನಿಂತಾಗಲೂ, ಮಲಗಿದಾಗಲೂ, ಏಕಾಗ್ರಚಿತ್ರದಿಂದ ಅರ್ಚಿಸೋಣವೂ, ಪರಮಾತ್ಮನು ಸರ್ವಪ್ರಾಣಿಗಳಲ್ಲಿಯೂ ಇದ್ದಾನೆಂದು ತಿಳಿಯೋಣವೂ, ಇವುಗಳು ಅರ್ಚನಭಕ್ತಿಯು.

೬. ವಂದನ – ಪರಮಾತ್ಮನಿಗೆ ಭಕ್ತಿಯಿಂದ ಪ್ರದಕ್ಷಿಣ ನಮಸ್ಕಾರವನ್ನು ಮಾಡೋಣವೇ ವಂದನಭಕ್ತಿಯು.

೭. ದಾಸ್ಯ – ಪರಮಾತ್ಮನ ಭಕ್ತರ ಉದ್ದೇಶ್ಯವನ್ನು ನೆರವೇರಿಸಲು ಸಿದ್ಧನಾಗಿ ಅವರ ಕಾರ್ಯಗಳನ್ನು ಸಂತೋಷದಿಂದ ಮಾಡೋಣವೇ ದಾಸ್ಯಭಕ್ತಿಯು.

೮. ಸಖ್ಯ – ಪರಮಾತ್ಮನಲ್ಲಿ ಮನಸ್ಸನ್ನಿಟ್ಟು ಆತನನ್ನು ಎಂದಿಗೆ ಕಾಣುವೆನೋ ಎಂಬ ಅತಿಶಯ ರತಿಯಾವುದೋ ಅದೇ ಸಖ್ಯಭಕ್ತಿಯು.

೯. ಆತ್ಮನಿವೇದನ – ಅಭಿಮಾನ ತ್ಯಾಗಮಾಡಿ ಸರ್ವೇಂದ್ರಿಯಗಳನ್ನೂ ಪರಮಾತ್ಮನಿಗೆ ಅರ್ಪಿಸಿ, ಅಚಂಚಲನಾಗಿ ಭೋಗದಾಸೆಯಿಂದ ದೂರನಾಗಿ, ಇಂದ್ರಿಯಗಳ ಭೋಗವನ್ನು ಬಯಸದೆ, ಪರಮಾತ್ಮನ ಹೊರ್ತು ಇತರ ವಸ್ತುಗಳನ್ನು ಚಿಂತಿಸದಿರೋಣವೇ ಆತ್ಮನಿವೇದನೆಯು ಇವೇ ನವವಿಧ ಭಕ್ತಿಗಳು.

ಶ್ಲೋ॥ ವಿಷ್ಣೋಸ್ತುಶ್ರವಣೇಪರೀಕ್ಷಿದಭವದ್ವೈಯ್ಯಾಸಕಿಃಕೀರ್ತನೇ॥ ಪ್ರಹ್ಲಾದ ಸ್ಮರಣೇ ತದಂಘ್ರಿ ಭಜನೇ ಲಕ್ಷ್ಮೀಧೃವಃಪೂಜನೇ ॥ ಅಕ್ರೂರ ಸ್ತ್ವಭಿವಂದನೇಚಹನುಮಾನ್ ದಾಸ್ಯೇಚಸಖ್ಯೇರ್ಜುನಃ॥ ಸರ್ವಸ್ವಾಮ್ಯ ನಿವೇದನೇ ಬಲಿರಭೂತ್ಕೈವಲ್ಯಮೇಷಾಂಪರಂ॥

ಪರಮಾತ್ಮನ ಕಥೆಗಳನ್ನು ಶ್ರವಣಮಾಡಿದ ಪರೀಕ್ಷಿದ್ರಾಜನೂ, ಆತನ ಕೀರ್ತನೆಯಿಂದ ಶುಕ್ರಾಚಾರ್ಯರೂ, ಸ್ಮರಣೆಯಿಂದ ಪ್ರಹ್ಲಾದನೂ, ಪಾದಸೇವನೆಯಿಂದ ಲಕ್ಷ್ಮೀದೇವಿಯೂ, ಪೂಜೆಯಿಂದ ಧೃವನೂ, ವಂದನದಿಂದ ಅಕ್ರೂರನೂ, ದಾಸ್ಯದಿಂದ ಆಂಜನೇಯನೂ, ಸಖ್ಯದಿಂದ ಅರ್ಜುನನೂ, ಬಲಿಚಕ್ರವರ್ತಿಯು ಸರ್ವನಿವೇದನ (ಆತ್ಮನಿವೇದನೆ) ಇಂದಲೂ ಮೋಕ್ಷವನ್ನು ಪಡೆದಿರುತ್ತಾರೆಯಾದ್ದರಿಂದ ಈ ನವವಿಧ ಭಕ್ತಿಗಳಲ್ಲಿ ಒಂದೊಂದನ್ನೂ ಆಚರಣೆಗೆ ತಂದುಕೊಂಡು ಪರಮಾತ್ಮನು ಸರ್ವೇಂದ್ರಿಯ ನಿಯಾಮಕನಾಗಿ ಇಂದ್ರಿಯಾದ್ವಾರಾತದಭಿಮಾನಿ ದೇವತೆಗಳದ್ವಾರಾ ಸರ್ವವ್ಯಾಪಾರವೂ ಮುಖ್ಯವಾಗಿ ಪರಮಾತ್ಮನೇ ಭಾರತೀಪತಿ ಮುಖ್ಯ ಪ್ರಾಣಾಂತರ್ಯಾಮಿದ್ವಾರಾ ಮಾಡಿಸುತ್ತಾನೆಂದು ತಿಳಿದು ತದೈಕನಿಷ್ಠನಾಗಿ ಮನಸ್ಸಿನಲ್ಲಿ ಸ್ಮರಣೆ ಮಾಡುವುದೇ ಸರ್ವಸಾಧನೆಗಳಲ್ಲಿಯೂ ಇದೇ ಮುಖ್ಯಸಾಧನವು. ಇವನೇ ಸತ್ಯವಾದಿಯು. ಹೀಗೆ ತಿಳಿದು ಆಚರಿಸುವಂಥವನು. ಚಂಡಾಲನಾಗಲೀ – ಜಾತಿಭ್ರಷ್ಟನಾಗಲೀ– ಮತಿಭ್ರಷ್ಟನಾಗಲೀ – ವ್ಯಭಿಚಾರಾಗ್ರಣಿಯಾಗಲೀ – ಪಾಪಿಷ್ಟನಾಗಲೀ– ಕೋಪಿಷ್ಟನಾಗಲೀ– ಅತಿ ನಿಷ್ಟುರಭಾಷಣಿಯಾಗಲೀ – ದುರಾಚಾರವುಳ್ಳವನಾಗಲೀ – ದುರ್ವಿಷಯ ಭೋಗಿಸುತ್ತಿರಲೀ– ಅವರಿಗೆ ನಿಯಾಮಕನಾದ ಭಾರತೀಪತಿ ಮುಖ್ಯ ಪ್ರಾಣಾಂತರ್ಗತನಾದ ಶ್ರೀಮನ್ನಾರಾಯಣನು ಅಂಥವರಿಗೆ ಮಂಗಳವನ್ನುಂಟು ಮಾಡುವನು.

ನವವಿಧಭಕ್ತಿ ಪ್ರಕರಣ ಸಂಪೂರ್ಣವು.

೨೧. ಗರುಡಶೇಷಮಾರ್ಗ ಪ್ರಕರಣ

ಸಂಪುಟ ೭ ಸಂಚಿಕೆ ೩ ಭಾವ ಜ್ಯೇಷ್ಠ ಜೂನ್ ೧೯೩೪

ರಾಗ: ಮಾಯಾಮಾಳವಗೌಳ ಏಕತಾಳ

ಶರಣುಹರಿಗೆ ಶರಣುಶಿರಿಗೆ ಶರಣುಭಾರತೀಪತಿಗೆ ರುಜುಗಳಿಗೆ ದಿವಿಜರಿಗೆ ಶರಣುಕ್ರಮಾದಪಿ॥
ಗುರುಪರಂಪರೆಗೆ ಶರಣುಮಾಡಿ ಎನಗೆ ತಿಳಿದಷ್ಟು ಗರುಡಶೇಷಮಾರ್ಗ ಪ್ರವೇಶ ನುಡಿವೆನು ॥ ೧ ॥

ಬ್ರಹ್ಮಾದಿನವ ಕೋಟಿಸುರರು ಎರಡುರೂಪದಿಂದ ಬ್ರಹ್ಮಾಂಡದ್ಹೊರಗೆ ಇರುವರೆಂಬೆ ಶ್ರುತಿಯಲೀ॥ ದ್ವಿತಿಯಪಾರಾರ್ಧದಲ್ಲಿ ಅಂಡಸೃಷ್ಟವಾದ ಮೇಲೆ ಮೂರನೇ ದೇಹ ಅಂಡದೊಳಗೆ ಇರುವುದು ॥ ೨ ॥

ಪಾದ್ಮಕಲ್ಪದಲ್ಲಿ ಬ್ರಹ್ಮದೇಹದಿಂದ ಸೃಷ್ಟರಾದ ರುದ್ರಾದಿಗಳಿಗೆ ಕಲ್ಯಾವೇಶವಿರುವುದು ॥ ನವಾಕೋಟಿತಾತ್ವಿಕರಿಗೆ ಅಂಡದ್ಹೊರಗಿನೆರಡು ಗಣಕು ಅಸುರಾವೇಶಇಲ್ಲವೆಂದು ವಿಜಯರುಕ್ತಿಯು ॥ ೩ ॥

ಪ್ರಥಮ ಸೃಷ್ಟದೇವಗಣವು ಪ್ರಥಮಸೃಷ್ಟ ಗುಣತ್ರಯಾದಿರಾಶಿ ಇಪ್ಪತ್ತಾಲ್ಕುಗಳಿಗೆ ಮಾನಿದಿವಿಜರು॥ ವಾಸುದೇವಪತ್ನಿ ಮಾಯೆಗುಣತ್ರಯಾದ ರಾಶಿಗಳಲಿ ಶ್ರೀಭೂಮಿದುರ್ಗಿ ರೂಪದಿಂದಿರುವಳೂ ॥ ೪ ॥

ಪುರುಷನಾಮಕಾವ್ಯ ಬ್ರಹ್ಮವಾಸುದೇವ ಮಾಯೆಪುತ್ರನಿರುವ ಮಹತ್ತತ್ವರಾಶಿಗಭೀಮಾನಿಯೂ॥ ಅಹಂಕಾರತತ್ವ ರಾಶಿ ಮೊದಲಾಗಿ ಪೃಥಿವಿ ರಾಶಿತನಕ ನವಾಕೋಟಿ ರುದ್ರಾದಿದಿವಿಜರು ॥೫॥

ಪ್ರಥಮಸೃಷ್ಟ ದೇವಗಣಕೆ ಇದೇ ಮೂಲರೂಪವೆಂಬೆ ಅಂಡದ್ಹೊರಗೆ ಇವರ ಹೊರತು ಜೀವರಿಲ್ಲವೂ ॥ ಪ್ರಥಮಪಾರಾರ್ಧದಲ್ಲಿ ಬ್ರಹ್ಮಮಾನದಿಂದ ಮೂವತ್ತೈದು ವರ್ಷವಾದ ಮೇಲೆ ಹರಿಯಆಜ್ಞದಿ ॥ ೬ ॥

ಶ್ರೀದೇವಿಸತ್ವದಾವರಣ ಸೃಷ್ಟಿಮಾಡಿದಾಳು ಅದರವಳಗೆ ರಜಸ್ಸಿನಾವರಣಸೃಷ್ಟಿಯಾ ॥ ಧರಾದೇವಿ ನಿರ್ಮಿಸೆ ಅದರವಳಗೆ ದುರ್ಗಿಯೂ ತಮಸ್ಸಿನಾವರಣವನ್ನು ಸೃಷ್ಟಿಮಾಡ್ದಳು ॥ ೭ ॥

ಬ್ರಹ್ಮದೇವ ತನ್ನ ಮಹತ್ತತ್ವದಾವರಣವನ್ನು ಶಿರಿಯಆಜ್ಞೆಯಿಂದ ಅದರವಳಗೆ ನಿರ್ಮಿಸೆ ॥ ಅಹಂಕಾರಮನಃಸ್ವಾದಿ ಪೃಥುವ್ಯಂತತತ್ವಗಳನು ವಂದರೊಳಗೆವಂದಾಗಿ ಇಪ್ಪತ್ತಾಲಕೂ॥೮॥

ಆವರಣತತ್ವಗಾಳಿ ತಮ್ಮ ತಮ್ಮ ದೇಹಗಳು ತಾವೆತಾವೆ ನಿರ್ಮಾಣ ಸ್ವೋತ್ತಮಾಜ್ಞ ದೀ॥
ಅಂಡಸೃಷ್ಟಿ ಹೊರತು ಹೊರಗಿನಾವರಣ ಸೃಷ್ಟಿಕಾಲ ಬ್ರಹ್ಮಮಾನದಿಂದ ಹತ್ತುವರ್ಷವೆಂದರು ॥ ೯ ॥

ಮೂವತ್ತೈದುವರ್ಷದುಪರಿ ಇದರಕೂಡಿ ನಲವತ್ತೈದು ಚತುರ್ಮುಖನಸೃಷ್ಟಿ ಪಂಚವರ್ಷ ಉಳಿದಿರೆ॥
ಅಪಏವಸಸರ್ಜಾದೌ ಅಂಡಸೃಷ್ಟಿ ಗಾದಿಯಲ್ಲಿ ವಾಸುದೇವ ಸೃಷ್ಟಿಸೀದ ಉದಕಾವರಣವಾ ॥ ೧೦ ॥

ಇದೇ ಅಂಡಜನಕ ಉದಕದಾವರಣವೆಂಬೆನು ವಾಸುದೇವ ತನ್ನ ಪತ್ನಿ ಮಾಯೆಯಿಂದಲೀ
ಜಲಕ್ರೀಡೆ ಮಾಡಿದಾನು ॥ ಬ್ರಹ್ಮಮಾನವೆರಡು ವರ್ಷವಾದ ಮೇಲೆ ಶ್ರೀಭೂಮಿದುರ್ಗಿಯೆನುತಲೀ ॥ ೧೧ ॥

ಮೂರುರೂಪಳಾದಳಾ ವಾಸುದೇವಪತ್ನಿ ಮಾಯಾ ಮೂರುರೂಪದಿಂದ ಪತಿಯ
ವಾಸುದೇವನಾ ॥ ಪೂಜೆಯಲ್ಲಿ ದೀಕ್ಷೆಯಿಟ್ಟು ಬ್ರಹ್ಮಮಾನದೊಂದು ವರ್ಷ ಪತಿಯ ಸೇವೆ
ಮಾಡಲಾಗ ವಾಸುದೇವನು ॥ ೧೨ ॥

ಮೆಚ್ಚಿ ಮೂವರಲ್ಲಿ ಮೂರು ರೂಪದಿಂದ ಪುತ್ರನಾದ ವಿಷ್ಣು ಬ್ರಹ್ಮ ಶಿವನು ಎಂದು
ಮಹಾಮಹಿಮನು ॥ ಮಾಯೆ ಉದರದಲ್ಲಿ ಸಮವರ್ತುಳಾದ ಬ್ರಹ್ಮಾಂಡ ವಾಸುದೇವನಂಗ
ಸಂಗದದಿಂದ ಬೆಳೆಯಲು ॥ ೧೩ ॥

ಬ್ರಹ್ಮಮಾನದಿಂದ ಎರಡುವರ್ಷಪರ್ಯಂತ ಬೆಳೆಯೆ ಇಲ್ಲಿಗೈವತ್ತುವರ್ಷ ಕಿಂಚಿತ್ಕೊರತೆಯು॥
ಅಂಡಜನಕ ಉದಕದಾವರಣದಲ್ಲಿ ಮಾಯೆಯೂ ಉದರದಿಂದ ತೆಗೆದು ಅಂಡವನ್ನ ನಿರ್ಮಿಸೆ ॥೧೪॥

ಮುಕ್ತಿಯೋಗ್ಯ ತಮೋಯೋಗ್ಯ ನಿತ್ಯಸಂಸಾರಿ ಜೀವಗಣತ್ರಯದಿ ಬಿಂಬವಿಷ್ಣು ರುದ್ರಬ್ರಹ್ಮನು॥
ವಾಸುದೇವಪುತ್ರಹರಿಯೆ ಜೈವನೈಜ ಹಠವ ನಡಿಶಿ ಮುಕ್ತಿ ತಮಸ್ಸು ನಿತ್ಯ ಸಂಸಾರವೀವನು ॥೧೫॥

ಇದೇಪೂರ್ವಾಪರಾರ್ಧ ಕೊನೆಯಲ್ಲಿ ವಾಸುದೇವ ಪೂರ್ವಸೃಷ್ಟರಾದಂಥ ದೇವತೆಗಳಲಿ॥
ಬಹ್ಮಜೀವರಲ್ಲಿ ಬ್ರಹ್ಮನಾಮಕನ್ನಿಟ್ಟನು ರುದ್ರಜೀವನದಲ್ಲಿ ಈಶ ಶಿವನ ಇಟ್ಟನು ॥೧೬॥

ಸರ್ವದೇವತೆಗಳ ನುಂಗು ಎಂದು ಬ್ರಹ್ಮಗಾಜ್ಞೆ ಇತ್ತು ಸರ್ವದೇವತೆಗಳಾಗ್ರಾಸಮಾಡೆ ಬ್ರಹ್ಮನು॥
ರುದ್ರಗಾಜ್ಞೆಯಿತ್ತನು ಬ್ರಹ್ಮನ ಪ್ರವೇಶಿಸೆಂದು ವಿಷ್ಣುಬ್ರಹ್ಮರಿಬ್ಬರೇ ಉಳಿಯಲಾಕ್ಷಣ ॥೧೭॥

ಆ ವಿಷ್ಣು ಬ್ರಹ್ಮನ್ನ ನುಂಗಿರಮೆಯಸಹಿತವಾಗಿ ಬ್ರಹ್ಮಾಂಡದೊಳಗೆ ಪ್ರವೇಶಮಾಡಿದ ॥ ತನ್ನ
ಮುಖದ ವಾಯುವಿಂದ ಅಂಡದೊಳಗಿನರ್ಧ ಉದಕಶೋಷಮಾಡಿ ಶಯನಮಾಡಿ ವಿಷ್ಣು
ಉದಕದೀ ॥ ೧೮ ॥

ಆ ವಿಷ್ಣುನಾಭಿಯಲ್ಲಿ ಪದ್ಮಜನಿಸಲಾಕ್ಷಣ ಪದ್ಮನಾಭನೆಂಬಪೆಸರು ಆತಗಾಯಿತು ॥ ಆನಾಭಿ
ಪದ್ಮದಲ್ಲಿ ಚತುರ್ಮುಖನು ಜನಿಸಲು ಪುಟ್ಟಿದಾ ಪ್ರಥಮದಿವಸ ಪದ್ಮಕಲ್ಪ ॥ ೧೯ ॥

ಐವತ್ತು ವರ್ಷ ಪೂರ್ತಿ ಮೊದಲು ದಿವಸ ಕೂಡಿ ಎಂಬೆ ಸ್ವೇತವಾರಾಹ ಕಲ್ಪವೀಗ
ನಡೆವುದು ॥ ದ್ವಿತೀಯಪಾರಾರ್ಧಕ್ಕೆ ಪ್ರಥಮ ದಿವಸವೀದಿವಸ ಪ್ರಥಮವರ್ಷ ಪ್ರಥಮಮಾಸ
ಪ್ರಥಮಪಕ್ಷದೀ ॥ ೨೦॥

ವಿಷ್ಣು ರಹಸ್ಯಸಿದ್ಧ ತಾತ್ಪರ್ಯ ನುಡಿದಿರುವೆ ಮೊದಲು ಮೂವತ್ತೈದು ವರ್ಷ ಸ್ವಲ್ಪವಿವರಿಪೇ ॥
ವಾಸುದೇವಸಂಕರ್ಷಣ ಸೃಷ್ಟಿಬ್ರಹ್ಮನ್ನತ್ತು ವರ್ಷ ಮತ್ತೆ ಹತ್ತುವರ್ಷ ಪ್ರದ್ಯುಮ್ನ ಸೃಷ್ಟಿಯೂ
॥೨೧ ॥

ಅರ್ಧನಾರೀರೂಪಧರಿಸಿ ಪ್ರದ್ಯುಮ್ನ ಸೃಷ್ಟಿಸೀದ ಪುರುಷದೇವತೆಗಳ ದಕ್ಷಿಣಾಂಗದಿಂದಲೀ॥
ವಾಮಭಾಗದಿಂದ ದೇವಸ್ತ್ರೀಯರನ್ನು ಸೃಷ್ಟಿಸಾಲು ಇಲ್ಲಿಗಿಪ್ಪತ್ತು ವರ್ಷ ಬ್ರಹ್ಮಮಾನದೀ
॥ ೨೨ ॥

ಉಳಿದ ಹದಿನೈದು ವರ್ಷ ರುದ್ರಸೃಷ್ಟಿ ಎಂದರು ವಿಷ್ಣುರಹಸ್ಯ ವಿಸ್ತಾರವಿರುವುದು ॥
ರುದ್ರದೇವತಾನು ತಪಿಸಿ ಜಗತ್ಸೃಷ್ಟಿ ಮಾಳ್ಪೆನೆನ್ನೆ ಹರಿಯು ರುದ್ರಗೊರವನಿತ್ತು ಸೃಷ್ಟಿಸೆಂದನು
॥ ೨೩ ॥

ನಾನೇ ನಿನ್ನ ಪುತ್ರನಾಗಿ ಪುಟ್ಟುವೇನೆಂದಹರಿಯು ಸರ್ವದೇವತೆಗಳು ರುದ್ರನಿಂದ ಜನಿತರು॥
ಅಸ್ಮದಾದಿ ಅಲ್ಪಜೀವ ತೃಣಾನ್ತ ಸರ್ವಜೀವ ತಮೋಯೋಗ್ಯ ಸರ್ವಜೀವರಾಗಜನಿಸಲು
॥ ೨೪ ॥

ಅಲ್ಪ ಜೀವಗಣಗಳನ್ನು ದೈತ್ಯರೆಲ್ಲ ನುಂಗಲೂ ದೇವದೈತ್ಯರೀಗೆ ಯುದ್ಧ ಪುಟ್ಟಿತಾಗಲೇ ॥
ವಾಯುದೇವನಾಗ ಸರ್ವದೈತ್ಯರನ್ನು ಸಂಹರಿಸಲು ನವಕೋಟಿಸುರರು ಮಾತ್ರ ಹೊರಗೆ
ಉಳಿದರು ॥ ೨೫ ॥

ಗರುಡಶೇಷಮಾರ್ಗ ಲಯಕೆಪೂರ್ವಸೃಷ್ಟಿ ಜ್ಞಾನಬೇಕು ಸೃಷ್ಟಿಹೊರ್ತು ಲಯಕೆವಿವೇಕಪುಟ್ಟದು॥
ಆವರಣಗಳಲ್ಲಿಇದ್ದ ಸುರರಿಗ್ಯೆರಡನೇ ಶರೀರ ಮೂರನೇದು ಬ್ರಹ್ಮಾಂಡದೊಳಗೆ ಇರುವದು
॥ ೨೬ ॥

ಮಹಾಪ್ರಳಯಕಾಲದಲ್ಲಿ ಕೊನೆಯಭಾಗ ಗರುಡಶೇಷಮಾರ್ಗವೆಂಬ ಪ್ರಳಯಭಾವ ಸ್ವಲ್ಪ
ನುಡಿವೆನು ॥ ದ್ವಾದಶಾದಿತ್ಯರೇಕ ಕಾಲದಲ್ಲಿ ಉದಿಸಿ ಬರಲು ಮೇರ್ವಾದಿಗಿರಿಗಳೊಡೆದು
ಭಸ್ಮವಾಹುದು ॥ ೨೭ ॥

ಸಾಂವರ್ತಸೂರ್ಯ ಘೋರ ರಶ್ಮಿಯಂಡಲೋಕಹೀರೆ ಭೂಮಿಕಾಠಿಣ್ಯ ಶಕ್ತಿದೇಹಶಕ್ತಿಯೂ ॥
ಸಪ್ತಸಾಮುದ್ರಜಲವು ಶೋಷೆಗೊಂಡು ನಿಸ್ಸ್ವ ರೂಪವಾಗೆ ಅಂಡದೊಳಗೆ ಗರ್ಭೋದಕವು
ಶೋಷಿಸೆ ॥ ೨೮ ॥

ಗರ್ಭೋದಕದಿ ಇರುವ ಭೂಮಿಧಾರಿಶೇಷ ದೇವಸಾಹಸ್ರ ಫಣಿಗಳಳ್ಳೊಗೆ ಮಧ್ಯಫಣಿಯಲೀ॥
ಸಾಂವರ್ತಸೂರ್ಯರಶ್ಮಿ ಮಧ್ಯಫಣಾದಲ್ಲಿ ಬೀಳೆ ಸಂಕರ್ಷಣನ ಮುಖಾಗ್ನಿ ಜ್ವಾಲೆ ಏಳಲೂ
॥ ೨೯ ॥

ಕಾಲರುದ್ರ ಕಾಲವಹ್ನಿಯಂತರ್ಗತ ನಾರಸಿಂಹ ಸೂರ್ಯಾಗ್ನಿ ಉಭಯ ಜ್ವಾಲೆಗಂಡದಹಿಸಲೂ॥
ದಗ್ಧಗೋಮಯದಗುಳಿಗೆಯಂತೆ ಬ್ರಹ್ಮಾಂಡ ಉರಿಯೆ ಬ್ರಹ್ಮರುದ್ರಾದಿ ಸ್ಥೂಲದೇಹನಾಶವು ॥ ೩೦ ॥

ಸೂರ್ಯ ದೇಹಕ್ಕು ತನ್ನಿಂದ ತನಗೆ ನಾಶವಾದಮ್ಯಾಲೆ ಅಂಡಪೂರ್ಣ ಜೀವರಾಶಿಗೆ ॥
ವಾಸವೆಲ್ಲಿ ದೇವತೆಗಳ ಜೀವರಿಗೆ ಎಲ್ಲಿ ವಾಸವೆಂದು ಕೇಳೆ ತತ್ವ ನಿರ್ವೃತಿಗ್ರಂಥಭಾವವು ॥ ೩೧ ॥

ಅಂಡಪೋಗುವಾಗ ವಳಗಿರುವ ಜೀವರಾಗ್ಯಲ್ಲ ಈಶವಿರಾಟರೂ ಗರ್ಭವಾಸವು ॥
ಬ್ರಹ್ಮಾದಿಕಲ್ಲ್ಯನ್ತ್ಯ ಸಾಮಸ್ತಸಾಂಶರಿಗು ವೀರಾಟರೂಪ ಗರ್ಭವಾಸವೇಸರಿ ॥ ೩೨ ॥
ಹ್ಯಾಗೆ ಎನಲು ವಳಿಗೆ ಬಂದ ವಿಷ್ಣುವೆ ಪದ್ಮನಾಭನವನ ನಾಭಿಪದ್ಮ ಜನಿತ ಬ್ರಹ್ಮದೇವನೆ ॥
ಪಾತಾಳಪಾದನಾಗಿ ಸತ್ಯಲೋಕಶೀರ್ಷನಾಗೆ ಪದ್ಮನಾಭವಿರಾಡ್ಬ್ರಹ್ಮ ದೇಹಪೊಕ್ಕನು ॥ ೩೩ ॥

ಆತನೇ ಪುರುಷಸೂಕ್ತ ಪ್ರತಿಪಾದ್ಯ ವೀರಾಟ ಆತನಿಂದ ಜನಿತರಷ್ಟೆ ಸರ್ವಜೀವರು ॥
ಮತ್ಸ್ಯಕೂರ್ಮಾದಿ ನಾನಾವತಾರಗಳಿಗೆ ಮೂಲಭಾಗವತ ಸಿದ್ಧವೀದು ದ್ವಿತೀಯಸ್ಕಂಧದಿ ॥ ೩೪ ॥

ಆವಿರಾಟಗೆರಡುರೂಪ ಅಂಡದಾಕಾರವೆಂದು ಶಿಲೆಯಹರಿಯಪ್ರತಿಮೆಯಂತೆ ದಿವಿಜಯುಕ್ತವೂ॥
ಅಂಡನಾಶ ಕಾಲದಲ್ಲಿ ಉಭಯವಿರಾಡೇಕವಾಗಿ ತನ್ನ ಉದರದಲ್ಲಿ ಇದ್ದ ಸರ್ವಜೀವರಾ ॥ ೩೫ ॥

ಅನ್ನಮಯನ ಉದರದಲ್ಲಿ ತೆಗಾದಿಟ್ಟು ಆತನ್ನೈಕ್ಯಪೊಂದಿದಾನು ವೀರಾಟದೀಪದ್ಯೈಕ್ಯದೋಲ್॥
ಅಗ್ನಿಮಯನು ಅನೀರುದ್ಧ ಅನ್ನಮಯಗೆ ಎರಡುರೂಪ ಪೃಥಿವೀ ಆವರಣ ಜಲಾವರಣವಾಸಿಯೂ ॥ ೩೬ ॥

ಅಂಡದ್ವೊರಗೆ ತೇಜೋವಾಯುಗಗನ ಆವರಣತ್ರಯದಿ ಪ್ರಾಣಮಯನಗೆ ಮೂರುರೂಪಿ ಪ್ರದ್ಯುಮ್ನನು ॥ ಮನೋಬುದ್ಧಿ ಅಹಂಕಾರ ಮೂರು ಆವರಣಗಳಲಿ ಮನೊಮಯನು ಮೂರುರೂಪಿಸಂಕರುಷಣ ॥೩೭ ॥

ವಂದೆರೂಪಿ ವಾಸುದೇವ ಮಹತ್ತತ್ವಾವರಣ ವಿಜ್ಞಾನಮಯನು ಭಾಗವತತಾತ್ಪರ್ಯದೀ॥
ಏಕಾದಶಸ್ಕಂಧ ದುಕ್ತಿಸಿದ್ಧ ಗುಣತ್ರಯ ಮೂರು ಆವರಣಗಳಲ್ಲಿ ವಂದೆರೂಪಿಯೂ ॥೩೮॥

ಆನಂದಮಯನಾದ ನಾರಾಯಣನು ಒಬ್ಬ ಹತ್ತು ರೂಪಿ ಬುದ್ಧಿಸಹಿತ ದಶಾವರಣದೀ॥
(ವಾರಿಣಾಹತಗಂಧಾಭೂಃಸಲಿಲತ್ವಾಯಕಲ್ಪ್ಯತೇ॥ ಸಲಿಲಂತದ್ಧೃತರ ಸಾಜ್ಯೋತಿಷ್ವಾಪಃ ಪ್ರಲೀಯತೇ) । ಇದೇಕ್ರಮದಿ ಒಂದೊಂದು ಆವರಣ ನಾಶ ಕಾಲಕಲ್ಪ್ಯಲ್ಲಿ ಭಗವದ್ರೂಪದ್ಯೈಕ್ಯಕಾಲಕೆ ॥ ೩೯॥

ತನ್ನ ತನ್ನ ಉದರದಲ್ಲಿ ಇಟ್ಟು ಜೀವಗಣಗಳನ್ನು ಸ್ವಸ್ವಸಾಮೀಪಸ್ಥ ಭಗವದುದರದೀ ॥
ಇಡುತ ಒಬ್ಬೊಬ್ಬಗೈಕ್ಯ ಆನಂದಮಯತನಕದೀ ಪದ್ವಯವು ವಂದಾಗುವಂತೆ ಕೊಡ್ವದು॥೪೦॥

ಮೊದಲು ವೀರಾಟ ದೇಹದೊಳಗಿದ್ದ ಜೀವಗಣವು ಆನಂದನುದರತನ ಕಬಂದಜೀವರೊಳ್॥
ಸಾಂಶರಾದ ನವಾಕೋಟಿ ಆವರಣಗಳಲ್ಲಿ ಇದ್ದ ದೇವ ಸ್ಥೂಲದೇಹಗಳಲಿ ಪುಷ್ಕರಾದ್ಯರು
॥ ೪೧ ॥

ಭಗವದುದರ ಪೊಂದಿ ಇರದೆ ಸ್ವಸ್ವಾವರಣ ಜೀವದ್ಯೈಕ್ಯ ಮೂರುಗಣವೆಯರಡುಗಣವು
ಎನಿಸಿತಾಗಲೆ ॥ ನವಾಕೋಟಿತಾತ್ವಿಕಾರ ಆವರಣಸ್ಥೂಲದೇಹ ಗರುಡಶೇಷಮಾರ್ಗಲಯಕೆ
ಯೋಗ್ಯವಲ್ಲವು ॥ ೪೨ ॥

ಹಾಗಾದರಾ ಸ್ಥೂಲದೇಹ ಹ್ಯಾಗೆಪೋಪೊದೆನಲು ಬ್ರಹ್ಮಾಂಡದಗ್ಧವಾದಮೇಲೆ ಶ್ರೀಹರಿ॥
ಸಂಹಾರಕರ್ತೃವಷ್ಟೆ ಜಯಾಜಾನಿ ಸಂಕರ್ಷಣ ನಾರಸಿಂಹನಾದ ಪ್ರಳಯದನ್ತಕಾಲಕೆ॥೪೩॥

ಬ್ರಹ್ಮದೇಹವನ್ನೆಶೀಳಿ ಶಿರೋವೇಷ್ಟಿಸುತ್ತಿಕೊಂಡು ಉರ್ಧದವಯಗಳಲಿ ದಿಕ್ಪಾಲದೇಹವ ॥
ಭೂಷಣಗಳ ಮಾಡಿಕೊಂಡ ದ್ವಾದಶಾದಿತ್ಯ ದೇಹ ಕಿರೀಟ ಸೂರ್ಯಪಂಕ್ತಿಯಲಂಕರಿಸಿದ॥೪೪॥

ಶತಸ್ಥಗಣದ ರುದ್ರರ್ಥನೊಂದು ಶಿರಸ್ಸು ಕಡಿದುನೊಪುರವನು ಮಾಡಿ ಚರಣಕಲಂಕರಿಸಿದ॥
ಸುಟ್ಟಬ್ರಹ್ಮಾಂಡದೆರಡು ಹೋಳ ತಾಳ ಕೈಲಿಪಿಡಿದು ನರ್ತನವನು ಮಾಡಿದನು ನಾರಸಿಂಹನು
॥ ೪೫ ॥

ಆವರಣದೇವಸ್ಥೂಲ ದೇಹಹೀಗೆ ನಾಶವಾಗೆ ರಾಶಿಮಾನಿಮೂಲ ಜೀವಪ್ರಥಮಗಣದಲೀ॥
ಬ್ರಹ್ಮಾದಿಪುಷ್ಕರಾಂತಸ್ವಸ್ವ ಜೀವರೈಕ್ಯವಾಗೆ ಇಪ್ಪತ್ತಾಲ್ಕು ತತ್ವರಾಶಿಮಾತ್ರ ಉಳಿಯಿತು॥೪೬॥

ನವಕೋಟಿಸುರರವಳಗೆ ವಬ್ಬನು ಜೀವನಾದರು ಆನಂದಮಯನ ಉದರಶೇರಲಿಲ್ಲವು ॥
ಮೂವತ್ಮೂರು ಕೋಟಿಯಲ್ಲಿ ಉಳಿದ ಇಪ್ಪತ್ತಾಲ್ಕು ಕೋಟಿದೇವದ್ಯೆತ್ಯತ್ರಿವಿಧ
ಸರ್ವತೃಣಾಂತರೂ ॥ ೪೭ ॥

ಆನಂದಮಯನಲ್ಲಿ ತುಂಬಿಕೊಂಡಿರುವರಷ್ಟೆ ನವಾವರಣ ನಾಶವಾದ ಅನಂತರದಲೀ ॥
ರಾಶಿಗಾಳಿಪ್ಪತ್ತನಾಲ್ಕು ನಿತ್ಯವಾದ ಜಡಪ್ರಕೃತಿ ಪ್ರಳಯ ವೃತ್ತಿಅಪರಿಚ್ಛಿನ್ನದಲ್ಲೀಕ್ರಮದಲಿ॥೪೮॥
(ಶ್ಲೋ ॥ ಅವ್ಯಕ್ತಾದ್ಯಾಃ ಪೃಥಿವ್ಯನ್ತಾ ಸ್ಸರ್ವಾಃಪ್ರಕೃತಯಸ್ಸ್ಮೃತಾಃ॥)
ಅಜಾಮೇಕಾಂ ಎಂಬ ಶೃತಿಯನ್ನು ಇದಕೆಪೇಳಿರುವರು ವರ್ಣತ್ರಯದ ಗುಣತ್ರಯವು
ನಿತ್ಯಸಿದ್ಧವು ॥ ಹೀಗೆತೃತಿಯಾ ತಾತ್ಪರ್ಯ ಭಾವವಿವರವೇನು ಎನಲು ಪೃಥಿವೀ ಪ್ರಕೃತಿ ಅಪ್ಪ್ರಕೃತಿ
ತೇಜಃಪ್ರಕೃತಿಯೂ ॥ ೪೯ ॥

ವಾಯುಪ್ರಕೃತಿ ಮೊದಲಾಗಿ ಸತ್ವ ಪ್ರಕೃತಿಪರೀಯಂತ ವ್ಯಾಪ್ಯೆ ನಿತ್ಯ ಸಮಸ್ತಗಳು ಪ್ರಕೃತಿನಾಮಕ॥
ಅಪರಿಚ್ಛಿನ್ನವಾದ ನಿತ್ಯ ಜಡಪ್ರಕೃತಿ ಎಂಬದಿದೆ ಪ್ರಳಯಕಾಲದಲ್ಲಿ ಮೂರು ಪ್ರಕೃತಿಗೈಕ್ಯವೂ
॥ ೫೦ ॥

ಮೂರುಪ್ರಕೃತಿ ಯಾವದೆನಲು ನಿತ್ಯಭಾಗವೆ ಪ್ರಥಮ ಉಪಚಯಾಖ್ಯಭಾಗ ಉಪಾದಾನಭಾಗವು ॥ ಉಪಾದಾನಭಾಗವೇ ಇಪ್ಪತ್ತಾನ್ಲುಕ್ಕು ರಾಶಿಗಳು ವಾಸುದೇವನಾಜ್ಞೆಯಿಂದ ಮಾಯೆಕರಜವೂ ॥ ೫೧ ॥

ಬ್ರಹ್ಮಾಂಡನವಾವರಣ ಲೋಕಘಟಪಟಾದಿಗಳಿಗೆ ಉಪಾದಾನಭಾಗ ವಿದೇತಂತುಪಟದಓಲ್॥ ಪ್ರಳಯದಲ್ಲಿ ಮೂರು ಭಾಗ ಸಮ್ಮಿಶ್ರ ವ್ಯಾಪ್ತದೊಳಗೆ ಮೂರು ಭಾಗ ವಿಂಗಡಿಸುವ ಕಾಲಸೃಷ್ಟಿಯೂ ॥೫೨ ॥

ಸಕಲಜೀವರಾಶಿಗಳ ಲಿಂಗಶಾರೀರಗಳಿಗೆ ಉಪಚಯಾಖ್ಯ ಭಾಗ ಅಭೀವೃದ್ಧಿ ಕಾರಣ ॥ ನಿತ್ಯಭಾಗ ಜಡಪ್ರಕೃತಿ ಸೃಷ್ಟಿಯಲ್ಲ್ಯು ಪ್ರಳಯದಲ್ಲ್ಯು ಏಕರೀರಿ ಕಾಲಕೃತವಿಕಾರ ಶೂನ್ಯವು ॥ ೫೩ ॥

(ಶ್ಲೋ ॥ ಯದ್ರಜೋಮೂಲರಜಸಿ ಮೂಲೆತಮಸಿಯದ್ರಜಃ । ತಮಶ್ಚ ಮೂಲತಮಸಿ ಮಹತ್ತತ್ವಂತದಾತ್ಮಕಂ॥)

ಒಂದು ತಮಸು ಹನ್ನೆರಡುರಜಸು ಕೂಡಿ ಹದೀಮೂರು ಹನ್ನೆರಡುರಜಸುಗಳಿಗೆ ವಿವರ ನುಡಿವೆನು ॥ ಪ್ರಳಯದಲ್ಲಿ ಸತ್ವರಾಶಿ ಮಿಶ್ರವಾದರಜಸು ಹತ್ತು ತಮೋರಾಶಿಮಿಶ್ರವಂದಡು ಮಹತ್ತತ್ವಕೆ ॥ ೫೪ ॥

ಮೂಲರಜೋರಾಶಿಯಲ್ಲಿ ಮಹತ್ತತ್ವಜನಕವಾದ ವಂದೆರಜಸುವಿಂಗಡೀಶಿ ಮಹತ್ತತ್ವವೂ॥ ಸೃಷ್ಟವಾದದ್ದರಿಂದ ಪ್ರಳಯದೊಳಗೆ ಇದೇಪರಿಯು ಗುಣತ್ರಯದ ರಾಶಿಗಳಲಿ ಭಾಗಶೇರ್ವುದು ॥ ೫೫ ॥

ಇಪ್ಪತ್ತಾನ್ಲುಕ್ಕು ರಾಶಿಗಳಲಿ ಮಹತ್ತತ್ವ ಹೇಳಿದಂತೆ ಜನ್ಯಭಾಗವೆಲ್ಲ ಜನಕಭಾಗಶೇರಲು ॥ ತಾಮಸಾಹಂಕಾರ ರಾಶಿಯಲಿ ಪಂಚಭೂತರಾಶಿ ಮೊಂದಲಾಗಿ ಮಿಶ್ರಭಾಗವೆಲ್ಲ ಪೋಗಲು ॥ ೫೬ ॥

ಸ್ವಚ್ಛವಾದವಿಪ್ಪತ್ತಾನ್ಲುಕ್ಕು ಅಮಿಶ್ರ ರಾಶಿ ಉಳಿಯೆ ಇದೇ ನಿತ್ಯ ಪ್ರಕೃತಿ ಪರಿಚ್ಛಿನ್ನವಾಹುದೂ॥ ಮಿಶ್ರವಾದ ಹೊರತು ರಾಶಿನಾಮವಿದಕೆ ಬರುವುಲ್ಲ ಸೃಷ್ಟಿ ಪ್ರಳಯುದೆರಡು ಕಾಲಕಿದೆ ರೀತಿಯೂ ॥ ೫೭ ॥

ರಾಶಿತತ್ವಗಳು ನಾಶವಾದ ಮೇಲೆ ನವಕೋಟಿರಾಶಿಮಾನಿ ಮೂಲದೇವ ಶರೀರಂಗಳು ॥ ಲಿಂಗದೇಹಯುಕ್ತವಾದ ಅನೀರುದ್ಧ ಸೃಷ್ಟ ದೇಹ ಸೂಕ್ಷ್ಮದೇಹ ಬ್ರಹ್ಮಕಲ್ಪಕಾದಿ ಪ್ರಾಪ್ತವೂ ॥ ೫೮ ॥

ಅದೇ ದೇಹದಿಂದ ರಾಶಿತತ್ವಗಳಲಿ ಅಭೀಮಾನವಾದ್ದರಿಂದ ಅಭೀಮಾನ್ಯ ರಾಶಿಪೋಗಲೂ॥ ಅನೀರುದ್ಧ ಸೃಷ್ಟವಾದ ಸೂಕ್ಷ್ಮ ದೇಹತ್ಯಾಗವೇ ಗರುಡಶೇಷಮಾರ್ಗದಿಂದ ಲಯ ಎನಿಪುದು ॥ ೫೯ ॥

ಆನಂದಮಯನಾದ ನಾರಾಯಣನು ಆಗ ತನ್ನ ಉದರದಲ್ಲಿ ಇದ್ದ ಜೀವರಾಶಿಯ ॥
ಇಪ್ಪತ್ತಾಲ್ಕು ಕೋಟಿಮೊದಲು ತೃಣಾಂತ ಜೀವರನ್ನು ಹೊರಗೆ ತೆಗದು ದೇವತೆಗಳಧೀನ ಕೊಡುವರು ॥ ೬೦ ॥

ತೃಣಾಂತ ಸರ್ವರೀಗೆ ಲಿಂಗದೇಹದು ಪರಿದೇಹ ಅನಿರುದ್ಧ ಸೃಷ್ಟವಸ್ಥೆ ಅಂಡಬಹಿರದೀ ॥
ಸ್ವೋತ್ತಮ ಪ್ರವೇಶಮಾಡೆ ಸರ್ವರೀಗು ಸೂಕ್ಷ್ಮ ದೇಹ ಸ್ವೋತ್ತಮಾರ ದೇಹದೊಳಗೆ ನಾಶಗೊಂಬೊದು ॥ ೬೧ ॥

ಲಿಂಗದುಪರಿಸರ್ವರೀಗೆ ಎರಡನೇ ದೇಹವೀದೆ ಈದ ಹೊರತು ಪೂರ್ವನಾಶ ಹೇಳಕೂಡದು॥
ಕೆಲವು ಗ್ರಂಥಗಾಳಲ್ಲಿ ಅಂಡನಾಶಕಿಂತ ಮೊದಲು ವೈಕುಂಠಪರಿಘೆಯಾದ ವಿರಜಡದಲಿ ॥ ೬೨ ॥

ಅಲ್ಪ ನೀರಂಶಜೀವಸಂಘವೆಲ್ಲ ಸ್ನಾನಮಾಡಿ ವಿಲಿಂಗರಾಹರೆಂದು ವರಹಪುರಾಣವು ॥
ಚಾತುರ್ಮಾಸ್ಯ ಮಹಾತ್ಮ್ಯ ಸಿದ್ಧಸತ್ತತ್ವರತ್ನ ಮಾಲೆಯನ್ನು ನುಡಿವನಿದರ ವಿಷಯಕೆ ॥೬೩॥

(ಶ್ಲೋ ॥ ಇತ್ಥಂಲಯೇ ಸರ್ವಜೀವಾ ಸಂಪ್ರಾಪ್ಯಕಮಲಾಸನಂ ॥ ಚತುರ್ಮುಖೋಪದೇಶಂಚ ಸ್ವಯೋಗ್ಯಂ ಪಾಪ್ಯಪುಷ್ಕಳಂ ॥ ವೈಕುಂಠಪರಿಘಾಕೃತ್ಯಾಂ ವಿರಜಾಯಾಂ ಸಮಸ್ತಶಃ । ಪ್ರಾರಬ್ಧ ಕರ್ಮಶೇಷಂಚ ಲಿಂಗದೇಹಾದಿಕಂತಥಾ ॥ ವಿನಾಶ್ಯಜಠರೇ ವಿಷ್ಣೋ ಪ್ರವಿಶ್ಯಾನುಗ್ರಹಾದ್ಧರೇಃ ॥ ತಮೇವಪರಮಶ್ರೇಷ್ಟಂ ಧ್ಯಾಯಂತಃ ಕಮಲಾಪತಿಂ । ಯಾವತ್ಸೃಷ್ಟಿರ್ವದನ್ಯತ್ರಂ ಸಂಪೂರ್ಣಾನಂದ ಭೋಜನಾ ॥)

ವಿಷ್ಣುರಾಹಸ್ಯದಲ್ಲಿ ಇದಕೆ ವೀರುದ್ಧವಿಹುದು ತೃಣಾಂತ ಸರ್ವರೀಗು ಅಂಡಬಹಿರದೀ॥
ಅವ್ಯಾಕೃತಾಕಾಶ ಅನ್ತ್ಯಮಾವರಣ ಮಧ್ಯ ಪಂಚಯೋಜನಾಮತಾದ ವಿರಜಾನದಿಯಲೀ ॥೬೪ ॥

(ಶ್ಲೋ ॥ ಲಿಂಗದೇಹಯುತಾ ಸ್ಸರ್ವೆ ಬ್ರಹ್ಮಾದ್ಯಾ ಜೀವರಾಶಯಃ । ಚರಮಾವರಣವ್ಯೋಮ ಮಧ್ಯಭಾಗ ವ್ಯವಸ್ಥಿತಾ ॥ ವಿರಜಾಯಾಂತ್ಯಕ್ತಲಿಂಗಾ ಶುದ್ಧರೂಪಾಶ್ಚ ಸರ್ವಶಃ ಮಾಯಾದ್ವಾರಂ ವಾಸುದೇವಂವಿಶನ್ತ್ಯಾನಂದಪೂರಿತಾಃ ॥ ವಿಮುಕ್ತಾ ಖಿಳಬಂಧಾಸ್ತೇ ಮೋದಂತೇ ಸರ್ವದೈವಹಿ॥)

ವಿರೋಧೋದ್ಧಾರದಲ್ಲಿ ಈ ವಿರೋಧವೆರಡರನ್ನು ಪರಿಹರೀಶಿಸಿದ್ಧಾಂತಮಾಡಿರೂವರೂ॥
ಬ್ರಹ್ಮಾಂಡದೊಳಗೆ ವಿರಜೆಸ್ನಾನ ಮಾಡಿ ಕೆಲವರು ವಿಲಿಂಗರಾಗ ಕೂಡದುಯಾಕೆ ಅಂದರೆ ॥ ೬೫ ॥

ಲಿಂಗಾದುಪರಿ ಎರಡನೇ ದೇಹ ಪೋಗುವುದಕೆ ಕಾಲ ಗರುಡಶೇಷಲಯುದ ಕಾಲಬರದೆಪೋಪದೆ ॥ ಆದ್ದರಿಂದ ಸರ್ವರೀಗೆ ಅಂಡಬಹಿರವಿರಜೆಯಲ್ಲಿ ಸ್ನಾನದಿಂದ ಮುಕ್ತಿಯೆಂದು ಸಿದ್ಧಾಂತವೂ ॥ ೬೬ ॥

(ಮುಂದುವರೆದುದು)

ಸಂಪುಟ ೭ ಸಂಚಿಕೆ ೪ ಭಾವ, ಆಷಾಢ ಜುಲೈ ೧೯೩೪

ಪ್ರ॥ ವೈಕುಂಠಪರಿಘಾಕಾರ ವಿರಜಾವಿಲಯೇನದೀ॥ ವಿಯತಮೀ ಪಮಾಯಾತಿ ವಿಮುಕ್ತ್ಯೈ ವಿಷ್ಣುಸೇವಿನಾಂ॥

ವಿರೋಧೋದ್ಧಾರ ತಾಮ್ರಪರ್ಣಿಯ ವಾಕ್ಯವಿದು ಮೂಲವಿರಜೆ ಅಂಶವಿರಜೆ ಶ್ರೀಸ್ವರೂಪವು॥ ವಳಗೀನಂಶೆವಿರಜೆ ಪೋಗಿ ಹೊರಗಿನಾ ಮೂಲವಿರಜೆ ಸಂಗಮವಾದ ಹೊರತು ಸ್ನಾನಕೂಡದು ॥೬೭॥

ಆದ್ದರಿಂದ ವೈಕುಂಠ ಪರಿಘದುದಕವಾಯಿತಲ್ಲಿ ಸರ್ವರಿಗುಲಿಂಗಮುಕ್ತಿ ಕಾಲವಾಗಲೆ॥ ಸೂಕ್ಷ್ಮದೇಹ ಪೋದಕ್ಕೆ ಗರುಡಶೇಷಮಾರ್ಗವಷ್ಟೆ ತತ್ವ ವಿವೃತಗ್ರಂಥ ಭಾವವನ್ನು ನುಡಿವೆನು ॥೬೮॥

ಗರುಡಪತ್ನಿ ಸೌಪರ್ಣಿ ಗರುಡನ ಪ್ರವೇಶಿಸಿದಳು ವಾರುಣೀಯು ಶೇಷದೇವನಲ್ಲಿ ಪೊಕ್ಕಳು॥ ನೀಚ ಜೀವರ ಪ್ರವೇಶ ಆದಿಯಲ್ಲಿ ನುಡಿದರೆ ಬುದ್ಧಿಗಾಯಾಸ ಸಾಧ್ಯವದಕೆ ಬಿಟ್ಟರು॥೬೯॥

ಗರುಡಶೇಷ ಮಾರ್ಗವೆರಡ ಸಮಾನಾಗಿ ಪೇಳುವೆನು ಉತ್ತಮಾರ ಕ್ರಮವ ಪಿಡಿದು ಬುದ್ಧಿಸುಲಭಕೆ॥ ಸೌಪರ್ಣಿಯಲ್ಲಿ ಇಂದ್ರ ಪ್ರಾವೇಶ ಮಾಡುವನು ವಾರುಣೀಯಲ್ಲಿ ಕಾಮದೇವ ಪೋಗುವನು ॥೭೦॥

ಇಂದ್ರಗಿದೆ ಗರುಡಮಾರ್ಗ ಕಾಮಗಿದೆ ಶೇಷಮಾರ್ಗ. ಇಂದ್ರಕಾಮರಲ್ಲಿ ಆರುಪೋಗುವರೆಂದರೆ॥ ಪ್ರವಾಹಾದಿ ಏಕೋನಪಂಚಾಶನ್ಮರುದ್ಗಣಕೆ ಇಂದ್ರನಲ್ಲಿ ಪ್ರಾವೇಶ ಮತ್ತೆ ಪೇಳುವೆ ॥೭೧॥

ಬೃಹಸ್ಪತಿಯು ದಕ್ಷಪ್ರವೇಶ. ಸ್ವಾಯಂಭುವ ಮನುವು ಈ ಮೂವರಿಂದ್ರನಲ್ಲಿ ಪ್ರಾವೇಶಿಸುವರು॥ ಸ್ತ್ರೀಯರಿಗೆ ತಮ್ಮ ತಮ್ಮ ಪತಿಗಳಲ್ಲಿ ಪ್ರಾವೇಶ ಶಚಿಗೆ ಇಂದ್ರ ಪ್ರಾವೇಶ ಕ್ಲಿಪ್ತವೇ ಸರಿ ॥೭೨॥

ಶೇಷಮಾರ್ಗ ಕಾಮನಲ್ಲಿ ಸನಕಾದಿಗಳ ಪ್ರವೇಶ ಮತ್ತು ಪೇಳ್ವೆಕಾಮನಲ್ಲಿ ಪ್ರವೇಶಿಸುವರಾ॥ ಶಂಖಮಾನಿ ಆದ ಕಾಮಪುತ್ರ ಅನೀರುದ್ಧನೊಬ್ಬ ಅಹಂಕಾರಿಕಪ್ರಾಣ ರತಿದೇವಿಯೂ ॥೭೩॥

ಇವರು ಮೂವರಿಗೂ ಕಾಮದೇವನ ಪ್ರಾವೇಶ ಶೇಷಮಾರ್ಗ ಕೊನೆಯತನಕ ಈಗ ನುಡಿವೆನು ॥ ಕಾಮಪುತ್ರ ಅನೀರುದ್ಧನಲ್ಲಿ ಚಂದ್ರನೊಬ್ಬನು ಜಯಾವಿಜಯಾದಿ ದ್ವಾರಪಾಲಕರೆಲ್ಲರೂ ॥೭೪॥

ಪ್ರವೇಶ ಮಾಡುವಾರು ವಿಷ್ವಕ್ಸೇನಸಹಿತ ಶೇಷಮಾರ್ಗ ಚಂದ್ರನಲ್ಲಿ ಯಾರು ಎಂದರೆ ॥ ವರುಣಗೂ ಕುಬೇರಂಗೂ ಸೋಮನಲ್ಲಿ ಪ್ರವೇಶ ಕುಬೇರನಲ್ಲಿ ಪ್ರವೇಶ ಯಾರಿಗೆಂದರೆ ॥೭೫ ॥

ಸಕಲದೇವ ಭೃತ್ಯರೀಗೂ ಸರ್ವಗಂಧರ್ವಗಣಕು ಕುಬೇರನಲ್ಲಿ ಪ್ರಾವೇಶವೆಂದರು॥ ವರುಣನಲ್ಲಿ ಪ್ರಾವೇಶ ಶಿಷ್ಟಶತಸ್ಥಗಣಕೆ ಮುಕ್ತಿಯೋಗ್ಯ ಅಸುರರೂ ಅಶ್ವಿನೀರ್ವರೂ ॥೭೬॥

ವರುಣನಲ್ಲಿ ಪ್ರಾವೇಶ ಅಬ್ದೇವತೆಗಳು ಸಹಿತ ಇಲ್ಲಿಗೆ ಶೇಷಮಾರ್ಗ ಪೂರ್ಣವಾಯಿತು॥ ಗರುಡಮಾರ್ಗದಲ್ಲಿ ಗುರುವು ದಕ್ಷಾಸ್ವಾಯಂಭು ಮನುವು ಮೂವರಲ್ಲಿ ಬೇರೆ ಬೇರೆ ಲಯವ ಪೇಳುವೆ ॥೭೭॥

ಗುರುವಿನಲ್ಲಿ ಭೂಮಿದೇವಿಸೂರ್ಯಗಣಪ ಮೂವರೂ ಪ್ರವೇಶಮಾಡುವಾರು ಇವರಿವರಲ್ಲೀ ॥ ಭೂಮಿಯಲ್ಲಿ ಸಾಮಸ್ತರುಭುಗಣಂಗಳ ಪ್ರವೇಶ ಸರ್ವಮೃತ್ಯುದೇವತೆಗಳು ಭೂಮಿಯೊಳಗೆ ॥೭೮॥

ಸೂರ್ಯನಲ್ಲಿ ಅಗ್ನಿದೇವ ಪ್ರವೇಶಮಾಡಿದಾನು ಅಗ್ನಿಯಲ್ಲಿ ಯಾರ ಪ್ರವೇಶವೆಂದರೆ॥ ಪಾವಕನು ಮೊದಲಾದ ಅಗ್ನಿಪುತ್ರ ಸರ್ವರಿಗು ಅಗ್ನಿಯಲ್ಲಿ ಪ್ರಾವೇಶ ಮತ್ತೆ ಪೇಳುವೆ ॥೭೯॥

ಪುಷ್ಕರಾಂತ ನವಾಕೋಟಿಗುಳದಿರುವ ಯಾವತ್ತುದಿವಿಜರಿಗೆ ಅಗ್ನಿಯಲ್ಲಿ ಪ್ರಾವೇಶವೂ ॥ ಗಣಪತೀಗೆ ಪುತ್ರರಾದ ಆಕಾಶಾಭಿಮಾನಿಗಳು ಸಾಧ್ಯಗಣಗಳೆಲ್ಲ ಗಣಪತೀಯ ಪೊಕ್ಕರು ॥೮೦॥

ಗುರುವಿನಲ್ಲಿ ಪ್ರಾವೇಶವಾದಷ್ಟು ಈಗನುಡಿವೆ ಗರುಡಮಾರ್ಗದೊಳಗೆ ಇನ್ನು ಈರ್ವರಿರುವರು ॥ ದಕ್ಷಸ್ವಾಯಂಭು ಮನುವು ದಕ್ಷನಲ್ಲಿ ಯಾರು ಎನಲು? ಭೃಗುಮುನೀಗಳು ದಕ್ಷನಲ್ಲಿ ಪ್ರವೇಶಿಸುವರು ॥೮೧॥

ವಬ್ಬರಲ್ಲಿ ವಶಿಷ್ಠ ಪ್ರಭುತಿ ಸರ್ವಋಷಿಗಣಗಳು ಶತಾಕೋಟಿಋಷಿಗಳು ಪ್ರವೇಶಿಸುವರೂ॥ ಸ್ವಾಯಂಭುಮನುವಿನಲ್ಲಿ ಪ್ರವೇಶ ಜನರ ಪೇಳ್ವೆ ಗರುಡ ಮಾರ್ಗ ಸರ್ವವೂ ಪೂರ್ಣವಾಹುದು ॥೮೨॥

ಸ್ವಾಯಂಭುಮನುವಿನಲ್ಲಿ ಯಮನು ಪ್ರವೇಶಿಸುವನು ಮತ್ತು ವೈವಸ್ವತಾದಿ ಸಕಲಮುನಿಗಳೂ॥ ಪ್ರಿಯವ್ರತಾದಿ ಅಷ್ಟಾದಶ ಮೊದಲಾದ ಸಕಲ ಚರ್ಕವರ್ತಿಗಳು ಪ್ರವೇಶಿಸುವರು ॥೮೩॥

ಯಮದೇವರಲ್ಲಿ ನಿರೃತಿಯು ಪ್ರವೇಶಿಸುವನು ಮತ್ತೆ ಸಕಲ ಪಿತೃಗಣಗಳು ಪ್ರವೇಶಿಸುವರು॥ ವರ್ಣಾಶ್ರಮಾಚಾರ ಯುಕ್ತರಾದ ಮನುಜರು ಸಕಲ ಜೀವನ್ಮುಕ್ತಿಯೋಗ್ಯ ತೃಣಾಂತರು ॥೮೪॥

ಉತ್ಕ್ರಾಂತಿಭಾಗಿಗಳೂ ನಿರಂಶಜೀವರಷ್ಟೇ ಈ ಸಮಸ್ತರೀಗು ಯಮನ ಪ್ರಾವೇಶವೂ॥ ಇಲ್ಲಿಗೆ ಗರುಡಶೇಷಮಾರ್ಗ ಪೂರ್ಣವೆಂದು ತಿಳಿವುದು ಗರುಡಶೇಷಮಾರ್ಗ ಭೇದಯಾಕೆ ಅಂದರೆ ॥೮೫॥

(ಪ್ರ॥ ದೇಹಕ್ಷಯೋನ್ಯೈವ ಭವೇತ್ಥಿತೇಷಾಂ ಉತ್ಕ್ರಾನ್ತಿಭಾಜಾಮಿತಿವೀಶಮಾರ್ಗಃ॥)
ಕರ್ಮಕ್ಷಯೋತ್ಕ್ರಾನ್ತಿ ಮಾರ್ಗಭೋಗವೀನಾಲ್ಕು ಫಲಗಳುಳ್ಳ ಮೋಕ್ಷಭಾಗಿ ಜೀವನಿವಹಕೆ॥
ಗರುಡಮಾರ್ಗಪ್ರವೇಶಹೊರತು ಶೇಷಮಾರ್ಗಸಲ್ಲ ದೇಹಕ್ಷಯವು ಇಲ್ಲವೆಂದರಷ್ಟೆ ಅಂದರೆ ॥ ೮೬॥

ಅಣಿಮಾದಿಸಿದ್ಧಿ ಇಂದ ಪೊದ್ದವಸ್ತ್ರಬಿಸುಡುವಂತೆ ತಮ್ಮ ತಮ್ಮ ಅನಿರುದ್ಧ ಶರೀರಗಳು॥
ತಾವೆತಾವೆ ತೆಗೆದು ಬಿಸಾಟು ಲಿಂಗದೇಹಮಾತ್ರದಿಂದ ಸ್ವೋತ್ತಮರಲ್ಲಿ ಪ್ರವೇಶ ಮಾಳ್ಪ ಯೋಗ್ಯರು ॥೮೭॥

ಶೇಷಮಾರ್ಗಕ್ಕರ್ಹರಿವರು ಗರುಡಮಾರ್ಗದಧಮರೀಗೆ ದೇವತೆಗಳಿಗೆ ಗ್ರಾಸಮಾಡಿ ದೇಹಕಳೆವರು ॥ (ಪ್ರ॥ ನಿಸ್ಸಮಾಷ್ಟಮಹಾಸಿದ್ಧಿಸಂಪೂರ್ಣಸ್ಸರ್ವದೈವಹಿ ॥) ಸರ್ವಕಾಲನಿಸ್ಸೀಮ ಸರ್ವಸಿದ್ಧ ದಿವಿಜನರೀಗೆ ಮರ್ಯಾದಮಾತ್ರಭೇದ ಪ್ರಾವೇಶಕೆ ॥೮೮॥

ಪುಷ್ಕರಾಂತ ನವಕೋಟಿ ಹೊರತು ಮಧ್ಯಮರಿಗೆ ಗರುಡಮಾರ್ಗ ಹೊರತು ಶೇಷಮಾರ್ಗ ಸಲ್ಲದು ॥ ಅಧಮರೀಗೆ ಪೇಳ್ವೆದೇನು ಶೇಷಮಾರ್ಗ ಸಲ್ಲದೆಂದು ಮುಂದೆನುಡಿವೆ ಗರುಡಶೇಷರ ಪ್ರವೇಶವ ॥೮೯॥

ಮಹನ್ನಾಮಕನಾದ ಬ್ರಹ್ಮಪತ್ನಿವಾಣಿಯಲ್ಲಿ ಗರುಡಶೇಷರಿಬ್ಬರೂ ಪ್ರವೇಶಮಾಳ್ಪರು॥
ಆಕೆಯಾರು? ಆತನ್ಯಾರು? ಎನಲು ಸ್ವಲ್ಪ ಸೃಷ್ಟಿ ಪೇಳ್ವೆ ವಾಸುದೇವ ಪುತ್ರನಾದ ಆದ್ಯಬ್ರಹ್ಮನೇ ॥೯೦॥

ಪುರುಷನಾಮಕಾನಷ್ಟೆ ಪುರುಷಪತ್ನಿ ಪ್ರಕೃತಿದೇವಿ ಪ್ರದ್ಯಮ್ನಪುತ್ರಿಯಷ್ಟೆ ಅದೇ ಪ್ರಕೃತಿಯೂ॥
ಗಾಯತ್ರಿ, ಸಾವಿತ್ರಿ, ಸರಸ್ವತಿ ಎಂದು ಮೂರುರೂಪಳೇ ತಾನಾಗಿ ಸೃಷ್ಟಿಕಾಲದಿ ॥೯೧॥

ಅಂಡಬಹಿರದಾವರಣ ಗುಣತ್ರಯಗಳಭೀಮಾನಿ ಮೂರುರೂಪ ಬ್ರಹ್ಮಪತ್ನಿಯಲ್ಲಿ ಲಕುಮಿಯೂ ॥ ಅನೀರುದ್ಧ ಪತ್ನಿ ಶಾಂತಿ ಶ್ರೀ, ಭೂಮಿ ದುರ್ಗಿಯಾಗಿ ಆವಿಷ್ಟಳಾಗೆ ಅಲ್ಲಿ ಅನೀರುದ್ಧನು ॥೯೨॥

ಪುನ್ನಾಮಕಾದ್ಯ ಬ್ರಹ್ಮನಲ್ಲಿ ಪ್ರಾವೇಶಬಲದಿ ಪುರುಷನಾಮಕ ನಮಗನುಮಹನ್ನಾಮಕ॥
ತನ್ನ ಪತ್ನಿ ಗಾಯತ್ರಿಯಲ್ಲಿ ತಾನೆಪುಟ್ಟಿದಾನು ಅನೀರುದ್ಧ ಲಕ್ಷ್ಮಿಯಾವೇಶ ಬಲದಲೀ ॥೯೩॥

ಮಹನ್ನಾಮಕನು ಗಾಯತ್ರಿಯಲ್ಲಿ ಪುಟ್ಟಿದಾಗ ವಾಣಿಯೆಂಬ ಪತ್ನಿ ಪತಿಯ ಕೂಡೆ ಜನಿಸಲು ॥ ಪ್ರಳಯದಲ್ಲಿ ಗರುಡಶೇಷರಿಬ್ಬರೂ ವಾಣಿಯಲ್ಲಿ ಪ್ರಾವೇಶಮಾಡಿದಾರು ಮುಂದೆನುಡಿವೆನು ॥೯೪॥

(ಪ್ರ॥ ಏಷಾಮನುಕ್ತಿಃ ಪ್ರವಿಶನ್ತಿತೇತು ಯತೋಹಿಬಿಂಬಪ್ರತಿಬಿಂಬ ಭೂತಾ॥
ಬಿಂಬೇಲಯಾಾಯನ್ನಯತಾಶ್ಚಮುಕ್ತೌ ಚಿದಾತ್ಮನಾಂ ಯದ್ವಶತಾಚಸರ್ವದಾ ॥) ಈಗ ಹೇಳಿದ್ದರಲ್ಲಿ ಬಿಟ್ಟಿರುವ ಜೀವಬಹಳ ಅವರಿಗೆಲ್ಲ ಪ್ರಾವೇಶ ಹ್ಯಾಗೆ ಎಂದರೆ? ॥ ಮುಕ್ತಿಯಲ್ಲಿ ಸರ್ವರೀಗು ನಿಯತಗುರುಗಳುಂಟಷ್ಟೆ ಕ್ಲುಪ್ತವಾಗಿ ಹರಿಯ ಸಂಕಲ್ಪಸಿದ್ಧರು ॥೯೫॥

ಅವಾರವರ ಗುರುಗಳಲ್ಲಿ ಅವಾರವರ ಶಿಷ್ಯರೀಗೆ ಪ್ರಾವೇಶನಿಯಮವುದಂತೆ ಮತ್ತೆ ನಿಯಮವೂ ॥ ಸ್ತ್ರೀಯರೀಗೆ ತಮ್ಮ ತಮ್ಮ ಪತಿಗಳಲ್ಲಿ ಪ್ರಾವೇಶ ಮುಕ್ತಿಯಲ್ಲಿ ತಾರತಮ್ಯ ನಿತ್ಯಸಿದ್ಧವೂ ॥೯೬॥

ವಾಣಿದೇವಿ ತನ್ನ ಉದರದಿಂದ ಗರುಡಶೇಷಾದಿ ತೃಣಾಂತ ಜೀವರನ್ನು ಹೊರಗೆ ತೆಗೆದಳು॥ ತನ್ನ ಪತಿಯ ಮಹಾನ್ನಾಮಕುದರದಲ್ಲಿ ಬಿಟ್ಟುಕೊಟ್ಟು ಪತಿಯ ದೇಹ ಪ್ರಾವೇಶ ಮಾಡಲಿಲ್ಲವು ॥೯೭॥

ವಾಣಿದೇವಿ ತನ್ನ ಸೂಕ್ಷ್ಮದೇಹವನ್ನು ಇಚ್ಛೆ ಇಂದೆ ಮಹಾನ್ನಾಮಕ ಬ್ರಹ್ಮಸಮೀಪದೀ॥ ತೆಗೆದು ಬಿಸುಟು ಗಾಯತ್ರಿದೇಹದಲ್ಲಿ ಜೀವೈಕ್ಯ ಪೊಂದಿದಾಳು ॥೯೮॥

ಆಗ ಗಾಯತ್ರದೇವಿಯೂ ಸಾವಿತ್ರಿ ಸರಸ್ವತೀ ಮೂರು ಸೂಕ್ಷ್ಮದೇಹಗಳನು ಆದ್ಯಬ್ರಹ್ಮ ಪುರುಷಾಖ್ಯನಲ್ಲಿ ಸಮರ್ಪಿಸಿ ॥ ಮೂರುರೂಪಿ ಒಬ್ಬಳಾಗಿ ಪ್ರಕೃತಾಖ್ಯ ಬ್ರಹ್ಮಪತ್ನಿಗತ್ಯಂತ ಸಾಮೀಪ್ಯಲಯವು ಈಕೆಗೆ ॥೯೯॥

(ಪ್ರ॥ ಹರೇರತ್ಯನ್ತಸಾಮೀಪ್ಯಂ ಲಯೋಲಕ್ಷ್ಮ್ಯಾಃ ಪ್ರಕೀರ್ತತಃ ॥ ಪುರುಷೇಣಾತಿ ಸಾಮೀಪ್ಯಂ ಪ್ರಕೃತೇರ್ಲಯ ಉಚ್ಯತೇ ॥)

ಆದ್ಯಬ್ರಹ್ಮನಲ್ಲಿ ಅವನ ಪತ್ನಿಗ್ಯಾಕೆ ಲಯವು ಇಲ್ಲವೆಂದರೀಕೆ ಪ್ರದ್ಯುಮ್ನನಲ್ಲಿ ಜನಿತಲೂ ॥ ಪ್ರಳಯದಲ್ಲಿ ಪ್ರದ್ಯುಮ್ನ ಪ್ರಾವೇಶಮಾಡುವಾಳು ಲಿಂಗಮಾತ್ರದಿಂದ ಪತಿಸಮೀಪನಿಂತಳು ॥೧೦೦॥

ಮಹನ್ನಾಮಕ ಬ್ರಹ್ಮ ಗಾಯತ್ರಿಯಲ್ಲಿ ಪೊಕ್ಕು ಸೂಕ್ಷ್ಮ ದೇಹಬಿಟ್ಟು ಪುರುಷನೈಕ್ಯಪೊಂದಿದ॥ ಆ ಪುರುಷನಾಮಕಾದ್ಯ ಬ್ರಹ್ಮ ತನಗೆ ಮತ್ತೊಂದು ಕಾಲವಾನಿ ಕಾಲಾಖ್ಯ ರೂಪವಿರುವದೂ ॥೧೦೧॥

ಕಾಲಾಖ್ಯ ಪುರುಷಾಖ್ಯ ಎರಡು ರೂಪವಂದಾಗಿ ತನ್ನ ಉದರ ಪೂರ್ಣರಾದ ಜೀವರಾಶಿಯಾ॥ ಅವ್ಯಾಕೃತಾಕಾಶ ಪ್ರಧಾನಾಖ್ಯಜಡ ಪ್ರಕೃತಿ ಮಧ್ಯದಿರುವ ಮೂಲ ವಿರಜೆನದಿಯ ತೀರದಿ ॥೧೦೨॥

ತನ್ನ ಉದರದಿಂದ ತೆಗೆದುಬಿಟ್ಟಾನಾಗ ಸರ್ವರನ್ನು ತೃಣಾಂತ ಸರ್ವರೀಗು ಪುರುಷಬ್ರಹ್ಮನು॥ ಪ್ರತ್ಯೇಕ ಪ್ರತ್ಯೇಕ ವಬ್ಬೊಬ್ಬ ಜೀವರಿಗೆ ಸ್ವರೂಪಯೋಗ್ಯ ಉಪಾದೇಶ ಕೊಡುವನು ॥೧೦೩॥

ಆ ಬ್ರಹ್ಮನಿಂದ ಯುಕ್ತರಾಗಿ ಸರ್ವಜೀವರೂ ವಿರಜೆಸ್ನಾನಮಾಡಿ ಲಿಂಗದೇಹ ಕಳೆವರು॥ ಜಲಸ್ನಾನ ಮಾಡುವಾಗ ನದೀಪ್ರವಾಹದಲ್ಲಿ ಶಿರದಲ್ಲಿದ್ದ ಪುಷ್ಪಗಾಳು ಪೋಗುವಂದದೀ ॥೧೦೪॥

ಆಯಾಸವಿಲ್ಲದಾಲೆ ಪೋಗುವಾದು ಲಿಂಗದೇಹ ನವಕೋಟಿಸುರರಿಗಾಗ ಸ್ನಾನವಾದರು॥ ಲಿಂಗದೇಹ ಪೋಪೊದಿಲ್ಲ ಉಳಿದವರಿಗೆ ಪೋಗುವುದು ಆನಂದವಾಲೆಯಲ್ಲಿ ಸ್ಪಷ್ಟವಿರುವದು ॥೧೦೫॥

ವಾಸುದೇವನುದರದಲ್ಲಿ ಈಗ ಲಿಂಗ ಮುಕ್ತಗಣವು ಪ್ರಾವೇಶಮಾಡಿದಾವು ಹ್ಯಾಗೆ ಅಂದರೆ?॥ ರಾಜದ್ವಾರದಲ್ಲಿ ಸರ್ವಜೀವಸಂಘ ಪೋಗುವಂತೆ ವಾಸುದೇವನುದರದಲ್ಲಿ ಪೋಗಕೂಡದು ॥೧೦೬॥

ಗರುಡಶೇಷಮಾರ್ಗದಲ್ಲಿ ಸ್ವೋತ್ತಮ ಪ್ರವೇಶದಂತೆ ಕ್ಲಿಪ್ತಮರ್ಯಾದೆ ಬಿಡದೆ ಸ್ವೋತ್ತಮಾರಲೀ॥ ಪ್ರಾವೇಶಮಾಡಿದಾರು ಚಿದಾನಂದ ದೇಹದಿಂದ ಲಿಂಗದೇಹಯುಕ್ತರಾದ ಕೋಟಿನವದಲೀ ॥೧೦೭॥

ನವಾಕೋಟಿ ದೇವತೆಗಳು ಸ್ವಸ್ವಲಿಂಗ ದೇಹಗಳು ಸ್ವೋತ್ತಮಾರ ದೇಹ ಪ್ರಾವೇಶ ಕಾಲಕೆ॥ ಗುರುಗಳ ಲಿಂಗ ದೇಹಗಳಲಿ ತಮ್ಮ ಲಿಂಗಗಳನು ತ್ಯಜಿಸಿದಾರು ಪುರುಷಬ್ರಹ್ಮನುದರವೆಕೊನೆ ॥೧೦೮॥

ಹರಿಯಧ್ಯಾನ ಹೊರತು ಮತ್ತೊಂದು ಕಾರ್ಯವೀಗಸಲ್ಲ ಬ್ರಹ್ಮ ಪ್ರಳಯ ರಾತ್ರಿ ಕೊನೆಯು ಮುಗುವೋತನಕಲೂ॥ ಪೂರ್ವಮುಕ್ತರೀಗ ಮುಕ್ತರೆಲ್ಲ ಹರಿಯುಧ್ಯಾನಂಗತ ಹರಿಯಯೋಗ ನಿದ್ರೆ ಮಾಳ್ಪ ವಟದಪತ್ರದೀ ॥೧೦೯॥

ತಿಳಾದಷ್ಟು ಪೇಳಿರೂವೆ ತತ್ವನಿರ್ವೃತಿಗ್ರಂಥಭಾವ ದಾವಗ್ರಂಥ ವಿರೋಧವಿದಕೆ ಬರುವುದೋ॥ ಕ್ಷಮಿಸಬೇಕು ಹಿರಿಯರೆಲ್ಲ ಎನ್ನ ಅವಗುಣೆಣಿಸದಾಲೆ ಹಿರಿಯರಾ ಚರಣಧೂಳಿ ನಮ್ಮ ಪೊರೆಯಲೀ ॥೧೧೦॥

ಮಂಗಳಂ ಮಂಗಳಂ ಶ್ರೀಲಕ್ಷ್ಮೀನಾರಸಿಂಹನೀಗೆ ಮಂಗಳಂ ಮಂಗಳಂ ಮಂಗಳಂ ಭಾರತೀಶಗೆ॥ ಮಂಗಳಂ ಋಜುಗಳಿಗೆ ದಿವಿಜರೀಗೆ ಋಷಿಗಳೀಗೆ ಗುರು ಪರಂಪರೆಗೆ ಶರಣು ಶರಣು ಮಂಗಳಂ ॥೧೧೧॥

ಗರುಡಶೇಷಮಾರ್ಗ ಪ್ರಕರಣ ಸಂಪೂರ್ಣಂ

೨೨. ತ್ರಿವಿಧಜೀವರ ಪ್ರಕರಣ

ಸಂಪುಟ ೭ ಸಂಚಿಕೆ ೪ ಭಾವ ಆಷಾಢ ಜುಲೈ ೧೯೩೪

ಸೃಷ್ಟಿಯಲ್ಲಿರುವ ಜೀವರಿಗೆ ಉಂಟಾಗುವ ಸುಖದುಃಖಗಳು ಭಿನ್ನಭಿನ್ನವಾಗಿರುವುದರಿಂದ ಜೀವರು ಅನೇಕರೆಂತಲೂ, ಮುಕ್ತಿಯೋಗ್ಯಜೀವರೆಂತಲೂ, ನಿತ್ಯಸಂಸಾರಿ ಜೀವರೆಂತಲೂ, ತಮೋಯೋಗ್ಯ ಜೀವರೆಂತಲೂ ಈ ಜೀವರು ಮೂರುವಿಧವಾಗಿರುವರು. ಕೆಲವು ಜೀವರು ಮುಕ್ತಿಯನ್ನು ಹೊಂದುವುದಿಲ್ಲವೆಂದ ಕೂಡಲೆ, ಕೆಲವರು ಅದನ್ನು ಕಿವಿಗೆ ಹಾಕಿಕೊಳ್ಳುವುದೇ ಇಲ್ಲಾ. ಮತ್ತೆ ಕೆಲವರು ಆ ಉಪದೇಶಕ್ಕೆ ಪ್ರತ್ಯೇಕಾರ್ಥವುಂಟೆನ್ನುವರು. ಉಪದೇಶವು ನಿಜವೆಂದರೆ ಅದು ಸಯುಕ್ತಿಕವಾಗಿಯೂ ಸಪ್ರಮಾಣವಾಗಿಯೂ ಇರಬೇಕಲ್ಲವೆ? ಶ್ರೀಮದಾಚಾರ್ಯರ ವಾಕ್ಯವಾಗಲೀ, ಅವರು ಉದಹರಿಸಿರುವ ಶೃತಿ ಸ್ಮೃತಿ ವಾಕ್ಯಗಳಾಗಲಿ ವೈಷ್ಣವರಿಗೆ ಪ್ರಮಾಣವೇ ಆಗಿರುವುದು. ವೈಷ್ಣವರಲ್ಲದವರಿಗೂ, ಸಂಶಯವುಳ್ಳವರಿಗೂ ಅವು ಪ್ರಮಾಣಗಳೆಂದು ಭಾವಿಸಲರ್ಹವಾಗಿರುವುದಿಲ್ಲ. ಅವನ್ನೂ ಯುಕ್ತಿಯಿಂಲೂ, ಸರ್ವಜನಸಮ್ಮತವಾದ ಶೃತಿ ಸ್ಮೃತಿ ವಾಕ್ಯಗಳಿಂದಲೂ ಸಮಾಧಾನ ಮಾಡಬೇಕೇ ಹೊರತು ಬೇರೆಮಾರ್ಗವಿಲ್ಲ.

ಕುರುಡು ಮೊದಲಾದ ಆಗರ್ಭದೋಷಗಳೂ ನ್ಯೂನತೆಗಳು ಅನುಭವಿಸುವರ ಪೂರ್ವಜನ್ಮದ ಫಲವೆಂದು ಹಿಂದುಗಳೆಲ್ಲರೂ ಹೇಳುವರು. ಇದರಿಂದ ವರ್ತಮಾನಕಾಲದಲ್ಲಿ ಕಂಡುಬರುವ ದೋಷನ್ಯೂನತೆಗಳಿಗೆ ಕಾರಣವನ್ನು ಹೇಳಿದಹಾಗಾಯಿತು. ಆದರೆ ಆದಿಸೃಷ್ಟಿಯಲ್ಲಿ ಕುರುಡರು ಮೂಕರು ಮೊದಲಾದವರು ಇದ್ದರೆ? ಇಲ್ಲವೆ? ಆದರೆ ಸೃಷ್ಟಿಯಲ್ಲಿ ಅಂತಹವರು ಇರಲೆ ಇಲ್ಲವೆನ್ನುವುದಾದರೆ ಎಲ್ಲರೂ ಒಂದೇ ವಿಧವಾಗಿ ಸೃಷ್ಟಿಸಲ್ಪಟ್ಟರೆಂತಲೂ, ಹಾಗೆ ಒಂದೇ ವಿಧವಾಗಿ ಸೃಷ್ಟಿಸಲ್ಪಟ್ಟ ಜೀವರು ಅವರವರ ಭಿನ್ನಭಿನ್ನ ಕರ್ಮಗಳಿಂದ ತಮ್ಮ ಮುಂದಣ ಜನ್ಮಗಳಲ್ಲಿ ಆ ಬಗೆಯಾಗಿ ದೋಷ ನ್ಯೂನತೆಗಳನ್ನು ಹೊಂದಿದರೆಂತಲೂ ಹೇಳಿದರಲ್ಲವೆ? ಒಂದೆ ಬಗೆಯಾದ ಸೃಷ್ಟಿಸಲ್ಪಟ್ಟಿದ್ದರೆ ಭಿನ್ನಭಿನ್ನ ಕರ್ಮಗಳು ಹೇಗೆ ಉಂಟಾದವು? ಮನೋಭಿಪ್ರಾಯಗಳು ಶಕ್ತಿಯು ಭಿನ್ನಭಿನ್ನವಾಗಿದ್ದುವೆಂದು ಹೇಳಬಹುದೆ? ಹಾಗಾದರೂ, ಜೀವರಿಗೆ ಭಿನ್ನಭಿನ್ನ ಯೋಗ್ಯತೆಗಳು ಹೇಗೆ ಸಂಭವಿಸಿದುವು? "ಪರಮಾತ್ಮನು ಕೊಟ್ಟನು" ಎಂದು ಹೇಳಿದರೆ, ಸೃಷ್ಟಿಕರ್ತನಲ್ಲಿ ಪಕ್ಷಪಾತ ದೋಷವು ಉಂಟಾಗುವುದಿಲ್ಲವೆ? ಆದುದರಿಂದ ಈ ಬಗೆಯ ಸಮಾಧಾನವು ನ್ಯಾಯವಗುವುದಿಲ್ಲ. ಅನಾದಿಯಾಗಿಯೇ ಜೀವರು

ಭಿನ್ನಭಿನ್ನ ಯೋಗ್ಯತೆಯನ್ನುಳ್ಳವರಾದ ಕಾರಣ, ಅನಾದಿ ಕರ್ಮಾನುಗುಣವಾಗಿ, ಆದಿಸೃಷ್ಟಿಯಲ್ಲಿ ಕುರುಡು ಮೊದಲಾದ ನ್ಯೂನತೆಗಳು ಕಂಡುಬಂದವು ಎಂದು ನಾವು ಹೇಳಬೇಕಾಗುವುದು. ಇದು ನ್ಯಾಯಶಾಸ್ತ್ರಕ್ಕೂ ಸಮ್ಮತವಾಗಿದೆ. ಬೇರೆ ಯಾವ ಕಾರಣವನ್ನು ಊಹಿಸಿ ಹೇಳಿದರೂ, ಆದಿ ಸೃಷ್ಟಿಯ ಆ ನ್ಯೂನತೆಗಳಿಗೆ ಸಮಾಧಾನವಾಗುವುದಿಲ್ಲ.

ಆದುದರಿಂದ ಜೀವರು ಅನಾದಿಯಾಗಿ ಭಿನ್ನಭಿನ್ನ ಯೋಗ್ಯತೆಯನ್ನುಳ್ಳವರು; ಜೀವರ ಸ್ವಭಾವವು ಅನಾದಿಯಾಗಿಯೂ ಭಿನ್ನಭಿನ್ನವಾಗಿಯೂ ಇರುವುದು. ಇದೇ ಅರ್ಥವನ್ನೇ ಗೀತೆಯಲ್ಲಿ "ಕಾರ್ಯತೇ ಹ್ಯವಶಃ ಕರ್ಮಸರ್ವಃ ಪ್ರಕೃತಿಜೈರ್ಗುಣೈಃ॥" ಎಂದರೆ ತಮ್ಮ ಅಧೀನವಿಲ್ಲದೆ, ವಿಕಾರಭೂತ ಸತ್ವಾದಿ ಗುಣಗಳಿಂದ ಸಮಸ್ತರೂ ಕರ್ಮ ಮಾಡುತ್ತಾರೆ; ಎಂದು ಶ್ರೀಕೃಷ್ಣ ಪರಮಾತ್ಮನು ಉಪದೇಶಿಸಿರುತ್ತಾನೆ. ಮೇಲಿನ ಪ್ರಮಾಣದಿಂದ ಸರ್ವಜೀವರು ತಮ್ಮ ತಮ್ಮ ಸಂಸ್ಕಾರಕ್ಕೆ ಅನುಗುಣವಾಗಿ ಕರ್ಮ ಮಾಡುತ್ತಾರೆಂದು ಏರ್ಪಟ್ಟಿತು. ಸಂಸ್ಕಾರವು ಅವರವರ ಯೋಗ್ಯತೆಗೆ ಅಥವಾ ಸ್ವಭಾವಕ್ಕೆ ಅನುಗುಣವಾಗಿರಲೇಬೇಕು. ಅವರವರ ಯೋಗ್ಯತೆಗೆ ವಿರುದ್ಧವಾಗಿ ಸಂಸ್ಕಾರವಿರುವುದಿಲ್ಲ. ಯೋಗ್ಯತೆಗೆ ತಕ್ಕಷ್ಟು ಕರ್ಮ ಮಾಡಲು ಆಗುವುದು. ಕರ್ಮಕ್ಕೆ ತಕ್ಕಷ್ಟು ಸಂಸ್ಕಾರವು ಉಂಟಾಗುವುದು. ಕರ್ಮಕ್ಕೆ ಅನುಗುಣವಾಗಿಯೇ ಪರಮಾತ್ಮನು ಫಲವನ್ನು ಕೊಡುವನು. ಪರಮಾತ್ಮನಲ್ಲಿ ಪಕ್ಷಪಾತ ದೋಷವಿಲ್ಲದುದರಿಂದಲೂ, ತಮ್ಮ ಯೋಗ್ಯತೆಯನ್ನನುಸರಿಸಿಯೇ ಜೀವರು ಕರ್ಮ ಮಾಡುವರಾದುದರಿಂದಲೂ, ಕರ್ಮಕ್ಕೆ ತಕ್ಕಷ್ಟೇ ಫಲವು ದೊರೆಯುವುದಾದುರಿಂದಲೂ ಯೋಗ್ಯತೆಗೆ ಮೀರಿ ಮೋಕ್ಷ ಸುಖವು ಎಂದಿಗೂ ಲಭಿಸಲಾರದು. ಯೋಗ್ಯತಾನುಗುಣವಾಗಿಯೇ ಮೋಕ್ಷವು ಸಿಕ್ಕುವುದು.

ಅನಾದಿಯಾದ ಆ ಭಿನ್ನಭಿನ್ನ ಯೋಗ್ಯತೆಗಳು ಮೋಕ್ಷಕಾಲದಲ್ಲಿ ಒಂದೇ ಆಗುವುದೆಂದು ಊಹಿಸಿದರೆ, ಅದನ್ನು ನಂಬಲಾಗುವುದೆ? ಇಲ್ಲ. ಭಿನ್ನಭಿನ್ನ ಯೋಗ್ಯತೆಗಳನ್ನು ಅಂಗೀಕರಿಸಿದ ಕೂಡಲೇ ಮೋಕ್ಷ ಸುಖವು ಭಿನ್ನಭಿನ್ನವಾದುದೆಂದೂ, ತಾರತಮ್ಯವನ್ನುಳ್ಳುದೆಂದೂ, ಅಂಗೀಕರಿಸಲೇಬೇಕು. ಪಾಪಕರ್ಮಿಗೆ ಪರದಲ್ಲಿ ಸುಖವುಂಟಾಗುವುದೆಂದು ಹೇಳಲು ಆಗುವುದಿಲ್ಲ. ಅದು ಕೇವಲ ನ್ಯಾಯವಿರುದ್ಧವಾದುದು. ಪರಮಾತ್ಮನು ಕರುಣಾಸಿಂಧು, ಸರ್ವಸಮ, ದಯೆಯೇ ಅವನ ಬಿರುದು, ಆದುದರಿಂದ ಪಾಪಿಗೂ ಒಳ್ಳೆಯ ಸುಖವನ್ನೇ ಕೊಟ್ಟು ಮನ್ನಿಸುವನು– ಎಂಬ ಯೋಚನೆಗೆ ಸರ್ವಥಾ ಕಾರಣವಿಲ್ಲ. ಏತಕ್ಕೆಂದರೆ – ಅಯೋಗ್ಯರಿಗೆ ಸುಖವನ್ನು ಕೊಡುವುದರಿಂದ ಪರಮಾತ್ಮನಿಗೆ ದೋಷವು ಬರುವುದು ಎಂಬ ಭೀತಿಯಾಗುವುದು. ಯೋಗ್ಯತೆಗೆ ತಕ್ಕ ಮೋಕ್ಷವು ಎಂದ ಮೇಲೆ ಕೆಲವರಿಗೆ ನರಕವು ಉಂಟೆಂದು ಅನುಮಾನ ಪ್ರಮಾಣದಿಂದ ಸಿದ್ಧಿಸುವುದು. ಭಗವದ್ಗೀತಾ ಸಮಗ್ರ ಗ್ರಂಥವನ್ನು ಸರ್ವರೂ ಪ್ರಮಾಣವೆಂದು ಒಪ್ಪಿಕೊಳ್ಳುತ್ತಾರೆ. ಅಂತಹ ಗೀತೆಯು

ಏನನ್ನು ಉಪದೇಶಿಸುತ್ತದೆಂದರೆ:- ದ್ವೇಷಿಗಳಾಗಿಯೂ, ಕ್ರೂರರಾಗಿಯೂ, ಪಾಪಿಗಳಾಗಿಯೂ ಇರುವ ಅಸುರ ಸ್ವಭಾವದವರಾದ ಆ ಮೂಢರನ್ನು ಅಸುರಸಂಬಂಧಿಯಾದಿ ಯೋನಿಗಳಲ್ಲಿಯೇ ಪುನಃ ಪುನಃ ಹುಟ್ಟುವಂತೆ ಮಾಡುತ್ತಾನೆ. ಜನ್ಮಜನ್ಮಗಳಲ್ಲಿಯೂ ಅವರು ಅಸುರಸಂಬಂಧಿಯಾದ ಯೋನಿಗಳಲ್ಲಿಯೇ ಹುಟ್ಟಿ, ಪರಮಾತ್ಮನನ್ನು ಹೊಂದದೆಯೇ ನಿತ್ಯ ನರಕರೂಪವಾದ ಅಧಮಗತಿಯನ್ನು ಪಡೆಯುವರು. ಅಸುರರು ಯಾರೆಂದರೆ:- ವಿಷಯೇಂದ್ರಿಯಗಳಲ್ಲಿ ಆಸಕ್ತರಾದವರು.

ಸಂಸಾರದಲ್ಲಿರುವಾಗ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳು ಸ್ವಲ್ಪಸ್ವಲ್ಪವಾಗಿ ಸೇರಿಕೊಂಡಿರಬಹುದಾದರೂ, ಸಂಸಾರವು ಮುಗಿದು ಮೋಕ್ಷವಾದಾಗ ಅವು ಪರಸ್ಪರ ಸಂಬಂಧವೇನೂ ಇಲ್ಲದೆ ಶುದ್ಧವಾಗಿರುವುವು. ಸಾತ್ವಿಕರು ಮುಕ್ತಿಯೋಗ್ಯರು ರಾಜಸರು ನಿತ್ಯ ಸಂಸಾರಿಗಳು, ತಾಮಸರು ತಮೋಯೋಗ್ಯರು ಎಂಬದಾಗಿರುವುದು.

ಅಂಧತಮಸ್ಸೆಂಬ ನರಕಕ್ಕೆ ಸಮಸ್ತರೂ ಭಯಪಡಬೇಕು. ತಮೋಯೋಗ್ಯ ರಾರೆಂಬುದನ್ನು ಚೆನ್ನಾಗಿ ಮನನಮಾಡಿಕೊಂಡು ತಮ್ಮ ಕರ್ಮದಿಂದ ತಮ್ಮ ಸ್ವಭಾವವನ್ನು ತಿಳಿದುಕೊಳ್ಳಬೇಕು. ಮಹಾ ಪ್ರಯತ್ನವನ್ನು ಮಾಡದ ಹೊರತು, ಕರ್ಮದಿಂದ ಸ್ವಭಾವವನ್ನು ತಿಳಿಯುವುದಾಗುವುದಿಲ್ಲ. ತಮೋಯೋಗ್ಯ ಜೀವರ ಚಿಹ್ನೆಗಳಲ್ಲಿ "ಆದಿಯಿಂದಲೂ ದೈತ್ಯರು ವಿಷ್ಣುವನ್ನು ದ್ವೇಷಿಸುವರು; ದ್ವೇಷವು ಹೆಚ್ಚಾಗಲು ಆ ದೈತ್ಯರನ್ನು ನಿಜವಾಗಿಯೂ ಅಂತ್ಯಕಾಲದಲ್ಲಿ ಪರಮಾತ್ಮನು ಅಂಧಂತಮಸ್ಸಿನಲ್ಲಿ ಬೀಳಿಸುತ್ತಾನೆ ಎಂದು ಹೇಳಿರುವರು.

ದೈತ್ಯರು ಪರಮಾತ್ಮನನ್ನು ದ್ವೇಷಿಸುವರು, ಎಂದಕೂಡಲೆ ದೈತ್ಯನಾದ ದುರ್ಯೋಧನನು ವಿಷ್ಣುವನ್ನು ಕುರಿತು ವೈಷ್ಣವ ಯಾಗವನ್ನು ಏಕೆ ಮಾಡಿದನೇಂದು ಅಕ್ಷೇಪಿಸಬಹುದು. ಅವನು ಯಾವ ಉದ್ಧೇಶದಿಂದ ಆ ಯಾಗವನ್ನು ಮಾಡಿದನೆಂಬುವುದನ್ನು ವನಪರ್ವದಲ್ಲಿ ದುರ್ಯೋಧನನ ಮುಖದಿಂದ ಕರ್ಣನಿಗೆ ಹೇಳಿಸಿರುತ್ತಾರೆ. ಪ್ರ॥ ರಾಜಸೂಯಂ ಪಾಂಡವಸ್ಯ ದೃಷ್ಟ್ವಾ ಕ್ರತುವರಂತದಾ। ಮಮ ಸ್ಪೃಹಾಸಮುತ್ಪನ್ನಾ ತಾಂ ಸಂಪಾದಯಸೂತಜ॥" ಧರ್ಮರಾಜನು ಮಾಡಿದ ಉತ್ತಮವಾದ ರಾಜಸೂಯಯಾಗವನ್ನು ನೋಡಿದಾಗಲಿಂದ ನನಗೆ ಅಸೂಯೆ ಉಂಟಾಗಿದೆ. ಅಂಥಾ ಮರ್‍ಯಾದೆಯನ್ನು ನನಗೆ ಸಂಪಾದನೆ ಮಾಡಿಕೊಡು, ಎಂದು ಹೇಳಿರುವುದರಿಂದ ಆ ಕೆಟ್ಟ ಉದ್ದೇಶವು ಭಗವಂತನಲ್ಲಿ ಪ್ರೇಮವನ್ನು ತೋರಿಸಲಾರದು. ಆದುದರಿಂದ ಭಗವಂತನನ್ನು ದ್ವೇಷಿಸಿ ತಮಸ್ಸಿನಲ್ಲಿಯೇ ಬೀಳುವರು.

ಹೀಗೆನ್ನುವುದರಿಂದ 'ದೈತ್ಯರಿಗೆ ಈ ಕಲ್ಪದಲ್ಲಿ ಪರಮಪದವಿಲ್ಲ - ತಮಸ್ಸೇ ಆಗುವುದು. ಆದರೆ ಮತ್ತೊಂದು ಕಲ್ಪದಲ್ಲಿ ಪುನರ್ಜನ್ಮವನ್ನು ಹೊಂದಿ ಪರಮಾತ್ಮನನ್ನು ಭಜಿಸಿ

ಪರಮಪದವನ್ನು ಪಡೆವರು ಎಂದು ಕೆಲವರು ಹೇಳುವರು. ಅದು ಸರಿಯಲ್ಲ. ಯುಕ್ತಿಗೆ ವಿರುದ್ಧವಾಗಿದೆ. ಲೋಕದಲ್ಲಿ ಒಳ್ಳೆಯದು ಕೆಟ್ಟದು ಎಂಬ ಗುಣಗಳನ್ನುಳ್ಳ ಪದಾರ್ಥಗಳಾಗಿ ಸರ್ವಚರಾಚರ ವಸ್ತುಗಳು ಕಾಣುತ್ತವೆ.' 'ಒಳ್ಳೆಯದು ಕೆಟ್ಟುದು' ಎಂಬ ಗುಣಗಳನ್ನು ಯಾರು ಸೃಷ್ಟಿಸಿದರು? ದೇವರು ಸೃಷ್ಟಿಸಿದನು ಎಂದರೆ ದೇವರಿಗೆ ದೋಷವು ಬರುವುದು. ಆದುದರಿಂದ ಇವೆರಡನ್ನು ದೇವರು ಸೃಷ್ಟಿಸಲಿಲ್ಲ. 'ದೇವರ ಆಜ್ಞೆಗೆ ಅನುಗುಣವಾಗಿ ನಡೆಯುವುದು ಒಳ್ಳೆಯದು, ವಿರೋಧವಾಗಿ ನಡೆಯುವುದು ಕೆಟ್ಟದ್ದು' ಎಂದು ಅರ್ಥಮಾಡಿದರೆ, ಒಳ್ಳೆಯದು, ಕೆಟ್ಟದು ಎಂಬ ಗುಣಗಳು ಜ್ಞಾನವುಳ್ಳ ಜೀವರಿಗೆ ಅನ್ವಯಿಸುವುದೇ ಹೊರತು ಜಡ ಪದಾರ್ಥಗಳಿಗೆ ಅನ್ವಯಿಸುವುದಿಲ್ಲ. ವಿಷಪದಾರ್ಥವು ಕೆಟ್ಟದು ಅಲ್ಲವೆ? ಆದುದರಿಂದ ದೇವರ ಆಜ್ಞೆಯನ್ನು ಮೀರುವುದು ಕೆಟ್ಟದು, ಅನುಗುಣವಾಗಿ ನಡೆಯುವುದು ಒಳ್ಳೆಯದು' ಎಂಬ ಅರ್ಥನ್ಯಾಯ ಸಮ್ಮತವಲ್ಲ. ಆದುದರಿಂದ ಕೆಟ್ಟದು, ಒಳ್ಳೆಯದು ಎಂಬುದು ಅನಾದಿ ಸಿದ್ಧವಾದುದು. ಅನಾದಿಸಿದ್ಧವಾದ ಕೆಲವು ಪದಾರ್ಥಗಳನ್ನು ಇಟ್ಟುಕೊಂಡು ತನ್ನ ಮಹಿಮೆಯನ್ನು ತೋರಿಸುವುದೇ ದೇವರ ಸಂಕಲ್ಪವು. ಜೀವರ ತಾರತಮ್ಯವು ಅನಾದಿಸಿದ್ಧವು. ಈ ನಿಯಮವನ್ನು ಯಾರೂ ಉಲ್ಲಂಘಿಸಲು ಆಗುವುದಿಲ್ಲವು.

"ಶುಭೈಃ ಪ್ರಯೋಗೈಃ ದೇವತ್ವಂ ವ್ಯಾಮಿ ಶ್ರೈಃ ಮಾನುಷೋಭವೇತ್। ಮೋಹನೀಯೈಃ ವಿಯೋನೀಷು ತ್ವಧೋಗಾಮೀಚಕಿಲ್ಬಿಷೈಃ।" ಎಂದು ಹೇಳುವುದರಿಂದ ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು, ತಮೋ ಯೋಗ್ಯರು, ಎಂದು ಮೂರು ವಿಧರಾಗಿ ಜೀವರು ಇರುತ್ತಾರೆಂದು ತಿಳಿಯತಕ್ಕದ್ದು.

ತ್ರಿವಿಧಜೀವರ ಪ್ರಕರಣ ಸಂಪೂರ್ಣಂ.

೨೩. ಬ್ರಹ್ಮವಿದ್ಯಾ ಪ್ರಕರಣ

ಸಂಪುಟ ೧೦ ಸಂಚಿಕೆ ೪ ಪ್ರಮಾಥಿ, ಆಷಾಢ ಜುಲೈ ೧೯೯೯

ಶ್ರೀಮತ್ ಹನುಮಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥ಹರಿಃ ಓಂ ॥

ಮೋಕ್ಷಾಧಕಾರಿಗಳಿಂದ ಜೀವರಿಗೆ ಸಂಸಾರದಿಂದುಂಟಾಗುವ ಅಖಿಲ ಕ್ಲೇಶ ನಿವೃತ್ತಿಯಾಗಿ, ಪರಮಾನಂದವನ್ನು ಅನುಭವಿಸುವುದಕ್ಕೋಸ್ಕರ ಬ್ರಹ್ಮವಿದ್ಯೆಯನ್ನು ಕಲಿಯಬೇಕಾದ್ದು ಮುಖ್ಯ ಕರ್ತವ್ಯವು.

ಬ್ರಹ್ಮವಿದ್ಯೆಯೆಂದರೆ:- ಬ್ರಹ್ಮಜ್ಞಾನ ಜನಕವಾದ ಶಾಸ್ತ್ರವೆಂದು ಅಭಿಪ್ರಾಯ. ಈ ಬ್ರಹ್ಮವಿದ್ಯೆಯೇ ಸಕಲ ವಿದ್ಯೆಕ್ಕೂ ಆಧಾರವು.

ಈ ಬ್ರಹ್ಮವಿದ್ಯೆಯನ್ನು ಮೊದಲು ಚತುರ್ಮುಖ ಬ್ರಹ್ಮನು ಅವನ ಜ್ಯೇಷ್ಠಪುತ್ರನಾದ ಅಥರ್ವನಾಮಕ ಋಷಿಗೆ ಹೇಳಿದನು. ನಂತರ ಆತನಿಂದ ಅದು ಅಂಗೀರನಿಗೆ ಹೇಳಲ್ಪಟ್ಟು, ಆತನಿಂದ ಭಾರದ್ವಾಜ ಋಷಿ ಪುತ್ರನಾದ ಸತ್ಯವಹನಿಗೆ ಹೇಳಲ್ಪಟ್ಟಿತು. ಈ ಪ್ರಕಾರ ಪರಂಪರಾಪ್ರಾಪ್ತವಾದ ವಿದ್ಯೆಯು ಅಂದರೆ ಋಗಾದಿ ವಿದ್ಯೆಯು ವಿವಕ್ಷಾ ಭೇದದಿಂದ ಪರವಿದ್ಯೆಯೆಂದೂ, ಅಪರವಿದ್ಯೆಯೆಂದೂ ಹೇಳಿಸಿಕೊಳ್ಳುತ್ತಾ ಗುರು-ಶಿಷ್ಯ ಪರಂಪರ ವಿಶದವಾಯಿತು. ಆ ಅಂಗೀರ ಋಷಿಗಳು ಶೌನಕನನ್ನು ಕುರಿತು,

"ಅಯ್ಯಾ ಶೌನಕನೇ ! ಬ್ರಹ್ಮಜ್ಞಾನಿಗಳು ಮೋಕ್ಷಾಧಿಕಾರಿಗಳಿಗೆ ತಿಳಿಯಬೇಕಾದ ಜ್ಞಾನಜನಕವಾದ ಶಾಸ್ತ್ರವು ಮುಖ್ಯಾರ್ಥ ಬೋಧತತ್ವ ರೂಪನಿಮಿತ್ತದಿಂದ ಪರವಿದ್ಯೆಯೆಂತಲೂ, ಅಮುಖ್ಯಾರ್ಥ ಭೋಧತತ್ವ ರೂಪನಿಮಿತ್ತದಿಂದ ಅಪರವಿದ್ಯೆಯಂತಲೂ ಹೇಳಿರುವರು.

ಉಪಾಧಿ ದ್ವೈ ವಿದ್ಯೆಯಿಂದ ಈ ಶಾಸ್ತ್ರಕ್ಕೆ ದ್ವೈ ವಿದ್ಯೆ ಇರುವುದೇ ಹೊರತು, ವಸ್ತುತಃ ಇಲ್ಲವೆಂದು ಉತ್ತರೋತ್ತರ ಹೇಳಲ್ಪಡುವುದು. ಹೇಗೆ ಕರ್ಮವು ಸಕಾಮತ್ವ-ನಿಷ್ಕಾಮಮತ್ವ ರೂಪವಾದ ಉಪಾಧಿಗಳಾದ ಪ್ರವೃತ್ತ ಕರ್ಮವೆಂತಲೂ, ನಿವೃತ್ತಿ ಕರ್ಮವೆಂತಲೂ

ಹೇಳಲ್ಪಡುತ್ತದೋ, ಹಾಗೆಯೇ ಋಗಾದಿ ರೂಪವಾದ ಶಾಸ್ತ್ರವು ಒಂದೇ ಆಗಿರುವುದು. ಇದಕ್ಕೆ ಪ್ರಮಾಣ.

ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನವಾಚಕಾಃ ।
ತ ಏವ ಹಿ ಪರಾವಿದ್ಯಾ ಯದಾ ವಿಷ್ಣೋಸ್ತುವಾಚಕಾಃ ॥

ಇತ್ಯಾದಿ ಪ್ರಮಾಣಾನುಸಾರವಾಗಿ, ಯಾವಾಗ ಕರ್ಮಾದಿಗಳನ್ನೇ ಬೋಧಿಸುವುದೋ ಆವಾಗ ಅಪರವಿದ್ಯೆಯೆಂತಲೂ, ಯಾವಾಗ ಪರಮಾತ್ಮನನ್ನೇ ಮುಖ್ಯವಾಗಿ ಬೋಧಿಸುವುದೋ, ಆವಾಗ ಪರವಿದ್ಯೆಯೆಂತಲೂ, ಹೇಳಲ್ಪಡುವುದು.

ಯಯಾತದಕ್ಷರಮಧಿಗಮ್ಯತೇ ॥ ಎಂದು ಹೇಳಿರುವ ಅಕ್ಷರ ಶಬ್ದವಾಚ್ಯವಾದ ವಸ್ತುವು ಎಂಥಾದ್ದೆಂದು ಶಂಕೆ ಹುಟ್ಟಲು ಅದರ ಮಹಾತ್ಮೆಯನ್ನು ಹೇಳಲ್ಪಡುವುದು. ಪೂರ್ವದಲ್ಲಿ ಪರವಿದ್ಯೆ-ಅಪರವಿದ್ಯೆ ಎಂದು ಎರಡು ವಿಧವಾಗಿರುವುದೆಂದು ಅದರ ಸ್ವರೂಪ ಮಾತ್ರವನ್ನು ತೋರಿಸಿ, ಯಾವ ವಿದ್ಯೆಯಿಂದ ಅಕ್ಷರ ಜ್ಞಾನವುಂಟಾಗುವುದೋ ಅದೇ ಪರವಿದ್ಯೆ ಎನಿಸಿಕೊಳ್ಳುವುದು. ಇನ್ನು ಶಾಸ್ತ್ರ ವಿಷಯವಾದ ಅಕ್ಷರವು ಎಂಥಾದ್ದೆಂದರೆ, ಅದರ ಮಹಾತ್ಮೆಯನ್ನು ಹೇಳುವರು.

ಈ ಚರಾಚರಾತ್ಮಕವಾದ ಪ್ರಪಂಚಕ್ಕೆ ವಿಲಕ್ಷಣವಾಗಿಯೂ ಯಾವ ವಸ್ತುವು ಬಾಹ್ಯೇಂದ್ರಿಯ ಅವಿಷಯವಾಗಿರುವುದೋ ಅಂದರೆ ಮನಸ್ಸಿಗೆ ಅವಿಷಯವಾಗಿ ಅಥವಾ ಸಾಕಲ್ಯವಾಗಿ ತಿಳಿಯಲಿಕ್ಕೆ ಅಸಾಧ್ಯವಾಗಿರುವುದೋ ಅಥವಾ ಪ್ರಾಕೃತ ಶರೀರಾದಿಗಳಿಂದ ಶೂನ್ಯವಾಗಿರುವುದೋ, ಆ ವಸ್ತುವು ನಾಶರಹಿತವಾಗಿಯೂ, ಸಮರ್ಥವಾಗಿಯೂ, ಸರ್ವವ್ಯಾಪಿಯಾಗಿಯೂ, ಯಾವಾಗಲೂ ನಿರ್ವಿಕಾರವಾಗಿಯೂ, ಸರ್ವಪ್ರಾಣಿಗಳಿಗೆ ಕಾರಣೀಭೂತವಾಗಿಯೂ ಇರುವುದು. ಆ ವಸ್ತುವೇನೇ ಪೂರ್ವೋಕ್ತ ಋಗಾದಿಗಳಲ್ಲಿ ಮುಖ್ಯವೃತ್ತಿಯಿಂದ ಪ್ರತಿಪಾದ್ಯವಾದ **ಅಕ್ಷರವು** ಎಂದೆನಿಸುವುದು.

ಪರಮಾತ್ಮನ ಸೃಷ್ಟ್ಯಾದಿ ಲಕ್ಷಣಗಳನ್ನು ಹೇಳುವುದು ಹೇಗೆಂದರೆ,

ಲೋಕದಲ್ಲಿ ಪರಮಾತ್ಮನು ಅತೀಂದ್ರಿಯನಾದುದರಿಂದ ಅವನಿಂದಲೇ ಸಮಸ್ತ ಪ್ರಪಂಚವೂ ಹುಟ್ಟುವುದು ಮತ್ತು ನಾಶವಾಗುವುದು ಎಂಬ ಪ್ರಮೇಯವು ಮಂದರಿಗೆ ತಿಳಿಯಲು ಅಸಾಧ್ಯವಾದುದರಿಂದ ಆಬಾಲವೃದ್ಧರಿಗೂ ತಿಳಿದಿರುವ ದೃಷ್ಟಾಂತ ಹೇಳುವುದು.

ಅತ್ಯಲ್ಪ ಹುಳುವು ತಾನು ನುಂಗಿ ತನ್ನ ಉದರದಲ್ಲೇ ತಂತು ರೂಪವಾದ ವಸ್ತುವನ್ನು ಈಚೆಗೆ ತೆಗೆದು ಮನೆಯಲ್ಲಿ ಎಲ್ಲಾ ಕಡೆಗೆ ವ್ಯಾಪಿಸುವಂತೆ ಮಾಡಿ. ತಾನು ಮಾತ್ರ, ಅದರಲ್ಲಿ

ಯಾವ ಬಂಧವೂ ಇಲ್ಲದೆ ಸಂಚರಿಸುತ್ತಿದ್ದು, ಪುನಃ ತನ್ನ ಇಚ್ಛೆ ಬಂದ ಹಾಗೆಲ್ಲಾ ಆ ತಂತುವನ್ನು ನುಂಗಿಬಿಡುವುದೋ, ಹಾಗೇ ಪರಮಾತ್ಮನು ತನ್ನ ಇಚ್ಛಾನುಸಾರವಾಗಿ ಉದರದಲ್ಲಿ ಪ್ರಪಂಚವನ್ನು ಸೃಷ್ಟಿಸಿ, ಪುನಃ ಎಲ್ಲವನ್ನೂ ಉದರದೊಳಗೆ ತೆಗೆದುಕೊಳ್ಳುವನು. ಇದರಿಂದ ವಿಶಿಷ್ಟಾದ್ವೈತಿಗಳು ಹೇಳುವಂತೆ ಪರಮಾತ್ಮನು ಪ್ರಾಪಂಚಾತ್ಮಕನಾಗಿ ಪರಿಣಮಿಸುತ್ತಾನೆಂಬ ಮತವೂ, ಅದ್ವೈತಿಗಳು ಹೇಳುವಂತೆ ಬ್ರಹ್ಮವು ಜಗದ್ಭ್ರಮಾಕ್ಕೆ ಅಧಿಷ್ಠಾನವಾಗುತ್ತೆ ಎಂಬ ಮತವೂ ಅಸಂಗತ ತೋರುವುದು. ಆದರೆ ನಾನಾವಿಧವಾದ ಸೃಷ್ಟಿಯನ್ನು ಮಾಡುವುದರಿಂದ ಪರಮಾತ್ಮನಲ್ಲಿ ವೈಷಮ್ಯ ಶಂಕೆಯು ಹುಟ್ಟುವುದು. ಈ ಶಂಕಾ ಪರಿಹಾರಕ್ಕಾಗಿ ಎರಡನೆಯ ದೃಷ್ಟಾಂತವನ್ನು ಹೇಳುವುದು. ಹೇಗೆಂದರೆ,-

ಭೂಮಿಯು ಹೇಗೆ ನಾನಾವಿಧವಾದ ಬೀಜಗಳಿಂದ ಆಯಾ ಬೀಜಗಳ ಗುಣಕ್ಕನುಸಾರವಾಗಿ ವ್ರೀಹಿ-ಶಲ್ಯಾದಿ ನಾನಾಪ್ರಕಾರವಾದ ಅಂಕುರಗಳನ್ನು ಹುಟ್ಟಿಸುವುದೋ, ಹಾಗೆ ಪರಮಾತ್ಮನು ಸೃಷ್ಟ್ಯಾದಿಗಳಲ್ಲಿ ಪ್ರಾಣಿಗಳ ಅನಾದಿ ಕಾಲದಿಂದಲೂ ಅನುವರ್ತಿಸಿಕೊಂಡು ಬಂದಿರುವ ನಾನಾವಿಧ ಕರ್ಮಗಳನ್ನು ಅನುಸರಿಸಿ, ತತ್ತದ್ಯೋಗ್ಯತಾನುಸಾರವಾಗಿ ದೇಹಗಳನ್ನು ಕೊಟ್ಟು, ಅನೇಕ ಪ್ರಕಾರವಾಗಿ ಪ್ರಪಂಚವನ್ನು ಸೃಷ್ಟಿ ಮಾಡುವನು. ಇದರಿಂದ ಪರಮಾತ್ಮನಿಗೆ ಯಾವ ದೋಷವೂ ಇಲ್ಲವೆಂದು ಸೂಚಿತವಾಗುವುದು. ಆದರೆ ಪರಮಾತ್ಮನಿಗೆ ಜಗತ್ತು ಸೃಷ್ಟ್ಯಾದಿಗಳಿಂದ ಏನಾದರೂ ಪ್ರಯೋಜನವಿರುವ ಪಕ್ಷದಲ್ಲಿ, ಪ್ರಯೋಜನಾಕಾಂಕ್ಷೆಯಾದುದರಿಂದ ತನ್ನ ಪೂರ್ಣತ್ವಕ್ಕೆ ನ್ಯೂನತೆ ಬಂದಂತೆ ಆಗುವುದು. ಪ್ರಯೋಜನವಿಲ್ಲವೆಂದರೆ,- "ನ ಕುರ್ಯಾತ್ ನ್ನಿಷ್ಫಲಂ ಕರ್ಮಾ" ಎಂಬಂತೆ ಅದರಲ್ಲಿ ಪ್ರವರ್ತಿಸುವುದೇ ಅಯುಕ್ತವು ಎಂದು ಉಂಟಾದ ಶಂಕೆಯು ಇನೇ ದೃಷ್ಟಾಂತದಿಂದ ಪರಿಹೃತವಾಗುವುದು.

ಲೋಕದಲ್ಲಿ ಅತ್ಯಾಯಾಸ ಸಾಧ್ಯವಾದ ಕೆಲಸದಲ್ಲಿ ಫಲಾಪೇಕ್ಷೆಯುಂಟಾಗುವುದೇ ಹೊರತು, ಅನಾಯಾಸ ಸಾಧ್ಯವಾದ ಕೆಲಸದಲ್ಲಿ ಫಲಾಪೇಕ್ಷೆಯು ಹುಟ್ಟುವುದಿಲ್ಲವು. ಆದುದರಿಂದಲೇ ಪ್ರೇಕ್ಷಾವಂತರಿಗೂ ಸಹ ಅನಾಯಾಸ ಸಾಧ್ಯವಾದ ಅಂಗುಲ ಚಲನಾದಿಗಳಲ್ಲಿ ಫಲಾಪೇಕ್ಷೆ ಇಲ್ಲವು. ಅಂದರೆ-ಜೀವಾಧಿಷ್ಠಿತವಾದ ದೇಹದಲ್ಲಿ ಯಾವ ಪ್ರಯತ್ನವೂ ಇಲ್ಲದಿದ್ದರೂ ಸ್ವಭಾವವಾಗಿ ಕೇಶ-ಲೋಮಗಳು ಹೇಗೆ ಹುಟ್ಟುವುವೋ ಹಾಗಿರುವುವು. ಇದರಂತೆಯೇ ಪರಮಾತ್ಮವು ಅನಾಯಾಸವಾಗಿ ಪ್ರಯೋಜನಾಪೇಕ್ಷೆಯಿಲ್ಲದೆ ಜಗತ್ಸರ್ಜನವನ್ನೂ ಮಾಡುವನು.

ಅಕ್ಷರಾಖ್ಯನಾದ ಬ್ರಹ್ಮನು ನಾನು ಪ್ರಪಂಚವನ್ನು ಸೃಷ್ಟಿ ಮಾಡುತ್ತೇನೆ ಎಂಬ ಜ್ಞಾನರೂಪ ವಿಚಾರ ಪರನಾಗಿ ಮೊದಲು ಅನ್ನಾದಿಗಳನ್ನು ಸೃಜಿಸಿ, ಆನಂತರದಲ್ಲಿ ನಿಮಿತ್ತಭೂತವಾದ ಕರ್ಮಗಳನ್ನು ಸೃಷ್ಟಿಸಿ, ಅವುಗಳಿಂದ ಸಾಧ್ಯವಾದ ಸ್ವರ್ಗಾದಿ ಫಲಗಳನ್ನು ಕೊಡುವವನಾದ್ದರಿಂದ ಸರ್ವಕ್ಕೂ ಪರಮಾತ್ಮನೇ ಮುಖ್ಯ ಕಾರಣನೆಂದು ತಿಳಿಯಬೇಕು.

ಜಡವಾದ ಮೃದಾದಿಗಳೇ ಘಟಾದ್ಯಾತ್ಮನ ಪರಿಣಿತವಾಗುವುದೇ ಹೊರ್ತು, ಚೇತನಗಳಿಗೆ ಪರಿಣಾಮವಿಲ್ಲ. ಪರಮಾತ್ಮನು ವಿಚಾರ ಮಾಡಿದನು ಎಂಬುವುದರಿಂದ ಅವನು ಚೇತನನೆಂದು ತಿಳಿಯುವುದು. ಆದ್ದರಿಂದ ಅವನೇ ಜಗತ್ತಾಗಿ ಪರಿಣಿತವಾಗುತ್ತಾನೆಂಬ ವಾದವು ಅನುಪಪನ್ನವು.

ಪರಮಾತ್ಮನು ಯಾವಾಗಲೂ ಸಾಮಾನ್ಯ ವಿಶೇಷ ವಿಷಯಕವಾದ ಜ್ಞಾನವುಳ್ಳವನು, ಮತ್ತು ಯಾವಾಗಲೂ ಪೂರ್ಣ ಕಾಮನು. ಆದ್ದರಿಂದಲೇ ಇವನ ತಪಸ್ಸು ಎಂಬುದು ಆಲೋಚನಾತ್ಮಕವು.

ಲೋಕದಲ್ಲಿ ಯಾರು ಅಜ್ಞರೋ ಅವರೇ ಆಲೋಚಿಸುವರು. ಯಾರು ಸರ್ವ ಕಾಮವನ್ನೂ ಹೊಂದುವುದಿಲ್ಲವೋ ಅವರೇ ಸಂತಾಪ ಪಡುವವರು. ಪರಮಾತ್ಮನಾದರೋ ಸರ್ವಜ್ಞನೂ, ಪೂರ್ಣ ಕಾಮನೂ ಆದುದರಿಂದ ಈತನು ಆಲೋಚಿಸುವವನೂ ಅಲ್ಲ ಮತ್ತು ತಪಿಸುವವನೂ ಅಲ್ಲ ಎಂದು ತಿಳಿಯಬೇಕು.

ಪರಮಾತ್ಮನ ಜ್ಞಾನವು ನಿತ್ಯಸಿದ್ಧ ಸರ್ವವಿಷಯಕವಾದರೂ, ಕಾಲ ವಿಶೇಷದಲ್ಲಿ ಸರ್ಜನೇಚ್ಛಾರೂಪ ವಿಶೇಷಾತ್ಮಕವಾಗಿ ಅಭಿವ್ಯಕ್ತವಗುವುದು. ಇಂಥ ಸರ್ವಜ್ಞನಾದ ಪರಮಾತ್ಮನ ದೆಶೆಯಿಂದ ಶಬ್ದ ಪ್ರಪಂಚ ಮತ್ತು ಅರ್ಥ ಪ್ರಪಂಚ ಇವುಗಳಿಗೆ ಅಭಿಮಾನಿಯಾದ ಚತುರ್ಮುಖ ಬ್ರಹ್ಮನು ಮೊದಲು ಹುಟ್ಟಿದನು. ಪರವಿದ್ಯಾ ವಿಷಯವಾದ ಅಕ್ಷರವು ಅದೃಶ್ಯತ್ವಾದಿ ಗುಣವುಳ್ಳದ್ದು. ಇದು ಅಪರಾಧೀನ ಸ್ವರೂಪವೂ, ಸ್ವತಂತ್ರವೂ ಮತ್ತು ಸರ್ವಸತ್ತಾಪ್ರದವೂ ಆದದ್ದು.

ಜ್ಞಾನಿಗಳು ಋಗಾದಿ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಕರ್ಮಗಳನ್ನು ಸಮಾಧಿ ಕಾಲದಲ್ಲಿ ಮನಸ್ಸಿನಿಂದಲೇ ನೋಡುವರು. ಈ ಕರ್ಮಗಳೆಲ್ಲಾ ಕೃತಯುಗದಲ್ಲಿ ವಿಷ್ಣು ಮಾತ್ರ ವಿಷಯಗಳಾಗಿದ್ದವು. ತ್ರೇತಾಯುಗದಲ್ಲಿ ಕೃತಯುಗದಂತೆ ವಿಷ್ಣು ಮಾತ್ರ ವಿಷಯಕವಲ್ಲದೇ, ನಾನಾ ಪ್ರಕಾರವಾಗಿ ಆಯಾಯ ದೇವತೆಗಳನ್ನೇ ಬೇರೆಬೇರೆಯಾಗಿ ಉದ್ದೇಶಿಸಿ, ಕರ್ಮಗಳನ್ನು ಮಾಡಿ ಅವುಗಳನ್ನು ವಿಷ್ಣುವಿನಲ್ಲಿ ಸಮರ್ಪಿಸುತ್ತಿದ್ದರಾದುದರಿಂದ ಬಹುವಿಧವಾಗಿ ಪ್ರವರ್ತಕವಾದವು. ಆದ್ದರಿಂದ ಭಗವದ್ಜ್ಞಾನಾಪೇಕ್ಷಗಳಾದ ಅಧಿಕಾರಿಗಳೇ ! ನೀವೂ ಆ ಕರ್ಮಗಳನ್ನು ನಿಯತವಾಗಿ ಆಚರಿಸಿರಿ ! ಇದರಿಂದ ಆ ಕರ್ಮಗಳು ಅಂತಃಕರಣ ಶುದ್ಧಿಯನ್ನು ಹೊಂದಿಸಿ, ಬ್ರಹ್ಮಜ್ಞಾನ ಹೇತುವಾದ ಶ್ರವಣಾದಿಗಳಿಗೆ ಅಂಗವಾಗಿ ಬ್ರಹ್ಮಜ್ಞಾನವನ್ನು ಹುಟ್ಟಿಸಿ, ಅನಂತ ಫಲಗಳನ್ನೀಯುವುವು. ಆದರೆ ಋಗಾದಿ ಶಾಸ್ತ್ರವು ಅಮುಖ್ಯ ವೃತ್ತಿಯಿಂದ ಕರ್ಮದೇವತಾದಿ ಸ್ವರೂಪ ಪ್ರತಿಪಾದಕವಾಗಿದ್ದರೂ ಇದಕ್ಕೆ ಪರಮ ಮುಖ್ಯ ವೃತ್ತಿಯಿಂದ ಅಕ್ಷರ ಬೋಧಕತ್ವವು ಸಂಭವಿಸುವುದರಿಂದ ಇದೇ **ಪರವಿದ್ಯೆ** ಎನಿಸಿಕೊಳ್ಳುವುದು.

ತತ್ವಸಾರದ ಬ್ರಹ್ಮವಿದ್ಯಾ ಎಂಬ ಮೊದಲನೆಯ ಪ್ರಕರಣವು ಸಂಪೂರ್ಣವು

೨೪. ಧ್ಯಾನ ಪ್ರಕರಣ

ಸಂಪುಟ ೧೦ ಸಂಚಿಕೆ ೪ ಪ್ರಮಾಥಿ ಆಷಾಢ ಜುಲೈ ೧೯೩೯

ಮೋಕ್ಷಾಪೇಕ್ಷೆಯುಳ್ಳ ಅಧಿಕಾರಿಯು ನದ್ಯಾದಿಗಳಲ್ಲಿ ಸ್ನಾನ ಮಾಡಿ, ಏಕಾಂತ ಸ್ಥಳದಲ್ಲಿ ಮೃದುವಾದ ಕುಶ ಅಥವಾ ಕೃಷ್ಣಾಜಿನ ವಸ್ತ್ರರೂಪವಾದ ಆಸನ ಕಲ್ಪಿಸಿಕೊಂಡು, ಪದ್ಮಾಸನ, ವೀರಾಸನ, ಸ್ವಸ್ತಿಕಾಸನ, ಶರೀರಾಸನದಿಂದ ಯುಕ್ತನಾಗಿ, ಬಹಿರ್ಗತ ಆಸನದಲ್ಲಿ ನಿಶ್ಚಲನಾಗಿ ಕುಳಿತು, ಭೂತೋಚ್ಚಾಟನಾದಿ ತತ್ವನ್ಯಾಸಾದಿ ಕ್ರಮಗಳನ್ನು ಮಾಡಿಕೊಂಡು, ಎರಡು ತೊಡೆಯ ಮೇಲೆಯೂ ಎರಡು ಕೈಗಳನ್ನಿಟ್ಟು, ಹೃದಯದಲ್ಲಿ ಕರಣ,ಮನಸ್ಸು,ವಾಕ್ಕು ಇವುಗಳ ವ್ಯಾಪಾರವನ್ನು ತ್ಯಜಿಸಿ ಹೃದಯದಲ್ಲಿಯೂ, ಕರಣದಲ್ಲಿಯೂ ಮನಸ್ಸಿನಲ್ಲಿಯೂ, ವಾಕ್ಕಿನಲ್ಲಿಯೂ ಸ್ಪಷ್ಟ ಪ್ರತಿಮೆಯನ್ನು ದೃಢವಾಗಿ ಸ್ಥಾಪನೆ ಮಾಡಿಕೊಂಡು, ಸ್ಥಾಪನೆ ಮಾಡಿದ ಪ್ರತಿಮೆಯನ್ನು ಜ್ಞಾನಚಕ್ಷುಸ್ಸಿನಿಂದ ನೋಡುವಂಥವನಾಗಿ ಧ್ಯಾನಾಭ್ಯಾಸವನ್ನು ಮಾಡಬೇಕು. ತನ್ನ ಶಕ್ತ್ಯನುಸಾರ ರೇಚಕ,ಪೂರಕ,ಕುಂಭಕ ಕ್ರಮೇಣ ವಾಯುಧಾರಣಾನಂತರದಲ್ಲಿ ಧ್ಯಾನ ಮಾಡಬೇಕು.

ನಂತರ ಹೃದಯದಲ್ಲಿ ವಿದ್ಯಮಾನವಾದ ಅಧೋಮುಖವಾಗಿರತಕ್ಕ ಅಷ್ಟ ಪತ್ರದಿಂದ ಯುಕ್ತವಾದ ಹೃತ್ಕಮಲವನ್ನು ಪ್ರಣವಮಂತ್ರದಿಂದ ಉರ್ಧ್ವಮುಖವನ್ನು ಮಾಡಿ, ನಂತರ ಜ್ಞಾನಾರ್ಕನಿಂದ ಅರಳಿಸಿ ತನ್ಮಧ್ಯದಲ್ಲಿ ವಿದ್ಯಮಾನವಾದ ಕರ್ಣಿಕೆಯಲ್ಲಿ ಸೂರ್ಯ ಮಂಡಲವನ್ನೂ, ಅದರ ಮೇಲೆ ಚಂದ್ರಮಂಡಲವನ್ನೂ, ಅದರ ಮೇಲೆ ತ್ರಿಕೋಣಾಕಾರ ಅಗ್ನಿಮಂಡಲವನ್ನೂ, ಧ್ಯಾನಮಾಡಿ, ಆ ಅಗ್ನಿಜ್ವಾಲೆಯಲ್ಲಿ ರಮಾರೂಪಾತ್ಮಕವಾದ ದಿವ್ಯ ರತ್ನಮಯವಾದ ಮಂಟಪವನ್ನು ಚಿಂತಿಸಿ, ಆ ಮಂಟಪ ಮಧ್ಯದಲ್ಲಿ, ದಿವ್ಯ ರತ್ನಖಚಿತ ಸುವರ್ಣಾತ್ಮಕವಾದ ಪೀಠವನ್ನು ಸ್ಮರಿಸಿ ನಂತರ ಪೀಠದೇವತೆಗಳನ್ನೂ ಮತ್ತು ಪರದೇವತೆಗಳನ್ನೂ ಸಹ ಆವಾಹನೆ ಮಾಡಿ, ಆ ಪೀಠದ ಮೇಲೆ ಷಟ್ಕೋಣ ಕಮಲವನ್ನು ಧ್ಯಾನಿಸಿ, ಕೋಣಗಳಲ್ಲಿ ದೇವರ ಅಗ್ರಭಾಗದ ದಕ್ಷಿಣದಲ್ಲಿ ಸೂರ್ಯನನ್ನೂ, ಸವ್ಯದಲ್ಲಿ ಚಂದ್ರನನ್ನೂ, ಮುಂಭಾಗದಲ್ಲಿ ಅಗ್ನಿಯನ್ನೂ ಪ್ರಕಾಶ ಮಾಡಿ, ನಂತರ ಸೂರ್ಯಾಗ್ನಿ ಚಂದ್ರರನ್ನು ಧ್ಯಾನಿಸಿ ಪರಮಾತ್ಮನ ಸವ್ಯಭಾಗದಲ್ಲಿ ಶ್ರೀದೇವಿಯನ್ನೂ, ದಕ್ಷಿಣ ಭಾಗದಲ್ಲಿ ಭೂದೇವಿಯನ್ನೂ, ಹಿಂಭಾಗದಲ್ಲಿ ದುರ್ಗಾದೇವಿಯನ್ನೂ ಧ್ಯಾನಿಸಬೇಕು.

ಷಟ್ಕೋಣಾತ್ಮಕ ಭೂಮಿಯಲ್ಲಿ ರಮಾರೂಪಾತ್ಮಕ ಅಷ್ಟದಳ ಕಮಲವನ್ನು ಚಿಂತಿಸಿ, ಪದ್ಮದಳದಲ್ಲಿ ಸೂರ್ಯನನ್ನೂ, ಕೇಸರೀದಳದಲ್ಲಿ ಚಂದ್ರನನ್ನೂ, ಕರ್ಣಿಕಾದಲ್ಲಿ ಅಗ್ನಿಯನ್ನೂ ಧ್ಯಾನಿಸಿ, ಪ್ರತ್ಯೇಕವಾಗಿ ರಮಾದಿಗಳಲ್ಲಿ, ಮಧ್ಯೆ ಕರ್ಣಿಕಾದಲ್ಲಿ ವಿಮಲ, ಉತ್ಕರ್ಷಣ, ಜ್ಞಾನ, ಕ್ರಿಯಾ, ಯೋಗ, ಪ್ರಹ್ವಿ, ಸತ್ಯ, ಈಶಾನ ಅನುಗ್ರಹ ಇತ್ಯಾದಿ ಪರಮಾತ್ಮ ಭೂತ ನವಶಕ್ತಿಗಳನ್ನು ಧ್ಯಾನಿಸಬೇಕು.

ನಂತರ ಛತ್ರ, ಚಾಮರ, ದರ್ಪಣ, ವ್ಯಜನ, ಗೀತ, ವಾದ್ಯ ನೃತ್ಯ, ಸ್ತೋತ್ರಾದಿಗಳನ್ನು ಚಿಂತಿಸಿ, ನಂತರ ಆತ್ಮ-ಅಂತರಾತ್ಮ-ಪರಮಾತ್ಮ-ಜ್ಞಾನಾತ್ಮ ಎಂದು ಸೋಪಾನ ದೇವಾತಾತ್ಮಕವಾದ ಪರಮಾತ್ಮ ಮೂರ್ತಿಗಳನ್ನು ಧ್ಯಾನ ಮಾಡಿ, ತತ್ಸಮೀಪದಲ್ಲಿ ಸ್ವರೂಪಲಕ್ಷ್ಮೀಯನ್ನು ಧ್ಯಾನಮಾಡಿ ಅಲ್ಲಿ ಸ್ವರೂಪ ಹೃದಯದಲ್ಲಿ ಸ್ಥಿತನಾದ ಸ್ವರೂಪಾಂಗುಟ ಪರಿಮಿತವಾದ ಬಿಂಬಾಖ್ಯನಾದ ಹರಿಯನ್ನೂ, ಬಾಹ್ಯಹೃದಯದಲ್ಲಿ, ಬಾಹ್ಯಾಂಗುಷ್ಟ ಪರಿಮಿತವಾದ ಹರಿಯ ಪೃಷ್ಟಭಾಗದಲ್ಲಿ ಹೃತ್ಕಮಲ ವ್ಯಾಪ್ತನಾದ ಪ್ರಾದೇಶ ಪರಿಮಿತನನ್ನೂ, ಕಮಲದ ಅಧೋಭಾಗದ ಕರ್ಣಿಕಾ ಮೂಲಗತನಾದ ಅಂಗುಷ್ಠಾಗ್ರ ಪೂರ್ಣನಾದ ಪರಮಾತ್ಮನನ್ನು ಧ್ಯಾನಿಸಬೇಕು. ತಂತ್ರ ಸಾರೋಕ್ತ ಆವರಣ ದೇವತಾ ಸಹಿತನಾಗಿಯಾಗಲೀ, ಉದಾದಿತ್ಯ ವರ್ಣಂ-ಮೇಘಶ್ಯಾಮಂ ಇವುಗಳಲ್ಲಿ ಯಾವುದನ್ನಾದರೂ ಗುರುಗಳ ಉಪದೇಶಾನುಸಾರ ಅಂತರಂಗದಲ್ಲಿ ಧ್ಯಾನ ಮಾಡತಕ್ಕದ್ದು.

ವಾಸನಾಮಯ ಪ್ರತೀತ್ಯನಂತರ ಆ ಪ್ರತಿಮೆಯನ್ನು ವಾಸನಾಮಯಾತ್ಮಕವಾದ ಅಗ್ರೋದಕ, ಗಂಧ, ಪುಷ್ಪ, ತುಲಸಿ, ಅರ್ಘ್ಯಾದಿ ನೈವೇದ್ಯ, ತಾಂಬೂಲ ಸುವರ್ಣ ಪುಷ್ಪಾದಿಗಳಿಂದ ಮನಸ್ಸಿನಿಂದ ನಿರ್ಮಿಸಿ ಪೂಜೆಯನ್ನು ಮಾಡಬೇಕು. ಈ ವಾಸನಾಮಯಾಂತಸ್ಥಿತ ಪರಮಾತ್ಮನನ್ನು ನಿರ್ದೋಷ ಜ್ಞಾನಾನಂದಾತ್ಮಕನೆಂದು ಧ್ಯಾನಿಸಬೇಕು. ಈ ಧ್ಯಾನವು ಸ್ವರೂಪಜ್ಞರಾದ ಗುರುಗಳ ದರ್ಶನದವರಿವಿಗೂ ಮಾಡಿ, ನಂತರ ಆ ಗುರುಗಳಿಂದ ಉಪದಿಷ್ಟಿತ ಪ್ರಕಾರ ಮೋಕ್ಷಪರಿಯಂತರ ಮಾಡಬೇಕು. ಅಪರೋಕ್ಷ ಜ್ಞಾನಾನಂತರ ಮೋಕ್ಷದಲ್ಲಿ ಆನಂದಾಭಿವೃದ್ಯರ್ಥವಾಗಿ ಧ್ಯಾನ ಮಾಡಬೇಕು. ಧ್ಯಾನ ಸಮಾಪ್ತಿಯಾದ ನಂತರದಲ್ಲಿ ಸಂಪುಟಾಕಾರವಾಗಿ ತತ್ವನ್ಯಾಸ – ಮಾತೃಕನ್ಯಾಸವನ್ನು ಮಾಡಿ ಶ್ರೀಹರಿಗೆ ಸಮರ್ಪಿಸಬೇಕು ಎಂಬಲ್ಲಿ ಪ್ರಮಾಣ.

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾವಾನುಸೃತ ಸ್ವಭಾವಾತ್।
ಕರೋತಿ ಯದ್ಯತ್ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯೇತತ್ ॥

ಇನ್ನು ಧ್ಯಾನಾಂಗದ ಲಕ್ಷಣವನ್ನು ಹೇಳುವುದು.

ಯಾಮಾದಿ ಪ್ರತ್ಯಾಹಾರ–ಮಿತಾಹಾರಾದಿಗಳಿಂದ ಶ್ರೀತುಲಸಿ–ಗಂಧ–ಪುಷ್ಪಾದಿ ಪೂಜಾಸಾಧನ ಪದಾರ್ಥಗಳನ್ನು ಸಂಪಾದಿಸಿಕೊಂಡು, ವೇದ ತಂತ್ರ ಸಾರೋಕ್ತ ಪ್ರಕಾರದಿಂದ ವಿಷ್ಣುವಿನ ಮಹಾಪೂಜೆಯನ್ನು ಮಾಡಬೇಕು.

ತುಳಸಿಯನ್ನು ತರುವ ನಿಷಿದ್ಧ ದಿನಗಳು ಯಾವುವೆಂದರೆ –

ಭಾನುವಾರ	ಶುಕ್ರವಾರ	ಮಂಗಳವಾರ
ದ್ವಾದಶಿ	ಪೌರ್ಣಿಮೆ	ಅಮಾವಾಸ್ಯೆ
ವ್ಯತೀಪಾತ	ವೈಧೃತಿ	ಮಧ್ಯಾನ್ಹ ಸಾಯಾನ್ಹ ಗ್ರಹಣ

ಸ್ನಾನ ಮಾಡದೆ ತುಲಸಿಯನ್ನು ಬಿಡಿಸಬಾರದು ಮತ್ತು ಅದನ್ನು ಕ್ರಯಕ್ಕೆ ತರಬಾರದು.

ನದ್ಯಾದಿಗಳಲ್ಲಿ ಸ್ನಾನ ಮಾಡಿ ಮನೆಗೆ ಬಂದ ತರುವಾಯ ಪಾದ ಪ್ರಕ್ಷಾಳನೆ ಮಾಡಿಕೊಂಡು ನಾಲ್ಕಾವರ್ತಿ ಗಂಡೂಷಣ (ಬಾಯಿ ಮುಕ್ಕಳಿಸುವುದು) ನಂತರ ಅಚಮ್ಯ ಹಸ್ತ ಪ್ರಕ್ಷಾದಿಗಳನ್ನು ಮಾಡಿಕೊಂಡು ದೇವರ ಮನೆಯ ಸಮೀಪಕ್ಕೆ ಬಂದು, ಬಲಪಾದ ಪುರಸ್ಕರನಾಗಿ, ಹೊಸಲನ್ನು ಸ್ಪರ್ಶಿಸಿ, ದೇವರ ಮನೆಯನ್ನು ಪ್ರವೇಶಿಸಬೇಕು. ನಂತರ ದ್ವಾರಪಾಲಕರಿಗೂ, ಬ್ರಹ್ಮಾದಿ ಪುಷ್ಕರಾಂತ ದೇವತೆಗಳಿಗೂ ನಮಸ್ಕರಿಸಿ "ನಮೋಬ್ರಹ್ಮಣ್ಯ ದೇವಾಯ" ಎಂಬ ಮಂತ್ರದಿಂದ ಭಗವಂತನನ್ನು ವಂದಿಸಿ, ತರುವಾಯ ದೀಪಸ್ತಂಭದಲ್ಲಿ ವಿದ್ಯಮಾನವಾದ ದೀಪವನ್ನು 'ವಾಯು ವಾಯಾ' ಎಂಬ ಮಂತ್ರದಿಂದ ಚಾಚಿ, ದೇವರಿಗೆ ಅಭಿಮುಖನಾಗಿ ಕುಳಿತು ದೇವರಿಗೆ ವಿಜ್ಞಾಪಿಸಿಕೊಳ್ಳಬೇಕು.

(ಮುಂದುವರೆದುದು)

ಸಂಪುಟ ೧೦ ಸಂಚಿಕೆ ೫ ಪ್ರಮಾಥಿ ನಿಜ ಶ್ರಾವಣ ಆಗಸ್ಟ್ ೧೯೯೯

ದೇವರಿಗೆ ವಿಜ್ಞಾಪಿಸಿಕೊಳ್ಳುವುದೇನೆಂದರೆ :–

"ನನ್ನ ಅಸ್ವತಂತ್ರಾದಿ, ಅಲ್ಪ ಗುಣಾದಿಗಳಿಂದ ಕಾಯೇನ
ವಾಚಾ ಮನಸಾ ಇವುಗಳಿರಿದ ಮಾಡಲ್ಪಟ್ಟಿರುವುದೆಲ್ಲವೂ ನಿನ್ನ
ಅನುಗ್ರಹದಿಂದ ಆದದ್ದೇ ಹೊರತು ನನ್ನಿಂದ ಲೇಶವೂ ನಡೆಯವು".

ಹೀಗೆ ವಿಜ್ಞಾಪಿಸಿಕೊಂಡ ನಂತರ ಘಂಟಾನಾದ ಮಾಡಿ,

ಶಾಲಿಗ್ರಾಮ ನಿವಾಸಾಯ ಕ್ಷೀರಾಬ್ಧಿ ಶಯನಾಯ ಚ ।
ಶ್ರೀಶೈಲಾದ್ರಿ ನಿವಾಸಾಯ ಶಿಲಾವಾಸಾಯ ತೇ ನಮಃ ॥

ಮೇಲ್ಕಂಡ ಮಂತ್ರದಿಂದ ಸಾಲಿಗ್ರಾಮವನ್ನು ಸ್ಪರ್ಶಿಸಿ ನಮಸ್ಕರಿಸಿ ಐದು ಬೆರಳುಗಳ ಅಗ್ರಭಾಗದಿಂದ ನಿರ್ಮಾಲ್ಯವನ್ನು ತೆಗೆದು, ಸ್ನಾನ ಪಾತ್ರೆಯಲ್ಲಿ ದೇವರನ್ನು ಸ್ಥಾಪಿಸಿ, ಅಗ್ರೋದಕ ಕಲಶವನ್ನು ಮೂಲ ಮಂತ್ರದಿಂದ ಅಭಿಮಂತ್ರಿಸಿ, ಶ್ರೀಸೂಕ್ತದಿಂದಾಗಲೀ, ಅಂಭ್ರಣೀ

ಸೂಕ್ತದಿಂದಾಗಲೀ, ನಿರ್ಮಾಲ್ಯ ವಿಸರ್ಜನೆ ಮಾಡಬೇಕು. ಕಲಶದಲ್ಲಿ ಉಳಿದ ಉದಕದಿಂದಲೇ ಆಗಲಿ, ನಿರ್ಮಾಲ್ಯ ವಿಸರ್ಜನ ಉದಕದಿಂದಲೇ ಆಗಲಿ, ಮುಖ್ಯ ಪ್ರಾಣಾಭಿಷೇಕವನ್ನು ಮಾಡಿ ಮುಖ್ಯಪ್ರಾಣರನ್ನು,

ಶ್ರೀಹನುಮತೇನಮಃ । ನಮಸ್ತೇ ಪ್ರಾಣೇಶ ಇತ್ಯಾದಿ

ಮಂತ್ರದಿಂದ ಸ್ತೋತ್ರ ಮಾಡಿ, ತರುವಾಯ ಸ್ನಾನ ಪಾತ್ರೆಯಲ್ಲಿ ತ್ರಿರೂಪಾತ್ಮಕ ವಾಯುದೇವರನ್ನು ಸ್ಥಾಪಿಸಿ ಸಂಕಲ್ಪ ಮಾಡಿ, ಬಳಿತ್ಥಾಸೂಕ್ತ – ವಾಯುಸ್ತುತಿ ಇತ್ಯಾದಿಗಳಿಂದ ಅಭಿಷೇಕ ಮಾಡಿ, ನಂತರ ಗರುಡ–ಶೇಷ–ರುದ್ರರನ್ನು ಅಭಿಷೇಕಿಸಿ, ತರುವಾಯ ಟೀಕಾಕೃತ್ಪಾದರನ್ನು ಅಭಿಷೇಕ ಮಾಡಿ, ತದನಂತರ ರಾಘವೇಂದ್ರ ಗುರುಗಳ ಅಭಿಷೇಕವನ್ನು ರಾಘವೇಂದ್ರ ಸ್ತೋತ್ರದಿಂದ ಮಾಡಬೇಕು.

ನಂತರ ಮಂಟಪ ಧ್ಯಾನಮಾಡಿ, ಕಲಶಪೂಜೆ, ಶಂಖಪೂಜೆ, ಪೀಠಪೂಜೆಯನ್ನು ಮಾಡಿ **"ಹರೇಃ ಸ್ನಾನಾರ್ಥಂ ಆಗಚ್ಛೇತ್"** ಎಂದು ಪರಮಾತ್ಮನನ್ನು ಸ್ನಾನಕ್ಕಾಗಿ ವಿಜ್ಞಾಪಿಸಿ **"ಇದಂ ವಿಷ್ಣು"** ಎಂಬ ಮಂತ್ರದಿಂದ ಪಾದುಕವನ್ನು ಕೊಟ್ಟು **"ಭದ್ರಂ ಕರ್ಣೇಭಿಃ"** ಎಂಬ ಮಂತ್ರದಿಂದ ಸ್ನಾನಪಾತ್ರೆಯಲ್ಲಿ ಸ್ವಾಮಿಯನ್ನು ಕೂಡಿಸಿ, **ಲಕ್ಷ್ಮೀ** ಹಸ್ತದಿಂದ **ಅರ್ಘ್ಯ**ವನ್ನೂ, ಸರಸ್ವತೀ ಹಸ್ತದಿಂದ ಪಾದ್ಯವನ್ನೂ, ರತೀ ಹಸ್ತದಿಂದ ಆಚಮನವನ್ನೂ, ಪಿತಾಮಹ ಹಸ್ತದಿಂದ ಮಧುಪರ್ಕವನ್ನೂ, ಶಾಂತಿಹಸ್ತದಿಂದ ಪುನರಾಚಮನವನ್ನೂ ಸಹ ಜ್ಞಾನದೃಷ್ಟಿಯಿಂದ ಮನಸಾ ಅನುಸಂಧಾನಿಸಿ, ಈ ಪ್ರಕಾರ ಅರ್ಘ್ಯಾದಿಗಳನ್ನು ಪರಮಾತ್ಮನಿಗೆ ಕೊಡುತ್ತಾರೆಂದು ಚಿಂತಿಸಬೇಕು.

ಕ್ಷೀರ–ದಧಿ–ಶರ್ಕರಾದಿ **ಪಂಚಾಮೃತ** ಅಭಿಷೇಕವನ್ನು ಮಹಾಮಂತ್ರಾದಿಗಳಿಂದ ಮಾಡಿ ಕೃತಾರ್ಥನಾಗಬೇಕು. ಪಂಚಾಮೃತಾಭಿಷೇಕ ನಂತರ **ಶುದ್ಧೋದಕ** ಸ್ನಾನ ಮಾಡಿಸಿ, ತರುವಾಯ **' ಓಂ ನಮೋ ನಾರಾಣಾಯ' ಸ್ನಾನಂ ಸಮರ್ಪಯಾಮಿ** ಎಂದು ನುಡಿದು, **ಆಚಮನೀಯಂ ಸಮರ್ಪಯಾಮಿ** ಎಂದು ಉದ್ಧರಣೆಯಲ್ಲಿ ಉದಕವನ್ನು ತೆಗೆದುಕೊಂಡು ಉದಕಾಂತರದಲ್ಲಿ ದ್ರವರೂಪಿ ಪರಮಾತ್ಮನನ್ನು ಅನುಸಂಧಾನಿಸಿ ಕೊಡಬೇಕು.

ಓಂ ನಮೋ ನಾರಾಯಣಾಯ **ವಸ್ತ್ರೋಪವಸ್ತ್ರಾರ್ಥಂ** ತುಳಸೀ ಪತ್ರಂ ಸಮರ್ಪಯಾಮಿ.

ಓಂ **ಆಭರಣಾರ್ಥಂ** ತುಲಸೀ ಪತ್ರಂ ಸಮರ್ಪಯಾಮಿ.

ಆಯಾಯ ಮಂತ್ರದಿಂದ **ಯಜ್ಞೋಪವೀತಾರ್ಥಂ** ತುಲಸೀ ಪತ್ರಂ ಸಮರ್ಪಯಾಮಿ ಎಂದು ಮಾತೃಕನ್ಯಾಸ ತತ್ವನ್ಯಾಸ ರೂಪಕವಾಗಿ ಸಮರ್ಪಿಸಬೇಕು.

ನಂತರ **ಗಂಧ-ಅಕ್ಷತೆಯನ್ನು** ಸಮರ್ಪಿಸಿ, **ಪುಷ್ಪಮಾಲಾದಿಗಳಿಂದ** ಅಲಂಕರಿಸಿ ಬ್ರಹ್ಮಸೂತ್ರ-ವಿಷ್ಣು ಸಹಸ್ರನಾಮಾದಿಗಳಿಂದ ತುಳಸಿಯನ್ನು ಸಮರ್ಪಿಸಿ **ಆವರಣ ಪೂಜೆಯನ್ನು** ಮಾಡಿ, **ಧೂಪಾರ್ತಿ-ಏಕಾರ್ತಿ ದೀಪಗಳನ್ನು** ಅರ್ಪಿಸಬೇಕು. ನೈವೇದ್ಯ ಸಮರ್ಪಣ ಕಾಲದಲ್ಲಿ ದ್ವಾದಶ ಸ್ತೋತ್ರ ಪಠಿಸಬೇಕು.

ನೈವೇದ್ಯ ವಿಚಾರ

ದೇವರ ಮುಂಭಾಗದಲ್ಲಿಯೂ ಮತ್ತು ದಕ್ಷಿಣ ಭಾಗದಲ್ಲಿಯೂ ಗೋಮಯದಿಂದ ಚೌಕನೆಯ ಮಂಡಲವನ್ನು ಮಾಡಿ, ರಂಗವಲ್ಲಿಯನ್ನು ಹಾಕಿ, ಶ್ರೀಕಾರವನ್ನು ಬರೆದು ಮುಂಭಾಗದ ಮಂಡಲದಲ್ಲಿ ಭಕ್ಷ್ಯ ಭೋಜ್ಯಾದಿ ನೈವೇದ್ಯವನ್ನಿಟ್ಟು, ದಕ್ಷಿಣಭಾಗದ ಮಂಡಲದಲ್ಲಿ ಲವಣಾದಿ ವ್ಯಂಜನ ಪದಾರ್ಥವನ್ನಿಟ್ಟು, ಅವುಗಳಿಗೆ ತುಳಸೀದಳವನ್ನು ಹಾಕಿ, ತಾರ್ಕ್ಷ್ಯ ಮುದ್ರಾದಿಗಳನ್ನು ತೋರಿಸಿ, ಶಂಖೋದಕದಿಂದ ಗಾಯತ್ರೀ ಮಂತ್ರದಿಂದ ಪ್ರೋಕ್ಷಿಸಬೇಕು.

ಓಂ ನಮೋ ನಾರಾಯಣಾಯ-ಓಂ ಸೌಪರ್ಣೇತ್ಯಾದಿ

ಎಂಬ ಮಂತ್ರಗಳಿಂದ ಉಕ್ತರೀತಿ ಮನಸ್ಸಿನಲ್ಲಿ ನೀವೇದನ ಪದಾರ್ಥದ ತದಭಿಮಾನಿಗಳ ದ್ವಾರಾ **ಸ್ವಹೃದಯಸ್ಥಿತ ಬಿಂಬಾಭಿನ್ನ ಪ್ರತಿಮಾಂತಸ್ಥಿತ** ಭಾರತೀರಮಣ ಮುಖ್ಯಪ್ರಾಣಾಂತರ್ಗತನಿಗೆ ಸಮರ್ಪಿಸಿ, ಚಿಂತನಾನಂತರ "ಸತ್ಯಂ ತ್ವರ್ತೇನ ಪರಿಷಂಚಾಮಿ" ಇತ್ಯಾದಿ ಮಂತ್ರದಿಂದ ಪಾತ್ರಾಂತರದಲ್ಲಿ ಉದಕವನ್ನು ಬಿಡಬೇಕು ಮತ್ತು ಈ ಕೆಳಗಿನ ಮಂತ್ರವನ್ನುಚ್ಚರಿಸುತ್ತಾ ಪುಷ್ಪ ಪಿಡಿದು ಸ್ತೋತ್ರ ಮಾಡಿ, ಆ ಪುಷ್ಪವನ್ನು ದೇವರಿಗೆ ಸಮರ್ಪಿಸಬೇಕು.

ತ್ವಂ ಸರ್ವಯಜ್ಞ ಭೋಕ್ತಾ । ತ್ವಂ ಸರ್ವಾಂತರ್ಯಾಮಿ ಸರ್ವಗಃ
ತ್ವಮೇವ ಜಗದಾಧೀಶ । ಸ್ತ್ವದಧೀನ ಸ್ತ್ವದಾಜ್ಞಯಾ ॥

ಎಂದು ಬಡಿಸತಕ್ಕವರ ಹೆಸರನ್ನು ಹೇಳಬೇಕು.

ಲಕ್ಷ್ಮೀದೇವಿಯರು ಬಡಿಸುತ್ತಿರುವರು
ವಾಯುದೇವರು ಚಾಮರವನ್ನು ಬೀಸುವರು
ಭಾರತ್ಯಾದಿಗಳು ಪರಿಚರಿಸುವರು.

ಹೀಗೆಂದು ನುಡಿಯುತ್ತಾ, ಆ ಕಾಲದಲ್ಲಿ ದೇವರು ಭೋಜನ ಮಾಡುತ್ತಿರುವರೆಂದು ಚಿಂತಿಸಿ, ೧೦೮ ಆವರ್ತಿ "ಓಂ ನಮೋ ನಾರಾಯಣಾಯ" ಎಂಬ ಮಂತ್ರವನ್ನು ಜಪಿಸಿ, ಅಷ್ಟು ಹೊತ್ತಿಗೆ ದೇವರ ಭೋಜನವಾಯಿತೆಂದು ತಿಳಿದು ಮಧ್ಯೆ ಪಾನಿಯಂ, ಉತ್ತರಾಪೋಶನಂ, ಹಸ್ತ ಪ್ರಕ್ಷಾಳನಂ,ಮುಖಪ್ರಕ್ಷಾಳನಂ, ಚಂದನ ಕರೋದ್ವರ್ತನಂ, ತಾಂಬೂಲಂ, ಸುವರ್ಣ ಪುಷ್ಪ ದಕ್ಷಿಣಾನ್, ನೀರಾಂಜನಂ, ಮಂತ್ರಪುಷ್ಪಂ ಇವುಗಳನ್ನು ಮಂತ್ರೋಚ್ಚಾರಣೆಯಿಂದ

ಸಮರ್ಪಿಸಿ, ಛತ್ರ, ಚಾಮರ, ಆದರ್ಶ, ವಾದ್ಯ, ಗೀತ, ನೃತ್ಯ ಇತ್ಯಾದಿ ರಾಜೋಪಚಾರವನ್ನು ಮಾಡಿ, ಮೂಲಮಂತ್ರದಿಂದ ಅಭಿಮಂತ್ರಿಸಿದ ಉದಕ ಸಹಿತವಾದ ಶಂಖವನ್ನು ಮೊದಲನೆಯ ಆವರ್ತಿ ದೇವರ ಪಾದ ಮೊದಲುಗೊಂಡು ಕಿರೀಟ ಪರ್ಯಂತರವೂ, ಎರಡನೆಯ ಆವರ್ತಿ ನಾಭಿಯಿಂದ ಕಿರೀಟ ಪರ್ಯಂತರವೂ, ಮೂರನೆಯ ಆವರ್ತಿ ಹೃದಯ ಮೊದಲು ಕಿರೀಟ ಪರ್ಯಂತರವೂ ಪ್ರದಕ್ಷಿಣಾಕಾರವಾಗಿ ತಿರುಗಿಸಿ ಆ ಉದಕವನ್ನು ಪಾತ್ರೆಯಲ್ಲಿ ಹಾಕಿ, ಶಂಖವನ್ನಿಟ್ಟು ರಮಾಪೂಜೆಯನ್ನು ಮಾಡಲು, ಪಾತ್ರಾಂತರದಲ್ಲಿ ರಮಾದೇವಿಯರನ್ನು ಆವಾಹನೆ ಮಾಡಿ, ಮಂತ್ರಗಳಿಂದ ಪೂಜಿಸಿ, ತಾರತಮ್ಯ ಸ್ತೋತ್ರವನ್ನು ಪಠಿಸಿ, ಮುಖ್ಯ ಪ್ರಾಣದೇವರಿಗೆ ತೀರ್ಥವನ್ನು ಕೊಟ್ಟು, ಪರಮಾತ್ಮನ ನಿರ್ಮಾಲ್ಯ, ಗಂಧಾದಿಗಳಿಂದ ಪೂಜಿಸಿ, ಸಾಲಿಗ್ರಾಮಾದಿಗಳ ಸ್ಪರ್ಶಮಾಡಿ, ಪ್ರಾರ್ಥಿಸಿ "ಯಸ್ಯಸ್ಮೃತ್ಯಾಚ" ಎಂಬ ಮಂತ್ರದಿಂದ ಸಮಸ್ತ ಪೂಜೋಪಚಾರವನ್ನು ಸಮರ್ಪಿಸಿ, ಕೃಷ್ಣಾರ್ಪಣವೆಂದು ಬ್ರಹ್ಮ ಯಜ್ಞ, ಶಾಂತಿಪೂರ್ವಕ ಪಾಠ ಪ್ರವಚನ, ವೈಶ್ವದೇವ ಮಾಡಬೇಕು. (ಯಾರು ವೈಶ್ವದೇವವಾಗದಿರುವ ಅನ್ನವನ್ನು ಭುಂಜಿಸುವರೋ ಅವರು ಕ್ರಿಮಿಭೋಜನಾನ್ನವನ್ನು ತಿಂದಂತಾಗಿ, ಕಾಕಯೋನಿಯಲ್ಲಿ ಹುಟ್ಟುವರು.)

ನಂತರ ಭೂತಯಜ್ಞವನ್ನು ಮಾಡಿ, ಗೋದೋಹನ ಮಾತ್ರ ಕಾಲ ಬಾಗಿಲಲ್ಲಿ ನಿಂತು ಅತಿಥಿಯನ್ನು ಆಕಾಂಕ್ಷಿಸಿ, ಗುರುಪಾದ ಪ್ರಕ್ಷಾಳನ, ತುಳಸೀಪೂಜಾ, ಗೋಗ್ರಾಸ, ಹಸ್ತೋದಕಗಳನ್ನಾಚರಿಸಿ, ಅತಿಥಿ-ಆಗಂತುಕರನ್ನು ಪೂಜಿಸಿ, ತೀರ್ಥಪ್ರಾಶನ-ಗಂಧ-ಅಂಗಾರ-ಅಕ್ಷತಾದಿಗಳನ್ನು ಧರಿಸಿ, ಮಂಡಲ ಮಾಡಿ ಎಲೆಯನ್ನು ಹಾಕಿ, ಅಭಿಗಾರ (ಪಾತ್ರ್ಯಭಿಗಾರ) ಮಾಡಿ ನಂತರ ಬಡಿಸಬೇಕು. ಅಭಿಗಾರಕ್ಕೆ ಕಬ್ಬಿಣದ ಸೌಟನ್ನು ಉಪಯೋಗಿಸಬಾರದು.

ಮೊದಲು ಉಪ್ಪು, ನಂತರ ಬಲಭಾಗದಲ್ಲಿ ತವ್ವೆ, ಪಾಯಸ, ಎಡಭಾಗಕ್ಕೆ ಭಕ್ಷ್ಯ, ಮಧ್ಯಭಾಗದಲ್ಲಿ ಅನ್ನ, ನಂತರ ಪಾತ್ರಪೂರಿತ ತುಪ್ಪ ಈ ರೀತಿ ಬಡಿಸಿದ ನಂತರ, ಪೂರ್ವಾಭಿಮುಖವಾಗಾಲೀ ಅಥವಾ ಉತ್ತರಾಭಿಮುಖವಾಗಲೀ, ಮಣೆಯಮೇಲಾಗಲೀ ಅಥವಾ ಕುಶಾಸನದ ಮೇಲಾಗಲೀ ಕೂಡಬೇಕು. ಒಂದು ಪಾದವು ಭೂಮಿಗೆ ಸ್ಪರ್ಶಿಸಿರಬೇಕು. ಬಲಗೈ ಮೊಣಕಾಲಿನ ಒಳಪ್ರದೇಶದಲ್ಲಿರಬೇಕೇ ಹೊರತು, ಹೊರಪ್ರದೇಶದಲ್ಲಿರಬಾರದು.

ಉದಕದಿಂದ ಅನ್ನವನ್ನು ಗಾಯತ್ರೀಮಂತ್ರದಿಂದ ಪ್ರೋಕ್ಷಿಸಿ, ಅನ್ನವನ್ನು ಪ್ರಾರ್ಥಿಸಿ, ಬಲಪಾತ್ರದ ದಕ್ಷಿಣಭಾಗದಲ್ಲಿ ದಶಾಂಗುಲ ಸ್ಥಲ ಬಿಟ್ಟು ಚಿತ್ರಬಲಿ ಹಾಕಬೇಕು. ಹಸ್ತದಲ್ಲಿ ತೀರ್ಥವನ್ನು ಹಾಕಿಕೊಂಡು, ಘೃತಮಿಶ್ರಿತವಾದ ಅನ್ನವನ್ನು ಪಂಚಪ್ರಾಣಾಹುತಿ ತೆಗೆದುಕೊಳ್ಳಬೇಕು.

ಒಂದೇ ಸ್ಥಳದಲ್ಲಿರತಕ್ಕ ಅನ್ನವನ್ನು ಐದುಬಾರಿ ತೆಗೆದುಕೊಳ್ಳದೆ, ನಾಲ್ಕುಭಾಗದ ಕಡೆಯ ಮತ್ತು ಊರ್ಧ್ವಭಾಗದ ಅನ್ನವನ್ನು ತೆಗೆದುಕೊಳ್ಳಬೇಕು.

ಭೋಜನ ಕಾಲದಲ್ಲಿ ಮೌನವಾಗಿ ಭುಂಜಿಸಬೇಕು. ಅಂದರೆ, ಭಗವತ್ಸ್ಮರಣಾ ವಿನಹ ಅನ್ಯವಾರ್ತೆಯನ್ನು ಆಡಬಾರದು. ಅನ್ಯವಾರ್ತೆಯಿಂದ ಭೋಜನ ಮಾಡಿದರೆ ಆ ಭೋಜನವು ಮಾಂಸತುಲ್ಯವಾಗುವುದು. ಇಂಥವರ ಪಙ್ತಿಯಲ್ಲಿ ಭೋಜನ ಮಾಡಬಾರದು. ಇಂಥವರನ್ನು ಭೋಜನಕ್ಕೂ ಸಹ ಕರೆಯಬಾರದು.

ನಂತರ ಉತ್ತರಾಪೋಶನ ತೆಗೆದುಕೊಂಡು ಭುಕ್ತಶೇಷವನ್ನು ಭೂಮಿಯಲ್ಲಿ ಹಾಕಿ, ತೃಣದಿಂದ ಹಲ್ಲುಗಳನ್ನು ಚೆನ್ನಾಗಿ ಶೋಧಿಸಿ, ಕೈಕಾಲುಗಳನ್ನು ಮೊಣಕಾಲವರಿವಿಗೂ, ತೊಳೆದುಕೊಂಡು, ೧೨ ಆವರ್ತಿ ಬಾಯಿ ಮುಕ್ಕಳಿಸಿ, ಆಚಮ್ಯಮಾಡಬೇಕು. ವಿಷ್ಣುರರ್ಪಿತವಾದ ತುಳಸೀದಳವನ್ನು ಧರಿಸಿ, ವಿಷ್ಣು ಸಹಸ್ರನಾಮ – ಜಿತಂತೇಸ್ತೋತ್ರ ಪಾರಾಯಣ ಮಾಡಿ ನಾರಾಯಣಾರ್ಪಿತ ತಾಂಬೂಲ ಗ್ರಹಣ ಮಾಡಿ, ಸ್ವಕೀಯರಾದ ಪೋಷ್ಯ ಜನರನ್ನು ಸಂರಕ್ಷಿಸುವುದಕ್ಕೋಸ್ಕರ ದ್ರವ್ಯಾರ್ಜನವನ್ನು ಮಾಡತಕ್ಕ ವೃತ್ತಿ ವಿಚಾರಪರನಾಗಬೇಕು.

ಬ್ರಾಹ್ಮಣನ ಜೀವನ ಯಾವುದೆಂದರೆ:–
೧. ಯಜನ ೨. ಅಧ್ಯಯನ ೩. ದಾನ
೪. ಯಾಜನ ೫. ಅಧ್ಯಾಪನ ೬. ಪ್ರತಿಗ್ರಹ

ಮಿಕ್ಕ ಕಾಲವನ್ನು ಪುರಾಣಶ್ರವಣಾದಿಗಳಿಂದ ಕಳೆದು, ಸಾಯಂಕಾಲ ಸಂಧ್ಯಾದಿಗಳನ್ನು ಮಾಡಿ, ಆಚಮನ ಕೇಶವಾದಿ ನಾಮೋಚ್ಚಾರಣಾ ನಂತರ, ತೀರ್ಥಾಂಗಾರ ಗ್ರಹಣ ಮಾಡಿ "ಶ್ರೀ ಧನ್ವಂತರಯೇನಮಃ" ಎಂದು ೧೨ ಆವರ್ತಿ ಪಠಿಸಬೇಕು. ಮತ್ತು

ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೇಷಜಾತ್ ।
ನಶ್ಯಂತಿ ಸಕಲಾರೋಗಾಃ ಸತ್ಯಂ ಸತ್ಯಂ ವದಾಮ್ಯಹಂ ॥

ಮೇಲ್ಕಂಡ ಮಂತ್ರವನ್ನು ಹೇಳಿ, ರುದ್ರದೇವರ ನಾಮೋಚ್ಚಾರಣಾದಿಗಳನ್ನು ಅಗತ್ಯವಾಗಿ ನಿರ್ಮಲಾಂತಃಕರಣನಾಗಿ ಭಕ್ತಿಯಿಂದ ಮಾಡಿ ನರಹರಿ ಸ್ಮರಣೆ ಮತ್ತು ನರಸಿಂಹ ಸ್ತುತಿಯನ್ನು ಹೇಳಬೇಕು.

ದಶವತಾರವರ್ಣನಾ ಸಹಿತ
ಶ್ರೀ ನೃಸಿಂಹದೇವರ ನಾಮವು

ರಾಗ : ಕಾಂಬೋದಿ ತಾಳ : ಝಂಪೆ

ಯಾಕೆ ತೆರೆದೆಯೊ ಬಾಯ ಶ್ರೀ ನಾರಸಿಂಹ ॥ ಪ ॥

ಸಾಕು ಸಾಕಂಜುವೆನು ಮುಚ್ಚಿಕೊಳ್ಳಲೊ ದೇವ ॥ ಅ ॥

ದುರುಳ ದೈತ್ಯನು ವೇದ । ಕದ್ದೊಯ್ಯೆ ಜಲದೊಳಗೆ । ಭರದಿಂದ ಮೀನಾಗಿ ಶರಧಿಯನೆ ಪೊಕ್ಕು ॥ ತಿರುಗಾಡಿ ರಕ್ಕಸನ ಒಕ್ಕಲಿಕ್ಕಿಸಿ ವಾಣಿ । ಯರಸನಿಗೆ ತಂದಿತ್ತ ಆಯಾಸದುಬ್ಬಸವೋ? ॥೧॥

ಸಿಂಧುವನು ಮಥಿಸಲ್ಕೆ ದೇವ ದೈತ್ಯರು ಕೂಡಿ । ಮಂದರವ ತಂದಿಡಲು ಮುಳುಗಿ ತಾಕ್ಷಣದಿ ॥ ಕುಂದಿದವರನು ಕಂಡು । ಕೂರ್ಮ ರೂಪವ ತಾಳಿ । ಅಂದು ಬೆಟ್ಟವ ಬೆನ್ನಿನಿಂದೆತ್ತಿದಾಯಾಸವೋ ? ॥೨॥

ಭೂಮಿ ಸುರಳಿಯ ಸುತ್ತಿ ಕೊಂಡೊಯ್ಯೆ ಕನಕಾಕ್ಷ ಕಾಮಪಿತ ನೀನಾಗಿ ವರಹನಾದಿ ॥ ತಾಮಸನ ಸದೆದಿಕ್ಕಿ ದಾಡೆಯಿಂದಲಿ ತಂದು ॥ ಭೂಮಿಯನು ನಿಲ್ಲಿಸಿದ ಸಾಹಸದ ಹಸಿವೋ? ॥೩॥

ಬಾಲಕನು ಓದುತಿರೆ ನಾರಾಯಣಾಕ್ಷರವ । ಪಾಲಕ ಹಿರಣ್ಯಕನು ಕೋಪದಿಂದಾ । ಕೊಲ್ಲುವೆನು ತೋರೆನಲು ನರಸಿಂಹರೂಪದಲಿ । ಖೂಳನುದರವ ಬಗೆದ ಕೋಪದಾರ್ಭಟವೋ? ॥೪॥

ಪುಟ್ಟ ಬಾಲಕನಾಗಿ ಬಲಿಯ ಬೇಡಲು ನೆಲವ । ಕೊಟ್ಟೊಡನೆ ಭೂಗಗನಕೆರಡಡಯನ್ನಿಟ್ಟು॥ ಮೆಟ್ಟಿಯೊಂದಡಿಯಿಂದ ಪಾತಾಳಕೊತ್ತುತಿರೆ । ಅಟ್ಟಹಾಸದಲಂದು ತೋರಿರ್ದನಗೆಯೋ? ॥೫॥ (ವಾಮನಾವತಾರ)

ಕರದಿ ಕೊಡಲಿಯ ಪಿಡಿದು ಮೂರೇಳು ಬಾರೆಯಲಿ । ಭರದಿಂದಲವನಿಯೊಳು ತಿರುಗಾಡುತ॥ ಧರಣಿಪಾಲರ ಕುಲವ ನಿರ್ಮೂಲನಂಗೈಯ್ದು । ಪರಶುರಾಮನೆ ನಿನ್ನ ಮಾನಸದ ಉರಿಯೋ? ॥೬॥

ಹೆಂಡತಿಯ ಕಳಕೊಂಡು ಕಂಡಕಡೆಗಲೆವುತ್ತ । ಹಿಂಡು ಕಪಿಗಳ ಕೂಡಿಕೊಂಡು ಲಂಕೆಯೊಳು। ಗಂಡುಗಲಿ ರಾವಣನ ಗುಂಡಿಗೆಯ ಶೀಳ್ದು ನಿ। ನ್ಹೆಂಡತಿಯ ಕರೆತಂದ ಆನಂದದುತ್ಸಹವೋ? ॥೭॥

ದುಷ್ಟದೈತ್ಯರ ಭಾರ ಹೆಚ್ಚಾಗಲವನಿಯೊಳು। ಕಷ್ಟಗಳ ಸಹಿಸದಲೇ ಧರಣಿದೇವಿ॥ ದುಷ್ಟ ರಕ್ಷಕ ಶಿಷ್ಟ ರಕ್ಷಕನೇ ಕಾಯೆನಲು। ಕೃಷ್ಣರೂಪದಿ ಕಾಯ್ದ ಬಲು ಮುದ್ದು ನಗೆಯೋ? ॥೮॥

ಚರ್ಮ ತೊಳೆದರೆ ಕರ್ಮ ಹೋಗುವುದೇ? ಎಂದೆನುತ। ಕರ್ಮ ಮಾರ್ಗವ ದೂಡಿ ಶಾಸ್ತ್ರ ದೂಷಿಸಲು॥ ಸರ್ವ ಸಜ್ಜನರಾಗ ಮೊರೆಯಿಡಲು ದೈನ್ಯದಲಿ। ಧರ್ಮವನು ಕಾಯ್ದಂಥ ಬೌದ್ಧರೂಪದ ಬಗೆಯೋ? ॥೯॥

ಕಲಿಯುಗದಿ ಹೂಣಮತ ಹೆಚ್ಚಾದ ಕಾಲದಲಿ। ಕಲಿಕಿ ರೂಪದಿ ಚಲುವ ಕುದುರೆಯೇರೀ। ಮಲತಮಲ್ಲರನೆಲ್ಲ ತಲೆಯ ಕಡಿಯುವೆನೆಂಬ। ಛಲದಂಥ ಸ್ವಾಮಿಯಾ ಕೋಪದಾ ನುಡಿಯೋ? ॥೧೦॥

ಕರಿಗಿರೀಯಲಿ ನಿಂತು ಕರೆಕರೆದು ಭಕುತರಿಗೆ। ಉರುತರದ ವರಗಳನು ಕೊಡುವೆನೆಂದು॥ ಹರುಷದಲಿ ಹಾರುತ್ತ ಶಿಖರಾಗ್ರದಲಿ ಕುಳಿತು। ಪರಮಭಕ್ತರನಿದಿರು ನೋಡುವಾ ಭರವೋ? ॥೧೧॥

ದನಗಳನು ಕಾಯುತ್ತ ವನವನವ ತಿರುಗುವಗೆ। ಕನಕ ರತ್ನದ ಪ್ರಭೆಯು ಬಾಯ್ದೆರಿಸಿತೋ॥ ಮನೆ ದಿವ್ಯವಾಯ್ತದಕೆ ಪಂಚ ಕಳಸವನಿಡಲು। ತನು ಉಬ್ಬಿ ಪಂಚಾಸ್ಯನಂತೆ ಬಾಯ್ದೆರದ್ಯೋ? ॥೧೨॥

ಕಲ್ಲಿಯನು ಪಿಡಿದವನ ಕಲ್ಯಾಣ ಮಂಟಪದಿ। ಪಲ್ಲಕ್ಕಿಯಲಿ ತಂದು ತೂಗುತಿರಲು॥ ಅಲ್ಲದೆಲೆ ಜಲಕ್ರೀಡೆಯಾಡುವಾ ಸಮಯದಲಿ। ಗೊಲ್ಲತಿಯರ ಸವಿನುಡಿಗೆ ಬಾಯ್ದೆರದ್ಯೋ? ॥೧೩॥

ತಂದೆಮುದ್ದುಮೋಹನರ ಕೊಪ್ಪಲೊಳು ಕುಳಿತವರ। ಅಂದ ಛಂದದ ತುತಿಗೆ ಬಾಯ್ದೆರದೆಯೋ?॥ ಸುಂದರಾ ಗಜತುರಗ ವಾಹನದಿ ಮೆರೆಸಲಾ। ನಂದ ಶರಧಿಯೊಳ್ಮುಳುಗಿ ಬಾಯ್ದೆರದ್ಯೋ? ದೇವಾ ॥೧೪॥

ಭವನ ದಿವ್ಯದಿ ರಚಿಸಿ ಶಿಖರಾಗ್ರದಲಿ ನಿನಗೆ। ತವಕದಲಿ ಗೈದ ಪಂಚಾಮೃತಕೆ ಬಾಯ್ದೆರದ್ಯೋ?॥ ಅವನಿಸುರರರ್ಥಿಯಲಿ ಕವನಗಳ ಪಾಡುತ್ತ। ದವನೋತ್ಸವಂ ಗೈಯ್ಯೆ ಮರುಳಾಗಿ ಬಾಯ್ದೆರದ್ಯೋ? ॥೧೫॥

ಚಲುವ ರಥವೇರಿಸಿದರಿಂದ ಬಾಯ್ದೆರದ್ಯೋ?। ಹಲವು ಹಣ್ಣೊಗೆದುದಕೆ ಬಾಯ್ದೆರದ್ಯೋ? ದೇವಾ॥ ಬಲವಾದರಣ್ಯದಲಿ ಬೆದರಿ ಬಾಯ್ದೆರದ್ಯೋ। ಛಳಿ ಬಿಸಿಲ ತಾಪದಿಂ ಬಳಲಿ ಬಾಯ್ದೆರದ್ಯೋ? ॥೧೬॥

ಕಂತುಪುರಿ ಕಾಂತೇಶನೊಡೆಯನೇ ನಿನ ಮಹಿಮೆ। ಎಂತು ಬಣ್ಣಿಸಲ್ಕೆನಗೆ ಅರಿಯದು॥ ಅಂತರಂಗದಲಿತ್ತು ಹರಿ ಗುರು ಭಕುತಿಯನು ಸಂತತದಿ ಸಲಹಯ್ಯ **ಮಾರುತೀಶವಿಠಲಾ** ॥೧೭॥

ರಾತ್ರಿ ಪೂಜಾ

ದೇವರ ಕೇಶವಾದಿ ಚತುರ್ವಿಂಶನ್ನಾಮಗಳಿಂದ ಧೂಪ ದೀಪ ಸಮರ್ಪಿಸಿ, ಪುಷ್ಪ, ಮಂತ್ರಾಕ್ಷತಾದಿಗಳಿಂದ ಪೂಜಿಸಿ, ನೈವೇದ್ಯ, ಮಂಗಳಾರ್ತಿ ಮಾಡಿ, ತುಳಸೀ ಗಿಡಕ್ಕೆ ಮಂಗಳಾರ್ತಿ ಮಾಡಿ, ಗೋಪಿಕಾ ಗೀತೆಯನ್ನು ಪಠಿಸುತ್ತಾ, ೧೨ ಆವರ್ತಿ ಪ್ರದಕ್ಷಿಣೆಯನ್ನೂ, ೨೪ ಆವರ್ತಿ ನಮಸ್ಕಾರವನ್ನೂ ದಿನವಹಿ ಮಾಡಬೇಕು.

ಈ ಸಂಪ್ರದಾಯಗಳು ಗುರುಪರಂಪರಾ ನಡೆದು ಬಂದ ಸಂಪ್ರದಾಯವೆಂದು ಅಧಿಕಾರಿಗಳಾದವರು ಊಹಿಸಬೇಕು.

ನಂತರ ಅಂಕಿತನಾಮ, ವೇಣೂಗೀತಾದಿಗಳಿಂದ ಶ್ರೀಹರಿಯನ್ನು ಪ್ರಾರ್ಥಿಸಿ, ಭೋಜನ ನಿಯಮಗಳನ್ನನುಸರಿಸಿ ಭೋಜನ ಮಾಡಬೇಕು.

ಶಯನವಿಧಿ

ರಾತ್ರೆ ೭॥ ಘಳಿಗೆಯ ಮೇಲೆ ಮಲಗತಕ್ಕದ್ದೇ ಹೊರ್ತು ಅದರೊಳಗಾಗಿ ಮಲಗಕೂಡದು. ಕಡೇ ಯಾಮದ ೭॥ ಘಳಿಗೆ ಒಳಗಾಗಿಯೇ ಏಳಬೇಕು. ಅಂತು ನಿದ್ರೆಗೆ ೧೫ ಘಳಿಗೆಯೇ ನಿಯಮಕಾಲವೆಂದು ವಾಕ್ಯವು.

ತತ್ವಸಾರದಲ್ಲಿ ಧ್ಯಾನಪ್ರಕರಣ(ನಿತ್ಯಾನ್ಹಿಕ) ಸಂಪೂರ್ಣವು

೨೫. ಪ್ರಮೇಯ ಪ್ರಕರಣ

ಸಂಪುಟ ೧೦ ಸಂಚಿಕೆ ೬ ಪ್ರಮಾಥಿ ಭಾದ್ರಪದ ಸೆಪ್ಟೆಂಬರ್ ೧೯೫೯

ಗೋವಿಂದ ಗೋವಿಂದ ಹರೇ ಮುರಾರೇ।
ಗೋವಿಂದ ಗೋವಿಂದ ಮುಕುಂದ ಕೃಷ್ಣ ॥
ಗೋವಿಂದ ಗೋವಿಂದ ರಥಾಂಗಪಾಣೇ ।
ಗೋವಿಂದ ಗೋವಿಂದ ನಮೋನಮಸ್ತೇ ॥

ಪರಮಾತ್ಮನ ಲಕ್ಷಣವು

ಪರಮಾತ್ಮನು ಅನಂತಗುಣ ಪರಿಪೂರ್ಣನು. ಸೃಷ್ಟ್ಯಾದಷ್ಟ ಕರ್ತನು. ಸರ್ವಜ್ಞನು. ಪರಮ ಮುಖ್ಯ ವೃತ್ತಿಯಿಂದ ಸಕಲ ಶಬ್ದವಾಚ್ಯನು. ಜಡ–ಜೀವ–ಪ್ರಕೃತಿ ಇವುಗಳಿಂದ ಅತ್ಯಂತ ವಿಲಕ್ಷಣನು. ಜ್ಞಾನಾನಂದಾದಿ ಶರೀರವುಳ್ಳವನು. ಸರ್ವ ಸ್ವತಂತ್ರನು. ಉತ್ಪತ್ತಿ ನಾಶ ಶೂನ್ಯನು. ನಿತ್ಯ ಮುಕ್ತನು. ಒಂದೇ ರೂಪದಿಂದ ನಾನಾ ರೂಪವುಳ್ಳವನು. ಸರ್ವ ರೂಪಗಳಲ್ಲಿಯೂ ಪೂರ್ಣನಾದವನು. ಸರ್ವರೂಪದಲ್ಲಿಯೂ ಗುಣ ಕ್ರಿಯಾದಿಗಳಿಂದ ಅಭಿನ್ನನು. ಇವೇ ಮುಂತಾದ ಲಕ್ಷಣಗಳಿಂದ ಯುಕ್ತನಾದವನೇ **ಪರಮಾತ್ಮನು**.

ಲಕ್ಷ್ಮೀದೇವಿಯರ ಲಕ್ಷಣವು

ಪರಮಾತ್ಮನಿಗೆ ಭಿನ್ನಳಾದವಳು. ಆತನ ಅಧೀನಳು. ಆತನಂತೆಯೇ ನಿತ್ಯ ಮುಕ್ತಳು. ಆತನ ಪತ್ನಿಯು. ನಾನಾ ರೂಪಳು. ಜಡದೇಹ ರಹಿತಳು. ಸರ್ವಶಬ್ದವಾಚ್ಯಳು. ಸಮಾಸಮಳು. ದೇಶಕಾಲ ವ್ಯಾಪ್ತಿಯಿಂದ ಸಮಳು. ಗುಣವ್ಯಾಪ್ತಿಯಿಂದ ಅಸಮಳು. ಇತ್ಯಾದಿ ಲಕ್ಷಣಗಳಿಂದ ಯುಕ್ತಳಾದವಳು **ಲಕ್ಷ್ಮಿಯು**.

ಜೀವರ ಲಕ್ಷಣವು

ಇವರು ಅಜ್ಞಾನಾದಿ ದೋಷಗಳಿಂದ ಯುಕ್ತರಾದವರು. ಮತ್ತು ಸಂಸಾರಿಗಳು. ಜೀವರಾಶಿಗಳು ಅಸಂಖ್ಯಾತರು ಅನಂತ ಸಮೂಹವುಳ್ಳವರು. ಇಂಥಾ ಜೀವರಲ್ಲಿ ಮೂರು ವಿಧ:–

೧. ಮುಕ್ತಿ ಯೋಗ್ಯರು ೨. ನಿತ್ಯ ಸಂಸಾರಿಗಳು ೩. ತಮೋ ಯೋಗ್ಯರು

ಮುಕ್ತಿಯೋಗ್ಯರಲ್ಲಿ ಪಂಚಭೇದ :-

೧. ದೇವತೆಗಳು ೨. ಋಷಿಗಳು ೩. ಪಿತೃಗಳು ೪. ಚಕ್ರವರ್ತಿಗಳು ೫. ಮನುಷ್ಯೋತ್ತಮರು

೧. ದೇವತೆಗಳು – ಬ್ರಹ್ಮ – ವಾಯ್ವಾದಿಗಳು

೨. ಋಷಿಗಳು – ನಾರದಾದಿಗಳು

೩. ಪಿತೃಗಳು – ಚಿರಾದಿಗಳು

೪. ಚಕ್ರವರ್ತಿಗಳು – ರಘು, ಅಂಬರೀಷಾದಿಗಳು

೫. ಮನುಷ್ಯೋತ್ತಮರು – ಇವರಲ್ಲಿ ಎರಡು ಪ್ರಕಾರ ;
೧. ಚತುರ್ಗುಣೋಪಾಸಕರು ೨. ಏಕಗುಣೋಪಾಸಕರು

ತೃಣಜೀವರೇ ಏಕಗುಣೋಪಾಸಕರು
ತೃಣಜೀವ ವ್ಯತಿರಿಕ್ತರಾದವರು ಚತುರ್ಗುಣೋಪಾಸಕರು.

ನಿತ್ಯ ಸಂಸಾರಿ ಜೀವರ ಲಕ್ಷಣವು

ಇವರು ನಿರಂತರದಲ್ಲಿಯೂ ಸುಖ–ದುಃಖ ಮಿಶ್ರರಾದವರು. ಇವರಿಗೆ ಮಧ್ಯಮ ಮನುಷ್ಯರೆಂದು ಹೇಳುವರು. ಇವರು ಅಸಂಖ್ಯಾತರು ಸರ್ವದಾ ಸ್ವರ್ಗ–ಭೂಮಿ–ನರಕ ಇವುಗಳಲ್ಲಿಯೇ ಸಂಚರಿಸತಕ್ಕವರು.

ತಮೋಯೋಗ್ಯರ ಲಕ್ಷಣವು

ಇವರಲ್ಲಿ ನಾಲ್ಕು ಪ್ರಕಾರ ೧. ದೈತ್ಯರು, ೨. ರಾಕ್ಷಸರು, ೩. ಪಿಶಾಚರು ೪. ಮನುಷ್ಯಾಧಮರು

ಸರ್ವಜೀವರೂ ಪರಸ್ಪರ ಭೇದವುಳ್ಳವರು. ಪರಮಾತ್ಮನಿಂದ ಭಿನ್ನರಾದವರು. ಸಂಸಾರಾವಸ್ಥೆಯಲ್ಲಿಯೂ, ಮುಕ್ತಾವಸ್ಥೆಯಲ್ಲಿಯೂ ಸಹ ತಾರತಮ್ಯೋಪೇತರು. ಜೀವಾಭಿಮಾನಿಗಳು ಬ್ರಹ್ಮಾದಿಗಳು.

ಅವ್ಯಾಕೃತಾಕಾಶ ಲಕ್ಷಣವು

ಸೃಷ್ಟಿ–ಪ್ರಳಯ ಕಾಲಗಳಲ್ಲಿ ವಿಕಾರಶೂನ್ಯವಾದದ್ದು. ಇದು ಭೂತಾಕಾಶದಿಂದ ಭಿನ್ನವಾಗಿ ಏಕವಾದದ್ದು, ನಿತ್ಯವಾದದ್ದು, ವ್ಯಾಪ್ತವಾದದ್ದು. ಪ್ರಾಚ್ಯಾದಿ ಸ್ವಾಭಾವಿಕಾವಯವದಿಂದ ಯುಕ್ತವಾದದ್ದು. ಇದಕ್ಕೆ ಲಕ್ಷ್ಮೀದೇವಿಯು ಅಭಿಮಾನಿಯು.

ಜಡಪ್ರಕೃತಿ ಲಕ್ಷಣವು

ಸಾಕ್ಷಾತ್ ಪರಂಪರೆಯ ವಿಶ್ವೋಪಾದಾನ ಕಾರಣವಾದದ್ದು. ಜಡಪ್ರಕೃತಿ ರೂಪವು ನಿತ್ಯವು ಮತ್ತು ವ್ಯಾಪ್ತವು. ಇದರ ಅಭಿಮಾನಿಯು ಲಕ್ಷ್ಮೀದೇವಿಯು.

ರಜೋಗುಣದಿಂದ ಸೃಷ್ಟಿಯು. ರಜೋಗುಣಾಭಿಮಾನಿ ಭೂ.

ಸತ್ವಗುಣದಿಂದ ಸ್ಥಿತಿಯು. ಸತ್ವಗುಣಾಭಿಮಾನಿ ಶ್ರೀ.

ತಮೋಗುಣದಿಂದ ನಾಶವು. ತಮೋಗುಣಾಭಿಮಾನಿ ದುರ್ಗಾ.

ಭಗವದ್ಜ್ಞಾನವೇ ಮೋಕ್ಷಸಾಧನವು.

ಪರಮಾತ್ಮನು ಪ್ರಳಯಾನಂತರ ಸೃಷ್ಟಿಯನ್ನು ಮಾಡುತ್ತಾನೆ.

ಅಧಿಕಾರಿಗೆ ಮೋಕ್ಷವಾಗಬೇಕಾದರೆ ಅಪರೋಕ್ಷಜ್ಞಾನ ಬೇಕು. ಇದಕ್ಕೆ ಸಜ್ಜನರ ಸಹವಾಸಬೇಕು. ಸಜ್ಜನ ಸಹವಾಸವಾಗಬೇಕಾದರೆ ವಿವಿಧ ಸಾಂಸಾರಿಕ ದುಃಖ ಜ್ಞಾನವಾಗಬೇಕು. ನಂತರ ವೈರಾಗ್ಯ ಹೊಂದಬೇಕು. ವೈರಾಗ್ಯವೆಂದರೆ:–
ಭೂಲೋಕದಲ್ಲಿ ಅನುಭವಿಸತಕ್ಕ ಸ್ರಕ್ – ಚಂದನ–ವಸ್ತ್ರ–ಆಭರಣ–ಸ್ತ್ರೀ–ವಿತ್ತ ಇವೇ ಮೊದಲಾದ ಭೋಗಸಾಧನ ಪದಾರ್ಥಗಳನ್ನು ಭೋಗಿಸದೇಲೂ, ಈ ವಿಷಯಗಳನ್ನು ಕರ್ಮೇಂದ್ರಿಯ ಗಳಿಂದಲೂ, ಜ್ಞಾನೇಂದ್ರಿಯಗಳಿಂದಲೂ ಸ್ವೀಕರಿಸದೇ ಇರುವುದೇ ವೈರಾಗ್ಯವು. ಮತ್ತು ಸ್ವರ್ಗಾದಿ ಲೋಕಾಂತರಗಳಲ್ಲಿ ದಿವ್ಯ ಭೋಗಾಪೇಕ್ಷೆಯನ್ನು ತೊರೆದಿರುವುದೇ ವೈರಾಗ್ಯವು.

ಶಮ–ದಮ–ಅಧ್ಯಯನ– ಗುರುಸೇವಾ– ಗುರುಕುಲವಾಸ – ಗುರು ಉಪದೇಶ– ಗುರುಮುಖದಿಂದ ಸಚ್ಛಾಸ್ತ್ರ ಶ್ರವಣ, ಮನನ, ನಿದಿಧ್ಯಾಸನಾದಿಗಳಿಂದ ಸಾಧನ ಮಾಡಿದರೆ ಜಾಗ್ರತೆಯಾಗಿ ಅಪರೋಕ್ಷವಾಗುವುದು. ಗುರುವಿನಲ್ಲಿ ಭಕ್ತಿಯೂ ಪರಮಾತ್ಮನಲ್ಲಿ ಭಕ್ತಿಯೂ ಮುಖ್ಯವಾಗಿರಬೇಕು.

ಅಧಿಕಾರಿಯ ನಡತೆಯು

ಅಧಿಕಾರಿಯಾದವನು ಉತ್ತಮರಲ್ಲಿ ಭಕ್ತಿ ಮಾಡುತ್ತಾ, ಸಮಾನರಲ್ಲಿ ಸ್ನೇಹಮಾಡುತ್ತಾ, ಅಧಮರಲ್ಲಿ ದಯಾಪರನಾಗಿರಬೇಕು. ನಿವೃತ್ತಿ ಕರ್ಮಾನುಷ್ಠಾನನೂ, ಶರಣಾಗತನೂ, ಪ್ರಕೃತಿಪುರುಷ ವಿವೇಕ ಜ್ಞಾನವುಳ್ಳವನೂ, ನಿಷೇಧ ಕರ್ಮ ಪರಿತ್ಯಾಗಿಯೂ, ಸರ್ವಸಮರ್ಪಣನೂ ತಾರತಮ್ಯ ಜ್ಞಾನ, ಪಂಚಭೇದ ಜ್ಞಾನವುಳ್ಳವನೂ, ಅಯೋಗ್ಯನಿಂದೋಪಾಸಕನೂ ಆಗಿರಬೇಕು.

ಗುರುಗಳು

ಗುರುಗಳಲ್ಲಿ ೨ ಪ್ರಕಾರ :- ೧. ನೀತಗುರುಗಳು ೨. ಅನೀತಗುರುಗಳು.

ಶಿಷ್ಯರ ಸ್ವರೂಪವನ್ನು ಚೆನ್ನಾಗಿ ತಿಳಿದು ತದ್ಯೋಗ ಗುಣ ವಿಶಿಷ್ಟ ಭಗವದ್ರೂಪ ವಿಶೇಷ ವಿಷಯಿಕ ವಿದ್ಯೋಪದೇಶಕರೇ ನೀತಗುರುಗಳು

(ಮನುಷ್ಯೋತ್ತಮರಿಗೆ ಋಷಿಗಳು ನೀತಗುರುಗಳು)

ಭಗವತ್ತತ್ವೋಪದೇಶ ಮಾಡುವವರು ಅನೀತಗುರುಗಳು

ಉಪಾಸನೆಯು

೧. ನಿರಂತರದಲ್ಲೂ ಶಾಸ್ತ್ರಾಭ್ಯಾಸ ಮಾಡುವುದು

೨. ಧ್ಯಾನ ಮಾಡುವುದು. ಇದು ಹೇಗೆಂದರೆ – ಭಗವದ್ವ್ಯತಿರಿಕ್ತ ಮನೋವೃತ್ತಿಗಳನ್ನು ನಿಗ್ರಹಿಸಿ, ಭಗವದ್ವಿಷಯಕವಾದ ಅಖಂಡ ಸ್ಮೃತಿರೂಪಕವಾದ ಧ್ಯಾನೋಪಾಸನೆಯು. ಇದಕ್ಕೇನೇ ನಿದಿಧ್ಯಾಸನವೆಂಬ ನಾಮಾಂತರವು.

೩. ಕೆಲವು ಅಧಿಕಾರಿಗಳಿಗೆ ಸಚ್ಛಾಸ್ತ್ರ **ಸುಳಾದಿ–ಉಗಾಭೋಗ– ದೇವರನಾಮ – ತತ್ವರಹಸ್ಯಾದಿ** ಗ್ರಂಥಗಳನ್ನು ಆಲೋಚನೆ ಮಾಡುವುದರಿಂದ ಅಪರೋಕ್ಷವಾಗುವುದು. ಇದೂ ಒಂದು ಬಗೆಯ ಉಪಾಸನವು.

ಶಾಸ್ತ್ರ ಶ್ರವಣ ಫಲವು

ಶಾಸ್ತ್ರಶ್ರವಣದಿಂದ ಅಜ್ಞಾನ–ಸಂಶಯ–ವಿಪರೀತ ಜ್ಞಾನ ಇವುಗಳು ನಿವೃತ್ತಿಯಾಗುವುವು. ಇವುಗಳು ನಿವೃತ್ತಿಯಾದನಂತರ ನಿಶ್ಚಯಜ್ಞಾನ ವ್ಯಕ್ತವಾಗುವುದು.

ಸರ್ವಮುಕ್ತಿಯೋಗ್ಯ ಜೀವರಿಗೂ ಬಿಂಬೋಪಾಸನೆಯು ಮುಖ್ಯವಾದದ್ದು. ಆ ಬಿಂಬರೂಪವೇ **ಪ್ರಾಜ್ಞಮೂರ್ತಿ**ಯು. ಆ ಬಿಂಬಮೂರ್ತಿ ಪರಮಾತ್ಮನು ಮೂರು ವಿಧವು.

೧. **ಪ್ರಾದೇಶಮೂರ್ತಿ** ೨. **ಮೂಲೇಶಮೂರ್ತಿ** ೩. **ಅಗ್ರೇಶಮೂರ್ತಿ**

೧. ಕೆಲವರು ಹೃದಯಾಸ್ಥ ಪ್ರಾದೇಶಮೂರ್ತಿಯನ್ನು ಉಪಾಸನೆ ಮಾಡುವರು.

೨. ಕೆಲವರು **ಹೃತ್ಕರ್ಣಿಕಾ ಮೂಲ**ದಲ್ಲಿ ವಿದ್ಯಮಾನನಾದ ಮೂಲೇಶಮೂರ್ತಿಯನ್ನು ಉಪಾಸನೆ ಮಾಡುವರು.

೩. ಕೆಲವರು **ಹೃತ್ಕರ್ಣಿಕಾಗ್ರಗತ ಅಗ್ರೇಶಮೂರ್ತಿ**ಯನ್ನು ಉಪಾಸನೆ ಮಾಡುವರು.

ಪಂಚಭೇದವು

೧. ಜೀವಗೂ ಪರಮಾತ್ಮಗೂ ಭೇದ

೨. ಜೀವಜೀವರಿಗೆ ಪರಸ್ಪರ ಭೇದ

೩. ಜಡಕ್ಕೂ ಪರಮಾತ್ಮನಿಗೂ ಭೇದ

೪. ಜಡಜಡಗಳಿಗೆ ಭೇದ

೫. ಜಡಕ್ಕೂ ಜೀವಗಳಿಗೂ ಭೇದ

ಜ್ಞಾನವು ಪರಮಾತ್ಮನಾಧೀನವು. ಅಜ್ಞಾನ-ಬಂಧ ಸರ್ವವೂ ಶ್ರೀಹರಿಯ ಅಧೀನವು.

ಅಪರೋಕ್ಷ ಜ್ಞಾನಾನಂತರ ಪರಮ ಭಕ್ತಿಯು ಹುಟ್ಟುವುದು. ನಂತರ ಅತ್ಯರ್ಥ ಪ್ರಸಾದವಾಗುವುದು. ತದನಂತರ ಅವಿದ್ಯಾದಿಗಳು ನಿವೃತ್ತಿಯಾಗಿ ಮೋಕ್ಷಪ್ರಾಪ್ತಿಯಾಗುವುದು.

ಜ್ಞಾನಿಗಳು

ಜ್ಞಾನಿಗಳಲ್ಲಿ ಎರಡು ವಿಧವು :- ೧. ಪ್ರತೀಕಾಲಂಬನರು
೨. ಅಪ್ರತೀಕಾಲಂಬನರು

೧. **ದೇಹಾದ್ಯಧಿಷ್ಠಾನ**ದಲ್ಲಿರತಕ್ಕ ಪರಮಾತ್ಮನನ್ನು ಕಾಣುವವರು ಪ್ರತೀಕಾಲಂಬನರು.

೨. ದೇಹಾದ್ಯಧಿಷ್ಠಾನ **ವ್ಯತಿರಿಕ್ತ ವಸ್ತು**ಗಳಲ್ಲಿ ವಿದ್ಯಮಾನವಾದ ಪರಮಾತ್ಮನನ್ನು ಕಾಣುವವರು ಅಪ್ರತೀಕಾಲಂಬನರು.

ದೇವತೆಗಳ ವ್ಯತಿರಿಕ್ತ ಕೆಲವು ಅಪ್ರತೀಕಾಲಂಬನರಿಗೆ ಸುಷುಮ್ನಾ ನಾಡೀ ಮಧ್ಯದಿಂದ ಉತ್ಕ್ರಮಣವು. ಆ ಕಾಲದಲ್ಲಿ ಹೃದಯದಲ್ಲಿ ಪ್ರಕಾಶವಾಗಿ, ಆ ಪ್ರಕಾಶ ದ್ವಾರಾ ಜೀವ ಹೋಗುವನು. ಆಗ ಪ್ರಾಜ್ಞನ ಸಂಗಡ ಜೀವ ಹೋಗುವನು. ಪರಮಾತ್ಮನ ಮುಂದೆ ವಾಯುದೇವರು ಹೋಗುವರು. ನಂತರ ಅರ್ಚಿರಾದಿ ಮಾರ್ಗಗಳಲ್ಲಿ ಹೋಗಿ, ಉತ್ತರೋತ್ತರ ಲೋಕಗಳಲ್ಲಿ ಪೂಜೆ ಮಾಡಿಸಿಕೊಂಡು, ಕ್ರಮೇಣ ವೈಕುಂಠಲೋಕ ಸೇರುವರು. ನಂತರ ತುರ್ಯನಾಮಕ ಭಗವತ್ಪ್ರಾಪ್ತಿಯು.

ಪ್ರತೀಕಾಲಂಬನರಿಗೆ ಮರಣಕಾಲದಲ್ಲಿ ನಿಯತವಾಗಿ ಭಗವತ್ಸರಣೆಯು ಪರಮಾತ್ಮನ ಅನುಗ್ರಹದಿಂದ ಲಭ್ಯವಾಗುವುದು. ಸುಷಮ್ನನಾಡೀ ಪಾರ್ಶ್ವಸ್ಥ ನಾಡೀಗತ ಭಗವತ್ಪ್ರಸಾದ ದ್ವಾರಾ ಗಮನವಾಗಿ, ಅರ್ಚಿರಾದಿ ಲೋಕಾನಂತರ ವಾಯುಲೋಕ ಪ್ರಾಪ್ತಿಯೂ, ನಂತರ ಚತುರ್ಮುಖಲೋಕ ಪ್ರಾಪ್ತಿಯೂ, ತದನಂತರ ವೈಕುಂಠಲೋಕ ಪ್ರಾಪ್ತಿಯೂ ಆಗುವುದು.

ಸರ್ವರಿಗೂ ಬ್ರಹ್ಮನಿಂದ ಉಪದೇಶವಾಗುವುದು. ಶ್ವೇತದ್ವೀಪದಲ್ಲಿ ವಾಸುದೇವಮೂರ್ತಿಯ ಸಂದರ್ಶನವೂ, ಧ್ರುವಲೋಕದಲ್ಲಿ ಶಿಂಶುಮಾರಮೂರ್ತಿಯ ದರ್ಶನವೂ ನಿಯಮವಾಗಿ ಆಗುವುದು. ವಿರಜಾ ನದಿಯ ಸ್ನಾನದಿಂದ ಮಾತ್ರ ಲಿಂಗದೇಹ ನಷ್ಟವಾಗುವುದು.

ವಿರಜಾನದಿಯು

ವಿರಜಾನದಿಯು ಪ್ರಧಾನ ಅವ್ಯಾಕೃತಾಕಾಶಗಳ ಮಧ್ಯದಲ್ಲಿರುವುದು. ಇದು ಲಕ್ಷ್ಮ್ಯಾತ್ಮಕವಾದದ್ದು.

ಲಿಂಗಶರೀರವು

ಈ ಲಿಂಗಶರೀರವು ಷೋಡಶ (೧೬) ಕಲೆಗಳಿಂದ ಯುಕ್ತವಾದದ್ದು.

೧೦ ಇಂದ್ರಿಯಗಳು (ದಶೇಂದ್ರಿಯಗಳು)

೫ ಮಂದಿ ಪ್ರಾಣರು (ಪಂಚಪ್ರಾಣರು)

೧ ಮನಸ್ಸು

ಒಟ್ಟು ಹದಿನಾರು ಕಲೆಗಳು. ಇದರ ಭಂಗವೆಂದರೆ–

ಜೀವಗೂ–ಲಿಂಗದೇಹಕ್ಕೂ ಇರುವ ಸಂಬಂಧ ನಿವೃತ್ತಿ ಅಂದರೆ: ಲಿಂಗದೇಹಕ್ಕೆ ನಾಶವು. ಈ ಲಿಂಗದೇಹ ಸಂಬಂಧದಿಂದಲೇ ಜೀವಗೆ ನಾನಾವಿಧ ಜನನ–ಮರಣ–ದುಃಖಾದಿಗಳುಂಟಾಗುವುವು.

ಇತಿ ಶ್ರೀ ತಂದೆಮುದ್ದುಮೋಹನವಿಠಲದಾಸ ವಿರಚಿತ ತತ್ವಸಾರ ಮೂಲಾಖ್ಯ ಗ್ರಂಥದ ಮೂರನೇ ಪ್ರಕರಣವಾದ ಪ್ರಮೇಯ ಪ್ರಕರಣದಲ್ಲಿನ ಮೊದಲನೆಯ ಭಾಗವು ಸಂಪೂರ್ಣವು.

(ಮುಂದುವರೆದುದು)

ಸಂಪುಟ ೧೦ ಸಂಚಿಕೆ ೭ ಪ್ರಮಾಥಿ ಅಶ್ವೀಜ ಅಕ್ಟೋಬರ್ ೧೯೯೯

ಶ್ರೀಮಧ್ವಹೃದಯಾಂ ಭೋಜಾ ಬಹು ನಿರ್ಮಲ ಮಂದಿರಂ ।
ಇಂದಿರಾರಮಣಂ ದೇವಂ ವಂದೇ ಪರತರಂ ಹರಿಂ ॥
ಸುಖಮೇವಮೇಸ್ಯಾತ್ ದುಃಖಂ ಮನಾಗಪಿ ಮಾಭೂದಿತಿ
ಸಕಲಾಪೇಕ್ಷಿತೋಹಿ ಮೋಕ್ಷಃ ॥

ಸರ್ವರಿಂದಲೂ ಅಪೇಕ್ಷಿತವಾದ ಮೌಕ್ತಿಕಾನಂದವು ಶ್ರೀಪರಮಾತ್ಮನ ಅಪರೋಕ್ಷ ಜ್ಞಾನದಿಂದ ಸಾಧ್ಯವು. ಆ ಜ್ಞಾನವು ಶ್ರೀಮತ್ಸುಖತೀರ್ಥರಿಂದ ಕೃತವಾದ ಸಚ್ಛಾಸ್ತ್ರ ಶ್ರವಣ–ಮನನ ನಿದಿಧ್ಯಾಸನಾದಿಗಳಿಂದ ಸಾಧ್ಯವೆಂದು ಸರ್ವದಾ ಸಚ್ಛಾಸ್ತ್ರಾಭಿಪ್ರಾಯವನ್ನು ತಿಳಿಯುತ್ತಾ ಬರಬೇಕು.

ಮನುಷ್ಯ ದೇಹವು ಅತಿ ದುರ್ಲಭವು. ಬಹು ಜನ್ಮೋತ್ತರ ಬರತಕ್ಕದ್ದು. ಪರಲೋಕೋಪಾಯ ಭೂತವಾದದ್ದು. ಜ್ಞಾನಸಾಧನವಾದದ್ದು ಅನಿತ್ಯವು. ಮೃತ್ಯುವು ಸದಾ

ಸನ್ನಿಹಿತವಾದದ್ದು. ಆದ ಕಾರಣ ಇಂಥ ಶರೀರಕ್ಕೆ ಅಪಾಯ ಬರುವುದಕ್ಕೆ ಪೂರ್ವವೇ ಬುದ್ಧಿವಂತನಾದವನು ಮೋಕ್ಷಕ್ಕಾಗಿ ಯತ್ನಮಾಡತಕ್ಕದ್ದು.

ಸಂಸಾರಕ್ಕಿಂತ ಮೋಕ್ಷದಲ್ಲಿ ವಿಶೇಷವಿಲ್ಲದೇ ಇದ್ದಲ್ಲಿ ಇದಕ್ಕಾಗಿ ಯತ್ನವೇ ಇರುತ್ತಿರಲಿಲ್ಲವು. ಆದ್ದರಿಂದ ಮೋಕ್ಷದಲ್ಲಿ ವಿಶೇಷ ಸುಖವುಟೆಂದು ತಿಳಿಯಬೇಕು. ಇಂಥ ಮೋಕ್ಷೋಪಾಯಕ್ಕೇನೇ ಬ್ರಹ್ಮ ಜ್ಞಾನವೆಂದು ಹೇಳುವರು.

"ತಮೇವಂ ವಿದ್ವಾನಮೃತ ಇಹ ಭವತಿ"

ಎಂಬ ಶ್ರುತ್ಯನುಸಾರದಿಂದ ಬ್ರಹ್ಮಜ್ಞಾನವೇ ಮೋಕ್ಷಸಾಧನವೆಂತ ಹೇಳುವರು.

ಶಾಸ್ತ್ರಕ್ಕೆ ತದಭಿಮತಾರ್ಥ (ಬ್ರಹ್ಮ) ಸರ್ವ ಜೀವಾಭಿನ್ನ, ನಿರಾಕಾರ ನಿರ್ಗುಣ ಎಂಬುವುದು ಅಂಗೀಕರಿಸಿದರೆ ಭಗವನ್ನಿಂದಾ ರೂಪವಾಗುವುದು ಎಂದು ಯುಕ್ತಿ ಮಲ್ಲಿಕಾಖ್ಯ ಗ್ರಂಥದಲ್ಲಿ ಹೇಳಲ್ಪಟ್ಟಿರುವುದು. ಆ ಅಭಿಪ್ರಾಯವನ್ನೇ ಇಲ್ಲಿ ಹೇಳುವರು.

ಬ್ರಹ್ಮನನ್ನು ಸರ್ವಜೀವಾಭಿನ್ನವೆಂದು ಉಪಾಸನೆ ಮಾಡಬೇಕಾದರೆ, ಚಂಡಾಲಾದಿಗಳು ಸರ್ವಜೀವಾಂತರ್ಗತರಾದ ಕಾರಣ "ಹೇ! ಬ್ರಹ್ಮನೇ! ನೀನು ಚಂಡಾಲ–ಪಶು–ಮ್ಲೇಂಛ –ಚೋರ–ಜಾರ ಇತ್ಯಾದಿ ರೂಪನಾಗುವೆ. ನಿರಾಕಾರನೆಂದರೆ –ನೀನು ಕುರುಡ–ಕಿವುಡ –ಮೂಗ ಇತ್ಯಾದಿ ರೂಪವಾಗುವೆ. ನಿರ್ಗುಣನೆಂದರೆ – ವಿದ್ಯಾಹೀನ–ವಿನಯರಹಿತ–ದಯಾಶೂನ್ಯ–ವ್ರತರಹಿತ ಇತ್ಯಾದಿ ರೂಪವಾಗುವೆ. ಇಂಥ ಮಾತುಗಳು ನಿಂದ್ಯವೆಂತ ಸರ್ವ ಲೋಕಸಮ್ಮತವು. ಆದ್ದರಿಂದ ಬ್ರಹ್ಮವಿಷಯದಲ್ಲಿ ಇಂಥಾ ಮಾತುಗಳು ನಿಂದಾ ರೂಪವಾಗಿರುವುವು. ಇಂಥಾ ಭಗವನ್ನಿಂದೆಯ ತಮಸ್ಸಾಧನವು. ಇಂಥವರ ಶಾಸ್ತ್ರಜನ್ಯ ಜ್ಞಾನವು ಮಿಥ್ಯಾಜ್ಞಾನವಾದ ಕಾರಣ ಅವು ಮುಕ್ತಿಗೆ ಸಾಧನವಲ್ಲವು. ಕಿಂತು ತಮಸ್ಸಾಧನವೇ ಮಿಥ್ಯಾ ಜ್ಞಾನವು.

ಅಂಧಂತಮಃ ಪ್ರವಿಶಂತಿಯೇ ವಿದ್ಯಾಮುಪಾಸತೇ । (ಈಶಾವಾಸ್ಯೋಪನಿಷತ್) ಮುಕ್ತಸಾಧನೀಭೂತ ಬ್ರಹ್ಮಜ್ಞಾನ ವಿಷಯವಾದ ಶಾಸ್ತ್ರಾರ್ಥವಾದರೋ ಶ್ರೀಮದಾಚಾರ್ಯರ ಅಭಿಮತವೇ ಆಗಿರುವುದು ಏನೆಂದರೆ:–

ಬ್ರಹ್ಮ ನಿಖಿಲ ಗುಣಪೂರ್ಣ – ನಿರ್ದೋಷೇತ್ಯಾದಿ ರೂಪ

ಇದಕ್ಕೆ ತತ್ವ ಪ್ರಕಾಶಿಕೋಕ್ತ ಪ್ರಮಾಣವು

ಅಪರ್ಯಾಯಾನಂತ ಶಬ್ದಾನಾಂ ಮಹಾಯೋಗ ವೃತ್ಯಾಹರೌ ।

ಸಮನ್ವಯ ಸಮರ್ಥನ ದ್ವಾರಾ ಸರ್ವಗುಣೋದೀರ್ಣತ್ವೈವ ವರ್ಣ್ಯತೇ ॥ ಮತ್ತು

ಅದ್ವೈತ ಕಾಲಾನಲದಲ್ಲಿ ಹೇಳತಕ್ಕದ್ದೇನೆಂದರೆ –

ಶ್ರೀಮನ್ಮಧ್ವಮತೇ ಹರಿಃ ಪರತರ ಸತ್ಯಂ ಜಗತ್ತತ್ವತೋ ।
ಭೇದೋ ಜೀವಗಣಾಃ ಹರೇರನುಚರಾಃ ನೀಚೋಚ್ಚಭಾವಂ ಗತಾಃ ।
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ ।
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಳಾಮ್ನೈಕ ವೇದ್ಯೋ ಹರಿಃ ॥

೧. ಹರಿಸರ್ವೋತ್ತಮ

ಅಗ್ನಿರ್ವೈದೇವಾನಾಮವಮಃ ವಿಷ್ಣು ಪರಮಃ
ತದಂತರೇಯಾ ಅನ್ಯಾಸ್ಸರ್ವಾ ದೇವತಾಃ ॥ (ಶೃತಿ)

ನತ್ವತ್ಸಮೋಸ್ತ್ಯಭ್ಯದಿಕಃ ಕುತೋಽನ್ಯಃ ॥ (ಗೀತಾ)

ಓಂ ಅಧಿಕಂತು ಭೇದ ನಿರ್ದೇಶಾತ್ ಓಂ ॥ (ಬ್ರಹ್ಮಸೂತ್ರ)

೨. ಜಗತ್ಸತ್ಯ

ವಿಶ್ವಂ ಸತ್ಯಂ ॥ (ಶೃತಿ)

ಓಂ ಜನ್ಮಾದ್ಯಸ್ಯಯತಃ ಓಂ ॥ (ಸೂತ್ರ)

೩. ಜೀವೇಶ್ವರ ಭೇದಗಳು ಸತ್ಯವು

ಆತ್ಮ ನೋಽಂತರಃ ॥ (ಶೃತಿ)

ಉತ್ತಮಃ ಪುರುಷಸ್ತ್ವನ್ಯಃ ॥ (ಗೀತಾ)

ಓಂ ಭೇದವ್ಯಪದೇಶಾತ್ ಓಂ ॥ (ಸೂತ್ರ)

೪. ಜೀವರುಗಳು ಪರಮಾತ್ಮನ ಅನುಚರರು

ಯ ಆತ್ಮಾನಂ ಅಂತರೋಯಮಯತಿ ॥ (ಶೃತಿ)

ಸರ್ವಸ್ಯಚಾಹಂ ಹೃದಿಸನ್ನಿವಿಷ್ಟಃ ಯೋ ಲೋಕತ್ರಯ ಮಾವಿಶ್ಯ ॥ (ಗೀತಾ)

ಓಂ ಅಂತರ್ಯಾಮ್ಯಧಿ ದೈವಾದಿಷು ತದ್ಧರ್ಮ ವ್ಯಪದೇಶಾತ್ ಓಂ ॥ (ಸೂತ್ರ)

೫. ಜೀವರು ನೀಚೋಚ್ಚ ಭಾವವುಳ್ಳವರು

ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿಯಾಂತಿ ಪರಾಂಗತಿಂ ।
ಕಿಂಪುನ ಬ್ರಾಹ್ಮಣಾಃ ಪುಣ್ಯಾಃ ಭಕ್ತಾರಾಜರ್ಷಯಸ್ತಥಾ ॥ (ಗೀತಾ)

೬. **ಸುಖಾನುಭವನೇ ಮೋಕ್ಷವು**

ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥ (ಶೃತಿ)
ಅತ್ಯಂತಂ ಸುಖಮಶ್ನುತೇ ॥ (ಗೀತಾ)
ಓಂ ಆನಂದಾದಯಃ ಪ್ರಧಾನಸ್ಯ ಓಂ ॥ (ಸೂತ್ರ)

೭. **ಭಕ್ತಿಯೇ ಮೋಕ್ಷಸಾಧನವು**

ಯ ಮೇವೈಷ ವೃಣುತೇ ತೇನ ಲಭ್ಯಃ ॥ (ಶೃತಿ)
ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇ ವೇಷ್ಯೈತ್ಯ ಸಂಶಯಃ ॥ (ಗೀತಾ)
ಓಂ ಅನುಬಂಧಾದಿಭ್ಯಃ ಓಂ ॥ (ಸೂತ್ರ)

೮. **ಪ್ರತ್ಯಕ್ಷ-ಅನುಮಾನ-ಆಗಮ ಪ್ರಮಾಣಗಳು** (ಯಥಾರ್ಥ ಜ್ಞಾನವನ್ನು ಹುಟ್ಟಿಸತಕ್ಕವು)

ಶೃತಿಃ ಪ್ರತ್ಯಕ್ಷಮೈತಿಹ್ಯ ಮನುಮಾನಂ ಚತುಷ್ಟಯಂ ॥ (ಶೃತಿ)
ತಸ್ಮಾಚ್ಛಾಸ್ತ್ರಂ ಪ್ರಮಾಣಂತೇ ॥ (ಗೀತಾ)
ಓಂ ಶೃತೇಶ್ಚ ಪ್ರತ್ಯಕ್ಷಾನುಮಾನಾಭ್ಯಾಂ ಓಂ ॥ (ಸೂತ್ರ)

೯. **ಶ್ರೀಹರಿಯೇ ಸಕಲ ವೇದ ಪ್ರತಿಪಾದ್ಯನು**

ಸರ್ವೇ ವೇದಾಯತ್ಪದಮಾಮನಂತಿ ॥ (ಶೃತಿ)
ವೇದೈಶ್ಚ ಸರ್ವೈರಹಮೇವ ವೇದ್ಯಃ ॥ (ಗೀತಾ)
ಓಂ ಆನಂದಮಯೋಭ್ಯಾಸಾತ್ ಓಂ ॥ (ಸೂತ್ರ)

ಮೇಲೆ ಹೇಳಿರುವ ೯ ವಿಷಯಗಳೇ ಶ್ರೀಮದಾಚಾರ್ಯರವರ ಮಧ್ವಶಾಸ್ತ್ರದ ಸಾರವು. ಈ ಮಧ್ವಶಾಸ್ತ್ರಜನ್ಯ ಜ್ಞಾನ, ವೈರಾಗ್ಯ, ಭಕ್ತಿ ಉಪಾಸನಾದಿಂದ 'ಅಪರೋಕ್ಷ ಜ್ಞಾನವು' ತದ್ವಾರಾ ಮುಕ್ತಿ ಸಾಧನವೆಂದು ತಿಳಿಯಬೇಕು.

೧. ಜೀವಗಿರುವ ಅವಿದ್ಯಾವರಣವು ಭಗವದಧೀನವಾದದ್ದು. ಈ ಅವಿದ್ಯಾರೂಪ ಲಿಂಗದೇಹ ಭಂಗವಾಗೋಣವೇ ಜೀವಗೆ ಸ್ವರೂಪಾ ವಿರ್ಭಾವರೂಪ ಮೋಕ್ಷವು.

೨. ಶುಭಕರ್ಮಾದಿ ಸಾಧನದಿಂದ ಜೀವನು ಭಗವದಪರೋಕ್ಷವನ್ನು ಹೊಂದುವನು. ಈ ಅಪರೋಕ್ಷ ಜ್ಞಾನಾನಂತರ ಸ್ವಸ್ವರೂಪಾವಿರ್ಭಾವರೂಪ ಮೋಕ್ಷವು.

೩. ಹೃದಯಗ್ರಂಥಿ ರೂಪ ಲಿಂಗದೇಹವನ್ನು ಕಳಕೊಂಡ ಜೀವನು ಮೋಕ್ಷ ಹೊಂದತಕ್ಕವನು.

೪. ಜೀವಾದಿ ಭಿನ್ನವಾದ, ಸರ್ವೋತ್ತಮನಾದ ಶ್ರೀಪರಮಾತ್ಮನನ್ನು ಉಪನಿಷದುಕ್ತಿ ರೀತ್ಯಾ ತಿಳಿದ ಜೀವನು ಸಂಸಾರಬಂಧ ರೂಪ ಮೃತ್ಯುವನ್ನು ಅತಿಕ್ರಮಿಸುವನು.

೫. ಭಗವದಪರೋಕ್ಷದಿಂದ ಜೀವಗೆ ಮೋಕ್ಷವು.

೬. ಜ್ಞಾನಿಯು ಈ ಪ್ರಕಾರ ತಿಳಿದಲ್ಲಿ, ಅವನು ಮೃತ್ಯುವಿನಿಂದ ಬಿಡಿಸಿಕೊಳ್ಳಲ್ಪಡುವನು.

೭. ಪರಮಾತ್ಮನನ್ನು ತಿಳಿದವನು ಈ ಲೋಕದಲ್ಲಿಯೇ ಜೀವನ್ಮುಕ್ತನೆನಿಸುವನು.

೮. ಪರಮಾತ್ಮನನ್ನು ತಿಳಿದವನು ಶೋಕಸಾಗರದಿಂದ ದಾಟುವನು.

೯. ಪರಮಾತ್ಮನ ಅಪರೋಕ್ಷ ಜ್ಞಾನದಿಂದ ಜೀವನು ಸಂಚಿತಾಗಾಮಿ ಕರ್ಮಗಳನ್ನು ನಾಶಪಡೆದು ಕ್ರಮೇಣ ಮೋಕ್ಷ ಪಡೆಯುವನು.

೧೦. ಅಪರೋಕ್ಷ ಜ್ಞಾನದಿಂದ ಜೀವನು ತನ್ನ ಸ್ವರೂಪ ದೇಹವನ್ನು ತಿಳಿದ ಮೇಲೆ ಭೌತಿಕ ದೇಹಾದ್ಯಗತ ದುಃಖಾದಿಗಳಿಂದ ಸರ್ವಥಾ ಭಯವನ್ನು ಹೊಂದುವುದಿಲ್ಲ. ಇವುಗಳೆಲ್ಲವೂ ನಶ್ವರವೆಂದು ದೃಢವಾಗಿ ತಿಳಿಯುವನು.

೧೧. ಪರದೇವತಾರೂಪಿ ಶ್ರೀಮನ್ನಾರಾಯಣ ದೇವರನ್ನು ತಿಳಿದವನು ಸಮಸ್ತ ಪಾಶಾರೂಪ ಕರ್ಮಗಳಿಂದ ಮುಕ್ತನಾಗುವನು.

೧೨. ಭಗವದುತ್ತಮತ್ವ ಜ್ಞಾನವೇ ಮೋಕ್ಷಸಾಧನವು. ಆ ಜ್ಞಾನದಿಂದ ಭಕ್ತಿಯುಂಟಾಗಿ, ಅದು ಭಗವತ್ಪ್ರಸಾದಕ್ಕೆ ಕಾರಣವಾಗಿ ಅದರಿಂದ ಮೋಕ್ಷವಾಗುವುದು.

೧೩. ಬ್ರಹ್ಮಾಪರೋಕ್ಷವೇ ಮೋಕ್ಷ ನಿಶ್ಚಯವಲ್ಲದೆ, ಅನ್ಯಥಾ ಇಲ್ಲವು.

೧೪. ಜೀವನು ಶ್ರೀಪರಮಾತ್ಮನನ್ನು ತಿಳಿದು, ಮರಣವನ್ನು ದಾಟುವನು.

೧೫. ಮುಕ್ತಿಗೆ ಭಗವದುಪಾಸನಕ್ಕಿಂತಲೂ ಬೇರೆ ಮಾರ್ಗವಿಲ್ಲವು.

೧೬. ಭಗವದುದ್ದೇಶ್ಯ ತಪಸ್ಸಿನಿಂದ ಜೀವನು ಪಾಪಗಳನ್ನು ಕಳೆದುಕೊಂಡು ಮೋಕ್ಷ ಪಡೆಯುವನು. ಪ್ರಾರಬ್ಧ ಭೋಗಾನಂತರವೇ ಮೋಕ್ಷವು.

೧೭. ನಾರಾಯಣನೊಬ್ಬನೇ ಸರ್ವೋತ್ಕೃಷ್ಟನೆಂದು ತಿಳಿದು, ಜಿತೇಂದ್ರಿಯನಾಗಿ, ಶ್ರದ್ಧೆಯಿಂದ ಭಗವದುಪಾಸನೆ ಮಾಡುವನು ಅಪರೋಕ್ಷ ಪಡೆಯುವನು. ಅಪರೋಕ್ಷ ಜ್ಞಾನಾನಂತರ ಮೋಕ್ಷವು.

೧೮. ಅಪರೋಕ್ಷ ಜ್ಞಾನವಾದಾಗ ಜೀವಗೆ ಬಿಂಬರೂಪಿಯಾದ ಶ್ರೀಬ್ರಹ್ಮನ ದರ್ಶನವಾಗಿ, ನಂತರ ಸಂಚಿತಾಗಾಮಿ ಕರ್ಮಗಳು ನಾಶ ಅಥವಾ ಉಪಮರ್ದನವಾಗುವುವು.

೧೯. ಪ್ರಾರಬ್ಧ ಕರ್ಮವನ್ನು ಮಾತ್ರ ಲಿಂಗದೇಹ ಭಂಗದವರಿಗೂ ಅನುಭವಿಸುವನು.

೨೦. ಅಹಂಕರ್ತಾ ಇತ್ಯಾದಿ ಸ್ವಾತಂತ್ರ್ಯಾನುಸಂಧಾನ ರೂಪ ಮನೋವಾಸನೆಯನ್ನು ಬಿಟ್ಟು ತಥಾಧ್ಯೇಯ ಎನಲಾಗಿ ಸ್ತ್ರೀಬಂಧಕ ವಿಷಯ ಪರಿತ್ಯಾಗ ಮಾಡಿರುವವನು ಜೀವನ್ಮುಕ್ತನೆನಿಸುವನು.

೨೧. ಫಲದಾನಾರ್ಥ ಅನುಪಕ್ರಾಂತ ಸಂಚಿತ ಪುಣ್ಯಪಾಪಗಳು ಅಪರೋಕ್ಷ ಜ್ಞಾನದಿಂದ ನಷ್ಟವಾಗುವುದು. ಅಪರೋಕ್ಷ ಜ್ಞಾನಾನಂತರ ಸಂಪಾದಿತವಾದ ಪಾಪಗಳ ಲೇಪವು ಅಂಥವನಿಗೆ ಸಾಮಾನ್ಯವಾಗಿ ಆಗುವುದಿಲ್ಲವು. ಅಪರೋಕ್ಷ ಜ್ಞಾನವಾಗುವುದಕ್ಕೆ ಪೂರ್ವದಲ್ಲಿ ಮಾಡಿದ್ದ ಸಂಚಿತರೂಪ ಸುಹೃದಾದಿಗಳಿಗೆ ದಾನಮಾಡಿದ್ದು ಹೋಗಲಾಗಿ ಅವಶಿಷ್ಟನಿಂತ ಅನಿಷ್ಟ ಪುಣ್ಯ ಪಾಪಗಳು ಅಪರೋಕ್ಷ ಜ್ಞಾನದಿಂದ ನಾಶವಾಗುವುವು. ತಮೋಯೋಗ್ಯರಿಗೂ ಸಹ ತಮಃಪ್ರಾಪ್ತಿ ಕಾಲದಲ್ಲಿ ಹೀಗೆಯೇ ಸಂಚಿತಾಗಾಮಿ ಪುಣ್ಯಾದಿಗಳ ನಾಶವು.

೨೨. ಸಾಧನಪೂರ್ತಿಯುಳ್ಳ ಮುಕ್ತಿಯೋಗ್ಯ ಜೀವನು ಶ್ರೀಮನ್ನಾರಾಯಣ ದೇವರನ್ನು ಪ್ರತ್ಯಕ್ಷ ನೋಡಿದ ತರುವಾಯು ಅವಿದ್ಯಾತ್ಮಕ ಹೃದಯ ಗ್ರಂಥಿಯು ಭೇದಿಸಲ್ಪಟ್ಟು, ಸರ್ವ ಸಂಶಯಗಳೂ ಪರಿಹಾರವಾಗಿ, ಆತನ ಸಂಚಿತಾಗಾಮಿ ಕರ್ಮಗಳಿಗೆ ನಾಶಾಶ್ಲೇಷಗಳು ಪ್ರಾಪ್ತವಾಗುವುವು.

೨೩. ಅಗ್ನಿಯಿಂದ ಭರ್ಜಿತ ಬೀಜಗಳು ಅಂಕುರೋತ್ಪಾದಕಗಳಾಗದಂತೆ ಜ್ಞಾನಾಗ್ನಿಯಿಂದ ನಾಶವಾದ ಪಾಪಗಳು ಜೀವನಿಗೆ ಸಂಬಂಧಿಸುವುದಿಲ್ಲವು.

೨೪. ಕಸಬರಿಕೆಯ ಕಡ್ಡಿಯ ಊಬಿನಂತೆ ಸಕಲ ಕರ್ಮಗಳು ದಹಿಸಲ್ಪಡುವುವು. ಅದರಂತೆ ಅಪರೋಕ್ಷ ಜ್ಞಾನದಿಂದ ಸಕಲ ಪಾಪಗಳೂ ಪರಿಹಾರವಾಗುವುವು. ಅಜ್ಞಾನದಿಂದ ಸಂಚಿತಗಾಮಿ ಕರ್ಮಗಳು ಲೇಪಿಸುವುವು.

೨೫. ಕೋಟಿ ಜನ್ಮಗಳಿಂದ ಅರ್ಜಿಸಲ್ಪಟ್ಟ ಸಂಚಿತ ಕರ್ಮಗಳು ಭಗವದಪರೋಕ್ಷ ಜ್ಞಾನದಿಂದ ನಾಶವಾಗುವುದಲ್ಲದೆ, ಹತ್ತು ಸಹಸ್ರ ಸತ್ಕರ್ಮಗಳನ್ನು ಮಾಡಿದರೂ ನಾಶವಾಗಲಾರದು.

೨೬. ಜ್ವಾಲಾ ಸಹಿತ ಅಗ್ನಿಯು ಸಮಿತ್ತುಗಳನ್ನು ಭಸ್ಮಮಾಡುವಂತಡೆ ಅಪರೋಕ್ಷ ಜ್ಞಾನಾಗ್ನಿಯು ಸರ್ವಸಂಚಿತ ಕರ್ಮಗಳನ್ನು ಭಸ್ಮಮಾಡುವುದು.

೨೭. ಜ್ವಾಲಾಮಾಲೆಗಳಿಂದ ಒಪ್ಪುವ ಅಗ್ನಿಯು ಒಣಗಿದ ಮತ್ತು ಹಸಿಯ ಕಟ್ಟಿಗೆಗಳನ್ನು ದಹಿಸುವಂತೆಯೇ, ಅನಿಷ್ಟ-ಶುಭ ಮತ್ತು ಅಶುಭ ಕರ್ಮಗಳನ್ನು ಕ್ಷಣಮಾತ್ರದಲ್ಲಿ ಜ್ಞಾನಾಗ್ನಿಯು ದಹಿಸುವುದು.

೨೮. ಪರಮಾತ್ಮನ ಪ್ರತ್ಯಕ್ಷ ಜ್ಞಾನದಿಂದ ಜೀವನ ಸಂಚಿತಗಳು ಭಸ್ಮವಾಗುವುವು.

೨೯. ಪರಮಾತ್ಮನನ್ನು ಅಪರೋಕ್ಷೀಕರಿಸಿದ ಮೇಲೆ ಆಗಾಮಿ ಸಾಮಾನ್ಯ ಪಾಪಗಳಿಂದ ಲಿಪ್ತನಾಗುವುದಿಲ್ಲವು.

೩೦. ಸೂರ್ಯದೇವನು ತನ್ನ ಕಿರಣಗಳಿಂದ ಸರ್ವರಸಗಳನ್ನೂ ಹೇಗೆ ಆಕರ್ಷಿಸುವನೋ, ಸಕಲ ಪದಾರ್ಥಗಳನ್ನು ಅಗ್ನಿದೇವನು ಹೇಗೆ ಭಕ್ಷಿಸುವನೋ, ಆ ಪ್ರಕಾರ ಅಪರೋಕ್ಷ ಜ್ಞಾನಿಯ ವಿಷಯ ಪದಾರ್ಥಗಳನ್ನು ಭೋಗಿಸಿದಾಗ್ಯೂ, ಅಪರೋಕ್ಷ ಜ್ಞಾನಾನಂತರ ತಜ್ಜನ್ಯ ಸಾಮಾನ್ಯ ಪುಣ್ಯಪಾಪಗಳು ಆತನಿಗೆ ಸ್ಪರ್ಶವಾಗದೇ ಶುದ್ಧನಾಗಿರುವನು.

ಇತಿ ತತ್ವಸಾರ ಮೂಲಾಖ್ಯ ಗ್ರಂಥೇ ಪ್ರಮೇಯ ಪ್ರಕರಣೇ ದ್ವಿತೀಯ ಭಾಗ ಸಮಾಪ್ತಿಃ

೨೬. ವೈದಿಕಮತ ಸಾರ

ಸಂಪುಟ ೧೦ ಸಂಚಿಕೆ ೯ ಪ್ರಮಾಥಿ ಮಾರ್ಗಶಿರ ಜನವರಿ ೧೯೪೦

ವಿಷ್ಣುವೇ ಜಗತ್ಕಾರಣನು ಆತನಿಗೆ ಪರಬ್ರಹ್ಮನೆಂತ ಹೆಸರು. ಶಾಸ್ತ್ರದಿಂದಲೇ ಬ್ರಹ್ಮಜ್ಞಾನವಾಗಬೇಕು. ಸರ್ವವೇದಗಳು, ಭಾರತ, ಪಂಚರಾತ್ರ, ಮೂಲ ರಾಮಾಯಣ ಇವುಗಳಿಗೆ ಶಾಸ್ತ್ರವೆಂತ ಹೆಸರು. ಇವಕ್ಕೆ ಅನುಕೂಲವಾದ ಇತರ ಗ್ರಂಥಗಳಿಗೂ ಶಾಸ್ತ್ರವೆಂತ ಹೆಸರು. ಪ್ರತಿಕೂಲವಾದದ್ದು ಶಾಸ್ತ್ರವಲ್ಲ. ವೇದದಲ್ಲಿ ಆಪಾತತಃ ಪರಸ್ಪರ ವಿರೋಧವಿದ್ದಂತೆ ಕಾಣ ಬರುತ್ತದೆಯೋ ಹೊರ್ತು, ಪೂರ್ವಾಪರ ವಾಕ್ಯ ಸಂಬಂಧದಿಂದಲೂ, ಉಪಕ್ರಮೋಪಸಂಹಾರಾದಿಗಳನ್ನ ವಿಮರ್ಶೆ ಮಾಡಿ ನೋಡಿದರೆ, ಏಕವಾಕ್ಯತಾ ಪ್ರಾಪ್ತವಾಗುವುದಲ್ಲದೆ, ಆಕಾಶಾದಿ ಸಮಸ್ತ ಶಬ್ಧಗಳೂ ಮುಖ್ಯ ವೃತ್ತಿಯಿಂದ ಪರಮಾತ್ಮವಾಚಕವಾಗಿಯೇ ಇವೆ. ಆದರೆ ಎಲ್ಲಿ ಮುಖ್ಯಾರ್ಥ ಗ್ರಹಣದಲ್ಲಿ ಆಕ್ಷೇಪವಿಲ್ಲವೋ ಅಲ್ಲಿ ಮುಖ್ಯಾರ್ಥವನ್ನೇ ತೆಗೆದುಕೊಳ್ಳಬೇಕು. ಆ ಪ್ರಕಾರ ತೆಗೆದುಕೊಳ್ಳುವುದರಲ್ಲಿ ಆಕ್ಷೇಪ ಪ್ರಾಪ್ತವಾದರೆ ಅಮುಖ್ಯಾರ್ಥ ತೆಗೆದುಕೊಳ್ಳಬೇಕು.

ಪರಮಾತ್ಮನು ಅನಾದಿ. ಜೀವನು ಅನಾದಿ. ಜೀವರಿಗೆ ಸೃಷ್ಟಿ ಅಂದರೆ ಬಾಹ್ಯ ದೇಹ ಸಂಬಂಧವೇ. ಅದು ಪರಮಾತ್ಮಾಧೀನವು. ಸ್ವಪ್ನ ಪದಾರ್ಥವನ್ನು ಪರಮಾತ್ಮನೇ ಸೃಷ್ಟಿ ಮಾಡುತ್ತಾನೆ. ಸ್ವಪ್ನದಲ್ಲಿ ನೋಡಿದ ಪದಾರ್ಥಗಳು ಸತ್ಯವೇ. ಸರ್ವ ಜಗತ್ತೂ ಸತ್ಯವೇ. ಸೃಷ್ಟಿಯಿಂದ ಪರಮಾತ್ಮನಿಗೆ ಪ್ರಯೋಜನವಿಲ್ಲ.

ಲೋಕದಲ್ಲಿ ಒಬ್ಬ ಪುರುಷನು ಆನಂದೋದ್ರೇಕದಿಂದ ನೃತ್ಯಗಾನಾದಿಗಳನ್ನು ಪ್ರಯೋಜನವಿಲ್ಲದೆ ಯಾವ ರೀತಿಯಿಂದ ಮಾಡುತ್ತಾನೋ ತದ್ವತ್ ಪರಮಾತ್ಮನು ಸೃಷ್ಟ್ಯಾದಿಗಳನ್ನು ಮಾಡುತ್ತಾನೆ.

ಜೀವ–ಪರಮಾತ್ಮರು ಅತ್ಯಂತ ಭಿನ್ನರು. ಜೀವ ಅಣುವು. ಆದರೆ ಒಂದು ಸ್ಥಳದಲ್ಲಿರುವ ಚಂದನ(ಗಂಧ)ಕ್ಕೆ ಅನ್ಯತ್ರದಲ್ಲಿ ಅಂಶದಿಂದ ಹೇಗೆ ವ್ಯಾಪ್ತಿಯೋ: ಒಂದು ಕಡೆ ಇದ್ದ ದೀಪ

ಪ್ರಕಾಶ ಗುಣದಿಂದ ಅನ್ಯತ್ರದಲ್ಲಿ ಹೇಗೆ ವ್ಯಾಪ್ತವಾಗುತ್ತದೋ, ತದ್ವತ್ ಜೀವನು ಸ್ವದೇಹದಲ್ಲಿ ವ್ಯಾಪ್ತನು.

ಜೀವರು ಮುಕ್ತಿಯೋಗ್ಯರು, ನಿತ್ಯ ಸಂಸಾರಿಗಳು, ತಮೋ ಯೋಗ್ಯರು ಎಂತ ತ್ರಿವಿಧ ಸ್ವಭಾವವುಳ್ಳವರು.

ಮುಕ್ತಿಯೋಗ್ಯರು ಜ್ಞಾನಾನಂದಸ್ವರೂಪರು.
ನಿತ್ಯ ಸಂಸಾರಿಗಳು ಮಿಶ್ರಸ್ವರೂಪರು.
ತಮೋಯೋಗ್ಯರು ಅಜ್ಞಾನ ದುಃಖಸ್ವರೂಪರು.
ಈ ಸ್ವರೂಪವು ಅವಿದ್ಯಾದಿಂದ ಆವೃತವಾಗಿದೆ.

ಭೂತ ಸಂಬಂಧವು ದೇಹಾಂತದಿಂದ ಜೀವಗೆ ನಿವೃತ್ತಿ ಆಗುವುದಿಲ್ಲ. ಕರ್ಮಾನುಸಾರವಾಗಿ ಪುನಃ ಪುನಃ ಜನ್ಮಾಂತರವು ಪ್ರಾಪ್ತವಾಗುತ್ತದೆ.

ಆ ಪರಮಾತ್ಮನ ಅನುಗ್ರಹ ಎಂಬುವುದು ಶ್ರವಣ – ಮನನಾದಿಗಳಿಂದಲೂ ಹರಿ, ಗುರುಭಕ್ತಿ ಶಮದಮಾದಿಗಳಿಂದಲೂ ಸಂಭವಿಸುತ್ತದೆ.

ಕರ್ಮ ಎಂಬುವುದು ಕಾಮ್ಯ–ಆಕಾಮ್ಯ (ಪ್ರವೃತ್ತಿ–ನಿವೃತ್ತಿ) ಎಂದು ದ್ವಿವಿಧವಾದದ್ದು.

ಕಾಮ್ಯಕರ್ಮವು ಅಹಿಕ ಫಲವನ್ನು ಕೊಡುತ್ತದೆ.

ಅಕಾಮ್ಯಕರ್ಮವು ಅಪರೋಕ್ಷಕ್ಕೆ ಪೂರ್ವದಲ್ಲಿ ಆದರೆ, ಜ್ಞಾನ ಸಾಧನವಾಗುತ್ತದೆ. ಪರದಲ್ಲಿ ಆದರೆ, ಮೋಕ್ಷದಲ್ಲಿ ಆನಂದಾತಿಶಯ ಕೊಡುತ್ತದೆ.

ತ್ರಿವರ್ಣರೂ ವಿಷ್ಣುಭಕ್ತರಾಗಿದ್ದು, ಗುರುಭಕ್ತರಾಗಿದ್ದು ಶಮದಮಾದಿಗಳುಳ್ಳವರಾದರೆ ವೇದಾಧಿಕಾರಿಗಳು.

ಪೂರ್ವಜನ್ಮದಲ್ಲಿ ಪ್ರಾಪ್ತವಾದ ಅಪರೋಕ್ಷ ಜ್ಞಾನ ವ್ಯತಿರಿಕ್ತರಾದ ಶೂದ್ರರಿಗೆ ವೇದಾಧಿಕಾರವಿಲ್ಲ. ವೇದಾಧಿಕಾರವಿಲ್ಲದವರಿಗೆ ಭಾರತಾದಿ ಪುರಾಣ ಶ್ರವಣಗಳಲ್ಲಿ ಅಧಿಕಾರವು. ಆ ಶ್ರವಣದಿಂದ ಅವರುಗಳಿಗೆ ಅಪರೋಕ್ಷಜ್ಞಾನವಾಗಿ ಮೋಕ್ಷವಾಗುತ್ತದೆ. ದೇವಋಷ್ಯಾದಿ ಸ್ತ್ರೀಯರಿಗೆ ತದಧಿಕಾರವುಂಟು. ಮಿಕ್ಕ ಸ್ತ್ರೀಯರಿಗೆ ಇಲ್ಲ. ಅವರು ಶೂದ್ರರೋಪಾದೀಲಿ ಪುರಾಣಾದಿಗಳಿಂದ ಮುಕ್ತಿ ಹೊಂದತಕ್ಕದ್ದು.

ಮನುಷ್ಯರು ವಿಧಿಬದ್ಧರು. ದೇವತೆಗಳು ಅನಿಯತರು. ಬ್ರಹ್ಮ ದೇವರು ಸ್ವೇಚ್ಛಾನಿಯತರು. ಭೂತ-ಬಂಧ ನಿವೃತ್ತಿಯೇ ಮೋಕ್ಷವು. ಮೋಕ್ಷದಲ್ಲಿಯೂ ಜೀವನ ಯೋಗ್ಯತಾನುಸಾರ ಫಲ ತಾರತಮ್ಯವುಂಟು. ಅಪರೋಕ್ಷ ಜ್ಞಾನಾನಂತರ ಪ್ರಾರಬ್ಧಕರ್ಮ ಪ್ರತಿಬಂಧಕ ಇಲ್ಲದಿದ್ದರೆ ಶರೀರ ಪಾತಾನಂತರದಲ್ಲೇ ಮುಕ್ತಿ ಆಗುತ್ತದೆ. ಆ ಪ್ರತಿಬಂಧಕವಿದ್ದ ಪಕ್ಷದಲ್ಲಿ ಅದರ ಅನುಭವಾನಂತರವೇ ಮುಕ್ತಿಯು. ಅಪರೋಕ್ಷಾ ನಂತರ ಸಂಚಿತಾಗಾಮಿ ಕರ್ಮಗಳಿವೆ ನಾಶವುಂಟು. ಅನಿಷ್ಟ ಪುಣ್ಯಕರ್ಮ ಸ್ನೇಹಿತರಿಗೆ ಸೇರುತ್ತದೆ. ಪಾಪಕರ್ಮ ದ್ವೇಷಿಗಳಿಗೆ ಸೇರುತ್ತದೆ. ಮುಕ್ತರು ವಿಷ್ಣುಲೋಕವನ್ನು ಹೊಂದುತ್ತಾರೆ. ನಂತರ ಆ ಪರಮಾತ್ಮನ ಇಚ್ಛಾನುಸಾರವಾಗಿ ಆ ಲೋಕದಲ್ಲಿಯಾಗಲೀ, ಇತರ ಲೋಕಗಳಲ್ಲಾಗಲೀ ಯೋಗ್ಯತಾನುಸಾರವಾಗಿ, ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಗಳನ್ನು ಹೊಂದಿ, ಅವರವರ ಇಚ್ಛಾನುಸಾರವಾಗಿ ಸೃಷ್ಟ್ಯಾದ್ಯಷ್ಟ ಕರ್ತೃತ್ವ, ಲಕ್ಷ್ಮೀಪತಿತ್ವ ವಿನಹಾ, ಮಿಕ್ಕ ಸಮಸ್ತ ಭೋಗಗಳನ್ನು ಚಿದ್ರೂಪ ದೇಹದಿಂದಾಗಲೀ, ಶುದ್ಧ ಸತ್ವರೂಪ ದೇಹದಿಂದಾಗಲೀ ಭೋಜನ ಮಾಡುತ್ತಾರೆ. ಸಾಯುಜ್ಯ ಮುಕ್ತರು ಮಾತ್ರ ಪರಬ್ರಹ್ಮ ದೇಹದಿಂದಲೇ ಸ್ವಯೋಗ್ಯವಾದ ಭೋಗಗಳನ್ನು ಅನುಭವ ಮಾಡುತ್ತಾರೆ. ಮುಕ್ತರ್‍ಯಾರಿಗೂ ಪುನರಾವರ್ತಿಯಿಲ್ಲ. ಒಟ್ಟಿನಲ್ಲಿ ವಿಷ್ಣುವಿಗೆ ಇರುವ ಗುಣಗಳಲ್ಲಿ ಕೆಲವನ್ನು ಈ ಕೆಳಗೆ ಹೇಳಲ್ಪಡುತ್ತದೆ.

ದೇವರು ಆನಂದಪೂರ್ಣನು ಸರ್ವಾಂತರ್ಯಾಮಿ.
ಪೃಥ್ವಿ, ಸ್ವರ್ಗಾದಿ ಸರ್ವ ಲೋಕಗಳಿಗೆ ಆಧಾರನು.
ಅದೃಶ್ಯನು, ಪ್ರಾಕೃತರೂಪ ರಹಿತನು.
ಗುಣ-ಗುಣಿ ಭೇದರಹಿತನು. ಅವಯವ ಅವಯವಿಭೇದ ರಹಿತನು.
ಜ್ಞಾನಾನಂದಾತ್ಮಕ ಶರೀರವುಳ್ಳವನು. ಸರ್ವಪಾಲಕನು.
ಅವ್ಯಕ್ತನು. ಸೃಷ್ಟ್ಯಾದ್ಯಷ್ಟಕರ್ತನು.
ಸರ್ವರಿಂದ ಮುಖ್ಯ ಪ್ರಾಪ್ಯನು ಸರ್ವಗತನು.
ಸರ್ವಶಬ್ಧವಾಚ್ಯನು.
ಯುಕ್ತಿ ವಿರುದ್ಧಾಽವಿರುದ್ಧ, ಚಿಂತ್ಯಾಽಚಿಂತ್ಯ ಸರ್ವಗುಣೋಪೇತನು.
ಸಾಕಲ್ಯೇನ ಅವಾಚ್ಯನು. ಯತ್ಕಿಂಚಿತ್ ರೂಪಗಳಿಂದ ವಾಚ್ಯನು.

೧. ಈತನನ್ನು ಮನುಷ್ಯರು ಸತ್ -ಚಿತ್ -ಆನಂದ - ಆತ್ಮ ಎಂತ ಉಪಾಸನೆ ಮಾಡತಕ್ಕದ್ದು.

೨. ದೇವತೆಗಳು ಅವರವರ ಯೋಗ್ಯತಾನುಸಾರ ಒಂದೊಂದು ಕಾಲದಲ್ಲಿ ಎಷ್ಟೆಷ್ಟು ಗುಣಗಳು ಸ್ಫೂರ್ತಿಯಾಗುವವೋ ಅಷ್ಟಷ್ಟು ಗುಣಗಳಿಂದ ಆತನನ್ನು ಉಪಾಸನೇ ಮಾಡತಕ್ಕದ್ದು.

೩. ಚತುರ್ಮುಖ ಬ್ರಹ್ಮನು ಆತನ ಸಮಸ್ತ ಗುಣಗಳಿಂದ– ಉಪಾಸನಾ ಮಾಡತಕ್ಕದ್ದು. ಸಮಸ್ತರಿಂದಲೂ ಪರಮಾತ್ಮನು ನನ್ನ ಸ್ವಾಮಿ ಎಂತ ಉಪಾಸನೆ ಮಾಡತಕ್ಕದ್ದು.

೪. ಜೀವರು ಮೋಕ್ಷಾನಂತರ ಸ್ವೇಚ್ಛಾನುಸಾರೇಣ ಪರಮಾತ್ಮನ ಉಪಾಸನೆ ಮಾಡುತ್ತಾರೆ.

೫. ಲಕ್ಷ್ಮಿಯು ನಿತ್ಯ ಮುಕ್ತಳು ; ಆದಾಗ್ಯೂ ಭಕ್ತಿ ವಿಶೇಷದಿಂದ ಸ್ವೇಚ್ಛಾನುಸಾರವಾಗಿ ಉಪಾಸನೆ ಮಾಡುತ್ತಾಳೆ.

೬. ಉಪಾಸನಾ ಮಾಡತಕ್ಕವರೆಲ್ಲರೂ **ಸ್ವಯೋಗ್ಯ ಬಿಂಬರೂಪ ಉಪಾಸನಾ** ಮಾಡತಕ್ಕದ್ದು.

೭. ಅಮುಮುಕ್ಷುಗಳು ಮೋಕ್ಷ ಪ್ರತಿಬಂಧಕ ದುರಿತಾದಿ ನಿವಾರಣಾರ್ಥವಾಗಿ ಸ್ವಯೋಗ್ಯಬಿಂಬ ವ್ಯತಿರಿಕ್ತ ಬಿಂಬರೂಪ ಉಪಾಸನಾ ಮಾಡತಕ್ಕದ್ದು.

ವೈದಿಕಮತಸಾರ ಸಂಪೂರ್ಣಂ

ಮಂಗಳ ಪದ

ರಾಗ: ಸೌರಾಷ್ಟ್ರ ತಾಳ:ಆದಿ

ಮಂಗಳಂ ಜಯ ಮಂಗಳಂ । ಶುಭ । ಮಂಗಳಂ ಕರಿಗಿರಿ ನರಹರಿಗೆ ಪ

ಕುಂಭಿಶೃಂಗದಲ್ಲಿರುವವಗೆ । ಅಂಬುಜಾಸನಿಂದರ್ಚಿತಗೆ
ತುಂಬಿದ ತೀರ್ಥಗಳಿಂದೆಸೆಯುವ ಕ್ಷೇತ್ರದ । ಅಂಬುಜೆವರ ಯೋಗಾನರಸಿಂಹಗೆ 1

ಕೆಳಬೆಟ್ಟದಿ ನೆಲೆಸಿರುವವಗೆ । ಛಲಿ ದುರ್ವಾಸರಿಗೊಲಿದವಗೆ
ಬಳಿಸಾರುವರ ದುರಿತಗಳಳಿಸುತ । ಸಲಹುವ ಸಿರಿಭೋಗಾನರಸಿಂಹಗೆ 2

ಅಂಧಕರಿಪು ಹೃದ್ಬಿಂಬನಿಗೆ । ಕಂದ ಪ್ರಹ್ಲಾದನ ಪೊರೆದವಗೆ
ಸುಂದರೇಶ ಪ್ರಾಣಾಂತರಂಗಸ್ಥ । ಬಂಧು ಅನಂತವಿಠಲಾಪರಗೆ 3

ಶ್ರೀಕೃಷ್ಣಾರ್ಪಣಮಸ್ತು